ತ್ರೈಮಾಸಿಕ ಸಂಪುಟ 1 ಸಂಚಿಕೆ 4
ISSN 2278-2192



# ಚಿಂತನ ಬಯಲು

Volume 1, Issue 4, April-June 2013





# ಚಿಂತನ ಬಯಲು

ಸಂಪಾದಕಿ

**ರೇಶ್ಮಾ ಜಿ. ಭಟ್**

ಸಂಪಾದಕೀಯ ಸಲಹೆ

**ಡಾ. ಅಜಕ್ಕಳ ಗಿರೀಶ ಭಟ್**

**ಡಾ. ಶ್ರೀಧರ್ ಎಚ್.ಜಿ.**

**ಡಾ. ವರದರಾಜ ಚಂದ್ರಗಿರಿ**

**ಡಾ. ಜಿ.ಬಿ. ಹರೀಶ್**

**ಶ್ರೀ ಎಂ.ಎ. ಸುಬ್ರಹ್ಮಣ್ಯ**

**ಚಿಂತನ ಬಯಲು**

ನಂ. 15-109, ಮೊಡಂಕಾಪು ಅಂಚೆ

ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ - 574 219

**CHINTHANA BAYALU**
Kannada Quarterly
Volume 1, Issue 4, April-June 2013

Edited, Published, Printed & Owned by
**Reshma G. Bhat**
Door No. 15-109, Modankapu Post,
Bantwal Taluk, Dakshina Kannada 574 219.
Karnataka
Phone : 9449772651
Email :chinthanabayalu@gmail.com

© : Reserved

Price : Rs. 50

Pages : 88

Cover Design : **Kalloor Nagesh**

Designed & Printed at :
**Aakrithi Prints**
Maximus Complex
Light House Hill Road
Mangalore - 575 001
Tel. : 0824 2443002

---

**ಸೂಚನೆ :** ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳ ಹಕ್ಕು ಆಯಾ ಲೇಖಕರದ್ದಾಗಿರುತ್ತದೆ. ಇಲ್ಲಿಯ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತವೆ. ಅವುಗಳು ಪತ್ರಿಕೆಯ ಅಭಿಪ್ರಾಯಗಳಾಗಿರಬೇಕೆಂದೇನಿಲ್ಲ.

# ಪುಟನೋಟ


1. ಸಾಮಾಜಿಕ ಸಂಶೋಧನೆಗೆ ಮುಳುವಾಗುತ್ತಿರುವ ಜನಪ್ರಿಯ ಧೋರಣೆಗಳು
■ ಡಾ. ರಾಜಾರಾಮ ಹೆಗಡೆ / 7

2. ಕತೆಗಳೆಂಬ ಸಂಕಥನಗಳು ಕೆ. ಸತ್ಯನಾರಾಯಣ ಅವರ ಕಥಾಜಗತ್ತು
■ ಗಿರೀಶ್ ವಿ. ವಾಘ್ / 17

3. ಹೆಗ್ಗುರುತು
■ ಬಿ. ಜನಾರ್ದನ ಭಟ್ / 32

4. ತಂತಿ ಮೇಲಿನ ನಡಿಗೆ ಒಂದು ಚರ್ಚೆಯ ಪರಾಮರ್ಶೆ
■ ಪ್ರೊ. ಎಂ.ಜಿ. ವಾರಿ / 36

5. ಕನ್ನಡಕ್ಕೆ ಕತ್ತರಿ ಪ್ರಯೋಗ ಒಂದು ಚಿಂತನೆ
■ ಸು.ಕೃಷ್ಣ ನೆಲ್ಲಿ / 41

6. ಬೀದರ ಜಿಲ್ಲೆಯ ಜೈನ ಶಾಸನಗಳ ಸಾಂಸ್ಕೃತಿಕ ಆಯಾಮಗಳು
■ ಡಾ. ಅಪ್ಪಣ್ಣ ಎನ್. ಹಂಜೆ / 52

7. ತುಳು ಕವನಗಳಲ್ಲಿ ಗಂಡು ಹೆಣ್ಣು ಸಂಬಂಧಗಳು
■ ಪದ್ಮಾವತಿ ಯನ್. / 73



## ಸಂಪಾದಕೀಯ

ಸಾಹಿತ್ಯ, ಸಂಸ್ಕೃತಿ ಹಾಗೂ ಸಂಶೋಧನೆಗಳಿಗೆ ಸಂಬಂಧಿಸಿದ ಪತ್ರಿಕೆಯೊಂದು ಕನ್ನಡದಲ್ಲಿ ನೆಲೆಯೂರುತ್ತಿರುವುದರ ಬಗ್ಗೆ ನಾಡಿನ ಹಲವು ಓದುಗರು ಹಾಗೂ ವಿದ್ವಾಂಸರು ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ. ಈ ಸಂಚಿಕೆಯೊಂದಿಗೆ 'ಚಿಂತನ ಬಯಲು' ಪತ್ರಿಕೆಯು ಒಂದೂವರೆ ವರ್ಷವನ್ನು ಪೂರೈಸಿದೆ. ಚಂದಾದಾರರ ಸಂಖ್ಯೆ ಇನ್ನಷ್ಟು ವೃದ್ಧಿಸಬೇಕಾಗಿದೆ.

ಸಂಶೋಧನಾ ಕೇಂದ್ರವೊಂದರ ಮುಖ್ಯಸ್ಥರೂ ಆಗಿರುವ ಪ್ರಾಧ್ಯಾಪಕ ರಾಜಾರಾಮ ಹೆಗ್ಡೆಯವರು ಈ ಸಂಚಿಕೆಯಲ್ಲಿ ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ. ಸಾಮಾಜಿಕ ಸಂಶೋಧನೆಯ ಸ್ವರೂಪ ಹಾಗೂ ಪ್ರಸ್ತುತತೆಯ ಬಗ್ಗೆ ಕೆಲವು ಮುಖ್ಯ ಮಾತುಗಳು ಈ ಲೇಖನದಲ್ಲಿವೆ. ಅದೇ ರೀತಿ ಕೆ. ಸತ್ಯನಾರಾಯಣ ಅವರ ಕಥೆಗಳ ಬಗ್ಗೆ ಗಿರೀಶ್ ವಾಘ್ ಅವರ ಒಂದು ದೀರ್ಘ ಲೇಖನ ಹಾಗೂ ಜನಾರ್ದನ ಭಟ್ ಅವರ ವಿಮರ್ಶಾ ಲೇಖನ ಇವೆರಡನ್ನು ಒಟ್ಟಿಗೇ ಪ್ರಕಟಿಸಲಾಗಿದೆ. ಮಹತ್ವದ ಕತೆಗಾರರೊಬ್ಬರ ಬಗೆಗಿನ ವಿವಿಧ ಓದುಗಳು ಒಟ್ಟಿಗೆ ದೊರಕಿದಂತಾಗುತ್ತದೆ ಎಂಬುದೇ ಇದರ ಉದ್ದೇಶ. ಇತರ ಲೇಖನಗಳೂ ವಿಚಾರ ಪ್ರಚೋದಕವಾಗಿವೆ ಎಂಬ ನಂಬುಗೆ ನಮ್ಮದು. ಸಂಚಿಕೆಯ ಬಗ್ಗೆ ಓದುಗರ ವಿಮರ್ಶಾತ್ಮಕ ಅಭಿಪ್ರಾಯಗಳಿಗೆ ಸದಾ ಸ್ವಾಗತ.

ಮಾನವನ ಸಾಹಸ ಪ್ರವೃತ್ತಿ, ಅನ್ವೇಷಣಾ ಮನೋಭಾವವೇ ಅಂತಿಮವಾಗಿ ನಿಸರ್ಗದ ಮೇಲಿನ ಹಲ್ಲೆಯಾಗಿ ಮಾರ್ಪಟ್ಟು ನಿಸರ್ಗವೂ ಪ್ರತಿಹಲ್ಲೆ ಮಾಡಿದ ದುರಂತವನ್ನು ಉತ್ತರಾಖಂಡದಲ್ಲಿ ಕಂಡಿದ್ದೇವೆ. ಅಲ್ಲಿ ಕಷ್ಟಕ್ಕೊಳಗಾದವರ ನೆನಪಲ್ಲಿ ಈ ಒಂದು ಹನಿ.

ಮೃಡನ ನರ್ತನದಲ್ಲಿ
ನಡುಗಿಹೋಯಿತು ಇಳೆಯು
ದಡದ ತಡೆಯನು ಮೀರಿ
ಗುಡುಗಿ ನುಗ್ಗಿತು ಅಲೆಯು
ಸುಡುಗಾಡೆ ಕ್ಷಣದಲ್ಲಿ ಶಿವನ ನೆಲೆಯು ॥

**ಸಂ.**

### ಸಾಮಾಜಿಕ ಸಂಶೋಧನೆಗೆ
# ಮುಳುವಾಗುತ್ತಿರುವ
## ಜನಪ್ರಿಯ ಧೋರಣೆಗಳು

**ಡಾ. ರಾಜಾರಾಮ ಹೆಗಡೆ**
ಸ್ಥಳೀಯ ಸಂಸ್ಕೃತಿಗಳ ಅಧ್ಯಯನ ಕೇಂದ್ರ
ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ

**1**

ಈ ವಿಷಯದ ಕುರಿತು ಬರೆಯಲು ತೀರಾ ತುರ್ತಾದ ಕಾರಣವೆಂದರೆ ಇತ್ತೀಚೆಗೆ ಒಬ್ಬ ಸಾಮಾಜಿಕ ಸಂಶೋಧಕನಾಗಿ ನನಗೆ ಆದ ಅನುಭವಗಳು ಹಾಗೂ ಅದರಿಂದ ಹುಟ್ಟಿದ ಪ್ರಶ್ನೆಗಳು. ನಾನು ಕೆಲವು ಸಹೋದ್ಯೋಗಿಗಳೊಂದಿಗೆ ಕಳೆದ ಕೆಲವು ವರ್ಷಗಳಿಂದ ನಮ್ಮ ವಿಶ್ವವಿದ್ಯಾಲಯದಲ್ಲಿ ಭಾರತೀಯ ಸಮಾಜ ಹಾಗೂ ಸಂಸ್ಕೃತಿಯ ಕುರಿತು ಸಂಶೋಧನೆಯ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದೇನೆ. ಈ ಸಂಶೋಧನೆಯನ್ನು ಪ್ರಾರಂಭಿಸಿದ ದಿನದಿಂದಲೂ ಪ್ರಗತಿಪರ ಕನ್ನಡ ಚಿಂತಕರಲ್ಲಿ ಕೆಲವರ ವಿರೋಧವನ್ನು ಎದುರಿಸುತ್ತಲೇ ಬಂದೆವು. ಅವರಲ್ಲೇ ಕೆಲವರು ನಮ್ಮ ಸಂಶೋಧನೆ ವಿಕೃತ, ಅದನ್ನು ನಿಲ್ಲಿಸಬೇಕು ಎಂಬುದಾಗಿ ಸಾರ್ವಜನಿಕವಾಗಿ ಕರೆ ಕೊಟ್ಟು ಸರ್ಕಾರವನ್ನೂ ಪ್ರಭಾವಿಸತೊಡಗಿದ್ದಾರೆ. ಅದರ ಮುಂದುವರಿಕೆಯಾಗಿ ನಮ್ಮ ಸಂಶೋಧನೆಯ ಕಾರ್ಯಕ್ರಮವನ್ನು ನಿಲ್ಲಿಸಬೇಕು ಎಂಬುದಾಗಿ ವಿಶ್ವವಿದ್ಯಾಲಯಕ್ಕೆ ಬೇರೆ ಬೇರೆ ಗುಂಪುಗಳಿಂದ ಒತ್ತಡವೂ ಬರತೊಡಗಿದೆ.

ನನ್ನ ವೈಯಕ್ತಿಕ ನೆಲೆಯಿಂದ ಇದೊಂದು ವಿಚಿತ್ರ ಅನುಭವವಾಗಿದೆ. ಏಕೆಂದರೆ, ನನ್ನನ್ನು ಕೆಲಸಕ್ಕೆ ಸೇರಿಸಿಕೊಂಡ ಶಿಕ್ಷಣ ವ್ಯವಸ್ಥೆಯ ಎರಡು ಮುಖ್ಯ ಧ್ಯೇಯಗಳೆಂದರೆ ಶಿಕ್ಷಣ ಮತ್ತು ಸಂಶೋಧನೆ. ನಾವು ಕೆಲಸಮಾಡುತ್ತಿರುವ ವಿಶ್ವವಿದ್ಯಾಲಯಗಳು 'ಉನ್ನತ ಶಿಕ್ಷಣ' ಎಂಬ ಪರಿಕಲ್ಪನೆಯಿಂದ ಹುಟ್ಟಿವೆ. ಮನುಷ್ಯ ಸಮಾಜಕ್ಕೆ ದೈನಂದಿನ ಉದರಂಭರಣವನ್ನು ಮಾಡುವ ವಿದ್ಯೆಯನ್ನು ಕಲಿಸುವುದಷ್ಟೇ ಶಿಕ್ಷಣದ ಗುರಿಯಾಗಬಾರದು, ಶಿಕ್ಷಣವು ಮನುಷ್ಯ ಜ್ಞಾನವನ್ನು ಹಾಗೂ ಧ್ಯೇಯವನ್ನು ಅದಕ್ಕೂ ಉನ್ನತ ಮಟ್ಟಕ್ಕೆ ಒಯ್ಯಬೇಕು ಎಂಬ ಸಿದ್ಧಾಂತವನ್ನಿಟ್ಟುಕೊಂಡು ಉನ್ನತ ಶಿಕ್ಷಣದ ಕಲ್ಪನೆಯನ್ನು ರೂಪಿಸಲಾಗಿದೆ. ಸಂಶೋಧನೆಯು ವಿಶ್ವವಿದ್ಯಾಲಯದ ಶಿಕ್ಷಕರ ಅರ್ಹತೆಯನ್ನು ಅಳೆಯುವ ಮಾನದಂಡ ಕೂಡಾ ಹೌದು. ಸಂಶೋಧನೆಗಾಗಿಯೇ ನಮ್ಮ ಸರ್ಕಾರವು ಕೋಟ್ಯಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದೆ. ಸಾಮಾಜಿಕ ಸಂಶೋಧನೆಯ ಆದರ್ಶವೆಂದರೆ ಸಮಾಜದ ಕುರಿತ ನಮ್ಮ ತಿಳುವಳಿಕೆಯ ಸಮಸ್ಯೆಗಳನ್ನು ಹಾಗೂ ಮಿತಿಗಳನ್ನು ಗುರುತಿಸಿ ಅದರಿಂದ ಹೊರಬರುವ ಮಾರ್ಗಗಳನ್ನು ಕಂಡುಹಿಡಿಯುವುದು.

ಈ ಧ್ಯೇಯಾದರ್ಶಗಳನ್ನು ಇಟ್ಟುಕೊಂಡು ನಾನು ಮತ್ತು ನನ್ನ ಕೆಲವು ಅಧ್ಯಾಪಕ ಮಿತ್ರರು ಹಾಗೂ ವಿದ್ಯಾರ್ಥಿಗಳು ಸೇರಿಕೊಂಡು ಸ್ಥಳೀಯ ಸಂಸ್ಕೃತಿಗಳ

ಅಧ್ಯಯನ ಕೇಂದ್ರದಲ್ಲಿ ಸಂಶೋಧನೆಯನ್ನು ನಡೆಸುತ್ತಿದ್ದೇವೆ. ನಮ್ಮ ಸಮಾಜ ಹಾಗೂ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳಲು ಅತ್ಯಂತ ಮಹತ್ವದ ಮಾರ್ಗವೆಂಬುದಾಗಿ ಯಾವ ಸಂಶೋಧನೆಯನ್ನು ಆಯುದ್ಕೊಂಡಿದ್ದೇವೊ ಅದನ್ನು ಬಿಟ್ಟುಬಿಡಬೇಕೆಂಬುದಾಗಿ ಇವರೆಲ್ಲ ಒತ್ತಡ ಹೇರುತ್ತಿದ್ದಾರೆ. ನಮ್ಮ ಸಂಶೋಧನೆಯು ಸಕಾರಣವಾಗಿ ತಿಳಿಸುವಂತೆ ನಮ್ಮ ಸಮಾಜ ಮತ್ತು ಸಂಸ್ಕೃತಿಯ ಕುರಿತು ನಾವು ಮೊದಲು ಇಟ್ಟುಕೊಂಡ ಚಿಂತನೆಗಳಲ್ಲಿ ಸಮಸ್ಯೆ ಇದೆ. ಹಾಗಾಗಿ ಅದನ್ನು ಪರಿಷ್ಕರಿಸುವ ಅಗತ್ಯವಿದೆ. ನಮ್ಮ ಈ ಅಭಿಪ್ರಾಯಗಳನ್ನು ನಾವು ಹೊಂದಬಾರದೆಂದು ಹಾಗೂ ಹಂಚಿಕೊಳ್ಳಬಾರದೆಂದು ಆಗ್ರಹಿಸಿದರೆ ನಾವು ಸುಳ್ಳು ಹೇಳಬೇಕಾಗುತ್ತದೆ. ಅದಕ್ಕಿಂತ ಹೆಚ್ಚಾಗಿ ಶೈಕ್ಷಣಿಕ ಧ್ಯೇಯಾದರ್ಶಗಳ ಕಥೆ ಏನು?

ಇವರಲ್ಲಿ ಬಹುತೇಕರು ನನಗೆ ಪರಿಚಿತರೇ. ಅವರು ವೈಚಾರಿಕ ಸ್ವಾತಂತ್ರ್ಯವನ್ನು, ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿ ಹಿಡಿಯುವವರು. ಆ ಸಲುವಾಗಿ ಹೋರಾಡುವುದೇ ತಮ್ಮ ಜೀವನ ಕ್ರಮವನ್ನಾಗಿ ಮಾಡಿಕೊಂಡವರು. ಅಂಥ ಮೌಲ್ಯಕ್ಕೆ ಧಕ್ಕೆ ತರುವ ಪ್ರಯತ್ನಗಳನ್ನು ಫ್ಯಾಸಿಸಂ, ಮೂಲಭೂತವಾದ ಎಂದೆಲ್ಲ ಖಂಡಿಸುವವರು. ನಮ್ಮ ಸಂಶೋಧನೆಗಳು ಇಂಥ ಪ್ರಗತಿಪರ ಮೌಲ್ಯಗಳನ್ನು ಶಿಥಿಲಗೊಳಿಸುತ್ತವೆ ಎಂಬ ಹೆದರಿಕೆಯಿಂದಲೇ ಅವರು ಈ ಉಗ್ರ ಪ್ರತಿಕ್ರಿಯೆಯನ್ನು ಮಾಡುತಿದ್ದಾರೆ ಎಂಬುದೂ ಅಷ್ಟೇ ನಿಜ. (ಹಾಗೂ ಇವರಲ್ಲಿ ಹಲವರಿಗೆ ಸಂಶೋಧನೆಯನ್ನು ನಿಲ್ಲಿಸುವ ವಿಚಾರ ಸಮ್ಮತವಾಗಿರಲಾರದು ಎಂಬುದಾಗಿ ನನಗೆ ಧೃಡ ವಿಶ್ವಾಸವಿದೆ.) ಆದರೆ ವಿಪರ್ಯಾಸವೆಂದರೆ ಕೆಲವರಂತೂ ತಮ್ಮ ಪ್ರಗತಿಪರ ಕಾರ್ಯಕ್ರಮದ ಅಂಗವಾಗಿ ಯಾವುದೇ ಎಗ್ಗಿಲ್ಲದೇ ಸಂಶೋಧನೆಗಳನ್ನು ನಿಲ್ಲಿಸುವ, ಧ್ವನಿಗಳನ್ನು ಹತ್ತಿಕ್ಕುವ ಕೆಲಸಕ್ಕೆ ಇಳಿದಿದ್ದಾರೆ. ಈ ವೈರುಧ್ಯ ಇವರ ಗಮನಕ್ಕೆ ಬರುತ್ತಿಲ್ಲವೆ? ಯಾವಾಗ ಧ್ವನಿಗಳನ್ನು ಹತ್ತಿಕ್ಕಿದರೆ ಪ್ರಗತಿಪರವಾಗುತ್ತದೆ, ಯಾವಾಗ ಪ್ರಗತಿ ವಿರೋಧವಾಗುತ್ತದೆ ಎಂಬುದಕ್ಕೆ ಇವರಿಗೆ ಇವರದೇ ಆದ ವಿಶ್ವಾಸಾರ್ಹ ಪ್ರಮಾಣಗಳಿರಬಹುದೆ? ಇಲ್ಲ, ಮನುಷ್ಯ ಸ್ವಾತಂತ್ರ್ಯ ಎಂಬ ಪ್ರಗತಿಪರ ತತ್ವವನ್ನು ತಮ್ಮ ವಿರೋಧಿಗಳಿಗೂ ವಿಸ್ತರಿಸುವಷ್ಟು ಅದರ ಮೇಲೆ ಅವರಿಗೆ ವಿಶ್ವಾಸ ಇಲ್ಲವೆ? ಒಟ್ಟಿನಲ್ಲಿ ಈ ಪರಿಸ್ಥಿತಿಯು ಇಂದಿನ ಪ್ರಗತಿಪರ ಹೋರಾಟದ ಒಂದು ಸಮಸ್ಯೆಯನ್ನಂತೂ ಅನಾವರಣ ಮಾಡುತ್ತದೆ. ಒಮ್ಮೆ ನಾನೂ ಇವರ ವಿಚಾರಗಳನ್ನು ಹಂಚಿಕೊಂಡವನೇ. ಅವರ ಕಾಳಜಿಯನ್ನು ಹಾಗೂ ಬದ್ಧತೆಯನ್ನು ನಾನು ಗೌರವಿಸುತ್ತೇನೆ, ಏಕೆಂದರೆ ಆ ಕಾಳಜಿ ನನ್ನಲ್ಲೂ ಇದೆ. ನಾನು ಈ ಸಂಶೋಧನಾ ಕಾರ್ಯಕ್ರಮದಲ್ಲಿ ಇಷ್ಟು ಶ್ರದ್ಧೆಯಿಂದ ತೊಡಗಿಸಿಕೊಳ್ಳಲಿಕ್ಕೆ ಆ ಕಾಳಜಿಯೇ ಮೂಲ ಕಾರಣ. (ಅದನ್ನು ವಿದೇಶೀ ಹಣವೆಂಬುದಾಗಿ ಗುರುತಿಸುವವರು ಹಣಕ್ಕೂ ಮೀರಿದ ಕಾಳಜಿಗಳಿಗಾಗಿ ಮನುಷ್ಯರು ಬದುಕಬಲ್ಲರು ಎಂಬ ಸತ್ಯವನ್ನು ಅಲ್ಲಗಳೆಯುತ್ತಿರುತ್ತಾರಷ್ಟೆ).

ಈ ಮೇಲಿನ ವಿರೋಧವು ಸಂಶೋಧನೆಯ ಕ್ಷೇತ್ರದ ರಿವಾಜುಗಳಿಗೆ ಬದ್ಧವಾಗಿಲ್ಲ ಎಂಬುದು ಮತ್ತೊಂದು ವಿಶೇಷ. ವಿಚಿತ್ರವೆಂದರೆ ಹೀಗೆ ನಮ್ಮ ಮೇಲೆ ಆರೋಪ ಹೊರಿಸುತ್ತಿರುವವರಲ್ಲಿ ಯಾರೂ ಸರಿಯಗಿ ನಮ್ಮ ವಾದವೇನು ಎಂಬುದನ್ನು ಓದಿ ಕೇಳಿ ತಿಳಿದುಕೊಳ್ಳುವ ಪರಿಶ್ರಮ ಪಟ್ಟದ್ದೇನೂ ಕಾಣುವುದಿಲ್ಲ, ಹಾಗೂ ನಮ್ಮ ವಿಚಾರಗಳನ್ನು ಟೀಕಿಸುವವರಿಗೆ ಅದರ ಅಗತ್ಯವೂ ಕಾಣಿಸಿಲ್ಲ. ಏಕೆಂದರೆ ನಮ್ಮ ಸಂಶೋಧನೆಗೆ ಪ್ರತಿಯಾಗಿ ಇವರು ಇಟ್ಟ ಮುಖ್ಯ ವಾದವೆಂದರೆ ನಮಗೆ ವಿದೇಶೀ ಹಣ ಬರುತ್ತಿದೆ, ನಮಗೊಂದು ಹುನ್ನಾರವಿದೆ, ಸಂಚಿದೆ, ನಾವು ಮೋಸ ಮಾಡುತ್ತಿದ್ದೇವೆ ಎಂಬುದು. ಹುನ್ನಾರವೇನು? ಎಂದರೆ ಯಾವ ಬ್ರಾಹ್ಮಣ ಅಥವಾ ವೈದಿಕ ಪುರೋಹಿತಶಾಹಿಯು ಈ ಸಮಾಜವನ್ನು ಜಾತಿ ವ್ಯವಸ್ಥೆ ಎಂಬುದಾಗಿ ವಿಭಾಗಿಸಿ ಕೆಲವು

ಜಾತಿಗಳನ್ನು ಶೋಷಿಸಿದೆಯೊ ಅದೇ ಈಗ ಜಾತಿ ವ್ಯವಸ್ಥೆಯಿಲ್ಲ, ಶೋಷಣೆಯಿಲ್ಲ ಎನ್ನುವ ಮೂಲಕ ಈ ಶೋಷಣೆಯನ್ನು ಮುಂದುವರಿಸುವ ಹಂಚಿಕೆ ನಡೆಸುತ್ತಿದೆ ಎಂಬುದು ಅವರ ಆರೋಪ. (ಅದು ಹೇಗೆ ಎಂದು ಕೇಳಬೇಡಿ) ನಾವು ಬಾಲಗಂಗಾಧರ ಅವರ ಗಿಂಡಿಮಾಣಿಗಳು ಎನ್ನುವ ಮೂಲಕ ದಡ್ಡರು ಎಂಬುದಾಗಿ ಒಂದೆಡೆ ಹಣೆಪಟ್ಟಿ ನೀಡುವ ಜೊತೆಗೆ, ದುಷ್ಟರು, ಈವಿಲ್‌ನ ಪ್ರತಿರೂಪಗಳು ಎಂದುದು ಕೂಡ ಆಯ್ತು. ನಾವು ಬಿಜೆಪಿ, ಆರೆಸ್ಸೆಸ್‌ಗಳ ಜೊತೆಗೆ ರಾಜಕೀಯದಲ್ಲಿ ಶಾಮೀಲಾಗಿದ್ದೇವೆ ಎಂಬ ಟೀಕೆಗಳೂ ಬಂದವು, ಹಾಗೂ ಬಹುಶಃ ಈ ರಾಜಕೀಯ ಆಯಾಮವು ಟೀಕಾಕಾರರಿಗೆ ಹೆಚ್ಚು ಅರ್ಥಪೂರ್ಣ ಹಾಗೂ ಉಪಯುಕ್ತವಾಗಿದೆ. ಈ ಟೀಕೆಗಳೆಲ್ಲವೂ ನಮ್ಮ ವ್ಯಕ್ತಿತ್ವ ಹಾಗೂ ದುರುದ್ದೇಶಗಳ ಕುರಿತು ಇವೆ ಎಂಬುದನ್ನು ಗಮನಿಸಿ. ಅದನ್ನು ಬಹಳ ಜನರು ನಂಬಲಿಕ್ಕೆ ಅವರದೇ ಕಾರಣಗಳೂ ಇರಬಹುದು. ಆದರೆ ನಾವು ಹೇಳುವುದರಲ್ಲಿ ಸತ್ಯವಿಲ್ಲ ಎಂಬುದನ್ನು ನಮ್ಮ ವಿಚಾರವನ್ನು ತಿಳಿದುಕೊಂಡು ಅದರ ಅಸಂಗತತೆಯನ್ನು ತೋರಿಸಿ ಸಿದ್ಧಮಾಡುವ ಬದಲು ನಮ್ಮ ಚಾರಿತ್ರ್ಯ ಅದನ್ನು ಪ್ರಮಾಣೀಕರಿಸುತ್ತದೆ ಎಂಬ ನಂಬಿಕೆ ಎಲ್ಲಿಂದ ಹುಟ್ಟುತ್ತದೆ?

ನಮ್ಮ ಸಂಶೋಧನೆಯನ್ನು ನಿಲ್ಲಿಸಬೇಕೆಂದು ಆಗ್ರಹಿಸುತ್ತಿರುವ ಚಿಂತಕರು ಒಂದೆಡೆ ನಮ್ಮ ಬರೆಹಗಳು ಕಬ್ಬಿಣದ ಕಡಲೆಗಳು ಎನ್ನುತ್ತಾರೆ ಮತ್ತೊಂದೆಡೆ ನಮ್ಮ ವಾದಗಳಲ್ಲಿ ಹುರುಳಿಲ್ಲ ಎನ್ನುತ್ತಾರೆ. ಒಂದೆಡೆ ನಾವೇನೂ ಹೊಸದನ್ನು ಹೇಳುತ್ತಿಲ್ಲ ಎನ್ನುತ್ತಾರೆ. ಮತ್ತೊಂದೆಡೆ ಇದೇ ಹೊಸದಾಗಿ ಇಂಥ ವಿಚಾರವನ್ನು ಕೇಳಿದವರಂತೆ ವಿರೋಧಿಸುತ್ತಾರೆ. ಇವರದು ಶತಮಾನಗಳ ಸಂಚು ಎನ್ನುತ್ತಾರೆ, ಮತ್ತೊಂದೆಡೆ ಇವರು ಏನು ಹೇಳುತ್ತಿದ್ದಾರೆಂದು ಇವರಿಗೇ ಸ್ಪಷ್ಟವಾಗಿಲ್ಲ, ದಿನಕ್ಕೊಂದು ಹೇಳುತ್ತಿದ್ದಾರೆ ಎನ್ನುತ್ತಾರೆ. ಮೂಲತಃ ನಮ್ಮನ್ನು ಓದದೇ ಇದ್ದವರಂತೂ ಏನೇ ಹೇಳಿದರೂ ಅದು ಶೈಕ್ಷಣಿಕ ಚರ್ಚೆಯಾಗುವುದಂತೂ ಸಾಧ್ಯವಿಲ್ಲ, ಇನ್ನು ಇದನ್ನು ನಿಲ್ಲಿಸಬೇಕೆಂಬುದಾಗಿ ಆಗ್ರಹಿಸಿದ ಹೋರಾಟಗಾರರಿಗೆ ಈ ಸಂಶೋಧನೆ ಏನು ಎಂಬುದು ತಿಳಿದಿರಬೇಕು ಎಂಬುದೇ ಅನುಚಿತವಾದ ನಿರೀಕ್ಷೆಯಾಗಬಹುದು. ಆದರೆ ಒಂದು ಸಾಮಾನ್ಯ ಪ್ರಶ್ನೆ ಯಾರಿಗಾದರೂ ಅರ್ಥವಾಗಬಹುದು ಎಂದುಕೊಂಡಿದ್ದೇನೆ: ನಾವೇನೂ ನಮ್ಮ ಕೇಂದ್ರದಲ್ಲಿ ಬಾಂಬು ತಯಾರು ಮಾಡುತ್ತಿಲ್ಲ, ಕೊಲೆಯ ಸಂಚನ್ನೂ ಮಾಡುತ್ತಿಲ್ಲ, ನಮ್ಮ ಶಿಕ್ಷಣ ವ್ಯವಸ್ಥೆಯ ಧ್ಯೇಯಾದರ್ಶಗಳನ್ನು ಬಹುಶಃ ಸ್ವಲ್ಪ ಗಂಭೀರವಾಗಿಯೇ ತೆಗೆದುಕೊಂಡು ವಿಶ್ವವಿದ್ಯಾಲಯದ ನಿಯಮಗಳ ಚೌಕಟ್ಟಿನಲ್ಲೇ ಸಾಗುತ್ತಿದ್ದೇವೆ. ಇದನ್ನು ನಿಲ್ಲಿಸಬೇಕೆಂದು ಹೋರಾಡಿದವರನ್ನು ನಮ್ಮ ಸಮಾಜ ಹೇಗೆ ನೋಡಬಹುದು? ನಮ್ಮ ಇತಿಹಾಸ ಹೇಗೆ ನೆನಪಿಟ್ಟುಕೊಳ್ಳಬಹುದು?

## 2

ಸದ್ಯಕ್ಕೆ ನಾನು ಇದೊಂದು ಸಮಾಜ ವಿಜ್ಞಾನಗಳು ಬಗೆಹರಿಸಿಕೊಳ್ಳಬೇಕಾದ ಸಮಸ್ಯೆ ಎಂಬಂತೆ ನೋಡಬಯಸುತ್ತೇನೆ. ವಿಶ್ವವಿದ್ಯಾಲಯಗಳಲ್ಲಿ ಇಂಥ ಎಷ್ಟೋ ಪ್ರಾಜೆಕ್ಟುಗಳು, ಇದಕ್ಕೂ ಎಷ್ಟೋ ದೊಡ್ಡವು ಆಗಿಹೋದವು. ಅವರೆಲ್ಲಾ ಏನು ಸಂಶೋಧನೆ ಮಾಡಿದ್ದಾರೆ? ಅದಕ್ಕೆ ಹಣ ಎಲ್ಲಿಂದ ಬಂದಿದೆ? ಎಂಬುದನ್ನೂ ಯಾರೂ ಕೇಳಿಲ್ಲ. ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆ ಹಾಗೂ ಪಾಠಪ್ರವಚನಗಳು ಸರಿಯಾಗಿ ನಡೆಯುತ್ತಿವೆಯೆ? ಎಂಬುದನ್ನೂ ಯಾರೂ ಕೇಳುತ್ತಿಲ್ಲ. ಇಂಥ ಚಿಂತಕರು ಹಾಗೂ ಹೋರಾಟಗಾರರು ಸಾರ್ವಜನಿಕರನ್ನು ಪ್ರತಿನಿಧಿಸಿದ್ದೇ ಹೌದಾದಲ್ಲಿ ವಿಶ್ವವಿದ್ಯಾಲಯಗಳಿಂದ ಸದ್ಯಕ್ಕೆ ಅವರಿಗಿರುವ ಒಂದೇ ನಿರೀಕ್ಷೆ ಎಂದರೆ ಈ ಸಂಶೋಧನೆ

ನಿಲ್ಲಬೇಕು ಅಷ್ಟೆ. ನಿಮ್ಮಷ್ಟಕ್ಕೆ ನೀವು ಏನಾದರೂ ಮಾಡಿಕೊಂಡು ಹಾಳಾಗಿ ಹೋಗಿ, ಆದರೆ ದಯವಿಟ್ಟು ಇಂಥ ಸಂಶೋಧನೆಯನ್ನು ಮಾತ್ರ ಮಾಡಬೇಡಿ ಎಂದು ಅವರೆಲ್ಲಾ ಕೇಳಿಕೊಳ್ಳುತ್ತಿರುವಂತಿದೆ. ಅಂದರೆ ನಮ್ಮ ಸಂಶೋಧನೆಯ ಪ್ರಶ್ನೆಗಳು ಈ ಚಿಂತಕರಿಗೆ ಅಪಥ್ಯವಾಗಿವೆ ಮಾತ್ರ ಅಲ್ಲ ಆತಂಕವನ್ನೂ ಸೃಷ್ಟಿಸಿವೆ ಎಂಬುದು ಸ್ಪಷ್ಟವಾಗುತ್ತದೆ. ಅದನ್ನು ಅವರು ಸಂಶೋಧನೆಯ ಮೂಲಕ ಎದುರಿಸದೇ ಈ ಮಾರ್ಗವನ್ನು ಹಿಡಿಯುತ್ತಿದ್ದಾರೆ ಅಷ್ಟೆ. ಹಾಗಂತ ಅವರ ಕಾಳಜಿಯನ್ನು ಪ್ರಶ್ನಿಸದೇ, ತೀರಾ ಔದಾರ್ಯದಿಂದಲೇ ಅವರ ಸಮಸ್ಯೆಯನ್ನು ಈ ಮುಂದಿನಂತೆ ಗ್ರಹಿಸುತ್ತೇನೆ: ನಮ್ಮ ಇಂದಿನ ಪ್ರಭುತ್ವ ಹಾಗೂ ಸಂಸ್ಥೆಗಳು ಒಂದು ಕಾಲದ ಸಮಾಜ ವಿಜ್ಞಾನದ ಸತ್ಯಗಳನ್ನು ಆಧರಿಸಿ ರೂಪುಗೊಂಡಿವೆ. ಆ ಸತ್ಯಗಳನ್ನು ಆಧರಿಸಿ ನಾವು ನಮ್ಮ ನೀತಿಗಳನ್ನು ರೂಪಿಸಿಕೊಂಡು ಒಳಿತು ಕೆಡುಕುಗಳ ಕುರಿತು ನಂಬಿಕೆಗಳನ್ನು ಹಾಗೂ ಹೋರಾಟಗಳನ್ನು ಕಟ್ಟಿಕೊಂಡಿದ್ದೇವೆ. ಅಂಥ ಸತ್ಯಗಳು ಮೂಲತಃ ಸಮಾಜ ವಿಜ್ಞಾನದಲ್ಲಿ ಸಂಶೋಧನೆಯ ಸಮಸ್ಯೆಗಳಾಗಿವೆ. ಹಾಗಿಲ್ಲದಿದ್ದಲ್ಲಿ ಸಮಾಜ ವಿಜ್ಞಾನವು ವಿಜ್ಞಾನವಾಗಿ ಉಳಿಯಲು ಸಾಧ್ಯವಿಲ್ಲ. ಆದರೆ ಇಂಥ ಸತ್ಯಗಳು ಸಮಾಜ ವಿಜ್ಞಾನಗಳ ಜಗತ್ತಿನಿಂದ ಬೇರ್ಪಟ್ಟು ಒಂದು ಪ್ರಭುತ್ವದ ಪ್ರಜೆಗಳಲ್ಲಿ ಸಾಮಾನ್ಯಜ್ಞಾನವಾಗಿ ಪ್ರಚಲಿತದಲ್ಲಿ ಬರುತ್ತವೆ. ಆ ಸತ್ಯಗಳು ನೈತಿಕ ಆಯಾಮವನ್ನು ಪಡೆದುಕೊಂಡಿವೆ. ಅಂಥ ಸಾಮಾನ್ಯ ಜ್ಞಾನವನ್ನು ಬಳಸಿಕೊಂಡು ಒಳಿತು ಕೆಡುಕುಗಳನ್ನು ನಿರ್ಧರಿಸುತ್ತಿರುವವರಿಗೆ ಅಂಥ ಸತ್ಯಗಳನ್ನು ಪ್ರಶ್ನಿಸುವುದು ನೈತಿಕ ಸಮಸ್ಯೆಯಾಗಿ ಮಾತ್ರವೇ ಕಾಣಿಸುತ್ತದೆಯೇ ಹೊರತೂ ಸಂಶೋಧನೆಯ ಸಮಸ್ಯೆಯಾಗಿ ಕಾಣಿಸುವುದಿಲ್ಲ. ಅದರಲ್ಲೂ ಕೆಲವು ನಿರ್ದಿಷ್ಟ ಸತ್ಯಗಳನ್ನು ಆಧರಿಸಿ ತಮ್ಮ ನೈತಿಕ ಪ್ರಜ್ಞೆಯನ್ನು ಬೆಳೆಸಿಕೊಂಡು ಅದಕ್ಕೆ ಪೂರಕವಾದ ರಾಜಕೀಯವನ್ನು ರಚಿಸಿಕೊಂಡು ಪ್ರತಿಪಾದಿಸುತ್ತಿರುವವರಿಗೆ ಅಂಥ ಸತ್ಯಗಳನ್ನು ಪರಿಷ್ಕರಿಸುವುದು ಕೆಡುಕಿನ ರಾಜಕೀಯವಾಗಿ ಕಾಣಿಸುತ್ತದೆ. ಆಗ ವೈರತ್ವ ಹುಟ್ಟುತ್ತದೆ ಹಾಗೂ ಇಂಥ ಹೊಸ ಸಂಶೋಧನೆ ಯನ್ನು ಮೆಟ್ಟಿಹಾಕುವುದೂ ಒಂದು ನೈತಿಕ ಜವಾಬ್ದಾರಿಯಾಗಿ ಕಾಣಿಸುವುದರಲ್ಲಿ ಆಶ್ಚರ್ಯವಿಲ್ಲ.

ಈ ಚಿಂತಕರು ನಮ್ಮ ಕುರಿತು ಬಳಸಿದ ಭಾಷೆಯನ್ನು ಹಾಗೂ ಮಾಡುವ ಆರೋಪಗಳನ್ನು ಈ ಹಿನ್ನೆಲೆಯಿಂದ ನೋಡಿದರೆ ಮಾತ್ರವೇ ನಾವು ಇವರನ್ನು ಅರ್ಥಮಾಡಿಕೊಳ್ಳಲು ಸಾಧ್ಯ. ಅಂದರೆ ನಮ್ಮ ಉದ್ದೇಶ ರಾಜಕೀಯದಿಂದ ಪ್ರೇರಿತವಾಗಿದೆ. ನಮ್ಮ ಸಂಶೋಧನೆ ಅವರಿಗೆ ಹುನ್ನಾರವಾಗಿ ಕಾಣಿಸುತ್ತದೆ.  ನಾವು ದುಷ್ಟ ಹೇತುವಿನಿಂದ ಈ ಕೆಲಸ ಮಾಡುತ್ತಿದ್ದೇವೆ. ಅಂದರೆ ಅವರಂತೇ ನಮಗೂ ಮಾನವೀಯ ಕಾಳಜಿಗಳು ಇರಲು ಸಾಧ್ಯ ಎಂದರೆ ಅವರಿಗೆ ಹಾಸ್ಯಾಸ್ಪದವಾಗಿ ಕಾಣಿಸುತ್ತದೆ. ಆದರೆ ದುರಂತ ಅದಲ್ಲ, ಅದು ಸಮಾಜ ವಿಜ್ಞಾನಗಳ ಭವಿಷ್ಯದಮೇಲೆ ಏನು ಪರಿಣಾಮವನ್ನು ಬೀರುತ್ತದೆ ಎಂಬುದು. ಸಾಮಾನ್ಯಜ್ಞಾನವನ್ನಾಧರಿಸಿದ ರಾಜಕೀಯ ನಿಲುವು ಇಲ್ಲಿ ಒಂದು ಸಂಶೋಧನೆಯ ಸತ್ಯಾಸತ್ಯತೆಯನ್ನು ಅಳೆಯುವ ಮಾನದಂಡವಾಗುತ್ತದೆ. ಅಂದರೆ ನೈತಿಕ ನಿಲುವು ವಿಚಾರಗಳ ವಿಮರ್ಶೆಗೆ ಮಾನದಂಡವಾಗುತ್ತದೆ. ರಾಜಕೀಯವು ನೈತಿಕ ನಿಲುವನ್ನು ತಳೆಯುವ ಸರಳ ಸೂತ್ರಗಳನ್ನು ನೀಡುತ್ತದೆ. ಇದರ ಪರಿಣಾಮವಾಗಿ ನಮ್ಮಲ್ಲಿ ಸಮಾಜ ವಿಜ್ಞಾನಗಳ ಸಂಶೋಧಕರು ಹಾಗೂ ಇಂಥ ಚಿಂತಕರ ನಡುವಿನ ಸಂಬಂಧವು ಏಕಮುಖಿಯಾಗಿ ಮಾತ್ರವೇ ಇರಬಲ್ಲದು: ಅವರಿಗೆ ಬೇಕಾದ ಸತ್ಯವನ್ನು ಹೇಳಿದರೆ ಅವರು ನೀವು ವಿದ್ವಾಂಸರೆಂಬುದನ್ನು ಒಪ್ಪುತ್ತಾರೆ, ಅವರಿಗೆ ಬೇಡದ ಸತ್ಯವನ್ನು ಹೇಳಿದರೆ ನೀವು ಸುಳ್ಳು ಹೇಳುತ್ತಿದ್ದೀರಿ ಎನ್ನುತ್ತಾರೆ. ಅಂದರೆ ಸತ್ಯ ಏನು ಎಂಬುದು ಮೂಲತಃ ಅವರಿಗೆ ತಿಳಿದಿದೆ, ಆ ಕ್ಷೇತ್ರದಲ್ಲಿ ಜೀವಮಾನ ವ್ಯಯಿಸಿದ ವಿದ್ವಾಂಸರಿಗೆ ತಿಳಿದಿಲ್ಲ ಅಂತ.

ಇಂಥ ಸಂದರ್ಭದಲ್ಲಿ ಸಮಾಜ ವಿಜ್ಞಾನ ಸಂಶೋಧನೆಯ ಪ್ರಸ್ತುತತೆ ಏನು? ನಮ್ಮ ಕ್ಷೇತ್ರಕ್ಕೆ ಸಂಬಂಧಿಸಿದಂತೆ ರೂಢಮೂಲವಾಗಿರುವ ಸಾಮಾನ್ಯ ಜ್ಞಾನವನ್ನು ನಾವು ಪ್ರಶ್ನಿಸುವಂತಿಲ್ಲ. ನಾನು ಇತಿಹಾಸ ಸಂಶೋಧನೆಯಲ್ಲಿ ಕಳೆದ 35 ವರ್ಷಗಳಿಂದ ತೊಡಗಿಕೊಂಡಿದ್ದೇನೆ. ಎಡ, ಬಲ ಮುಂತಾದ ವಿಭಿನ್ನ ಪಂಥಗಳ ಹೋರಾಟಗಾರರ ಜೊತೆಗೆ ಕೆಲವೊಮ್ಮೆ ಐತಿಹಾಸಿಕ ವಿಷಯಗಳ ಕುರಿತು ವಾಗ್ವಾದ ನಡೆಸಿದ್ದೇನೆ. ಅವರಿಗೆ ಇತಿಹಾಸ ಕ್ಷೇತ್ರದಲ್ಲಿ ಅನುಭವ ಇರುವವರೊಬ್ಬರು ಮಾತನಾಡುತ್ತಿದ್ದಾರೆ ಎಂಬ ಯಾವ ಮುಲಾಜುಗಳೂ ಇಲ್ಲ. ಅವರ ನಿಲುವನ್ನು ಅವರು ಬಿಟ್ಟುಕೊಡುವುದಿಲ್ಲ, ಬದಲಾಗಿ ನನಗೇ ಗೊತ್ತಿಲ್ಲ ಎಂಬ ಧೋರಣೆಯಲ್ಲೇ ಮಾತನಾಡಿದ್ದಾರೆ. ಅವರು ಯಾವುದೋ ಒಂದು ಪುಸ್ತಕವನ್ನು ಸತ್ಯವೆಂಬಂತೆ ಆಧರಿಸಿರುತ್ತಾರೆ. ಅವರಿಗೆ ಇತಿಹಾಸ ಎಂಬ ಜ್ಞಾನದ ಸ್ವರೂಪ ಹಾಗೂ ಸಮಸ್ಯೆಗಳ ಕುರಿತು ತಿಳಿಸಿಕೊಡುವುದಂತೂ ಅಸಾಧ್ಯದ ಮಾತು. ಇದು ಅನೇಕ ಸಂಶೋಧಕರ ಸಾಮಾನ್ಯ ಅನುಭವ. ಅಂದರೆ ಅವರೆಲ್ಲರಿಗೂ ತಾವು ಯಾವ ಸತ್ಯವನ್ನು ಕುರಿತು ಮಾತನಾಡುತ್ತಿರುತ್ತಾರೊ ಅವು ಸಮಾಜ ವಿಜ್ಞಾನದ ಚರ್ಚೆಯ ಭಾಗಗಳು, ಅವು ಬದಲಾವಣೆಗೊಳಪಡುತ್ತಿರುತ್ತವೆ ಎಂಬ ಮೂಲಭೂತ ವಿಷಯದ ಕುರಿತು ಗಮನ ವಿದ್ದಂತಿಲ್ಲ. ಅದಕ್ಕಿಂತ ಹೆಚ್ಚಾಗಿ ಇದೊಂದು ವಿಶೇಷಜ್ಞರ ತಿಳುವಳಿಕೆಗೆ ಸಂಬಂಧಪಟ್ಟ ವಿಚಾರ ಎಂಬ ಅರಿವೇ ಇರುವುದಿಲ್ಲ.

ಅವರು ಮಾತ್ರ ಅಲ್ಲ, ವಿಶ್ವವಿದ್ಯಾಲಯದಲ್ಲಿ ಸಂಶೋಧನೆಯಲ್ಲೇ ತೊಡಗಿಕೊಂಡಿರುವ ಅನೇಕರಿಗೂ ಈ ವಿಷಯ ಅಷ್ಟು ಸ್ಪಷ್ಟವಾಗಿಲ್ಲ ಎಂಬುದು ಈಚಿನ ಘಟನೆಯಿಂದ ನನ್ನ ಅನುಭವಕ್ಕೆ ಬಂದಿತು. ಅವರು ನಾವು ಎತ್ತಿದ ಚರ್ಚೆಗೆ ಮುಕ್ತವಾಗಿ ತೆರೆದುಕೊಳ್ಳುತ್ತಿಲ್ಲ. ಏಕೆಂದರೆ ನಾವೇನೋ ಇಂಥ ಚರ್ಚೆಗಳನ್ನು ಎತ್ತಿ ಅನೀತಿಯ ಕೆಲಸ ಮಾಡುತ್ತಿದ್ದೇವೆ ಎಂಬ ಹಿಂಜರಿಕೆ ಅವರಲ್ಲಿ ಕಂಡುಬರುತ್ತದೆ. ಅವರು ನಮ್ಮ ಸಂಶೋಧನೆಯಲ್ಲಿ ಸಮಸ್ಯೆಯಿದೆ ಎಂಬ ತಕರಾರು ಎತ್ತುತ್ತಾರೆ, ಆದರೆ ನಮ್ಮ ಬರವಣಿಗೆಯನ್ನು ಸರಿಯಾಗಿ ಓದುವ ಗೋಜಿಗೆ ಹೋಗುವುದಿಲ್ಲ. ಈ ಚರ್ಚೆಯು ಶೈಕ್ಷಣಿಕ ಚರ್ಚೆಯಾಗಿದ್ದದ್ದೇ ಹೌದಾದರೆ ಕೊನೇಪಕ್ಷ ನಾವೇನು ಬರೆದಿದ್ದೇವೆ ಎಂಬುದನ್ನು ಓದಿ ಅದರಲ್ಲಿ ಏನನ್ನು ಹೇಳಲು ಪ್ರಯತ್ನಿಸುತ್ತಿದ್ದೇವೆ ಎಂಬುದನ್ನು ತಿಳಿದುಕೊಳ್ಳಬೇಕಲ್ಲವೆ? ಯಾವುದೋ ಸ್ಥಾಪಿತ ಸತ್ಯವನ್ನು ಪ್ರಶ್ನಿಸಬಾರದು ಎಂಬ ಧೋರಣೆ ಎಲ್ಲ ಬಿಟ್ಟು ಸಂಶೋಧನೆಯನ್ನು ಆಯ್ಕೆ ಮಾಡಿಕೊಂಡವರಿಗೆ ಹೇಗೆ ಬರಲು ಸಾಧ್ಯ? ಅದರಲ್ಲೂ, ಅದು ಹೇಗೆ ವಿಶ್ವವಿದ್ಯಾಲಯ ದಲ್ಲಿ ಎಲ್ಲಾ ಬಿಟ್ಟು ಸಂಶೋಧನೆಯನ್ನು ನಿಲ್ಲಿಸಬೇಕೆಂದು ಅಧ್ಯಾಪಕರೇ ಆಗ್ರಹಿಸಲು ಸಾಧ್ಯ? ಸಂಶೋಧನೆಯ ಉದ್ದೇಶಗಳೇ ಹಳ್ಳಹಿಡಿದುಹೋಗಿಲ್ಲದಿದ್ದರೆ ಇಂಥದ್ದನ್ನು ಊಹಿಸುವುದೂ ಅಸಾಧ್ಯ.

ನಮ್ಮ ಸಂಶೋಧನೆಗೆ ವಿರೋಧವನ್ನು ಒಡ್ಡುತ್ತಿರುವವರು ಪ್ರಗತಿಪರ ಚಿಂತಕರೆಂಬುದಾಗಿ ಕರೆದುಕೊಳ್ಳುತ್ತಾರೆ. ಬಹುಶಃ ಅದೇ ನಿರ್ದಿಷ್ಟ ಕಾರಣಕ್ಕೇ ಅವರಿಗೆ ನಮ್ಮ ಸಂಶೋಧನೆ ಕಹಿ ಯಾಗಿದೆ. ಅದು ನಿಜವೇ ಹೌದಾದರೆ ಇಲ್ಲೊಂದು ವಿಪರ್ಯಾಸ ಸೃಷ್ಟಿಯಾಗುತ್ತದೆ. ಅದೇಂದರೆ, ನಮ್ಮ ಎಲ್ಲಾ ಕ್ರಿಯೆಗಳೂ ವೈಚಾರಿಕ ತಳಹದಿಯ ಮೇಲೆ ನಿಂತಿರಬೇಕು ಎಂಬುದು ಇವರ ಪ್ರತಿಪಾದನೆ. ಅದಕ್ಕೆ ರಾಜಕೀಯ ಕೂಡ ಹೊರತಲ್ಲ. ಅಂದರೆ ನಮ್ಮ ರಾಜಕೀಯವು ವಿಚಾರಗಳ ತಳಹದಿಯ ಮೇಲೆ ನಿಂತಿರಬೇಕು ಎಂದಾಗುತ್ತದೆ. ರಾಜಕೀಯವು ಯಾರ ಸಾಮಾಜಿಕ ತಿಳುವಳಿಕೆಯ ಆಧಾರದ ಮೇಲೆ ರೂಪುಗೊಳ್ಳಬೇಕು? ಸಮಾಜ ವಿಜ್ಞಾನಕ್ಕೆ ಈ ಸಂದರ್ಭದಲ್ಲೇ ಪ್ರಸ್ತುತತೆ ನಿರ್ಮಾಣವಾಗುತ್ತದೆ. ನಿಜವಾಗಿ ನೋಡಿದರೆ ಅದು ಆಯಾ ಕಾಲದ ರಾಜಕೀಯವನ್ನು

ನಿರ್ಧರಿಸಬೇಕು. ನಾವು ವ್ಯವಸ್ಥೆಗೊಳಿಸಿಕೊಂಡ ರಾಜಕೀಯವು ಒಂದು ಕಾಲದಲ್ಲಿ ಇಂಥ ಸಮಾಜ ವಿಜ್ಞಾನದ ತಿಳುವಳಿಕೆಯ ತಳಹದಿಯ ಮೇಲೇ ನಿರ್ಮಾಣವಾಗಿದೆ ಹಾಗೂ ಅದರ ಅವಕಾಶ ಗಳೂ ಅಲ್ಲೇ ಇವೆ. ಸಮಾಜ ವಿಜ್ಞಾನದಲ್ಲಿ ತಿಳುವಳಿಕೆಯು ಪರಿಷ್ಕೃತವಾದಂತೆಲ್ಲ ಅದು ರಾಜಕೀಯಕ್ಕೆ ಕ್ರಿಯಾಶೀಲತೆಯನ್ನು ನೀಡುತ್ತಿರಬೇಕು. ಅಂಥ ರಾಜಕೀಯವೇ ನಿಜವಾದ ಪ್ರಗತಿಪರ ರಾಜಕೀಯವಾಗುತ್ತದೆ. ಒಂದೊಮ್ಮೆ ಪಟ್ಟಭದ್ರ ಹಿತಾಸಕ್ತಿಯಿಂದಾಗಿ ರಾಜಕೀಯವು ಕ್ರಿಯಾಶೀಲತೆಯನ್ನು ಕಳೆದುಕೊಂಡರೆ ಸಮಾಜ ವಿಜ್ಞಾನವು ಅದಕ್ಕೆ ಕೊರಳಿಗೆ ಕಟ್ಟಿದ ಕುಂಟೆಯಂತೆ ಕಾಣುವ ಸಾಧ್ಯತೆಯೂ ಇದೆ. ಅದನ್ನು ಬಯಸದ ರಾಜಕೀಯವು ಸಮಾಜ ವಿಜ್ಞಾನದ ಸಂಶೋಧನೆಯನ್ನು ಹತ್ತಿಕ್ಕಲು ಹೊರಟರೆ ಮಾತ್ರ ತನ್ನ ಬೇರನ್ನು ತಾನೇ ಕತ್ತರಿಸಿಕೊಂಡಂತೆ ಆಗಬಹುದು. ಆದರೆ ಈ ಮೇಲಿನ ಪ್ರಗತಿಪರ ಧೋರಣೆಯು ಅಂಥದೊಂದು ಒತ್ತಡವನ್ನು ಸೃಷ್ಟಿಸುತ್ತಿರುವಂತಿದೆ. ಅಂದರೆ ನಮ್ಮ ರಾಜಕೀಯ ನಿಲುವು ಸಮಾಜ ವಿಜ್ಞಾನದ ಸತ್ಯವನ್ನು ನಿರ್ಧರಿಸಬೇಕೆಂದು ಅವರು ಒತ್ತಡ ತರುತ್ತಿದ್ದಾರೆ. ಇದೇ ನಾನು ಗುರುತಿಸುತ್ತಿರುವ ವಿಪರ್ಯಾಸ.

ಸಮಾಜ ವಿಜ್ಞಾನಕ್ಕೂ ರಾಜಕೀಯಕ್ಕೂ ನಡುವೆ ಇರಬಹುದಾದ ಇಂಥ ಕ್ರಿಯಾಶೀಲ ಸಂಬಂಧದಲ್ಲಿ ಉದ್ವಿಗ್ನತೆ ಹುಟ್ಟುವುದೆಲ್ಲಿಂದ?. ನಮ್ಮ ಸಂಶೋಧನೆಯ ಸಂದರ್ಭದಲ್ಲಿ ಹಾಗೆ ಆದಂತೆ ಕಾಣುತ್ತದೆ. ಅಂದರೆ ಸಂಶೋಧನೆಯೆಂಬುದು ಮೂಲತಃ ತಿಳುವಳಿಕೆಯನ್ನು ಪರಿಷ್ಕರಿಸುವ ಕೆಲಸ. ಅಲ್ಲಿ ಸಂಶೋಧನಾ ಪ್ರಶ್ನೆಗಳೂ, ಅದಕ್ಕೆ ಉತ್ತರಗಳೂ ಅದರದೇ ಆದ ತರ್ಕದಲ್ಲಿ ಹುಟ್ಟುತ್ತಿರುತ್ತವೆಯಾದರೂ ಅವುಗಳು ಸ್ಥಾಪಿತ ವಿಚಾರಗಳನ್ನು ಅಲ್ಲಗಳೆಯುತ್ತಿರುತ್ತವೆ ಯಾದ್ದರಿಂದ ಅವನ್ನು ಆಧರಿಸಿದ ರಾಜಕೀಯದ ಮಿತಿಗಳನ್ನು ಕೂಡ ಸೂಚಿಸುತ್ತಿರುತ್ತವೆ. ಆ ಮಟ್ಟಿಗೆ ಸಮಾಜವಿಜ್ಞಾನವು ರಾಜಕೀಯಕ್ಕೆ ಸವಾಲನ್ನು ಸೃಷ್ಟಿಸುತ್ತಲೇ ಇರುತ್ತದೆ. ರಾಜಕೀಯವು ಈ ಸವಾಲುಗಳನ್ನು ಎದುರಿಸುವ ಬದಲಾಗಿ ಹತ್ತಿಕ್ಕುವ ಕೆಲಸವನ್ನು ಮಾಡಲೂ ಬಹುದು. ಹೀಗೆ ಆಗಲಿಕ್ಕೆ ಕಾರಣವೆಂದರೆ ರಾಜಕೀಯವು ಒಂದಿಲ್ಲೊಂದು ಐಡಿಯಾಲಜಿಗಳನ್ನು ಆಶ್ರಯಿಸಿರುವುದು. ಐಡಿಯಾಲಜಿ ಈ ಪ್ರಪಂಚವನ್ನು ಗ್ರಹಿಸುವ ಒಂದು ನಿರ್ದಿಷ್ಟ ರೀತಿಯ ಚೌಕಟ್ಟನ್ನು ಸತ್ಯವೆಂಬಂತೆ ನೀಡುತ್ತಿರುತ್ತದೆ. ಅದರ ವೈಶಿಷ್ಟ್ಯ ಎಂದರೆ ಅದು ಒಂದು ಕಾಲದ ಸಮಾಜ ವಿಜ್ಞಾನದ ಸಿದ್ಧಾಂತ ವನ್ನು ತನ್ನದನ್ನಾಗಿ ಮಾಡಿಕೊಂಡಿದ್ದರೂ ಸೈದ್ಧಾಂತಿಕ ಹುಡುಕಾಟ ಅದರಲ್ಲಿ ನಿಂತುಹೋಗಿರುತ್ತದೆ. ಹೊಸ ತಿಳುವಳಿಕೆಯನ್ನು ತನ್ನ ಚೌಕಟ್ಟನ್ನು ಸಮರ್ಥಿಸುವ ಮಟ್ಟಿಗೆ ಅದು ಬಳಸಿಕೊಳ್ಳುತ್ತದೆಯೇ ಹೊರತೂ ತಾನು ಅದರಿಂದ ಪರೀಕ್ಷೆಗೊಳಗಾಗಿ ಬದಲಾಗುವುದಿಲ್ಲ. ಹಾಗಾಗಿ ಆ ಚೌಕಟ್ಟಿನ ಪರೀಕ್ಷೆ, ಹಾಗೂ ಪರಿಷ್ಕಾರ ಯಾವತ್ತೂ ನಡೆಯುವುದಿಲ್ಲ. ಆದರೆ ಅಂಥ ಸಿದ್ಧಾಂತಗಳು ಸಮಾಜ ವಿಜ್ಞಾನ ಕ್ಷೇತ್ರದಲ್ಲಿ ಪರಿಷ್ಕಾರಗೊಂಡು ಮಾರ್ಪಾಟಾಗಿರುತ್ತವೆ. ಒಂದಷ್ಟು ವರ್ಷಗಳು ಕಳೆದ ಮೇಲೆ ಅಂಥ ಐಡಿಯಾಲಜಿಯ ವಕ್ತಾರರು ಸಮಾಜ ವಿಜ್ಞಾನದ ಮೇಲೇ ಆಣೆಯಿಟ್ಟು ತಮ್ಮ ಹೇಳಿಕೆಯನ್ನು ಪ್ರತಿಪಾದಿಸುತ್ತಿದ್ದರೂ ಕೂಡ ಸಮಾಜ ವಿಜ್ಞಾನದ ತಿಳುವಳಿಕೆಯ ಜೊತೆಗೆ ಅದು ನಿಜವಾಗಿಯೂ ಸಂಬಂಧವನ್ನು ಕಡಿದುಕೊಂಡಿರುತ್ತದೆ.

ಭಾರತೀಯ ಸಮಾಜದ ಹಾಗೂ ಸಂಸ್ಕೃತಿಯ ಕುರಿತು ಇಂಥ ವಕ್ತಾರರು ಇಂದು ಆಣೆಯಿಟ್ಟು ಪ್ರತಿಪಾದಿಸುತ್ತಿರುವುದು ನೂರು ವರ್ಷಗಳ ಹಿಂದಿನ ವಸಾಹತುಶಾಹಿಯ ಕಾಲದ ಸಿದ್ಧಾಂತಗಳು. ಸಮಾಜ ವಿಜ್ಞಾನದಲ್ಲಿ ಇಂದು ಅವುಗಳ ಗುರುತೇ ಸಿಗದಷ್ಟು ಮಾರ್ಪಾಟಾಗಿದೆ. ಅದನ್ನು ಅನುಸರಿಸಿ ಮುಂದುವರೆದ ಸಂಶೋಧನೆಗಳು ಈ ಐಡಿಯಾಲಜಿಗೆ ಹಾಗೂ ಅದನ್ನಾಧರಿಸಿದ ರಾಜಕೀಯಕ್ಕೆ ಅಪಾಯವನ್ನು ಒಡ್ಡುತ್ತಲೇ ಇರುತ್ತವೆ. ಐಡಿಯಾಲಜಿಯು ಈ

ಮೇಲೆ ವಿವರಿಸಿದ ಸ್ವರೂಪವೇ ಅದಕ್ಕೆ ರಕ್ಷಾ ಕವಚವಾಗಿದೆ. ನಿಜವಾದ ಸಂಶೋಧನೆಯಿಂದ ಅದರ ಕವಚವು ಖಂಡಿತವಾಗಿಯೂ ಅಪಾಯಕ್ಕೊಳಗಾಗುತ್ತಿರುತ್ತದೆ. ಒಂದೊಮ್ಮೆ ಆ ಕವಚವನ್ನು ಸಮಾಜವಿಜ್ಞಾನವು ಭೇದಿಸುತ್ತದೆ ಎಂಬ ಅಪಾಯವು ನಿರ್ಮಾಣವಾದರೆ ಸಮಾಜ ವಿಜ್ಞಾನ ಸಂಶೋಧನೆಯು ರಾಜಕೀಯಕ್ಕೆ ಮುಖಾಮುಖಿಯಾಗಿ ನಿಲ್ಲುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆ ಮಟ್ಟಿಗೆ ಐಡಿಯಾಲಜಿಯು ಸಾಮಾಜಿಕ ಸಿದ್ಧಾಂತದ ಕ್ರಿಯಾಶೀಲತೆಗೆ ವಿರುದ್ಧವಾದುದಷ್ಟೇ ಅಲ್ಲ ತಾನೇ ಸಮಾಜ ವಿಜ್ಞಾನದ ಸ್ಥಾನವನ್ನು ಅಲಂಕರಿಸಿ ಸಮಾಜ ವಿಜ್ಞಾನದ ಬೆಳವಣಿಗೆಗೆ ದೊಡ್ಡ ತೊಡಕಾಗಿರುತ್ತದೆ.

ಈ ರಾಜಕೀಯದಲ್ಲಿ ಸಮಾಜ ವಿಜ್ಞಾನದ ಗತಿಯೇನು? ಸಮಾಜ ವಿಜ್ಞಾನದ ಸಂಶೋಧನೆಯ ಹುಡುಕಾಟವನ್ನು ಒಂದಿಲ್ಲೊಂದು ಐಡಿಯಾಲಜಿಯ ಸಮರ್ಥನೆಯಾಗಿ ಮಾರ್ಪಡಿಸುವ ಪ್ರಯತ್ನವೂ ನಡೆಯುತ್ತಿರುತ್ತದೆ. ನಮ್ಮ ಸಾಮಾಜಿಕ ಸಂಶೋಧನೆಗಳಲ್ಲಿ ಇಂಥ ಪ್ರಯತ್ನಗಳೇ ಸಂಶೋಧನೆಯ ಸ್ಥಾನವನ್ನೂ ಅಲಂಕರಿಸಿವೆ. ಅದು ಸಂಶೋಧನಾ ಕ್ಷೇತ್ರದ ಅಗತ್ಯವಲ್ಲ, ರಾಜಕೀಯ ಕ್ಷೇತ್ರದ ಅಗತ್ಯ. ಆ ಮೂಲಕ ರಾಜಕೀಯವೂ, ಐಡಿಯಾಲಜಿಯೂ ತಮ್ಮ ಯಥಾಸ್ಥಿತಿಯನ್ನು ಕಾಪಾಡಿಕೊಳ್ಳಲು ಯತ್ನಿಸುತ್ತವೆ. ನಮ್ಮ ಸಮಾಜ ವಿಜ್ಞಾನಗಳ ಸಂಶೋಧನೆಯೆಂಬುದು ಒಂದಿಲ್ಲೊಂದು ರಾಜಕೀಯ ಆಳ್ವಿಕೆಯ ಆಶ್ರಯದಲ್ಲಿ ನಡೆಯುವುದ ರಿಂದ ರಾಜಕೀಯದ ಜೊತೆಗೆ ಒಂದು ವಿಚಿತ್ರ ರೀತಿಯ ಹೊಂದಾಣಿಕೆ ಹಾಗೂ ಅರ್ಥವಂತಿಕೆ ಯನ್ನು ಸಮಾಜ ವಿಜ್ಞಾನವು ಬೆಳೆಸಿಕೊಳ್ಳುತ್ತದೆ. ಈ ಪ್ರಯತ್ನದಲ್ಲಿ ಸಮಾಜ ವಿಜ್ಞಾನವು ಪ್ರಚಲಿತ ರಾಜಕೀಯದ ಒಂದಿಲ್ಲೊಂದು ಸತ್ಯಗಳನ್ನು ಪುನರುತ್ಪಾದಿಸುತ್ತ ತನ್ನ ಪ್ರಸ್ತುತತೆಯನ್ನು ಕಾಯ್ದುಕೊಳ್ಳುವ ಮಾರ್ಗಕ್ಕೆ ಶರಣುಹೋಗುತ್ತದೆ. ಅದಿಲ್ಲದಿದ್ದರೆ ರಾಜಕೀಯಕ್ಕೆ ಅಪ್ರಸ್ತುತವಾದ ಸತ್ಯಗಳನ್ನು ಶೋಧಿಸುವುದರಲ್ಲಿ ಕೇಂದ್ರೀಕರಿಸುತ್ತದೆ.

ಆದರೆ ಈ ಬೆಳವಣಿಗೆಯ ಪರಿಣಾಮವೆಂದರೆ: 1) ಸಮಾಜ ವಿಜ್ಞಾನಕ್ಕೂ ರಾಜಕೀಯಕ್ಕೂ ಇರುವ ಕ್ರಿಯಾಶೀಲ ಸಂಬಂಧವು ಕಡಿದು ಹೋಗುತ್ತದೆ. ಸಮಾಜ ವಿಜ್ಞಾನ ವಿಭಾಗಗಳಲ್ಲಿ ಇದುವರೆಗೆ ಸಂಶೋಧನೆಯ ಮಹಾಪೂರವೇ ಹರಿದಿದೆ. ಆದರೆ ನಮ್ಮ ರಾಜಕೀಯ ನೀತಿಗೂ ಅವಕ್ಕೂ ಏನಾದರೂ ಸಂಬಂಧ ಇದೆಯೆ? ನಾವು ಏನನ್ನಾದರೂ ರೂಪಿಸಬೇಕಾದರೆ ನಮ್ಮ ತಿಳುವಳಿಕೆಯನ್ನು ಅವಲಂಬಿಸುತ್ತೇವಷ್ಟೆ? ವಿಶ್ವವಿದ್ಯಾಲಯದ ಸಂಶೋಧಕರು ಹುಟ್ಟುಹಾಕಿದ ತಿಳುವಳಿಕೆ ನಮ್ಮ ಸಮಾಜವನ್ನು ರೂಪಿಸುವ ರಾಜಕೀಯಕ್ಕೆ ಬೇಡ ಎಂದರೆ ಏನರ್ಥ? ಒಂದೋ ನಮ್ಮ ಸಂಶೋಧನೆಗಳು ತಿಳುವಳಿಕೆಯನ್ನೇ ಉತ್ಪಾದಿಸುತ್ತಿಲ್ಲ, ಇಲ್ಲ ರಾಜಕೀಯವು ಅದನ್ನು ಅವಲಂಬಿಸುತ್ತಿಲ್ಲ. ತಾತ್ಪರ್ಯವೆಂದರೆ, ಅವುಗಳ ನಡುವಿನ ಸಂಬಂಧ ಕಡಿದುಹೋಗಿದೆ ಅಷ್ಟೆ. 2) ಸಮಾಜ ವಿಜ್ಞಾನಗಳಿಗೆ ಭವಿಷ್ಯವೇ ಇಲ್ಲವಾಗುತ್ತದೆ. ವೈಜ್ಞಾನಿಕ ಸಂಶೋಧನೆ ನಿರಂತರವಾದ ಒಂದು ಹುಡುಕಾಟ. ಇಲ್ಲಿನ ತಿಳುವಳಿಕೆ ಕೂಡಾ ಪರಿಷ್ಕಾರಗೊಳ್ಳುತ್ತಲೇ ಇರುತ್ತದೆ. ಆದರೆ ಈ ಹುಡುಕಾಟವು ಯಾವುದೋ ಐಡಿಯಾಲಜಿಯ ಸಮರ್ಥನೆಯಾಗಿ, ಪಲಾಯನ ತಂತ್ರವಾಗಿ ಮಾರ್ಪಟ್ಟಾಗ ನಿಜವಾದ ಸಂಶೋಧನೆ ಎನ್ನುವುದು ಅಲ್ಲಿ ಇರಲು ಸಾಧ್ಯವೆ? ಭಾರತೀಯ ಸಮಾಜ ವಿಜ್ಞಾನಗಳು ಏಕೆ ಒಟ್ಟಾರೆಯಾಗಿ ತಮ್ಮ ಸಾಮಾಜಿಕ ಪ್ರಸ್ತುತತೆಯನ್ನು ಕಳೆದುಕೊಂಡಿವೆ ಎನ್ನುವುದಕ್ಕೆ ಈ ನಿಟ್ಟಿನಿಂದಲೂ ಯೋಚಿಸಬೇಕಾದ ಅಗತ್ಯವಿದೆ.

ಸಾಮಾಜಿಕ ಸತ್ಯ ಶೋಧನೆಯಲ್ಲಿ ಸಮಸ್ಯೆಗಳು ಬಂದೇ ಬರುತ್ತವೆ, ಅವುಗಳಲ್ಲಿ ವಾಸ್ತವವನ್ನು ವಿವರಿಸಲು ಒಂದಕ್ಕಿಂತ ಮತ್ತೊಂದು ಒಳ್ಳೆಯ ಸಿದ್ಧಾಂತಗಳು ಹುಟ್ಟುತ್ತಲೇ ಇರುತ್ತವೆ, ಹಾಗಾಗಿ

ಇರುವ ಸಿದ್ಧಾಂತಗಳು ಹೊಸ ಸಿದ್ಧಾಂತಗಳು ಎತ್ತುವ ಸಮಸ್ಯೆಗಳ ಸತ್ವಪರೀಕ್ಷೆಯನ್ನು ದಾಟಲೇಬೇಕಾಗುತ್ತದೆ. ಹಾಗಾಗಿ ಸಾಮಾಜಿಕ ತಿಳುವಳಿಕೆಯಲ್ಲಿ ಅಂತಿಮ ಸತ್ಯವೆಂಬುದರ ಕುರಿತು ಮಾತನಾಡಿದವನು ಸಮಾಜ ವಿಜ್ಞಾನಿಯೇ ಆಗಲಾರ ಎಂಬುದು ಈ ಕ್ಷೇತ್ರದಲ್ಲಿ ಇರುವವರಿಗೆ ಗೊತ್ತಿರಬೇಕಾದ ವಿಷಯ. ಸ್ವೀಕೃತ ವಿಚಾರಗಳನ್ನು ಪ್ರಶ್ನಿಸುವ ಪ್ರಕ್ರಿಯೆಯಿಲ್ಲದೇ ಇಂಥ ಶೋಧನೆಗಳು ನಡೆಯುತ್ತಿವೆ ಎಂದರೆ ಅಲ್ಲಿ ನಿಜವಾಗಿಯೂ ಸಂಶೋಧನೆಯೇ ನಡೆಯುತ್ತಿಲ್ಲ ಎಂದು ಕೂಡ ಹೇಳಬಹುದು. ಸ್ವೀಕೃತ ವಿಚಾರಗಳನ್ನು ಪ್ರಶ್ನಿಸುತ್ತ ಸಂಶೋಧನೆಯನ್ನು ನಡೆಸುವುದು ಬಿಡುವುದು ಅವರವರ ಆಯ್ಕೆ, ಆದರೆ ಯಾರಾದರೂ ಸ್ವೀಕೃತ ವಿಚಾರಗಳನ್ನು ಪ್ರಶ್ನಿಸುತ್ತೇವೆಂದರೆ ಅದನ್ನು ನಿಲ್ಲಿಸಬೇಕೆನ್ನುವುದೂ, ಮಾನವ ಸಮಾಜಗಳಿಗೆ ಸಂಶೋಧನೆಯ ಅಗತ್ಯವನ್ನೇ ನಿರಾಕರಿಸುವುದೂ ಒಂದೇ. ಇದನ್ನು ಗಮನಿಸಿದಾಗ ಪ್ರಸ್ತುತ ಬೆಳವಣಿಗೆಗಳು ಒಟ್ಟಾರೆಯಾಗಿ ಸಮಾಜ ವಿಜ್ಞಾನದ ಆಶಯಕ್ಕೆ ಮಾರಕವಾಗಿವೆ ಎಂಬುದನ್ನು ಎಲ್ಲಾ ಸಮಾಜ ವಿಜ್ಞಾನಿಗಳೂ ಮನಗಾಣಬೇಕಾದ ಜರೂರಿದೆ. ಸಾಮಾನ್ಯಜ್ಞಾನದಿಂದ ಹುಟ್ಟಿದ ಜನಪ್ರಿಯ ಧೋರಣೆಗಳಿಂದ ಸಮಾಜ ವಿಜ್ಞಾನಗಳ ಘನತೆಯನ್ನು ರಕ್ಷಿಸುವುದು ಹೇಗೆ? ಹಾಗೂ ಆ ಮೂಲಕ ಅದಕ್ಕೂ ರಾಜಕೀಯಕ್ಕೂ ಇರಬಹುದಾದ ಕ್ರಿಯಾಶೀಲ ಸಂಬಂಧವನ್ನು ಸಾಧ್ಯವಾಗಿಸುವುದು ಹೇಗೆ?

## 3

ಸ್ಥಳೀಯ ಸಂಸ್ಕೃತಿಗಳ ಅಧ್ಯಯನ ಕೇಂದ್ರವು ಸಾಮಾಜಿಕ ಸಂಶೋಧನೆಯ ಮೂಲ ಧ್ಯೇಯಾದರ್ಶಗಳನ್ನು ಎತ್ತಿಹಿಡಿಯುವ ಪ್ರಯತ್ನವಾಗಿದೆ ಹಾಗೂ ವಿಶ್ವವಿದ್ಯಾಲಯಗಳಲ್ಲಿ ಮರೆಯಾಗುತ್ತಿರುವ ಸಂಶೋಧನೆಯ ಶಿಸ್ತನ್ನು ಉಳಿಸಿ ಬೆಳೆಸುವ ಪ್ರಯತ್ನವಾಗಿದೆ. ಪ್ರೊ. ಬಾಲಗಂಗಾಧರರ ಅಧ್ಯಯನವು ರೂಪಿಸಿದ ಊಹಾಸಿದ್ಧಾಂತಗಳು ಹಾಗೂ ಸಂಶೋಧನಾ ಕ್ರಮಗಳು ಇದುವರೆಗೆ ಪ್ರಚಲಿತದಲ್ಲಿರುವ ಎಲ್ಲಾ ಅಧ್ಯಯನಗಳಿಗಿಂತಲೂ ಉಪಯುಕ್ತವೆಂದು ನಾವು ಮನಗಂಡೆವು. ಈ ಅಧ್ಯಯನವು ಭಾರತೀಯ ಸಮಾಜ ಹಾಗೂ ಸಂಸ್ಕೃತಿಯ ಕುರಿತು ಅನೇಕ ಸ್ವೀಕೃತ ಅಭಿಪ್ರಾಯಗಳನ್ನು ಪ್ರಶ್ನಿಸುತ್ತದೆ. ಆ ಪ್ರಶ್ನೆಗಳು ಭಾರತದ ಕುರಿತು ಭವಿಷ್ಯದ ಯಾವುದೇ ಸಮಾಜ ವಿಜ್ಞಾನಿಗಳಾದರೂ ಕೇಳಿಕೊಳ್ಳಲೇ ಬೇಕಾದಂಥವು ಅಥವಾ ಉತ್ತರಿಸಲೇ ಬೇಕಾದಂಥವು ಎಂಬುದು ನಮಗಂತೂ ಖಚಿತವಾಗಿದೆ. ಹಾಗಂತ ಈ ಪ್ರಶ್ನೆಗಳು ಭಾರತದಲ್ಲಿ ಸಮಾಜ ವಿಜ್ಞಾನಗಳು ಕಾಲಿರಿಸಿದ ದಿನದಿಂದಲೂ ಉತ್ತರವನ್ನು ಬೇಡುತ್ತಲೇ ಇವೆ ಎಂಬುದನ್ನು ಅಷ್ಟೂ ವರ್ಷಗಳ ಬೌದ್ಧಿಕ ಚರ್ಚೆಗಳು ನಮಗೆ ಅಲ್ಲಲ್ಲಿ ತೋರ್ಪಡಿಸುತ್ತವೆ. ನಾವು ಸಂಶೋಧನೆಯ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಾಗಲೇ ಅದರ ಜೊತೆಗೇ ಶತಮಾನಗಳ ಈ ಸಂದಿಗ್ಧಗಳೂ ಬಳುವಳಿಯಾಗಿ ಬಂದಿವೆ. ಹಾಗೂ ನಾವಿರುವ ಸಮಾಜವೂ ಕೂಡ ಈ ಸಂದಿಗ್ಧಗಳು ಸೃಷ್ಟಿಸಿದ ಸಮಸ್ಯೆಗಳ ಉತ್ತರದಾಯಿತ್ವವನ್ನು ಹೊತ್ತಿದೆ ಎಂಬುದೂ ಅವಿರತವಾಗಿ ನಡೆಯುತ್ತಿರುವ ಚರ್ಚೆಗಳಿಂದ, ವಿವಾದಗಳಿಂದ ಅನುಭವವೇದ್ಯವಾಗಿದೆ.

ಸಮಾಜ ವಿಜ್ಞಾನಗಳ ಎದುರಿಗಿರುವ ಯಾವುದೂ ಮುಗಿದ ಹುಡುಕಾಟಗಳಲ್ಲ, ಅಂತಿಮ ಉತ್ತರಗಳಲ್ಲ. ಈ ಸಂದರ್ಭದಲ್ಲಿ ಬಾಲಗಂಗಾಧರರ ಅಧ್ಯಯನಗಳು ನಾವು ಸಮಸ್ಯೆಗಳನ್ನು ಹೇಗೆ ಸೂತ್ರೀಕರಿಸಿದರೆ, ಹಾಗೂ ಪ್ರಶ್ನೆಗಳನ್ನು ಹೇಗೆ ಉತ್ತರಿಸುತ್ತ ಸಾಗಿದರೆ ಈ ಹುಡುಕಾಟವು ಫಲಪ್ರದವಾಗಬಲ್ಲದು ಎಂಬುದನ್ನು ಮಾತ್ರ ಸೂಚಿಸುತ್ತವೆ. ಹಾಗಂತ ಈಗ ವಿವಾದಕ್ಕೊಳಗಾಗಿರುವ

ಸಮಾಜ ವಿಜ್ಞಾನಗಳ ತೀರ್ಮಾನಗಳನ್ನು ಸಮಸ್ಯೀಕರಿಸಿದವರಲ್ಲಿ ಅವರೇನೂ ಮೊದಲಿಗರಲ್ಲ. ವಸಾಹತು ಧೋರಣೆಯನ್ನು ಪ್ರಶ್ನಿಸಿ ಬದಲೀ ವಿವರಣೆಗಳನ್ನು ನೀಡಿದ ರಾಷ್ಟ್ರೀಯ ವಾದಿಗಳು, ಭಾರತೀಯರ ಕುರಿತು ವಸಾಹತು ಕಾಲದ ಚಿತ್ರಣಗಳ ಅಪ್ಪಟತೆಯನ್ನೇ ಪ್ರಶ್ನಿಸಿದ ವಸಾಹತೋತ್ತರ ವಾದಿಗಳು ಹಾಗೂ ಇಂಥ ಹಣೆಪಟ್ಟಿಯನ್ನು ಹೊತ್ತುಕೊಳ್ಳದೇ ಇದೇ ಚರ್ಚೆಯನ್ನು ಪ್ರಧಾನವಾಗಿ ಎತ್ತಿಕೊಂಡ ವಿದ್ವಾಂಸರುಗಳೆಲ್ಲ ಇದ್ದಾರೆ. ನಾವು ಸಂಶೋಧನಾ ಕಾರ್ಯಕ್ರಮವನ್ನು ಪ್ರಾರಂಭಿಸಿದ ಮೇಲೆ ಕ್ರಮೇಣವಾಗಿ ನವೋದಯ ಯುಗದಿಂದಲೂ ಕನ್ನಡ ಸಾಹಿತಿಗಳಲ್ಲಿ ಹಾಗೂ ಚಿಂತಕರಲ್ಲಿ ಅವರ ಕಾಲದ ಸಮಾಜ ವಿಜ್ಞಾನಗಳ ಪ್ರಧಾನ ಧೋರಣೆಗಳಿಗೆ ಪ್ರತಿಯಾದ ಇಂಥ ಒಳನೋಟಗಳಿರುವುದನ್ನು, ಪ್ರಶ್ನೆಗಳಿರುವುದನ್ನು ಹಾಗೂ ಚರ್ಚೆಗಳಿರುವುದನ್ನು ಕಂಡುಕೊಂಡೆವು. ಈ ಹಿನ್ನೆಲೆಯಲ್ಲಿ ಇಂಥ ಪ್ರಶ್ನೆಗಳು ಹಾಗೂ ಒಳನೋಟಗಳಿಗೆಲ್ಲ ಬಾಲಗಂಗಾಧರರ ಊಹಾ ಸಿದ್ಧಾಂತಗಳು ಸ್ಪಷ್ಟವಾದ ವೈಜ್ಞಾನಿಕ ಶೋಧನೆಯ ಸ್ವರೂಪವನ್ನು ನೀಡುವುದನ್ನೂ ಕಂಡುಕೊಂಡಾಗ ಅವುಗಳ ಉಪಯುಕ್ತತೆ ಮತ್ತೆ ಮನದಟ್ಟಾಯಿತು.

ಸ್ಥಳೀಯ ಸಂಸ್ಕೃತಿಗಳ ಅಧ್ಯಯನ ಕೇಂದ್ರದಲ್ಲಿ ನನಗೆ ನನ್ನ ಸಂಶೋಧನಾ ಜೀವನದಲ್ಲಿ ಮೊಟ್ಟ ಮೊದಲ ಬಾರಿಗೆ ಅರ್ಥಪೂರ್ಣವಾದ ಸಾಮಾಜಿಕ ಸಂಶೋಧನೆಯಲ್ಲಿ ತೊಡಗಿಕೊಂಡ ಅನುಭವವಾಗಿದೆ. ಅದರರ್ಥ ಅದಕ್ಕೂ ಮೊದಲು ನಾನು ಸಂಶೋಧನೆ ಮಾಡಿರಲಿಲ್ಲ ಅಂತಲ್ಲ. ಆದರೆ ನನ್ನ ಇತಿಹಾಸ ಸಂಶೋಧನಾ ಜೀವನದ ಅನುಭವವು ತಿಳಿಸುವಂತೆ ಅವು ಯಾವವೂ ನನ್ನ ಸಮಾಜವನ್ನು ಅರ್ಥಮಾಡಿಕೊಳ್ಳುವ ಹುಡುಕಾಟವೆಂದು ಅನ್ನಿಸಿರಲಿಲ್ಲ. ಹೆಚ್ಚೆಂದರೆ ಆಯಾ ಕ್ಷೇತ್ರದಲ್ಲಿನ ಅಧ್ಯಯನಗಳು ಹುಟ್ಟಿಸಿದ ಸಮಸ್ಯೆಗಳಿಗೆ ಉತ್ತರವನ್ನು ಹುಡುಕಿದ ಅನುಭವ ವಾಗುತ್ತಿತ್ತು. ಆದರೆ ಈ ಉತ್ತರಗಳಿಗೂ ಸಮಾಜವಿಜ್ಞಾನಗಳ ಹುಡುಕಾಟಕ್ಕೂ ಏನು ಸಂಬಂಧ ಎನ್ನುವುದು ಗೊತ್ತಿರಲಿಲ್ಲ. ಇಂದು ಸಮಾಜ ವಿಜ್ಞಾನದ ವಿವಿಧ ಅಧ್ಯಯನ ಕ್ಷೇತ್ರಗಳು ಹುಟ್ಟಿಸುವ ಸಮಸ್ಯೆಗಳು ಹಾಗೂ ಬಿಡಿಸುತ್ತಿರುವ ಉತ್ತರಗಳೆಲ್ಲವೂ ಬಹುತೇಕವಾಗಿ ಆಯಾ ಅಧ್ಯಯನ ಕ್ಷೇತ್ರಗಳು ಹುಟ್ಟಿಸಿಕೊಂಡ ಸಮಸ್ಯೆಗಳು.

ಬಾಲಗಂಗಾಧರರು ಎತ್ತಿರುವ ಪ್ರಶ್ನೆಗಳು ನನಗೆ ಹಾಗೂ ನನ್ನಂಥವರಿಗೆ ಶತಮಾನಗಳ ಸಮಾಜ ವಿಜ್ಞಾನ ಸಂಶೋಧನೆಯ ಕಗ್ಗಂಟುಗಳನ್ನು ಬಿಡಿಸಲು ಉಪಯುಕ್ತವಾಗಿವೆ ಎಂದು ಮನದಟ್ಟಾಗಿದೆ. ಅದರ ಜೊತೆಗೇ, ನಾವು ನಮ್ಮ ಕೇಂದ್ರದಲ್ಲಿ ವಿಭಿನ್ನ ಹಿನ್ನೆಲೆಯಿಂದ ಬಂದ ಭಾರತೀಯ ಗ್ರಾಮೀಣ ವಿದ್ಯಾರ್ಥಿಗಳಿಗೆ ಸೂಕ್ತ ಸಂಶೋಧನಾ ತರಬೇತಿಯ ವಿಧಾನಗಳನ್ನೂ ಆವಿಷ್ಕರಿಸುತ್ತಿದ್ದೇವೆ. ಓದುವ ಕ್ರಮ, ಪರಿಕಲ್ಪನೆಗಳನ್ನು ಹಾಗೂ ವಾದವನ್ನು ಗ್ರಹಿಸುವುದು, ಭಾಷಾಂತರಿಸುವುದು, ವಿಚಾರ ಮಂಡನೆ, ಆಲೋಚಿಸುವ ಹಾಗೂ ತರ್ಕಿಸುವ ಕ್ರಮ, ಸಮರ್ಥ ಪ್ರಶ್ನೆಗಳನ್ನು ಎತ್ತುವುದು, ಇತ್ಯಾದಿ ಕೌಶಲ್ಯಗಳನ್ನು ಕಲಿಸದೇ ಒಬ್ಬ ವಿದ್ಯಾರ್ಥಿಯು ಸಂಶೋಧನೆ ಮಾಡಲಾರ. ಈ ಕೌಶಲ್ಯಗಳನ್ನೆಲ್ಲ ಎಷ್ಟು ಸಂಶೋಧನಾ ಕೇಂದ್ರಗಳು ತಮ್ಮ ವಿದ್ಯಾರ್ಥಿಗಳಿಗೆ ಕಲಿಸುತ್ತವೆ ಎಂಬುದು ನನಗೆ ತಿಳಿಯದ ವಿಷಯ. ನಾವು ಈ ವಿದ್ಯಾರ್ಥಿಗಳಿಗಾಗಿ ಕನ್ನಡದಲ್ಲಿಯೇ ನಮ್ಮ ಕಾರ್ಯಕ್ರಮವನ್ನು ರೂಪಿಸಿದೆವು. ಓದುವ ಕ್ರಮದ ಕುರಿತು ಸಾವಿರಾರು ಕಾಲೇಜು ವಿದ್ಯಾರ್ಥಿಗಳಿಗೆ ಕಾರ್ಯಾಗಾರದ ಮೂಲಕ ತರಬೇತಿ ನೀಡಿದ್ದೇವೆ. ಸಾವಿರಾರು ವಿದ್ಯಾವಂತ ನಾಗರಿಕರ ಜೊತೆಗೆ ನಮ್ಮ ಸಂಶೋಧನೆಯನ್ನು ಹಂಚಿಕೊಂಡಿದ್ದೇವೆ. ಅವರ ಅಭಿಪ್ರಾಯಗಳೂ ನಮ್ಮ ತಿಳುವಳಿಕೆಯನ್ನು ರೂಪಿಸಿವೆ. ವಿಶ್ವವಿದ್ಯಾಲಯ ಮಟ್ಟದಲ್ಲಿ ನಡೆಯುವ ಸಂಶೋಧನೆಯ ಸಮಸ್ಯೆಯನ್ನು ಸಾಮಾನ್ಯ ವಿದ್ಯಾವಂತ ನಾಗರಿಕರ ಜೊತೆಗೆ ಚರ್ಚಿಸಬಹುದೆಂಬುದನ್ನು ಈ

ಸಂಶೋಧನೆಯಿಂದಲೇ ಕಂಡುಕೊಂಡಿದ್ದೇವೆ.

ಇದು ನಾನು ಹಾಗೂ ನನ್ನ ಸಹೋದ್ಯೋಗಿಗಳಿಗೆ ಸ್ವತಃ ಒಂದು ಕಲಿಕೆಯಾಯಿತು. ನಮಗೆ ಈ ತರಬೇತಿಯನ್ನು ಯಾರೂ ನೀಡಿರಲಿಲ್ಲವಾದ್ದರಿಂದ ನಾವೂ ವಿದ್ಯಾರ್ಥಿಗಳೇ ಆದೆವು. ಹೇಗೆ ಕ್ರಮಬದ್ಧವಾಗಿ ಯೋಚಿಸಬೇಕು ಎಂಬುದನ್ನು ಕಲಿತೆವು. ಸಂಶೋಧನೆಗೆ ಮಾರ್ಗದರ್ಶನವನ್ನು ಹೇಗೆ ಮಾಡಬೇಕೆಂಬುದನ್ನೂ ಕೂಡ ನಾವು ಇಲ್ಲಿಯೇ ಸರಿಯಾಗಿ ಕಲಿತದ್ದು. ಇದನ್ನೆಲ್ಲಾ ಕಲಿಸಿದವರು ಬಾಲಗಂಗಾಧರ ಅವರು. ಸಾಮಾಜಿಕ ಸಂಶೋಧನೆಗೆ ಬಹುಶಃ ಅವರಂಥ ಮತ್ತೊಬ್ಬ ಗುರುವಿದ್ದರೆ, ಸಂಪನ್ಮೂಲ ವ್ಯಕ್ತಿಯೊಬ್ಬರಿದ್ದರೆ ಅವರನ್ನು ನಾನಿನ್ನೂ ಭೇಟಿಯಾಗಬೇಕಾಗಿದೆ. ಅಂಥವರ ಬಗ್ಗೆ ಕೇವಲವಾಗಿ ಮಾತನಾಡುವವರಿಗೆ ನಿಜವಾಗಿಯೂ ಸಂಶೋಧನೆಯ ಬಗ್ಗೆ ಆಸಕ್ತಿಯೇ ಇಲ್ಲ ಎಂಬುದು ನನ್ನ ತೀರ್ಮಾನ. ಬಾಲಗಂಗಾಧರರ ಜೊತೆಗೆ ಸೇರಿ ಸಾಮಾಜಿಕ ಸಂಶೋಧನೆಯ ಸವಾಲುಗಳೇನು? ಅದನ್ನು ಎದುರಿಸುವ ವಿಧಾನಗಳೇನು ಎಂಬುದಕ್ಕೆ ಪ್ರಾಯೋಗಿಕವಾಗಿಯೇ ನಮ್ಮ ಕೇಂದ್ರದಲ್ಲಿ ವಿಧಾನಗಳನ್ನು ಬೆಳೆಸುತ್ತಿದ್ದೇವೆ. ಬಹುಶಃ ಪ್ರಪಂಚದ ಯಾವುದೇ ವಿಶ್ವವಿದ್ಯಾಲಯವೂ ಕೂಡ ಹೆಮ್ಮೆ ಪಡುವಂಥ ಕೆಲಸವನ್ನೇ ನಾವು ಈ ಕಾರ್ಯಕ್ರಮ ದಲ್ಲಿ ಮಾಡಿದ್ದೇವೆ. ಅಷ್ಟೇ ಅಲ್ಲ, ಇಂದು ಸಮಾಜ ವಿಜ್ಞಾನ ಸಂಶೋಧನೆಯಲ್ಲಿ ಆಸಕ್ತಿ ಇರುವ ಜಗತ್ತಿನ ಯಾವುದೇ ಸಂಸ್ಥೆಗಾದರೂ ನಮ್ಮ ಪ್ರಯೋಗವು ಮಾದರಿಯಾಗಬಲ್ಲದು ಎಂಬುದನ್ನು ವಿಶ್ವಾಸದಿಂದ ಹೇಳಬಲ್ಲೆ.

ಈ ಮೇಲಿನ ಸ್ವಗತ ಏಕೆಂದರೆ ಮಾಧ್ಯಮಗಳಲ್ಲಿ ನಮ್ಮ ಕುರಿತು ಒಂದೇ ನಿಟ್ಟಿನ ಕಥೆಗಳು ಹಾಗೂ ಏಕಮುಖೀ ಅಭಿಪ್ರಾಯಗಳು ಪುನರಾವರ್ತಿತವಾದ ಪರಿಣಾಮವಾಗಿ ನಮ್ಮ ಸಂಶೋಧನೆಯನ್ನು ನಿಲ್ಲಿಸಬೇಕೆಂಬುದಾಗಿ ಆಗ್ರಹ ಹುಟ್ಟಿದೆ. ವಸ್ತುಸ್ಥಿತಿಯ ಕುರಿತು ನಾವು ಏನು ಹೇಳುತ್ತೇವೆ ಎಂಬುದನ್ನು ಅವರ್‍ಯಾರೂ ವಿಚಾರಿಸಲಿಲ್ಲ. ನಾವು ಏನನ್ನು, ಏಕೆ ಸಂಶೋಧನೆ ಮಾಡುತ್ತಿದ್ದೇವೆ, ಇಂದು ಅದರ ಮಹತ್ವವೇನು? ಎಂಬ ಕುರಿತು ನಮ್ಮದೂ ಒಂದು ಕಥೆ ಇದೆ ಎಂಬುದನ್ನು ತಿಳಿಸುವ ಅನಿವಾರ್ಯತೆ ಇದೆ. ನಾವು ಯಾವುದನ್ನು ಹೇಳಬಾರದೆಂದು ಅಪೇಕ್ಷೆ ಪಟ್ಟು ನಮ್ಮ ಮೇಲೆ ಹರಿಹಾಯಲಾಗುತ್ತಿದೆಯೊ, ಅವು ವಾಸ್ತವಗಳೇ ಆಗಿದ್ದರೆ ನಾವಲ್ಲದಿದ್ದರೆ ಮತ್ತೊಬ್ಬ ಸಂಶೋಧಕರು ಮುಂದೆ ಅದನ್ನು ಹೇಳಿಯೇ ಹೇಳುತ್ತಾರೆ. ಹಾಗಲ್ಲ ಅಂತ ತೋರಿಸಬೇಕಾದರೂ ಮತ್ತೊಂದು ಸಂಶೋಧನೆಯನ್ನು ಮಾಡಿಯೇ ಮನದಟ್ಟು ಮಾಡಬೇಕು. ಅದಕ್ಕೆ ನಮ್ಮ ಕೇಂದ್ರವು ರೂಪಿಸಿದ ಸಂಶೋಧನಾ ವಿಧಾನಗಳು ನಿಜವಾಗಿಯೂ ಉಪಯುಕ್ತ ವಾಗಿವೆ. ಆಸಕ್ತರು ಬಂದರೆ ಕಲಿಸಿಕೊಡುತ್ತೇವೆ. ವಿನಃ ತೋಳೇರಿಸಿದರೆ ಅಬ್ಬಬ್ಬಾ ಅಂದರೆ ಈ ಸಂಶೋಧನಾ ಕೇಂದ್ರವನ್ನು ನಿವಾರಿಸಬಹುದು, ನಾವೆತ್ತಿದ ಪ್ರಶ್ನೆ ಹಾಗೇ ಉಳಿಯುತ್ತದೆಯಲ್ಲಾ? ಸಂಶೋಧನೆಯ ಮೂಲಕ ನಮಗೇ ಮನದಟ್ಟು ಮಾಡಿದರೆ ನಾವೇ ಅದು ತಪ್ಪು ಅಂತ ಬಿಟ್ಟುಬಿಡುತ್ತೇವೆ. ಅಪ್ರಿಯ ಎನ್ನುವ ಕಾರಣಕ್ಕೆ ಸಂಶೋಧನೆಯನ್ನೇ ನಿಲ್ಲಿಸಿ ಅಂತ ಯಾವುದೇ ಹೋರಾಟಗಾರರು ಹೇಳಿದರೂ ನಿಂತ ಏಣಿಯನ್ನೇ ಒದೆದುಕೊಂಡ ಹಾಗೇ ಆಗಬಹುದು.

ಕಾನನದ ಮರದಲಿ

ಕಾವು ಕುಳಿತಿದೆ ಹಕ್ಕಿ

ಕಾಲಪುರುಷನ ಎಡೆಗೆ ದೃಷ್ಟಿನೆಟ್ಟು

# ಕತೆಗಳೆಂಬ ಸಂಕಥನಗಳು

## ಕೆ. ಸತ್ಯನಾರಾಯಣ ಅವರ ಕಥಾಜಗತ್ತು

**ಗಿರೀಶ್ ವಿ. ವಾಘ್**
923, 7ನೇ ಕ್ರಾಸ್, ಕೆಂಗೇರಿ ಉಪನಗರ
ಬೆಂಗಳೂರು – 560 060

ಕೆ. ಸತ್ಯನಾರಾಯಣ ಅವರು ಕಳೆದ ಮೂರು ದಶಕಗಳಲ್ಲಿ ಆರು ಕಾದಂಬರಿಗಳು, ಐದು ಕಥಾಸಂಕಲನಗಳು, ಮೂರು ಪ್ರಬಂಧ ಸಂಕಲನಗಳು, ಮೂರು ವಿಮರ್ಶೆ – ಚಿಂತನೆಯ ಬರಹಗಳ ಸಂಕಲನಗಳು, ಒಂದು ಅಂಕಣ ಬರಹಗಳ ಸಂಗ್ರಹ ಹಾಗೂ ಒಂದು ಪ್ರವಾಸ ಕಥನವನ್ನು ಪ್ರಕಟಿಸಿದ್ದಾರೆ.

ಇದುವರೆಗೆ ಇವರು ಬರೆದಿರುವ ಐವತ್ತೈದು ಕತೆಗಳು, ನಿಮ್ಮ ಮೊದಲ ಪ್ರೇಮದ ಕತೆ (1993), ವಿಕ್ಟೋರಿಯಾ ಮಗ ದೇವಲಿಂಗು (1998), ಹಳೆಯ ಕಾಲದ ಹೊಸ ಕಥೆ (2002), ನಕ್ಸಲ್ ವರಸೆ (2010) ಮತ್ತು ಹೆಗ್ಗುರುತು (2012) ಎಂಬ ಸಂಗ್ರಹಗಳಲ್ಲಿ ಪ್ರಕಟವಾಗಿದೆ. 2006ರಲ್ಲಿ ಪ್ರಕಟವಾದ 'ಈತನಕದ ಕತೆಗಳು' ಎಂಬ ಸಂಗ್ರಹದಲ್ಲಿ ಅವರ ಅದುವರೆಗಿನ ಕತೆಗಳು ಸಂಕಲಿತವಾಗಿವೆ. ಕಳೆದ ಹದಿನೈದು ವರ್ಷಗಳಲ್ಲಿ ಪ್ರಕಟವಾಗಿರುವ ಕನ್ನಡದ ಮುಖ್ಯ ಪ್ರಾತಿನಿಧಿಕ ಕಥಾಸಂಗ್ರಹಗಳಲ್ಲಿ ಸತ್ಯನಾರಾಯಣ ಅವರ ಕತೆಗಳು ಸ್ಥಾನ ಪಡೆದಿವೆ.

ಇಂದು ಕನ್ನಡದಲ್ಲಿ ರಾಜ್ಯ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟಗಳಲ್ಲಿ ಪ್ರಸಾರವನ್ನು ಹೊಂದಿರುವ ದಿನಪತ್ರಿಕೆಗಳು, ವಾರಪತ್ರಿಕೆಗಳು, ಮಾಸಪತ್ರಿಕೆಗಳು ಮತ್ತು ಅವುಗಳ ವಿಶೇಷಾಂಕಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರಕಟವಾಗುತ್ತಿದ್ದು ಅವುಗಳಲ್ಲೆಲ್ಲಾ ಸಣ್ಣಕತೆಗಳ ಪ್ರಕಟಣೆಗೆ ಅವಕಾಶ ಸಿಕ್ಕಿದೆ. ಹೀಗಾಗಿ ಪ್ರತಿವರ್ಷ ಕನಿಷ್ಠ ಪಕ್ಷ ಒಂದು ಸಾವಿರ ಕತೆಗಳಾದರೂ ಪ್ರಕಟವಾಗುತ್ತಿವೆ. ಒಂದು ಅಂದಾಜಿನ ಪ್ರಕಾರ ನಮ್ಮಲ್ಲಿ ಇಂದು ಆರುನೂರ ಐವತ್ತು ಕತೆಗಾರರು ಸಕ್ರಿಯರಾಗಿದ್ದಾರೆ. 'ದೇಶಕಾಲ' ತ್ರೈಮಾಸಿಕದ ಹನ್ನೆರಡನೆಯ ಸಂಚಿಕೆಯ ರಕ್ಷಾಪುಟದಲ್ಲಿ ಈ ಕತೆಗಾರರ ಹೆಸರುಗಳನ್ನೇ ಸಾಲಾಗಿ ಪ್ರಕಟಿಸಿ ಓದುಗರ ಗಮನವನ್ನು ಕತೆಗಾರರ ಈ ಸಂಖ್ಯಾಬಾಹುಳ್ಯದ ಕಡೆಗೆ ಸೆಳೆಯಲಾಗಿತ್ತು. ಇಂತಹ ಒಂದು ಸನ್ನಿವೇಶದಲ್ಲಿ ತನ್ನದೇ ಆದ ವಿಶಿಷ್ಟ ಕಥನಕಲೆಯ ಮೂಲಕ ಒಂದು ಹೊಸ ಕಥಾಜಗತ್ತನ್ನು ಸೃಷ್ಟಿಸುವಲ್ಲಿ ಸಫಲನಾದ ಕತೆಗಾರ ಮಾತ್ರ ಸಾಹಿತ್ಯಾಸಕ್ತರ ಗಮನ ಸೆಳೆಯಬಲ್ಲ. ಸತ್ಯನಾರಾಯಣ ಅವರ ಕತೆಗಳಲ್ಲಿ ಅವರದೇ ಆದ ಕೆಲವು ವೈಶಿಷ್ಟ್ಯಗಳಿರುವುದನ್ನು ಮತ್ತು ಈ ವೈಶಿಷ್ಟ್ಯಗಳಿಗೆ ಕಾರಣವಾಗಿರುವ ಅವರ ಜೀವನದೃಷ್ಟಿಯನ್ನು ಗುರುತಿಸಲು ಈ ಲೇಖನದಲ್ಲಿ ಪ್ರಯತ್ನಿಸಲಾಗಿದೆ.

ಸಾಹಿತ್ಯವಿಮರ್ಶಕರು ಕಥಾನಿರೂಪಣೆಯಲ್ಲಿ ಎರಡು ವಿಧಾನಗಳನ್ನು ಗುರುತಿಸಿದ್ದಾರೆ. ಒಂದು ವಿಧಾನದಲ್ಲಿ ಕತೆಗಳಲ್ಲಿನ ಪಾತ್ರಗಳ ನಡಾವಳಿಗಳನ್ನು,

ಸನ್ನಿವೇಶಗಳನ್ನು ಮತ್ತು ಘಟನಾವಳಿಗಳನ್ನು ಹೇಳಿಕೆಗಳ ಮೂಲಕ ಮತ್ತು ವಿವರಣೆಗಳ ಮೂಲಕ ಕಟ್ಟಿಕೊಡುತ್ತಾ ಹೋಗುವುದನ್ನು ಕಾಣುತ್ತೇವೆ. ಇದನ್ನು 'ಟೆಲ್ಲಿಂಗ್' ಅಥವಾ 'ಹೇಳುವ' ವಿಧಾನ ಎಂದು ಗುರುತಿಸಲಾಗಿದೆ. ಇದಕ್ಕೆ ಪರ್ಯಾಯವಾಗಿ ಪಾತ್ರಗಳ ಸ್ವಗತ, ಸಂಭಾಷಣೆಗಳು, ಅವು ಇರುವ ಸನ್ನಿವೇಶ, ಅವು ಎದುರಿಸುವ ಸಂದರ್ಭಗಳನ್ನು ದಾಖಲಿಸುತ್ತಾ ಹೋಗುವ ಮೂಲಕವೇ ಕತೆಯನ್ನು ರೂಪಿಸುತ್ತಾ ಹೋಗುವ ವಿಧಾನವನ್ನು 'ಶೋಯಿಂಗ್' ಅಥವಾ 'ತೋರಿಸುವ' ವಿಧಾನ ಎಂದು ಗುರುತಿಸಲಾಗಿದೆ. ಸತ್ಯನಾರಾಯಣ ಅವರ ಹಲವಾರು ಕತೆಗಳಲ್ಲಿ ಈ ಎರಡು ವಿಧಾನಗಳ ಮಿಶ್ರಣವನ್ನು ಗುರುತಿಸಬಹುದಾದರೂ ಅವರ ಹೆಚ್ಚಿನ ಕತೆಗಳಲ್ಲಿ 'ಹೇಳುವ' ('ಟೆಲ್ಲಿಂಗ್') ವಿಧಾನವನ್ನೇ ಬಳಸಲಾಗಿದೆ. ''ತಾನು ಕತೆ ಓದುತ್ತಿದ್ದೇನೆ ಎಂಬ ಸಂಗತಿಯನ್ನು ಮರೆಯಲು ಸತ್ಯನಾರಾಯಣ ಅವರು ಓದುಗನಿಗೆ ಅವಕಾಶ ಕೊಡುವುದೇ ಇಲ್ಲ. ಯಾವುದೇ ಕತೆಯಲ್ಲಿ ಓದುಗ ಮೈಮರೆಯುವುದು ಅವರಿಗೆ ಬೇಡ. ಬ್ರೆಕ್ಟನ ಎಪಿಕ್ ರಂಗಭೂಮಿಯಲ್ಲಿ ಆಗುವಂತೆ, ಹಲವಾರು 'ಮಧ್ಯಪ್ರವೇಶ'ಗಳಿಂದಲೇ (intervention), ಕೃತಿಯೊಳಗೆ ಮಂಡಿತವಾದ ಬದುಕನ್ನು ಕುರಿತು ಆಲೋಚಿಸುವ ಪ್ರೇರಣೆಯನ್ನು ಈ ಕಥೆಗಳು ನೀಡುತ್ತವೆ. ಹೀಗೆ ಲೋಕದ ದಿಕ್ಕಿನಿಂದ ಹೊರಟು ಕತೆಯನ್ನು, ಕತೆಯ ದಿಕ್ಕಿನಿಂದ ಹೊರಟು ಲೋಕವನ್ನು ತಲುಪುವ ಕೆಲಸ ಇಲ್ಲಿ ಪದೇ ಪದೇ ಆಗುತ್ತದೆ. ಓದುಗನನ್ನು ತನ್ನ ಆತ್ಮೀಯತೆಯ ತೆಕ್ಕೆಯೊಳಗೆ ತೆಗೆದುಕೊಳ್ಳುವಂತೆ ಬರೆಯುವ ತಂತ್ರ ಕೂಡ ಇದೇ ಉದ್ದೇಶವನ್ನು ಹೊಂದಿದೆ. ಇಲ್ಲಿನದು ನಮ್ಮ ಕಾವ್ಯ ಮೀಮಾಂಸೆಯಲ್ಲಿ ಬರುವ ಮಿತ್ರಸಂಹಿತದ ಬಗೆ'' ಎಂದು ಪ್ರೊ. ಎಚ್.ಎಸ್. ರಾಘವೇಂದ್ರ ರಾವ್ ಅವರು ಸತ್ಯನಾರಾಯಣ ಅವರ ಎರಡನೆಯ ಸಂಕಲನವಾದ 'ವಿಕ್ಟೋರಿಯಾ ಮಗ ದೇವಲಿಂಗು'ಗೆ ಬರೆದ ಮುನ್ನುಡಿಯಲ್ಲಿ ಹೇಳಿದ್ದಾರೆ. ರಾಘವೇಂದ್ರ ರಾವ್ ಅವರ ಈ ಮಾತುಗಳು ನಮಗೆ ಸತ್ಯನಾರಾಯಣ ಅವರ ಕಥನ ಕಲೆಯ ಬಗ್ಗೆ ಉಪಯುಕ್ತವಾದ ಒಳನೋಟಗಳನ್ನು ಕೊಡುತ್ತವೆ. ಲೇಖನದ ಮುಂದಿನ ಭಾಗಗಳಲ್ಲಿ ಸತ್ಯನಾರಾಯಣ ಅವರ ಕೆಲವು ಕತೆಗಳನ್ನು ವಿವರವಾಗಿ ಅಭ್ಯಸಿಸಿ ಅವುಗಳಲ್ಲಿರುವ ಕಥನಕಲೆ ಮತ್ತು ಅವುಗಳಲ್ಲಿ ಚಿತ್ರಿತವಾಗಿರುವ ಬದುಕಿನ ಹಿಂದಿನ ಜೀವನದೃಷ್ಟಿಯನ್ನು ಗುರುತಿಸಲು ಪ್ರಯತ್ನಿಸಲಾಗಿದೆ.

★ ★ ★

ಸತ್ಯನಾರಾಯಣ ಅವರು ತಮ್ಮ ಮೊದಲ ಕಥಾಸಂಗ್ರಹದಲ್ಲಿನ 'ಸಾವೆಂಬ ಕತೆಯೊಡನೆ', 'ಮಾರ್ಕ್‌ಟುಲಿ ಹೇಳಬೇಕಾಗಿ ಬಂದ ಶ್ರೀ (ದಲಿತ) ರಾಮಚಂದ್ ಕತೆ', 'ಎತ್ತಣಿಂದೆತ್ತ ಎಂಬುದರ ಕತೆಯು ಅಥವಾ ಸಾವೆಂಬ ಕತೆಯೊಡನೆ ಎಂಬುದರ ಮುಂದಿನ ಜೀವನ ವೃತ್ತಾಂತವು'ದಂತಹ ಕತೆಗಳಲ್ಲೇ ತಮ್ಮದೇ ಆದ ವಿಶಿಷ್ಟ ಕಥಾನಿರೂಪಣಾ ವಿಧಾನವನ್ನು ರೂಢಿಸಿಕೊಳ್ಳಲು ಪ್ರಯತ್ನಿಸಿ ಮುಂದಿನ ಸಂಕಲನಗಳಲ್ಲಿ ಕನ್ನಡ ಕಥಾಸಾಹಿತ್ಯದಲ್ಲಿ ಒಂದು ವಿಭಿನ್ನ ಮಾದರಿಯ ಕಥೆಗಳ ಸರಣಿಯನ್ನೇ ಸೃಷ್ಟಿಸುವಲ್ಲಿ ಸಫಲರಾಗಿರುವುದನ್ನು ಕಾಣುತ್ತೇವೆ. ಇದರ ಜೊತೆಗೆ ಅವರು ಈಗಾಗಲೇ ರೂಢಿಯಲ್ಲಿರುವ ಕಥಾನಿರೂಪಣಾ ವಿಧಾನದಲ್ಲೂ ಹಲವಾರು ಪರಿಣಾಮಕಾರಿ ಕತೆಗಳನ್ನು ಬರೆದಿದ್ದಾರೆ. ಕನ್ನಡದ ಉತ್ತಮ ಕತೆಗಳ ಸಾಲಿನಲ್ಲಿ ನಿಲ್ಲಬಲ್ಲ 'ಸೈಕಲ್ ಇನ್ನೊಂದು ಸಾಕು', 'ವರ್ಷಾಂತಿಕ', 'ನಿಜಕವಲು'ದಂತಹ ಕತೆಗಳು ಇದಕ್ಕೆ ನಿದರ್ಶನವಾಗಿವೆ. 'ಸೈಕಲ್ ಇನ್ನೊಂದು ಸಾಕು'ದಲ್ಲಿ ಖಾಸಗಿ ಸಂಸ್ಥೆಯೊಂದರಲ್ಲಿ ಗುಮಾಸ್ತನಾಗಿ ದುಡಿಯುತ್ತಿರುವ ಗಂಡ ಹಾಗೂ ಕಾಲೇಜು ಮತ್ತು ಹೈಸ್ಕೂಲುಗಳಲ್ಲಿ ಓದುತ್ತಿರುವ ಹದಿವಯಸ್ಸಿನ ಮಗ ಮತ್ತು ಮಗಳೊಂದಿಗೆ ಬೆಂಗಳೂರಿನ

ಒಂದು ಬಡಾವಣೆಯಲ್ಲಿ ಬಾಡಿಗೆ ಮನೆಯಲ್ಲಿ ಕೆಳಮಧ್ಯಮ ವರ್ಗದ ಬದುಕಿನ ಇಕ್ಕಟ್ಟು ಬಿಕ್ಕಟ್ಟುಗಳನ್ನು ನಿಭಾಯಿಸುತ್ತಾ ತನ್ನ ಚೈತನ್ಯವನ್ನು ಕಾಪಾಡಿಕೊಂಡಿರುವ ಒಬ್ಬ ಉದ್ಯೋಗಸ್ಥ ಮಹಿಳೆಯ ಆಪ್ತ ಚಿತ್ರಣವಿದೆ.

'ವರ್ಷಾಂತಿಕ'ದಲ್ಲಿ ಮೂರ್ತಿ ಎಂಬ ಅರುವತ್ತೇಳು ವರ್ಷ ವಯಸ್ಸಿನ ವ್ಯಕ್ತಿ ತನ್ನ ಹೆಂಡತಿಯನ್ನು ಕಳೆದುಕೊಂಡ ನಂತರದ ಒಂದು ವರ್ಷದಲ್ಲಿ ಮೊದಲಿಗೆ ಬೇರೆ ಬೇರೆ ಊರುಗಳಲ್ಲಿರುವ ತನ್ನ ಗಂಡು ಮಕ್ಕಳ ಮನೆಗಳಲ್ಲಿದ್ದು ಪರಕೀಯತೆಯನ್ನು ಅನುಭವಿಸಿದ ನಂತರ ತನ್ನ ಮನೆಯಲ್ಲೇ ಒಂಟಿಯಾಗಿ ಇರಲು ನಿರ್ಧರಿಸಿ ಪ್ರತಿದಿನ ಬೆಳಿಗ್ಗೆ ತನ್ನ ಗತಿಸಿದ ಹೆಂಡತಿಯೊಡನೆ ಕಾಲ್ಪನಿಕವಾಗಿ ಸಂವಾದದಲ್ಲಿ ತೊಡಗುವ ಮೂಲಕ, ತನ್ನ ಮಕ್ಕಳೇ ಆಶ್ಚರ್ಯಪಡುವಂತಹ ಸಹಜ ಬದುಕನ್ನು ಕಟ್ಟಿಕೊಳ್ಳುವುದನ್ನು ಹೃದ್ಯವಾಗಿ ನಿರೂಪಿಸಲಾಗಿದೆ. ಸತ್ಯನಾರಾಯಣ ಅವರ ಇತ್ತೀಚಿನ 'ಹೆಗ್ಗುರುತು' ಸಂಕಲನದಲ್ಲಿರುವ 'ನಿಜಕವಲು' ಕತೆಯಲ್ಲಿ ಮಹಿಳಾ ಬಸ್ ಕಂಡೆಕ್ಟರ್ ಒಬ್ಬಳು ತನ್ನ ಬದುಕಿನ ಕತೆಯನ್ನು ಒಬ್ಬ ಬಸ್ ಪ್ರಯಾಣಿಕನಿಗೆ ನಿರೂಪಿಸುವುದನ್ನು ಕಾಣುತ್ತೇವೆ. ಈ ಮೂರು ಕತೆಗಳ ಕೇಂದ್ರದಲ್ಲಿರುವ ವ್ಯಕ್ತಿಗಳು ತಮ್ಮ ಬದುಕನ್ನು ತಮ್ಮ ಇಚ್ಛೆಯಂತೆ ಕಟ್ಟಿಕೊಳ್ಳುವ ಛಲವನ್ನು ತೋರಿಸುತ್ತಾರೆ. 'ಚಿನ್ನಸ್ವಾಮಿ ಎಂಬ ಮಂಡಲ್ ವರದಿ', 'ಬೇಡ! ಬೇಡ! ಫೋರ್ಡ್ ಕಂಪನಿ ಕೆಲಸ'ದಂತಹ ಕತೆಗಳ ಕೇಂದ್ರ ಪಾತ್ರಗಳಲ್ಲೂ ಇಂತಹ ಛಲವಿದ್ದರೂ, ಅವರ ವ್ಯಕ್ತಿತ್ವದಲ್ಲಿರುವ ದೌರ್ಬಲ್ಯದಿಂದಾಗಿಯೋ ಅಥವಾ ಅವರ ಕುಟುಂಬದವರ ಒತ್ತಡದಿಂದಾಗಿಯೋ, ಅವರು ತಮ್ಮ ಬದುಕಿನಲ್ಲಿ ತಾವು ಅಪೇಕ್ಷಿಸಿದ್ದನ್ನು ಪಡೆಯುವಲ್ಲಿ ವಿಫಲರಾಗುತ್ತಾರೆ. ಹೀಗೆ, ಸಾಮಾನ್ಯರೆಂದು ಗುರುತಿಸಲಾಗುವ ಜನರ ವ್ಯಕ್ತಿತ್ವದಲ್ಲಿರುವ ಬದುಕನ್ನು ಕಟ್ಟಿಕೊಳ್ಳುವ ಚೈತನ್ಯವನ್ನು ಅನಾವರಣ ಗೊಳಿಸುವುದು ಈ ಕತೆಗಾರರ ಮುಖ್ಯ ಕಾಳಜಿಗಳಲ್ಲೊಂದು ಎಂದು ಈ ಕತೆಗಳಿಂದ ನಾವು ಕಂಡುಕೊಳ್ಳಬಹುದಾಗಿದೆ.

★ ★ ★

ಸತ್ಯನಾರಾಯಣ ಅವರು ರೂಪಿಸಿಕೊಂಡಿರುವ ತಮ್ಮದೇ ಆದ ವಿಭಿನ್ನ ರೀತಿಯ ಕಥಾನಿರೂಪಣೆಯ ವಿಧಾನವನ್ನು ಇನ್ನು ಮುಂದೆ ಗಮನಿಸೋಣ. ಈ ಕಥೆಗಳಲ್ಲಿ ಅವರು ಒಬ್ಬ ವ್ಯಕ್ತಿಯ ಬದುಕಿನ ಕಥನವನ್ನು ಇನ್ನೊಬ್ಬ ಅಥವಾ ಹಲವಾರು ವ್ಯಕ್ತಿಗಳ ಕಥನಗಳ ಜೊತೆ ತಳಕು ಹಾಕಿ ಅವುಗಳ ಮೂಲಕ ಮನುಷ್ಯರ ಬದುಕಿನ ರೀತಿನೀತಿಗಳ ಮೌಲ್ಯಮಾಪನವನ್ನು ಅಥವಾ ಪರಾಮರ್ಶೆಯನ್ನು ರೂಪುಗೊಳ್ಳುವಂತೆ ಮಾಡುತ್ತಾರೆ. ಉದಾಹರಣೆಗೆ ಅವರ ಮೊದಲ ಕಥಾಸಂಗ್ರಹದಲ್ಲಿರುವ 'ಸಾವೆಂಬ ಕತೆಯೊಡನೆ'ಯಲ್ಲಿ ಒಬ್ಬ ವ್ಯಕ್ತಿ ಬದುಕಿದ ರೀತಿಗೂ ಅವನಿಗೆ ಒದಗಿಬಂದ ಸಾವಿನ ರೀತಿಗೂ ಸಂಬಂಧವಿದೆಯೇ? ಎಂಬುದರ ಬಗ್ಗೆ ಚರ್ಚೆ ನಡೆಯುತ್ತದೆ. ಚರ್ಚೆ ನಡೆಸುವ ಮೂವರು ಸ್ನೇಹಿತರು ವಾಸಿಸುತ್ತಿರುವ ಬಡಾವಣೆಯಲ್ಲೆ ವಾಸಿಸುತ್ತಿದ್ದು ಅಪಘಾತದಲ್ಲಿ ಸತ್ತ ವಾರಿಯರ್ ಎಂಬ ಶ್ರೀಮಂತ ಕಂಟ್ರಾಕ್ಟರ್ ಬದುಕಿದ್ದ ರೀತಿಗೂ ಅವರ ಅಂತ್ಯಕ್ಕೂ ಇರುವ ಸಂಬಂಧದ ಬಗ್ಗೆ ಚರ್ಚೆ ಪ್ರಾರಂಭವಾಗಿ, ಇನ್ನಿಬ್ಬರು ವ್ಯಕ್ತಿಗಳ ಬದುಕು ಮತ್ತು ಸಾವಿನ ಕತೆಗಳನ್ನು ನಿರೂಪಿಸಿ, ಆ ಕತೆಗಳನ್ನು ಹೇಳಿದವರು ಈ ವಿಷಯದ ಬಗ್ಗೆ ತಮ್ಮದೇ ಆದ ವ್ಯಾಖ್ಯಾನವನ್ನು ಮಂಡಿಸುತ್ತಾರೆ. ಅದೇ ಸಂಗ್ರಹದಲ್ಲಿರುವ 'ಎತ್ತಣಿಂದೆತ್ತ ಎಂಬುದರ ಕತೆಯು ಅಥವಾ ಸಾವೆಂಬ ಕತೆಯೊಡನೆ ಎಂಬುದರ ಮುಂದುವರಿದ ಜೀವನ ವೃತ್ತಾಂತವು' ಎಂಬ ಮೂವತ್ತು ಪುಟಗಳಷ್ಟು ವಿಸ್ತಾರವಾದ ಕತೆಯಲ್ಲಿ ಐದಕ್ಕೂ ಹೆಚ್ಚು ಕಥಾನಕಗಳನ್ನು ಇದೇ ರೀತಿಯಲ್ಲಿ ನಿರೂಪಿಸಲಾಗಿದೆ.

ಸತ್ಯನಾರಾಯಣ ಅವರು ಈ ವಿಶಿಷ್ಟ ಕಥಾನಿರೂಪಣಾ ವಿಧಾನದ ಮೂಲಕ ತಮ್ಮ ಕತೆಗಳಲ್ಲಿ ಮನುಷ್ಯರ ಬದುಕಿನ ಬಗ್ಗೆ ಸಂಕಥನಗಳನ್ನು (ಡಿಸ್ಕೋರ್ಸ್‌ಗಳನ್ನು) ರೂಪಿಸುವ ಬಗೆಯನ್ನು ವಿವರವಾಗಿ ಅಭ್ಯಸಿಸಲು ಇಲ್ಲಿ 'ಮಸಣದಿ ಹೇಳಿಕೊಂಡ ಮಗನ ಕತೆ' ಎಂಬ ಕತೆಯನ್ನು ಆಯ್ಕೆ ಮಾಡಲಾಗಿದೆ. ಈ ಕತೆ ಅವರ ಮೂರನೆ ಸಂಕಲನವಾದ 'ಹಳೆಯ ಕಾಲದ ಹೊಸ ಕತೆ'ಯಲ್ಲಿದೆ. ''ಬದುಕು, ಕತೆ ಮತ್ತು ಕನಸು ಎಲ್ಲವೂ ಕೊನೆಯಾಗುವ ಸ್ಥಳ ಸ್ಮಶಾನ. ಅಂತಹ ಕಡೆಯೂ ನನಗೆ ಒದಗಿಬಂದ ಕತೆಯೊಂದನ್ನು ಸಂದರ್ಭ, ಸನ್ನಿವೇಶದ ಸಮೇತ ನಿಮಗೆ ಒಪ್ಪಿಸಲು ಹೊರಟಿದ್ದೇನೆ'' ಎಂದು ಈ ಕತೆ ಪ್ರಾರಂಭವಾಗುತ್ತದೆ.

ಕತೆಯ ನಿರೂಪಕ ಸ್ಮಶಾನಕ್ಕೆ ಬಂದಿರುವುದು ಅವನ ಚಿಕ್ಕಪ್ಪನವರ ಅಂತ್ಯಕ್ರಿಯೆಗೆ. ಕ್ರಿಯಾವಿಧಿಗಳು ನಡೆಯುತ್ತಿರುವ ಕಡೆಗೆ ಬಂದ ಸ್ಮಶಾನದ ಮೇಲ್ವಿಚಾರಕ ನಿರೂಪಕನನ್ನು ನೋಡಿ ''ಏನು, ನೀವು ಇಷ್ಟು ಬೇಗ ತಿರುಗಿಬಂದುಬಿಟ್ಟಿರಾ'' ಎಂದು ಕೇಳಿ ಉತ್ತರಕ್ಕೆ ಕಾಯದೆ ಹೋಗಿಬಿಡುತ್ತಾನೆ. ಹೀಗೆ ಅವನು ಕೇಳಿದ್ದಕ್ಕೆ ಕಾರಣ ಹತ್ತು ದಿನಗಳ ಹಿಂದೆ ತಾನೆ ನಿರೂಪಕನ ಚಿಕ್ಕಮ್ಮ ತೀರಿಕೊಂಡದ್ದು ಅವರ ಅಂತ್ಯಕ್ರಿಯೆಗೆ ಅವನು ಇದೇ ಸ್ಮಶಾನಕ್ಕೆ ಬಂದಿರುತ್ತಾನೆ. ಹತ್ತು ದಿನಗಳ ಅಂತರದಲ್ಲಿ ತೀರಿಕೊಂಡ ಈ ಚಿಕ್ಕಪ್ಪ ಚಿಕ್ಕಮ್ಮರಿಬ್ಬರಿಗೂ ಬಹಳ ವಯಸ್ಸಾಗಿರುತ್ತದೆ ಹಾಗೂ ಅವರಿಬ್ಬರೂ ತಮ್ಮಲ್ಲಿ ಯಾರು ಮೊದಲು ಸಾವನ್ನು ಕಾಣುತ್ತಾರೆ ಎಂಬುದರ ಬಗ್ಗೆ ತಮ್ಮಲ್ಲೇ ಪೈಪೋಟಿ ಇರುವವರಂತೆ ಮಾತನಾಡುತ್ತಿರುತ್ತಾರೆ. ಚಿಕ್ಕಮ್ಮನೇ ಮೊದಲು ತೀರಿಕೊಂಡಾಗ ಚಿಕ್ಕಪ್ಪ ಕಂಗಾಲಾಗದೆ ನಂತರದ ದಿನಗಳಲ್ಲಿ ಇತರರ ಮುಂದೆ ಆಕೆಯ ಗುಣಗಾನ ಮಾಡುತ್ತಾ ಹೋಗುತ್ತಾರೆ. ತಿಥಿ-ಸಮಾರಾಧನೆಯ ಹೊಣೆಯನ್ನೂ ಹೊರುತ್ತಾರೆ. ಆದರೆ ಆಕೆ ತೀರಿಹೋಗಿ ಏಳೆಂಟು ದಿನಗಳಾಗುತ್ತಿದ್ದಂತೆ ಅವರು ತಮ್ಮ ಹೆಂಡತಿ ತಮ್ಮನ್ನು ಕರೆಯುತ್ತಿದ್ದಾಳೆ ಎಂದು ಹೇಳಲು ಪ್ರಾರಂಭಿಸುತ್ತಾರೆ.

''... ಯಾಕೆ ಅವಳು ಹಾಗೆ ನನ್ನ ಕರೀಬಾರದು ಹೇಳಿ, ಮನೆಗೆ ಕೊನೆ ಮಗ ನಾನು. ಕೊನೆಯವನು ಅನ್ನುವ ನಿರ್ಲಕ್ಷ್ಯ, ಉದಾಸೀನ. ಆ ಉದಾಸೀನ ತಕ್ಕದ್ದು ಅನ್ನುವಂತೆ ಅಣ್ಣಂದಿರೆಲ್ಲ ದೊಡ್ಡ ದೊಡ್ಡ ಓದು ಕೆಲಸ ಹುಡುಕಿಕೊಂಡು ಬಾಂಬೆ, ಭೂಪಾಲ, ಕಾಶ್ಮೀರ ಅಂತ ಹೊರಟುಹೋದ್ರೆ ಅಷ್ಟೊಂದು ದೊಡ್ಡವರ ಕೆಲಸಕ್ಕೆ ಬಾರದ ತಮ್ಮ ಎಂತಲೋ, ಸರಿಯಾಗಿ ಓದುಬರಹ ಮಾಡಲಿಲ್ಲ ಅಂತಲೂ ಹೆಣ್ಣು ಕೊಡೋಕೆ ಯಾರೂ ಮುಂದೆ ಬರಲಿಲ್ಲ. ಮನೆ ತುಂಬಾ ಸಾಲು ಸಾಲು ಹೆಣ್ಣುಮಕ್ಕಳು ಅಂತ ಇವರಪ್ಪ ಇವಳನ್ನು ಕೊಟ್ಟ. ಅವಳೇ ಅಲ್ಲವೇ ಲೆಕ್ಕಾಚಾರ, ವಿಶ್ವಾಸ, ಮಕ್ಕಳು ಮರಿ, ಮನೆ, ಸೈಟು ಒಡವೆ ಅಂತ ಎಲ್ಲನ್ನೂ ಮಾಡಿಸತಾ ಹೋದದ್ದು. ಇವಳಾಸೆಗೆ ಮಿತಿಯೇ ಇಲ್ಲ. ಚಕ್ರವರ್ತಿನಿ ಆಗತೀನಿ ಅಂತ ಹೊರಟಿದ್ದಾಳೆ ಅಂತೆಲ್ಲ ಗೊಣಗಾಡಿದ್ದುಂಟು. ಎಷ್ಟೋ ರೂಢಿಸಿಕೊಂಡು ಮುಂದೆ ಬರ್ತಾಯಿದ್ದರೂ ಎಲ್ಲ ಮೆಟ್ಟಲು ಏರುವಾಗಲೂ ಒಂದೇ ರೀತಿಯ ಸಂತೋಷವಾಗತಾ ಇರಲಿಲ್ಲ. ಮೊದಲು ಅಣ್ಣತಮ್ಮಂದಿರು ತೊರೆದು ಹೋದ ಹಾಗೆ ಆಮೇಲೆ ಮಕ್ಕಳು. ಹತ್ತಿರವಿದ್ದೂ ದೂರವಾಗಿರುವಂತಹ ಸುಕನಾತಿ ಬುದ್ಧಿಯನ್ನು ಮಕ್ಕಳಿಗೆ ಅದು ಯಾವ ದೇವರು ಹೇಳಿಕೊಡುತ್ತಾನೋ. ಬಸ್ ಕೆಳಗೆ ಸಿಕ್ಕಿ ಹಾಕಿಕೊಂಡು ಕಾಲು ಕಳದೇ ಹೋಯಿತಲ್ಲ. ಆವಾಗ ಹೊಸ ಕಾಲು ಕಸಿ ಮಾಡೋಕೆ ಅಂತ ಆರು ತಿಂಗಳು ಚಿತ್ತೂರಿನ ವೆಲ್ಲೂರು ಆಸ್ಪತ್ರೇಲಿ ಇರಬೇಕಾದಾಗ, ಭಾಷೆ-ಜನ ಏನೂ ಗೊತ್ತಿಲ್ಲದೇ ಇದ್ದರೂ ಯಾವುದೋ ನಾಯಡುಗಳ ಜಗುಲಿ ಮುಂದಿನ ರೂಮಿನಲ್ಲೇ ಇದ್ದಲು ಒಲೇಲಿ ಅಡುಗೆ ಮಾಡಕೊಂಡು, ಮೂರು ದಿನಕ್ಕೊಂದು ಸಲ ಸೈಕಲ್ ರಿಕ್ಷಾದಲ್ಲಿ ಕೂರಿಸಿಕೊಂಡು ಆಸ್ಪತ್ರೆಗೆ ಕರಕೊಂಡು ಹೋಗೋಳು. ಅಷ್ಟೊಂದು ಕಷ್ಟದಲ್ಲೂ ಆ ಜಗುಲಿ ಮೇಲಿನ ರೂಮಿನ ಕಿಷ್ಕಿಂದದ ಬಚ್ಚಲು ಮನೆಯಲ್ಲಿ ಹದಿನೈದು ದಿನಕ್ಕೊಂದು ಸಲ ಅಭ್ಯಂಜನ

ತಪ್ಪಿಸುತ್ತಿರಲಿಲ್ಲ. ಅನಾಮತ್ ಎತ್ತಕೊಂಡೋಗಿ ಗೋಡೆಗೊರಗಿಸಿ ಬಚ್ಚಲಲ್ಲಿ ಕೂರಿಸಿಬಿಡೋಳು. ಕೊನೆಕೊನೆಗೆ ನಾನು ಅವಳ ಮಗು ಆಗಿಬಿಡ್ತೀನಿ ಅಂತ ಹೆದರಿಕೆ ಆಗೋದು. ಅಂತವಳು ಬಂದು ಬನ್ನಿ ಈಗ ಭಯ ಆಗ್ತಾಯಿದೆ ಅಂತ ಕೂಗಿದರೆ ತಪ್ಪೇನು. ಇಲ್ಲಿ ಇದ್ದು ನಾನು ಕಡಿಯೋದು ಅಷ್ಟರಲ್ಲೇ ಇದೆ'' ('ಈ ತನಕದ ಕಥೆಗಳು', ಬೆಂಗಳೂರು, 2006, ಪುಟ 434–35) ಎಂದು ತಮ್ಮ ಅಗಲಿದ ಹೆಂಡತಿಯ ಗುಣಗಾನ ಮಾಡುತ್ತಿದ್ದ ಚಿಕ್ಕಪ್ಪನವರು ''ಚಿಕ್ಕಮ್ಮನ ತಿಥಿಯ ಹತ್ತನೇ ದಿನ ಬೆಳಿಗ್ಗೆ – ರಾತ್ರಿ ಮಲಗಿದ್ದ ಚಿಕ್ಕಪ್ಪ ಸತ್ತು ಹೋಗಿದ್ದಾರೆ. ಬಲಗೈಯನ್ನು ಉದ್ದವಾಗಿ ಯಾರಿಗೋ ನೀಡಿದ್ದಾರೆ. ಅಂಗೈಯೆಲ್ಲ ಹರಡಿಕೊಂಡಿದೆ.''

''ಇದನ್ನೆಲ್ಲ ಆವತ್ತು ಮೇಲ್ವಿಚಾರಕನಿಗೆ ಹೇಳೋಕೆ ಆಗಲಿಲ್ಲ. ಈಗ ನಿಮಗೆ ಹೇಳ್ತಾ ಇದೀನಿ. ಮನಸ್ಸು ಹಗುರ ಮಾಡಕೊಳ್ಳೋಕೆ ಅಂದುಕೋಬೇಡಿ. ಏಕೆಂದರೆ ಇಂತಹ ಕತೆಯಿಂದ ಯಾರ ಮನಸ್ಸು ಹಗುರ ಆಗೋಲ್ಲ, ಹಸಿರು ಆಗೋಲ್ಲ. ಮುಂದೆ ಹೇಳುವ ಕತೆಗೆ ಈ ಕತೆ ಬೇಕೇ ಬೇಕು ಅಂತ ಹೇಳಿದ್ದೀನಿ ಅಷ್ಟೇ'' ಎಂದು ಈ ಕತೆಯ ನಿರೂಪಕ ಹೇಳುತ್ತಾನೆ.

ನಿರೂಪಕ ಹೇಳುವ 'ಮುಂದಿನ ಕತೆ'ಯನ್ನು (ವಾಸ್ತವದಲ್ಲಿ ಎರಡು ಕತೆಗಳು) ಅವನಿಗೆ ಹೇಳುವವನು ಒಬ್ಬ ಮುದುಕಪ್ಪ, ತೀರಿಕೊಂಡ ಚಿಕ್ಕಪ್ಪನಿಗಿಂತ ಏಳೆಂಟು ವರ್ಷ ಚಿಕ್ಕವನಂತೆ ಕಾಣುವವನು. ಚಿಕ್ಕಪ್ಪನವರ ಅಂತ್ಯಕ್ರಿಯೆ ಮುಗಿದ ಮೇಲೆ ಹೊರ ಆವರಣದಲ್ಲಿ ನಿಂತಿದ್ದ ನಿರೂಪಕನ ಬೆನ್ನನ್ನು ಹಿಂದಿನಿಂದ ಅಮುಕಿದ ಈ ಮುದುಕಪ್ಪ, ಈಗ ಹೋದವರು ನಿಮಗೇನಾಗಬೇಕು ಎಂದು ಕೇಳುತ್ತಾನೆ.

ನಿರೂಪಕ ತನ್ನ ಚಿಕ್ಕಮ್ಮ ಹಾಗೂ ಚಿಕ್ಕಪ್ಪನವರಿಬ್ಬರೂ ಹತ್ತು ದಿನಗಳ ಅಂತರದಲ್ಲಿ ತೀರಿಕೊಂಡದ್ದನ್ನು ಹೇಳಿದ ಮೇಲೆ, ಆ ಮುದುಕಪ್ಪ ತನ್ನ ಹೆಂಡತಿಯೂ ಏಳೆಂಟು ತಿಂಗಳ ಹಿಂದೆ ಒಂದು ರಾತ್ರಿ ತೀರಿಕೊಂಡದ್ದು ಮತ್ತು ತಾವು ಕೂಡ ಬಹಳ ಅನ್ಯೋನ್ಯವಾಗಿದ್ದುದರ ಬಗ್ಗೆ ಹೇಳುತ್ತಾನೆ. ನಿರೂಪಕ ಕೇಳಿದ ಪ್ರಶ್ನೆಗೆ ಉತ್ತರವಾಗಿ ''ನಾನು ನನ್ನ ಮಗನಿಗಾಗಿ ಕಾಯ್ತಾ ಇದೀನಿ. ಸ್ವಂತ ಮಗ ಅಲ್ಲ ನನ್ನ ದಾಯಾದಿ ಅಣ್ಣನ ಮಗ'' ಎಂದು ಹೇಳುತ್ತಾನೆ. ಅವನ ಈ ಮಗ ಮೋಟರ್ ಸೈಕಲ್‌ನಲ್ಲಿ ಹೋಗುತ್ತಿದ್ದಾಗ ರೈಲ್ವೆ ಕ್ರಾಸಿಂಗ್ ಹತ್ತಿರ ರೈಲಿಗೆ ಸಿಕ್ಕಿ ಸತ್ತಿರುತ್ತಾನೆ. ''ವಾವೇಲಿ ನನ್ನ ಮಗ ಆದ್ರೂ ನಿಮ್ಮ ಹತ್ರ ಮುಚ್ಚುಮರೆ ಏನಿಲ್ಲ. ಸತ್ತೇ ಹೋದವನ ಬಗ್ಗೆ ಎಂತಹ ಮುಚ್ಚುಮರೆ ಹೇಳಿ. ಕಟ್ಟಿಕೊಂಡ ಹುಡುಗೀನ ಬಾಳಿಸಲಿಲ್ಲ ನೋಡಿ. ದೂರ ಹೋಗಿಬಿಟ್ಟಳು. ಅವನ ಅಪ್ಪನಿಗೂ ಅಷ್ಟೇ ಇವನಿಗೂ ಅಷ್ಟೇ. ಹಣದ ದವಲತ್ತು, ಅಹಂಕಾರ...'' ಎಂದು ಪ್ರಾರಂಭಿಸಿ ಸತ್ತ ಯುವಕ ಬದುಕಿದ್ದ ರೀತಿಯನ್ನು ಹೇಳುತ್ತಾ ಹೋಗುತ್ತಾನೆ.

ಮೊದಲಿಗೆ ಅವರು ಜಮೀನನ್ನು ಗುತ್ತಿಗೆ ಹಿಡಿದು ಇಟ್ಟಿಗೆ ಗೂಡು ಮಾಡಿಕೊಂಡಿದ್ದೋರು. ಇವರ ಋಣದಲ್ಲಿದ್ದ ಎಂ.ಎಲ್.ಎ.ಯ ಪ್ರಭಾವದಿಂದ ಎರಡು ಹೆಂಡದ ಅಂಗಡಿಗಳ ಲೈಸನ್ಸ್ ಪಡೆದು ಹಣ ಗೋರಿಕೊಂಡು ಅದರಿಂದ ಲೇವಾದೇವಿ ವ್ಯವಹಾರ ಮಾಡಿ ಹಣ ಆಸ್ತಿ–ಪಾಸ್ತಿ ಗಳಿಸಿ ಸಂಬಂಧಿಕರ ಮಧ್ಯೆ ಅಹಂಕಾರದಿಂದ ಮೆರೆಯಲು ಪ್ರಾರಂಭಿಸಿದರು. ಇವರ ದೌಲತ್ತಿನ ಮೆರೆದಾಟ, ಇತರರನ್ನು ಕೀಳಾಗಿ ಕಾಣುವ ಕುಸಂಸ್ಕಾರದಿಂದ ಭಯಪಟ್ಟ ಇವರ ಸಂಬಂಧಿಕರ್‍ಯಾರು ಇವನಿಗೆ ಹೆಣ್ಣು ಕೊಡಲು ಇಷ್ಟಪಡಲಿಲ್ಲ. ದೂರದ ಚೆನ್ನರಾಯಪಟ್ಟಣದಿಂದ ಆರು ಹೆಣ್ಣುಮಕ್ಕಳಿದ್ದ ಮೇಷ್ಟ್ರೊಬ್ಬರ ಮನೆಯಿಂದ ತಂದ ಹುಡುಗಿ ಇವನಿಗಿಂತ ಹೆಚ್ಚು ವಿದ್ಯಾವಂತೆ. ಮದುವೆಯಾದ ಆ ಹುಡುಗಿಯನ್ನು ಇವನು ಸರಿಯಾಗಿ ಬಾಳಿಸಲಿಲ್ಲ. ಮದುವೆಯ ಮುಂಚೆ ಇದ್ದ ಹೆಣ್ಣಿನ ಶೋಕಿ ಮದುವೆಯ ನಂತರವೂ ಮುಂದುವರಿಯಿತು. ಅಂತಹ ಹೊರಗಿನ ಹೆಣ್ಣೊಬ್ಬಳನ್ನು ಮನೆಗೇ ಕರೆತಂದು

ಚಕ್ಕಂದವಾಡಿದ. ಅವಳು ಊಟ ಮಾಡಿದ ತಟ್ಟೆಯನ್ನು ಹೆಂಡತಿ ತೊಳೆಯಬೇಕೆಂದು ಹೇಳಿದ. ಮನೆಯ ಹಿರಿಯರ್‍ಯಾರೂ ಅವನ ಈ ನಡತೆಯನ್ನು ತಿದ್ದಲಿಲ್ಲ. ಇದರಿಂದ ರೋಸಿಹೋದ ಆ ಹುಡುಗಿ ಆಷಾಢಕ್ಕೆ ತವರಿಗೆ ಹೋದವಳು ವಾಪಸ್ಸು ಬರದೆ ದೂರ ಉಳಿದಳು. ಅವಳನ್ನು ಬಲವಂತವಾಗಿ ಕರೆತಂದು ಮನೆಯಲ್ಲಿ ಕೂಡಿಹಾಕಿದರು. ಆದರೂ ಅವಳು ಮನೆಯಿಂದ ಓಡಿಹೋಗಿ ಇನ್ನೊಬ್ಬ ಯುವಕನೊಡನೆ ರಾಜಾರೋಷವಾಗಿ ಸಂಸಾರ ಮಾಡತೊಡಗಿದಳು. ಇದರಿಂದ ಅವಮಾನವಾದ ನಂತರವೂ ತಮ್ಮ ಪ್ರತಿಷ್ಠೆಯನ್ನು ಸಾಧಿಸಲು ಹುಡುಗನ ಮನೆಯವರು ಅವನಿಗೆ ಸ್ವಲ್ಪ ವಯಸ್ಸಾದ ಇನ್ನೊಬ್ಬ ಹುಡುಗಿಯನ್ನು ನೋಡುತ್ತಾರೆ. ಅವಳೊಡನೆ ನಿಶ್ಚಿತಾರ್ಥವಾಗಬೇಕಾದ ದಿನವೇ ಹುಡುಗ ಅಪಘಾತದಲ್ಲಿ ಸಾವನ್ನಪ್ಪಿದ್ದಾನೆ.

ಹೀಗೆ ತನ್ನ ಮಗನ ಕತೆಯನ್ನು ಹೇಳಿದ ಮುದುಕಪ್ಪ ತನ್ನ ಹಾಗೂ ತನ್ನ ಹೆಂಡತಿಯ ನಡುವೆ ಇದ್ದ ಅನ್ಯೋನ್ಯ ಸಂಬಂಧದ ಬಗ್ಗೆಯೂ ಹೇಳುತ್ತಾನೆ. ಜಮೀನು ಇಲ್ಲದ ಕುಟುಂಬದಲ್ಲಿ ಹುಟ್ಟಿ ಎಂಟನೆ ತರಗತಿಯವರೆಗೆ ಓದಿದ್ದ ಅವರಿಗೆ ಸಿಕ್ಕಿದ್ದು ರೈಲ್ವೆ ಡ್ರೈವರ್ ಕೆಲಸ. ಯಾವಗಲಾದ್ರೂ ಸಾಯಬಹುದಾಗಿದ್ದ ಕೆಲಸದಲ್ಲಿದ್ದ ಅವನಿಗೆ ಯಾರೂ ಹೆಣ್ಣು ಕೊಡಲಿಲ್ಲ. ಅವನ ಜೊತೆಯ ರೈಲ್ವೆ ಡ್ರೈವರ್ ಒಬ್ಬ ತನ್ನ ಮದುವೆಯಾಗದ ತಂಗಿಯನ್ನು ಇವನಿಗೆ ಕಟ್ಟಿದ. ''ಈವತ್ತು ಸಾಯಬಹುದು, ಸಾಯದೇನು ಹೋಗಬಹುದು. ನಾಳೇದು ಯಾರಿಗೆ ಗೊತ್ತು ಅಂತಾನೇ ನಾವು ಪ್ರೀತಿಯಾಗಿ ಬದುಕಿದೆವು... ನನಗೆ ಬಡತನವೂ ಇರಲಿಲ್ಲ. ಸಿರಿತನವೂ ಇರಲಿಲ್ಲ. ಅವಳಿಗೂ ಹಿಂದಿರಲಿಲ್ಲ, ಮುಂದಿರಲಿಲ್ಲ. ಇದ್ದೊಬ್ಬ ಅಣ್ಣನೂ ಮದುವೆಯಾದ ಮೇಲೆ ಕೊಂಡಿ ಕಳಚಿಕೊಂಬಿಟ್ಟ. ಒಬ್ಬರಿಗೊಬ್ಬರು ಆತುಕೊಳ್ಳಲೇಬೇಕಾಯಿತು. ಸುಮಾರು ನಲುವತ್ತು ವರ್ಷದ ಜೀವನದಲ್ಲಿ ಒಂದು ನಾಲ್ಕು ಸಲವೋ ಏನೋ ನಾನು ಧ್ವನಿ ಏರಿಸಿ ಮಾತಾಡಿರಬಹುದು. ಅವಳು ಮೂರು ನಾಲ್ಕು ಸಲ ಕಣ್ಣೀರು ಹಾಕಿರಬಹುದು. ಆದರೆ ನೋಯಿಸಬೇಕು, ತಿರಸ್ಕಾರ ಮಾಡಬೇಕು ಅಂತ ಯಾವತ್ತೂ ಮಾಡಲಿಲ್ಲ. ಡ್ಯೂಟಿ ಮುಗಿಸಿಕೊಂಡು ಎಷ್ಟೇ ಹೊತ್ತಾಗಿದ್ರೂ ಸರಿ, ಕೈಲಿ ಒಂದು ಹೂವೋ, ಹಣ್ಣೋ ಹಿಡಕೊಂಡೇ ಮನೆಗೆ ಹೋಗ್ತಿದ್ದುದು. ಒಂದೇ ಒಂದು ದಿನ ಕೂಡ ಊಟ ಒಟ್ಟಿಗೆ ಮಾಡೋದನ್ನ ತಪ್ಪಿಸುತ್ತಿರಲಿಲ್ಲ. ನಾನು ನಡುರಾತ್ರೀಲಿ ಹೋದರೂ ಸರಿಯೇ ಆವಾಗಲೂ ದೇವರಿಗೆ ದೀಪ ಹಚ್ಚುತ್ತಿದ್ದಳು. ನಮ್ಮ ಪ್ರೀತಿ ಕಂಡೋ ಏನೋ ದೇವರು ಒಳ್ಳೆ ಮಕ್ಕಳು ಅಳಿಯಂದಿರನ್ನೇ ಕೊಟ್ಟ... ಅವರಿಗೆಲ್ಲಾ ನಾನು ಹೇಳಿ ಕೊಟ್ಟಿರೋದು ಇಷ್ಟೇ. ಇನ್ನೊಬ್ಬರ ಮನೆ ಹೆಣ್ಣುಮಕ್ಕಳ ನೋಯಿಸಬೇಡಿ. ಜೀವನದಲ್ಲಿ ದುರಾಸೆ ಪಡಬೇಡಿ. ಹೊರಗಿನ ಕೆಲಸ, ಸಂಪತ್ತು ಎಲ್ಲ ಎಷ್ಟೇ ದೊಡ್ಡದಾದರೂ, ಆಕಾಶದಷ್ಟೇ ಅಗಲ ಆದ್ರೂ ಮನೆ ಮಾತ್ರ ಮರೀಬೇಡಿ... ಹೊರಗಡೆ ಪ್ರಪಂಚದಲ್ಲಿ ಮಾಗೋದು ಇರುವ ಹಾಗೆ, ಒಳಗಡೆ ಗೂಡನಲ್ಲೂ ಮಾಗೋದು ಹಣ್ಣಾಗೋದು ಇರುತ್ತೆ ಅಂತ ಕಂಡುಕೊಂಡಿದ್ರೆ ನನ್ನ ಮಗ ಈ ಚಿಕ್ಕವಯಸ್ಸಿನಲ್ಲೇ ಹೀಗೆ ಸಾಯಬೇಕಾಗಿರಲಿಲ್ಲ'' (ಪುಟ 441-42).

ಇಲ್ಲಿ ಕತೆಯಿಂದ ಉದ್ದವಾದ ಉದ್ಧರಣಗಳನ್ನು ಮತ್ತು ವಿವರಗಳನ್ನು ಕೊಟ್ಟಿರುವುದು ಸತ್ಯನಾರಾಯಣ ಅವರ ವಿಶಿಷ್ಟ ಕಥಾನಿರೂಪಣಾ ವಿಧಾನವನ್ನು ಓದುಗರ ಗಮನಕ್ಕೆ ತರುವ ಉದ್ದೇಶದಿಂದ. ಇಲ್ಲಿ ಒಬ್ಬ ವ್ಯಕ್ತಿ ತನ್ನ ಅನುಭವವನ್ನು ಅಥವಾ ತಾನು ಕಂಡ ಇತರರ ಬದುಕಿನ ರೀತಿಯನ್ನು ಇನ್ನೊಬ್ಬರಿಗೆ ನಿವೇದಿಸುತ್ತಾ ಹೋಗುತ್ತಿರುವಂತೆಯೇ ಕತೆಯನ್ನು, ತನ್ಮೂಲಕ ಬದುಕಿನ ಬಗ್ಗೆ ಒಂದು ವ್ಯಾಖ್ಯಾನವನ್ನು ರೂಪಿಸಲಾಗಿದೆ.

ಇದು ನಮ್ಮ ಮಹತ್ವದ ಕತೆಗಾರರಾದ ಮಾಸ್ತಿಯವರ ಕತೆಗಳಲ್ಲಿ ಈಗಾಗಲೇ ಪರಿಚಿತ ವಾಗಿರುವ ಕಥನವಿಧಾನ. ಸತ್ಯನಾರಾಯಣ ಅವರ ಕಥಾಸಾಹಿತ್ಯದ ಬಗ್ಗೆ ಬರೆದಿರುವವರೆಲ್ಲಾ

ಅವರನ್ನು ಮಾಸ್ತಿ ಸಂಪ್ರದಾಯದ ವಾರಸುದಾರರೆಂದೇ ಗುರುತಿಸಿದ್ದಾರೆ. ಅವರು ಮಾಸ್ತಿಯವರ ಕಥನರೀತಿಯನ್ನು ಹೇಗೆ ಬದಲಿಸಿಕೊಂಡಿದ್ದಾರೆ ಮತ್ತು ವಿಸ್ತರಿಸಿದ್ದಾರೆ ಎಂಬುದರ ಬಗ್ಗೆ ಹೆಚ್ಚಿನ ಚರ್ಚೆಯಾಗಿಲ್ಲ.

ಈ ಕತೆಯ ಹೆಸರು 'ಮಸಣದಿ ಹೇಳಿಕೊಂಡ ಮಗನ ಕತೆ' ಎಂದಿದೆ. ಆದರೆ ಈ ಕತೆಯ ನಿರೂಪಕನೇ ಕತೆಯ ಮಧ್ಯಭಾಗದಲ್ಲಿ ಹೇಳಿರುವಂತೆ ಅವನಿಗೆ ಈ ಮುದುಕಪ್ಪ ಹೇಳುವ ಕತೆಯ ಜೊತೆಗೆ ಅವನ ಚಿಕ್ಕಪ್ಪ ಚಿಕ್ಕಮ್ಮರ ಕತೆಯನ್ನು ಹೇಳಲೇಬೇಕು ಎಂದು ಅನಿಸಿದೆ. ಮುದುಕಪ್ಪ ಹೇಳುವ ತನ್ನ ಅನ್ಯೋನ್ಯ ದಾಂಪತ್ಯದ ಕತೆಗೆ ಚಿಕ್ಕಪ್ಪನ ದಾಂಪತ್ಯದ ಕತೆಯನ್ನು ಪೂರಕವಾಗಿ ತರಲಾಗಿದೆಯೇ? ಈ ಕತೆಯ ಮೊದಲ ಭಾಗದಲ್ಲಿ ಕತೆಯ ನಿರೂಪಕನಿಂದ ನೇರವಾಗಿ ನಿರೂಪಿತವಾಗಿರುವ ಸಂಗತಿಗಳೆಂದರೆ : ಚಿಕ್ಕಮ್ಮನ ಸಾವು, ಅದಾದ ನಂತರ ಚಿಕ್ಕಪ್ಪನವರು ನಡೆದುಕೊಂಡ ರೀತಿ, ಅವರು ತಮ್ಮ ಹೆಂಡತಿಯ ಬಗ್ಗೆ ಮತ್ತು ಅವಳು ತಮ್ಮ ಬದುಕಿನಲ್ಲಿ ವಹಿಸಿದ ಪಾತ್ರದ ಬಗ್ಗೆ ಅವರು ಹೇಳುವ ಮಾತುಗಳೆಲ್ಲಾ ವಿವರವಾಗಿ ನಿರೂಪಿತವಾಗಿವೆ. ಈ ಎಲ್ಲಾ ನಿರೂಪಣೆಗಳು ಅವರಿಬ್ಬರ ದಾಂಪತ್ಯದ ಸ್ವರೂಪವನ್ನು ಕಟ್ಟಿಕೊಡುತ್ತವೆ. ಗಮನಿಸಬೇಕಾದ ಅಂಶವೆಂದರೆ ಈ ನಿರೂಪಣೆಯಲ್ಲಿ ನಿರೂಪಕನು ತನ್ನ ಈ ಹತ್ತಿರದ ರಕ್ತಸಂಬಂಧಿಗಳ ಬದುಕಿನ ಬಗ್ಗೆ ತನ್ನದೇ ಅಭಿಪ್ರಾಯಗಳನ್ನಾಗಲೀ ಅಥವಾ ಇನ್ನಿತರ ಹತ್ತಿರದವರ ಅಭಿಪ್ರಾಯಗಳನ್ನಾಗಲೀ ದಾಖಲಿಸಿಲ್ಲ. ದಾಂಪತ್ಯದಲ್ಲಿ ಗಂಡು ಹೆಣ್ಣಿನ ಸಂಬಂಧಗಳ ಸ್ವರೂಪವನ್ನು ಅನಾವರಣಗೊಳಿಸುವ ಸತ್ಯನಾರಾಯಣ ಅವರ 'ಹೀಗೂ ಉಂಟೆ ಪ್ರೇಮದ ಶೈಲಿಯು', 'ರೂಪಾಯಿ ಗುಟ್ಟು ಮತ್ತು ರಾಜಕುಮಾರಿ ಡಯಾನಾ', 'ಇಳಿವಯಸ್ಸಿನ ಡೈವೋರ್ಸ್' ಮುಂತಾದ ಕತೆಗಳಲ್ಲಿ ಸುತ್ತಲಿನವರ ಅಭಿಪ್ರಾಯಗಳಿಗೆ ಆಯಾ ಕಥನದಲ್ಲಿ ಮಹತ್ವದ ಪಾತ್ರವಿದೆ. ಈ ಕತೆಗಳಂತಲ್ಲದೆ ಪ್ರಸ್ತುತ ಕತೆಯ ಈ ಭಾಗದಲ್ಲಿ ದಾಂಪತ್ಯದ ಖಾಸಗಿತನಕ್ಕೆ ಮಹತ್ವ ಕೊಡಲಾಗಿದೆ.

ಚಿಕ್ಕಪ್ಪನವರು, ತೀರಿ ಹೋದ ತಮ್ಮ ಹೆಂಡತಿ ತನಗೆ ಪರಲೋಕದಲ್ಲಿ ಭಯವಾಗುತ್ತಿದೆ, ನೀವು ಅಲ್ಲಿಗೆ ಬನ್ನಿ, ಎಂದು ತನ್ನನ್ನು ಕರೆಯುತ್ತಿದ್ದಾಳೆ ಎಂಬುದಾಗಿ ಇತರರ ಮುಂದೆ ಹೇಳುತ್ತಾ ಹೋಗುತ್ತಾರೆ. ಅದೇ ಸಮಯದಲ್ಲಿ ತಮ್ಮಿಬ್ಬರ ನಡುವೆ ಇದ್ದ ಸಂಬಂಧದಲ್ಲಿನ ಕೆಲವು ಸೂಕ್ಷ್ಮ ವಿಷಯಗಳನ್ನು ಬಹಿರಂಗಪಡಿಸುತ್ತಾರೆ. ಅವರು ಹೇಳುವ ಈ ಮಾತುಗಳನ್ನು ನೋಡಬಹುದು : ''ಭಯಸ್ಥೆ ಬೇರೆ ತುಂಬಾ. ಬೆಂಗಳೂರಂತ ಸಿಟಿಯಲ್ಲಿ ರಾತ್ರಿ ಎಂಟರ ಮೇಲೆ ಹೊರಗಡೆ ಓಡಾಡೋಕೆ ಹೆದರತಾಯಿದ್ದೋಳು ಅವಳು... ದಿನವೂ ಬಂದು ಕನಸಿನಲ್ಲಿ ಕರೀತಾಳೆ... ಎಷ್ಟು ಹೊತ್ತು ಕಾಯೋದು ನಿಮ್ಮನ್ನ ಬನ್ನಿ. ನನಗೆ ಮುಂದೆ ಒಬ್ಬಳೇ ಹೋಗೋಕೆ ಭಯ. ಯಾವಾಗಲೂ ನಿಮಗೆ ನನ್ನನ್ನು ಕಾಯಿಸೇ ಅಭ್ಯಾಸ. ಸರ್ವೀಸಿನಲ್ಲಿದ್ದಾಗಲೂ ಅಷ್ಟೇ. ರಿಟೈರ್ ಆದ ಮೇಲೂ ಅಷ್ಟೇ. ಸ್ನೇಹಿತರ ಜೊತೆ ಸುತ್ತೋದು, ನಾನು ಊಟಕ್ಕೆ ಅಂತ ನಿಮ್ಮನ್ನ ನಡುರಾತ್ರಿ ತನಕ ಕಾಯೋದು... ಬನ್ನಿ ಮತ್ತೆ ನೀವು. ಜೋರಾಗಿ ಕೈಹಿಡಿದು ಎಳೀತಾಳೆ.'' ಅವರೇ ಹೇಳುವ ಈ ಮುಂದಿನ ಮಾತುಗಳಲ್ಲಿ ಅವರಿಗೆ ತಮ್ಮ ಹೆಂಡತಿಯ ಕರ್ತೃತ್ವ ಶಕ್ತಿಯ ಬಗ್ಗೆ ಇದ್ದ ಮೆಚ್ಚುಗೆ, ಕೃತಜ್ಞತಾಭಾವದ ಜೊತೆಗೆ ಆಕೆಯ ಈ ಪ್ರತಿಭೆಯ ಬಗ್ಗೆ ಇದ್ದ ಅಸೂಯೆ ಮತ್ತು ಕೀಳರಿಮೆಯ ಭಾವನೆಗಳೂ ಪ್ರಕಟವಾಗುತ್ತವೆ. ''ಅವಳೇ ಅಲ್ಲವೇ ಲೆಕ್ಕಾಚಾರ, ವಿಶ್ವಾಸ, ಮಕ್ಕಳು, ಮರಿ, ಮನೆ, ಸೈಟು, ಒಡವೆ ಅಂತ ಎಲ್ಲನ್ನೂ ಮಾಡಿಸತಾ ಹೋದದ್ದು. ಇವಳಾಸೆಗೆ ಮಿತಿಯೇ ಇಲ್ಲ. ಚಕ್ರವರ್ತಿನಿ ಆಗತೀನಿ ಅಂತ ಹೊರಟಿದ್ದಾಳೆ ಅಂತೆಲ್ಲಾ ಗೊಣಗಾಡಿದ್ದುಂಟು.''

ಮುದುಕಪ್ಪನಿಗೆ ತನ್ನ ಮಗ ತನ್ನ ಹೆಂಡತಿಯನ್ನು ಸರಿಯಾಗಿ ಬಾಳಿಸಲಿಲ್ಲ ಎಂದು ಅನಿಸುತ್ತದೆ

ಮತ್ತು ಅದು ಎಲ್ಲರೂ ಒಪ್ಪುವ ಅಭಿಪ್ರಾಯವೇ ಆಗಿದೆ. ನಿರೂಪಕನು ಹೇಳುವ ಚಿಕ್ಕಪ್ಪನ ಕತೆಯಲ್ಲಿ ಚಿಕ್ಕಪ್ಪನವರ ಬಾಯಿಂದ ಬರುವ ಮಾತುಗಳಿಂದ ಅವರಿಗೆ ತಮ್ಮ ಹೆಂಡತಿ ತಮಗೆ ಮತ್ತು ತಮ್ಮ ಕುಟುಂಬಕ್ಕೆ ಕೊಟ್ಟುಕೊಂಡಷ್ಟು ತಾವು ಅವಳಿಗೆ ಕೊಟ್ಟುಕೊಳ್ಳಲಿಲ್ಲ ಎಂಬ ಕೊರಗು ಕಾಡಿದೆ ಎಂದು ಅನಿಸುತ್ತದೆ. ಇದು ಅವರ ಆತ್ಮಸಾಕ್ಷಿಗೆ ಮಾತ್ರ ತಿಳಿದ ಸತ್ಯ. ಅವರು ತಮಗೆ ಬೇಗ ಸಾವು ಬಂದು ತಾವು ತಮ್ಮ ಹೆಂಡತಿಯನ್ನು ಕೂಡಿಕೊಳ್ಳುವುದರ ಮೂಲಕವಾದರೂ ಅವಳಿಗೆ ತಮ್ಮ ನಿಷ್ಠೆಯನ್ನು ತೋರಿಸಿಕೊಳ್ಳಬಹುದು ಎಂದು ಅನಿಸಿರಬಹುದು ಎಂದು ಕತೆಯ ಈ ಭಾಗ ಧ್ವನಿಸುತ್ತದೆ. ಹೀಗಾಗಿ ಚಿಕ್ಕಪ್ಪನ ಈ ಕಥಾನಕ, ಮುದುಕಪ್ಪನ ಮಗನ ಕತೆಗೆ ಪೂರಕವಾಗಿದೆ ಎಂದು ಹೇಳಲಾಗದಿದ್ದರೂ ಅದು ಅದಕ್ಕೆ ಸಮಾನಾಂತರವಾಗಿದೆ ಎಂದು ಹೇಳಬಹುದು.

ನಿರೂಪಕನಿಂದ ಅವನ ಚಿಕ್ಕಪ್ಪ ಚಿಕ್ಕಮ್ಮರು ಹತ್ತು ದಿನಗಳ ಅಂತರದಲ್ಲಿ ತೀರಿಕೊಂಡದ್ದನ್ನು ಕೇಳಿದಾಗ ಮುದುಕಪ್ಪ ಅವರ ದಾಂಪತ್ಯ ಅನ್ಯೋನ್ಯವಾಗಿತ್ತೆಂದು ಗ್ರಹಿಸಿ ಮಾತನಾಡುತ್ತಾನೆ. ಓದುಗರಾದ ನಮ್ಮಲ್ಲೂ ಕತೆಯ ಈ ಭಾಗವನ್ನು ಓದಿದಾಗ ಇದೇ ಭಾವನೆ ಮೂಡಿರುತ್ತದೆ. ಆದರೆ ಮುದುಕಪ್ಪ ತನ್ನ ಮಗ ಮತ್ತು ತನ್ನ ದಾಂಪತ್ಯದ ಬಗ್ಗೆ ಹೇಳುವ ಕಥನಗಳನ್ನು ಹಾಗೂ ಈ ಕಥನದ ಅಂತ್ಯದಲ್ಲಿ ಅನ್ಯೋನ್ಯ ದಾಂಪತ್ಯದ ಸ್ವರೂಪದ ಬಗ್ಗೆ ಹೇಳುವ ಮಾತುಗಳನ್ನು ಓದಿದ ಮೇಲೆ ನಮಗೆ ಚಿಕ್ಕಪ್ಪನವರು ತಮ್ಮ ದಾಂಪತ್ಯದಲ್ಲಿ ತಮ್ಮ ಹೆಂಡತಿಯಷ್ಟು ಸಮರ್ಪಣಾ ಭಾವದಿಂದ ಕೊಟ್ಟುಕೊಳ್ಳಲಿಲ್ಲ ಎಂದು ಅನಿಸುತ್ತದೆ. ಓದುಗನಲ್ಲಿ ಈ ರೀತಿಯ ಸೂಕ್ಷ್ಮ ಒಳನೋಟವನ್ನು ಮೂಡಿಸುವಲ್ಲಿ, ಸತ್ಯನಾರಾಯಣ ಅವರ ಒಂದು ಕಥೆಯ ಜೊತೆಗೆ ಇನ್ನೊಂದು ಅಥವಾ ಇನ್ನೊಂದಿಷ್ಟು ಕತೆಗಳನ್ನು ಹೇಳುವ ಈ ಕಥನ ವಿಧಾನದ ಮಹತ್ವವನ್ನು ಕಂಡುಕೊಳ್ಳಬಹುದಾಗಿದೆ. ಆಶಯದ ದೃಷ್ಟಿಯಿಂದ ಈ ಕತೆ ಸೀಮಿತವಾದದ್ದೆಂದು ಅನಿಸಬಹುದು. ಆದರೆ ಇದು ಸತ್ಯನಾರಾಯಣ ಅವರು ರೂಪಿಸಿಕೊಂಡಿರುವ ಕಥನ ವಿಧಾನದ ಸ್ವರೂಪವನ್ನು ಪರಿಚಯಿಸಿ ಕೊಳ್ಳುವುದಕ್ಕೆ ಉಪಯುಕ್ತವಾಗಿದೆ.

★ ★ ★

ಸಮುದಾಯ ಜೀವಿಯಾದ ಮಾನವ ಇತರ ಸಹಮಾನವರೊಂದಿಗೆ ಉದಾರವಾಗಿ ಅಥವಾ ಅನುದಾರವಾಗಿ ನಡೆದುಕೊಳ್ಳುವ ಪ್ರವೃತ್ತಿಗಳನ್ನು ಬೆಳೆಸಿಕೊಳ್ಳುವಲ್ಲಿ ನಿರ್ಣಾಯಕವಾಗುವ ಸಂಗತಿಗಳ್ಯಾವುವು? ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಅವನು ಹುಟ್ಟಿ ಬೆಳೆದ ಕುಟುಂಬದ ಸ್ಥಿತಿಗತಿಗಳು ನಿರ್ಣಾಯಕ ಪಾತ್ರ ವಹಿಸುತ್ತವೆ ಎಂದು ಹೇಳಲಾಗುತ್ತದೆ. ಅವನು ತನ್ನ ಜೀವನದ ಈ ಹಂತದ ಅನುಭವಗಳಿಂದ ರೂಪಿಸಿಕೊಂಡ ದೃಷ್ಟಿ ಧೋರಣೆಗಳನ್ನು ಅವನ ನಂತರದ ಜೀವನದ ಅನುಭವಗಳು ಮಾರ್ಪಡಿಸಬಲ್ಲವೆ? ಇಂತಹ ಮಾರ್ಪಾಡುಗಳು ತಾತ್ಕಾಲಿಕ ಅಥವಾ ಶಾಶ್ವತವಾಗಿರುವಂತಹವೆ? ಒಬ್ಬ ವ್ಯಕ್ತಿ ತಾನು ತನ್ನ ಜೀವನಾನುಭವದಿಂದ ಮತ್ತು ತಾನು ನಂಬಿದ ಆದರ್ಶಗಳ ಹಿನ್ನೆಲೆಯಲ್ಲಿ ರೂಢಿಸಿಕೊಂಡ ಮೌಲ್ಯಗಳನ್ನು ತನ್ನ ಸುತ್ತಲಿನ ಇತರರೊಡನೆ ಉತ್ತಮ ಬಾಂಧವ್ಯವನ್ನು ಬೆಳೆಸಿಕೊಳ್ಳಲು ಸಡಿಲಿಸಿಕೊಳ್ಳುವುದು ಸರಿಯೆ ಅಲ್ಲವೆ? ಪ್ರತಿಯೊಬ್ಬ ಮನುಷ್ಯನ ಬದುಕಿನಲ್ಲೂ ಒಂದು ಹಂತದಲ್ಲಿ ತನ್ನ ಬದುಕಿನಲ್ಲಿ ಹೊಸತೇನು ನಡೆಯುತ್ತಿಲ್ಲ, ಇರುವುದೆಲ್ಲ ರೂಢಿಗತ ಏಕತಾನತೆಯಷ್ಟೇ ಎಂಬ ಭಾವನೆಯಲ್ಲಿ ಮುಳುಗುವ ಸಂದರ್ಭ ಬರುತ್ತದಲ್ಲ. ಈ ಭಾವನೆಯಿಂದ ಹೊರಬರುವುದು ಸಾಧ್ಯವೇ? ನಮ್ಮೆಲ್ಲರ ಬದುಕನ್ನು ಪ್ರಭಾವಿಸಿರುವ, ರೂಪಿಸಿರುವ ಇಂತಹ ಸಂಗತಿಗಳು ಮತ್ತು ಅವುಗಳಿಂದಾಗಿ ನಮ್ಮ ದಿನನಿತ್ಯದ ವ್ಯವಹಾರಗಳಲ್ಲಿ ಎದುರಾಗುವ

ಇಕ್ಕಟ್ಟು ಬಿಕ್ಕಟ್ಟುಗಳನ್ನು ಸತ್ಯನಾರಾಯಣ ಅವರ 'ಇದೆಲ್ಲಾ ಒಂದು ಕತೆಯೇ'? (ನಕ್ಸಲ್ ವರಸೆ ಸಂಕಲನದಲ್ಲಿದೆ) ಎಂಬ ಆರು ಕಥೆಗಳಿಂದ ರೂಪಿತವಾದ ಸಂಕಥನದಲ್ಲಿ ಅನಾವರಣಗೊಳಿಸಲಾಗಿದೆ. ಅವನ್ನು ಸಂಕ್ಷಿಪ್ತವಾಗಿ ಗಮನಿಸೋಣ.

ಮದ್ರಾಸಿನಲ್ಲಿ ಕೇಂದ್ರ ಸರ್ಕಾರದ ಕಛೇರಿಯೊಂದರಲ್ಲಿ ಕೆಲಸ ಮಾಡುತ್ತಾ ತನ್ನ ಸಹೋದ್ಯೋಗಿಗಳೊಂದಿಗೆ ಸರ್ಕಾರಿ ಉದ್ಯೋಗಿಗಳ ಕಾಲನಿಯಲ್ಲಿ ವಾಸಿಸುತ್ತಿರುವ ನಿರೂಪಕ ಈ ಕತೆಯನ್ನು ಹೇಳುತ್ತಾನೆ.

ಈ ಕತೆಯ ಕೇಂದ್ರದಲ್ಲಿರುವವರು ನಿರೂಪಕನ ಕಛೇರಿಯಲ್ಲಿ ಮೇಲಧಿಕಾರಿಯಾಗಿರುವ ಬಿಹಾರ ಮೂಲದ ರಾಮಪ್ರಸಾದ ಸಿಂಗ್ ಎಂಬ ವ್ಯಕ್ತಿ (ಸಿಂಗ್ ಸಾಹೇಬರು). ಸಿಂಗ್ ಸಾಹೇಬರು ಕಛೇರಿಯಲ್ಲಿನ ತಮ್ಮ ಸ್ಥಾನಬಲದಿಂದಷ್ಟೇ ಅಲ್ಲದೆ ಕಾಲೊನಿಯ ನಿವಾಸಿಗಳ ಸಮಸ್ಯೆಗಳಿಗೂ ಸ್ಪಂದಿಸಿ ಪರಿಹಾರಗಳನ್ನು ತೋರಿಸಿ ಅವರೆಲ್ಲರಿಂದ ಹಿರೀಕರೆಂಬ ಗೌರವಾದರಗಳನ್ನು ಪಡೆದಿರುತ್ತಾರೆ. ಕತೆಯ ಪ್ರಾರಂಭದಲ್ಲಿ ನಿರೂಪಕ ತಮ್ಮ ಕಾಲೊನಿಯ ನಿವಾಸಿಗಳ ಸಮಸ್ಯೆಗಳನ್ನು, ಅವರು ಬಿಡಿಸಿದ ಎರಡು ಪ್ರಸಂಗಗಳನ್ನು ನಿರೂಪಿಸುತ್ತಾನೆ. ಅದಕ್ಕಿಂತ ಮುಂಚೆ ಸಿಂಗ್ ಸಾಹೇಬರು ಮತ್ತೆ ಮತ್ತೆ ಹೇಳುತ್ತಿದ್ದ ರಾಮಕೃಷ್ಣ ಪರಮಹಂಸರ ಒಂದು ದೃಷ್ಟಾಂತ ಕತೆಯನ್ನು ಹೇಳಿ ನಾವೆಲ್ಲಾ ಬದುಕಿನಲ್ಲಿ ಯಾವ ಧೋರಣೆಗೆ ಪ್ರಾಮುಖ್ಯತೆ ಕೊಡಬೇಕೆಂದು ಸಿಂಗ್ ಅವರು ಬಯಸುತ್ತಿದ್ದರೆಂಬುದನ್ನು ಕಾಣಿಸುತ್ತಾನೆ. ಆ ಕತೆ ಹೀಗಿದೆ : ಪರಮಹಂಸರ ಪರಮ ಶಿಷ್ಯನೊಬ್ಬ ವೃದ್ಧಾಪ್ಯ ಮತ್ತು ಖಾಯಿಲೆಗಳಿಂದ ಬಳಲಿ ಸಾವಿನ ಅಂಚಿಗೆ ತಲುಪಿದರೂ ಸಾಯುತ್ತಿಲ್ಲ. ''ಒದ್ದಾಟ, ಸಂಕಟ, ಬಿಡುಗಡೆಯ ದಾಹ, ಸುದ್ದಿ ತಿಳಿದ ಪರಮಹಂಸರೇ ಬಂದರು. ನೋಡಿದರು. ಎಲ್ಲ ಸರಿ, ಸಾಯುವುದಕ್ಕೆ ಮುಂಚೆ ಮನುಷ್ಯನಿಗೆ 'ನಾನು' ಎನ್ನುವ ಅಹಂಕಾರ, ಸ್ವಪ್ರಜ್ಞೆ ಸಂಪೂರ್ಣವಾಗಿ ವಿಸರ್ಜನೆಯಾಗಬೇಕು. ಈ ಶಿಷ್ಯನಿಗೆ ಅದೇ ಆಗುತ್ತಿಲ್ಲ. ಸಾಯುತ್ತಿರುವವನು ನಾನು, ನಾನೇ ಸತ್ತುಹೋಗುತ್ತಿದ್ದೇನೆ ಎನ್ನುವ ಭಾವನೆ ಕೂಡ ಮನುಷ್ಯನ ಅಹಂಕಾರವೇ. ಆ ಅಹಂಕಾರ ವಿಸರ್ಜನೆಯಾಗುವ ತನಕ ಮನುಷ್ಯನಿಗೆ ದೇಹದಿಂದ, ಕಾಲದಿಂದ ಬಿಡುಗಡೆಯಿಲ್ಲ.''

ಸಿಂಗ್ ಸಾಹೇಬರು ಕಾಲೊನಿಯ ನಿವಾಸಿಗಳ ಸಮಸ್ಯೆಯೊಂದನ್ನು ಬಿಡಿಸಿದ ಪ್ರಸಂಗ ಹೀಗಿದೆ : ಕಾಲೊನಿಯಲ್ಲಿ ಗಣೇಶ ಹಬ್ಬದ ಸಂದರ್ಭದಲ್ಲಿ ಗಣಪತಿಯನ್ನು ಕೂರಿಸಿ ಪ್ರತಿದಿನ ಒಬ್ಬೊಬ್ಬ ಪೂಜೆ ಮಾಡಿ ಸೇವಾರ್ಥ ನಡೆಸಿಕೊಡಬೇಕೆಂದು ಒಪ್ಪಂದವಾಯಿತು. ಸಂಘದ ಕಾರ್ಯದರ್ಶಿಯವರು ಮೊದಲು ಪೂಜೆ ಮಾಡಲು ರಾಮಕೃಷ್ಣಶಾಸ್ತ್ರಿ ಎಂಬ ಅಧಿಕಾರಿಯನ್ನು ಆಮಂತ್ರಿಸಿದರು. ಇದೇ ಒಂದು ರಾದ್ಧಾಂತಕ್ಕೆ ಕಾರಣವಾಯಿತು. ಆತ ಮೇಲರಿಮೆಯ ಮನುಷ್ಯ. ಅವರು ಹುಟ್ಟಿನಿಂದ ಬ್ರಾಹ್ಮಣನಾಗಿದ್ದರೂ ಪೂಜೆ, ಹೋಮ ಹವನಗಳಂತಹ ಧಾರ್ಮಿಕ ವಿಧಿಗಳಿಂದ ದೂರವಾಗಿದ್ದವರು ಮತ್ತು ತಮ್ಮ ಈ ಧೋರಣೆಯ ಬಗ್ಗೆ ಮೇಲರಿಮೆ ಹೊಂದಿದ್ದವರು. ತನ್ನನ್ನು ಈ ಪೂಜಾಕಾರ್ಯಕ್ಕೆ ಮೊದಲನೆಯವನಾಗಿ ಆಮಂತ್ರಿಸಿದ್ದು ತನ್ನನ್ನು ಬ್ರಾಹ್ಮಣವಾದಿಯೆಂದು ಸಾರಲು ಎಂದು ಅವರ ತಗಾದೆ. ಈ ಪ್ರಕರಣ ಸಂಘದ ಅಧ್ಯಕ್ಷರಾದ ಸಿಂಗ್ ಅವರಿಗೆ ತಿಳಿದು ಅವರು ಶಾಸ್ತ್ರಿ ದಂಪತಿಗಳನ್ನು ಎಲ್ಲರೆದುರಿಗೆ ಕೂರಿಸಿಕೊಂಡು ತಾವು ಕೊಯಮತ್ತೂರಿನಲ್ಲಿದ್ದಾಗ ತಮ್ಮ ಅನುಭವಕ್ಕೆ ಬಂದ ಒಂದು ಪ್ರಸಂಗವನ್ನು ಹೇಳಿದರು. ಅಲ್ಲಿ ಅವರ ಅಕ್ಕಪಕ್ಕದ ಮನೆಗಳಲ್ಲಿದ್ದವರು ರಾಮಸ್ವಾಮಿ, ಕೃಷ್ಣಸ್ವಾಮಿ ಎಂಬ ಇಬ್ಬರು ಕರ್ನಾಟಕದ ಬ್ಯಾಂಕ್ ಅಧಿಕಾರಿಗಳು. ಒಬ್ಬ ಬ್ರಾಹ್ಮಣ, ಇನ್ನೊಬ್ಬ ಮುರುಸು ಒಕ್ಕಲಿಗ. ''ಇಬ್ಬರಲ್ಲೂ, ಇಬ್ಬರ ಕುಟುಂಬದಲ್ಲೂ ಯಾವಾಗಲೂ ಸ್ಪರ್ಧೆ, ಅನುಮಾನ, ಅಸೂಯೆ... ಒಂದೇ ಊರು, ಒಂದೇ ಭಾಷೆ, ಒಂದೇ ಕಾಲೇಜಿನ ಇಬ್ಬರು ದೂರದ ಕೊಯಮುತ್ತೂರಿಗೆ ಬಂದು

ಒಂದಾಗಬೇಕಿತ್ತು, ಆತ್ಮೀಯರಾಗಬೇಕಿತ್ತು.

ಆಗಲಿಲ್ಲ. ಇಡೀ ಸರ್ವಿಸ್ ಹೀಗೆ ಕಳೆದಿದ್ದಾರೆ. ಕೃಷ್ಣಸ್ವಾಮಿ ಮೊದಲು ನಿವೃತ್ತನಾದ. ಸ್ವಂತದ ಮೈಸೂರಿಗೆ ಹೋಗಿ ಬಾಡಿಗೆಗೆ ಕೊಟ್ಟಿದ್ದ ಮನೆಯನ್ನು ಬಿಡಿಸಿಕೊಂಡು ಲಗೇಜ್‌ನೆಲ್ಲ ತಗೊಂಡು ಹೋಗೋಕೆ ಬಂದವನೇ ಸಣ್ಣ ಮುಖ ಮಾಡಿಕೊಂಡು ನಮ್ಮ ಮನೆಗೆ ಬಂದಿದ್ದ. ಸಿಂಗ್ ಸಾಹೇಬರೇ, ಇಡೀ Life wasted ನೋಡಿ ಅಂದ. ನನಗೆ ತಲೆಬುಡ ತಿಳಿಯಲಿಲ್ಲ. ನಾವಿಬ್ಬರೂ ಇಷ್ಟೊಂದು ವರ್ಷ ಇಷ್ಟೊಂದು ಹತ್ತಿರದಲ್ಲಿದ್ದು ಒಬ್ಬರಿಗೊಬ್ಬರು ಒತ್ತಾಸೆ ಆಗುವ ಬದಲು ಹೀಯಾಳಿಸುತ್ತಾ, ಅನುಮಾನಿಸುತ್ತಾ ನಾವು ಸೇರಿದ್ದೇವೆಂದು ತಿಳಿದುಕೊಂಡಿದ್ದ ಮೈಸೂರು-ಬೆಂಗಳೂರುಗಳ ನಮ್ಮ ನಮ್ಮ ಜಾತಿಯ ಬಳಗಕ್ಕೆ ಚಾಡಿ ಹೇಳುತ್ತಾ ಕಾಲ ಕಳೆದಿವಿ. In the process we missed our own life which we only could have evolved here. ಈಗ ಅಲ್ಲಿ ಹೋಗಿ ನೋಡಿದರೆ ನಾವು ಯಾರನ್ನು ನಮ್ಮ ಕುಲದವರು, ಗುಂಪಿನವರು ಅಂದುಕೊಂಡಿದ್ದೆವೋ ಅವರುಗಳೆಲ್ಲ ನಮ್ಮ ಪರಿವೇನೇ ಇಲ್ಲದೆ ಸುಖವಾಗಿ, ಆರಾಮವಾಗಿ ಇದ್ದಾರೆ.'' ಹೀಗೆ ಹೇಳಿದ ಕೃಷ್ಣಸ್ವಾಮಿ ರಾಮಸ್ವಾಮಿಯ ಮನೆಗೆ ಹೋಗಿ ಇದನ್ನು ಹೇಳಿ ಆ ಎರಡು ಕುಟುಂಬಗಳು ಸೇರಿ ಪ್ರವಾಸಿ ಸ್ಥಳಗಳಿಗೆ ಹೋಗಿ ಸುತ್ತಿ ಸಂತೋಷಪಟ್ಟು ಬಂದರು.

ಈ ಪ್ರಸಂಗವನ್ನು ಹೇಳಿದ ಸಿಂಗ್ ಸಾಹೇಬರು ರಾಮಕೃಷ್ಣ ಶಾಸ್ತ್ರಿಗೆ ''ನಾವು ಇರುವ ಕಡೆ ನಮನಮಗೆ ಬೇಕಾದ ಸುಖ-ಸಂತೋಷ ಸಿಗೋಕೆ ಅನುಕೂಲವಾಗುವ ನೀತಿ-ನಿಯಮ ಕಂಡುಕೋಬೇಕೆ ಹೊರತು ನಾವು ನಮ್ಮ ಬಗ್ಗೆ ಏನು ತಿಳಿಕೊಂಡಿದೀವಿ, ನಮ್ಮ ನಮ್ಮ ಹಿನ್ನೆಲೆ ಏನು ಅನ್ನುವುದಲ್ಲ'' ಎಂದು ಹೇಳಿದ ಮೇಲೆ ಶಾಸ್ತ್ರಿ ದಂಪತಿಗಳು ಪೂಜೆ ಮಾಡಿದರು. ಎಲ್ಲರ ಮನಸ್ಸನ್ನು ಗೆದ್ದರು.

ಸಿಂಗ್ ಸಾಹೇಬರು ತಮ್ಮ ಮುತ್ಸದ್ದಿತನ ತೋರಿಸಿದ ಇನ್ನೊಂದು ಪ್ರಸಂಗ ಉತ್ತರಭಾರತದ ಯುವ ಅಧಿಕಾರಿಗೆ ಸಂಬಂಧಿಸಿದುದು. ''ತುಂಬಾ ಬುದ್ಧಿವಂತ, ಚುರುಕು ಸ್ವಭಾವ. ದುಡ್ಡಿನದು ಮಾತ್ರ ದುರಾಸೆ. ಆಫೀಸಿನಲ್ಲೂ ಹಣ ಬೇಕು, ಹೆಣ್ಣು ಕೊಡುವ ಮಾವನೂ ಕಾಸು ಕೊಡಬೇಕು. ನಾಳೆ ಇಲ್ಲ, ನಾಳಿದ್ದಂತೂ ಇಲ್ಲವೇ ಇಲ್ಲವೆಂದು ದಿನವೂ ಕ್ಷಣವೂ ದುಡ್ಡಿನ ಗೋರುವಿಕೆ.'' ದೊಡ್ಡ ಮಟ್ಟದ ವರದಕ್ಷಿಣೆಯನ್ನು ಪಡೆದು ಚಂದನದ ಗೊಂಬೆಯಂತಹ ಹುಡುಗಿಯನ್ನು ಮದುವೆ ಮಾಡಿಕೊಂಡು ಬಂದ. ತಾನು ಗೋರಿಕೊಂಡ ಹಣವನ್ನೆಲ್ಲಾ ಬಡ್ಡಿಗೆ ಸಾಲ ಕೊಟ್ಟು, ವಿಶೇಷವಾಗಿ ಸಿನಿಮಾದವರಿಗೆ, ಬಡ್ಡಿ ವಸೂಲಿಗೆ ಊರೂರು ಸುತ್ತುತ್ತಿದ್ದ. ಎರಡನೆ ದರ್ಜೆ ನಟಿಯೊಂದಿಗೆ ಸಂಬಂಧ ಬೆಳೆಸಿದ. ಮನೆಯಿಂದ ದೂರ ಉಳಿಯತೊಡಗಿದ. ಒಂದು ದಿನ ಸಾಯಂಕಾಲ ಅವನ ಹೆಂಡತಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಳು. ಅವಳು ತನ್ನ ಸಾವಿಗೆ ಯಾರೂ ಕಾರಣರಲ್ಲ, ದುರದೃಷ್ಟವೇ ಕಾರಣ ಎಂದು ಬರೆದಿಟ್ಟಳು. ಸಿಂಗ್ ಸಾಹೇಬರು ದಿನಗಟ್ಟಲೆ ಸ್ಟೇಶನ್, ಆಸ್ಪತ್ರೆಗಳಿಗೆಲ್ಲ ಓಡಾಡಿ ಈ ಪ್ರಕರಣದಿಂದ ಉದ್ಭವವಾದ ಸಮಸ್ಯೆಗಳನ್ನೆಲ್ಲಾ ನಿಭಾಯಿಸಿದರು. ಹುಡುಗ ಉತ್ತರದವನಾದ್ದರಿಂದ ಅವನನ್ನು ಉಳಿಸಲು ಅವರು ಇದನ್ನೆಲ್ಲಾ ಮಾಡುತ್ತಿದ್ದಾರೆ ಎಂದು ಸಹೋದ್ಯೋಗಿಗಳು ಅನುಮಾನಪಟ್ಟರು. ಆದರೆ ಹುಡುಗನಿಗೆ ಕೆಲಸದಲ್ಲಿ ಒಂದು ಗ್ರೇಡ್ ಇಳಿಸಿ ದೂರದ ನಾಗಾಲ್ಯಾಂಡಿಗೆ ಸಾಹೇಬರೇ ವರ್ಗ ಮಾಡಿಸಿದರು ಎಂದು ತಿಳಿದ ಮೇಲೆ ಅದೆಲ್ಲ ಸುಳ್ಳು ಎಂದು ಸಾಬೀತಾಯಿತು.

ಹೀಗೆ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದ ಸಿಂಗ್ ಸಾಹೇಬರ ನಡವಳಿಕೆ ಇದ್ದಕ್ಕಿದ್ದಂತೆ ಒಮ್ಮೆ ಒರಟಾಗುತ್ತಾ ಹೋಯಿತು. ಅವರು ಎಲ್ಲರೊಡನೆ ಸಿಟ್ಟು ಸೆಡವಿನೊಡನೆ ವರ್ತಿಸಲಾರಂಭಿಸಿದರು. ಹಲವು ವಾರಗಳ ಕಾಲ ಅವರು ಇದೇ ರೀತಿಯಾಗಿ ಇತರರೊಡನೆ ವ್ಯವಹರಿಸುತ್ತಾ ಹೋಗಿದ್ದನ್ನು ನೋಡಿ ಬೇಸರಗೊಂಡ ನಿರೂಪಕ ಮೇಲಾಧಿಕಾರಿಯಾದ ಅವರನ್ನೇ ಅವರ ಈ ವರ್ತನೆಗೆ

ಕಾರಣವೇನು ಎಂದು ಕೇಳುವ ಧೈರ್ಯ ಮಾಡುತ್ತಾನೆ. ಅದಕ್ಕೆ ಅವರು ಅಂತಹದ್ದೇನು ಇಲ್ಲವಲ್ಲ ಎಂದು ಹೇಳಿ ಸುಮ್ಮನಾಗುತ್ತಾರೆ. ನಂತರ ಅದೇ ದಿನ ರಾತ್ರಿ ನಿರೂಪಕನ ಮನೆಗೆ ಬಂದು ಅವನನ್ನು ಕಾಲೊನಿಯ ಮುಂದಿದ್ದ ಪಾರ್ಕಿಗೆ ಕರೆದುಕೊಂಡು ಹೋಗಿ ಕುಳಿತು ತಮ್ಮ ಸಮಸ್ಯೆಯನ್ನು ತಿಳಿಸುತ್ತಾರೆ. ಮುಂದಿನ ಸೋಮವಾರ ಎರಡು ತಿಂಗಳ ಮಟ್ಟಿಗೆ ತಮ್ಮ ಮನೆಯಲ್ಲಿರಲು ತಮ್ಮ ತಂದೆ ಬಿಹಾರದಿಂದ ಬರುತ್ತಿದ್ದಾರೆ. ಅವರು ಹಳ್ಳಿಯ ಮನುಷ್ಯ, ಅನಕ್ಷರಸ್ಥ, ಭೋಜಪುರಿ ಭಾಷೆ ಮಾತ್ರ ಬಲ್ಲವರು ಎಂದು ಹೇಳುತ್ತಾರೆ. ಅವರು ನಿಮ್ಮ ಮನೆಯಲ್ಲಿ ಇರುವವರಾದ್ದರಿಂದ ಇದೆಲ್ಲಾ ಸಮಸ್ಯೆಯಾಗಲಾರದಲ್ಲವೆ ಎಂದು ನಿರೂಪಕ ಹೇಳಿದಾಗ, ಅವರು ಒಂದು ಕಾಲದಲ್ಲಿ ತಹಶೀಲ್ದಾರ್ ಆಫೀಸಿನಲ್ಲಿ ಜವಾನರಾಗಿದ್ದರು ಎಂದು ಹೇಳಿ ಸಾಹೇಬರು ತಮ್ಮ ಮುಜುಗರಕ್ಕೆ ಕಾರಣವನ್ನು ಸೂಚಿಸುತ್ತಾರೆ.

''ನಮ್ಮ ತಂದೆ ಕಂಡರೆ ನನಗೆ ಚಿಕ್ಕಂದಿನಿಂದಲೂ ಆಗ್ತಾ ಇರಲಿಲ್ಲ. ತುಂಬಾ ದ್ವೇಷಿಸ್ತಾಯಿದ್ದೆ. ನಾನು ಅಧಿಕಾರಿಯಾಗಿ ಆಯ್ಕೆಯಾಗಿ ತರಬೇತಿ ಪಡೆದು, ಹಣ, ದರ್ಪವನ್ನೆಲ್ಲ ಅನುಭವಿಸಿ ನಮ್ಮ ಪೈಕಿಯೇ ಮಾಜಿ ಶಾಸಕರ ಮಗಳೊಬ್ಬಳನ್ನು ಮದುವೆಯಾಗಿ ಆತ್ಮವಿಶ್ವಾಸವೆಲ್ಲ ಗಟ್ಟಿಯಾದ ಮೇಲೆ ಅಪ್ಪನನ್ನು ಅವನಿರುವ ಹಾಗೆ ಒಪ್ಪಿಕೊಳ್ಳೋಕೆ ಸಾಧ್ಯವಾಯಿತು. ಮೊದಮೊದಲು ನಾನು ವಾರಣಾಸಿ, ಭೂಪಾಲ, ರತ್ನಗಿರಿ ಇಲ್ಲೆಲ್ಲ ಇದ್ದಾಗ ವಿದ್ಯಾವಂತ – ಅನುಕೂಲಸ್ಥ ತಂದೆತಾಯಿಗಳ ಹಿನ್ನೆಲೆಯಿಂದ ಬಂದ ನಿಮ್ಮಂಥವರನ್ನೆಲ್ಲ ದ್ವೇಷಿಸುತ್ತಿದ್ದೆ. ಬೇಕು ಬೇಕೆಂದೇ ನಿಮ್ಮಗಳ ರಿಪೋರ್ಟನ್ನೆಲ್ಲ ಹಾಳು ಮಾಡ್ತಿದ್ದೆ. ಸಣ್ಣಪುಟ್ಟ ತಪ್ಪುಗಳನ್ನು ಗುಡ್ಡ ಮಾಡಿ ನೋಡುತ್ತಿದ್ದೆ. ಈಗ ನಾನೇ ಮೇಲಾಧಿಕಾರಿಯಾಗಿ, ನನ್ನ ಮಕ್ಕಳು ಕೂಡ ಚೆನ್ನಾಗಿ ಓದಿ ಬರೆದು ಮುಂದೆ ಬಂದ ಮೇಲೆ ಇದರಲ್ಲೆಲ್ಲ ಯಾರದೂ ವೈಯಕ್ತಿಕವಾಗಿ ತಪ್ಪಿರೋಲ್ಲ, ವೈಯಕ್ತಿಕ ಆಯ್ಕೆನೂ ಇರೋಲ್ಲ ಅಂತ ಗೊತ್ತಾಗಿದೆ. ದಕ್ಷಿಣದ ಕಡೆ ಬಂದವನೇ ಹೊಸ ಅವತಾರ ಎತ್ತಿದೆ'' ಎಂದು ಸಿಂಗ್ ಸಾಹೇಬರು ಹೇಳುತ್ತಾರೆ.

ಅವರ ತಂದೆ ಬಂದು ತಮಿಳುನಾಡಿನ ಮುಖ್ಯ ದೇವಸ್ಥಾನಗಳನ್ನೆಲ್ಲಾ ಸಂದರ್ಶಿಸಿ ಬರುತ್ತಾರೆ. ಕಾಲೋನಿಯಲ್ಲಿನ ಹಿರಿಯ ವಯಸ್ಸಿನವರೊಡನೆ ತಮ್ಮದೇ ಭಾಷೆಯಲ್ಲಿ ವ್ಯವಹರಿಸಿ ಅವರ ಭಾಷೆಯನ್ನು ಅರ್ಥ ಮಾಡಿಕೊಂಡು ಸ್ನೇಹವನ್ನು ಬೆಳೆಸಿಕೊಳ್ಳುತ್ತಾರೆ. ಸಿಂಗ್ ಅವರು ಭಯಪಟ್ಟಂತಹ ಪ್ರಸಂಗಗಳ್ಯಾವುವೂ ಘಟಿಸುವುದಿಲ್ಲ. ''ಸಿಂಗ್ ಸಾಹೇಬರ ನಡಾವಳಿ, ಮಾತುಕತೆಯೆಲ್ಲ ಕೂಡ ಹಿಂದಿನಂತೆಯೇ ಆಯಿತು.''

ಈ ಸಂಕಥನವನ್ನು ರೂಪಿಸಿರುವ ಕೊನೆಯ ಕತೆ ನಿರೂಪಕನ ಸಹೋದ್ಯೋಗಿಗಳಿಗೆ ಸಂಬಂಧಿಸಿದ್ದಲ್ಲ. ಅದು ಆತ ಗುಂತೂರಿನಲ್ಲಿ ಉದ್ಯೋಗದ ನಿಮಿತ್ತ ನೆಲೆಸಿದ್ದಾಗ ಪರಿಚಿತರಾಗಿ ಆತ್ಮೀಯ ಸ್ನೇಹಿತರಾಗಿ ಬೆಳೆದ ಇಂದಿರಾ ಮತ್ತು ಭಾಸ್ಕರ್ ಎಂಬ ವೈದ್ಯ ದಂಪತಿಗಳಿಗೆ ಸಂಬಂಧಿಸಿದುದು. ಅವರದು ಅಂತರ್ಜಾತೀಯ ವಿವಾಹ. ಇಂದಿರಾ ಅವರ ತಂದೆ ಕಮ್ಮಾ ಸಮುದಾಯದ ದೊಡ್ಡ ಜಮೀನ್ದಾರ. ಭಾಸ್ಕರನ ತಂದೆ ಬ್ರಾಹ್ಮಣ ಸಮುದಾಯಕ್ಕೆ ಸೇರಿದವರು ಮತ್ತು ಮುನಿಸಿಪಲ್ ಆಫೀಸರ್ ಆಗಿದ್ದವರು. ಇಬ್ಬರೂ ವೈದ್ಯಕೀಯ ಪದವಿ ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆದು ಚಂಡೀಗಢದಲ್ಲಿ ಸ್ನಾತಕೋತ್ತರ ಪದವಿಗಾಗಿ ಓದುತ್ತಿದ್ದಾಗ ಪ್ರೇಮಿಸಿ ವಿವಾಹವಾದವರು. ಇಬ್ಬರ ಕುಟುಂಬವದರು ವಿರೋಧಿಸಿದ್ದರೂ ಸಹ. ಅವರಿಬ್ಬರೂ ಸೇರಿ ಗುಂತೂರಿನಲ್ಲಿ ಸುಸಜ್ಜಿತ ನರ್ಸಿಂಗ್ ಹೋಮ್ ತೆರೆದು ಅದು ಚೆನ್ನಾಗಿ ನಡೆದು ಆ ಊರಿನಲ್ಲಿ ಅವರಿಗೆ ಪ್ರತಿಷ್ಠೆಯ ಸ್ಥಾನವನ್ನು ತಂದುಕೊಟ್ಟಿತು. ಆ ಊರಿನಲ್ಲಿನ ಅವರ ಸಮಾನಮನಸ್ಕರೆಲ್ಲ ಸೇರಿ ನಡೆಸುತ್ತಿದ್ದ ಮುಕ್ತ ಮನಸ್ಸಿನಿಂದ ಕೂಡಿದ ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದ ನಿರೂಪಕನಿಗೆ ಅದೊಂದು ಮರೆಯಲಾಗದ ಅನುಭವ.

ಆ ಊರನ್ನು ಬಿಟ್ಟು ಹಲವಾರು ವರ್ಷಗಳಾದ ಮೇಲೆ ಇಂದಿರಾ ಶರ್ಮಾ ಅವರು ಮದರಾಸಿನಲ್ಲಿ ನಡೆಯಲಿದ್ದ ವಿಚಾರಸಂಕಿರಣದಲ್ಲಿ ಭಾಗವಹಿಸಲು ಬಂದು ಮೂರು ದಿನಗಳ ಕಾಲ ನಿರೂಪಕನ ಮನೆಯಲ್ಲಿ ತಂಗುತ್ತಾರೆ. ಇಂದಿರಾರಲ್ಲಿ ನಿರೂಪಕ ಬಹಳಷ್ಟು ಬದಲಾವಣೆಗಳನ್ನು ಕಾಣುತ್ತಾನೆ. ಅವರು ದೈಹಿಕವಾಗಿ ಕುಂದಿದಂತೆ ಕಾಣುತ್ತಾರೆ. ಮೊದಲಿನಂತೆ ತಲೆಗೂದಲಿನ ಒಪ್ಪ ಓರಣದ ಬಗ್ಗೆ ಆಸಕ್ತಿ ಇಲ್ಲ. ಹೊಸ ಹೊಸ ಸೀರೆ ಉಡುವ ಅಭ್ಯಾಸ ತಪ್ಪಿದೆ. ಹೆಚ್ಚಿನ ಮಾತುಕತೆಯೂ ಇಲ್ಲ. ಮನೆಯಲ್ಲಿ ತಂಗಿದ್ದಷ್ಟು ದಿನ ಅವರು ತಮ್ಮ ಬಗ್ಗೆ ಏನೂ ಹೇಳಲಿಲ್ಲ. ಅವರನ್ನು ಕಳಿಸಲು ರೈಲ್ವೆ ಸ್ಟೇಷನಿಗೆ ಹೋದಾಗ ಅಲ್ಲಿ ರೈಲು ಹೊರಡುವುದು ತಡವಾದ್ದರಿಂದ ಕಾಫಿ ಕುಡಿಯಲು ಕೂತಾಗ ಅವರು, ಈಗ ಎರಡು ವರ್ಷಗಳಿಂದ ತಮ್ಮ ಗಂಡ ಭಾಸ್ಕರ್‌ಗೆ ವೃತ್ತಿಯಲ್ಲಿ ಹಿಂದಿನ ತತ್ಪರತೆ ಇಂಗಿ ಅವರು ಎಲ್ಲವೂ ಬೋರ್ ಎನ್ನುತ್ತಿರುವುದನ್ನು ಹೇಳುತ್ತಾರೆ. ನಂತರ ಸ್ಟೇಷನ್ನಿನ ಜನಜಂಗುಳಿಯಿಂದ ದೂರ ಸರಿದು ಇವರಿಬ್ಬರೇ ದೂರದವರೆಗೆ ಮಾತನಾಡುತ್ತಾ ಹೋಗುತ್ತಾರೆ. ಇಂದಿರಾ ಅವರು ಭಾಸ್ಕರ್ ಅವರನ್ನು ಕಾಡುತ್ತಿರುವ ''ಎಲ್ಲವೂ ಬೋರ್'' ಎಂಬ ಭಾವನೆ ತಮ್ಮನ್ನು ಕಾಡುತ್ತಿದ್ದು ತಾವು ಅದರಿಂದ ಹೊರಬರಲು ಸಂಗೀತ ಕಲಿಯಲು ಪ್ರಯತ್ನಿಸಿದ್ದರ ಬಗ್ಗೆ ಹೇಳಿಕೊಳ್ಳುತ್ತಾರೆ. ಇದಕ್ಕೆ ಉತ್ತರವಾಗಿ ನಿರೂಪಕ ''ಜೀವನದಲ್ಲಿ ಸಾಧಾರಣತೆಯ ಲಯವೇ ಕೊನೆಯ ಸತ್ಯವೆಂಬ ತೀರ್ಮಾನದಿಂದ ತಪ್ಪಿಸಿಕೊಳ್ಳುವ ಪ್ರಶ್ನೆಯೇ ಇಲ್ಲ. ಈ ಸತ್ಯ ನಮ್ಮನ್ನು ಜೀವನ ವಿಮುಖರನ್ನಾಗಿ ಮಾಡಬಾರದು ಅಷ್ಟೇ'' ಎಂದು ಹೇಳಿದ್ದನ್ನು ಇಂದಿರಾ ಅವರು ಒಪ್ಪುವುದಿಲ್ಲ.

ಈಚೆಗೆ ತಮಗೆ ರಾತ್ರಿ ಹೊತ್ತು ಕೂಡ ಆಕಾಶದಲ್ಲಿ ಕಾಮನಬಿಲ್ಲು ಕಾಣುತ್ತದೆ ಎಂದು ಹೇಳುವ ಅವರು ''ಈ ಕಾಮನಬಿಲ್ಲು ನಾವು ನೋಡುತ್ತಲೇ ಇರಬೇಕು. ನಾವು ನೋಡುವುದರಿಂದ ಅದು ಕಾಣುವುದೇ ಹೊರತು, ಅದು ಇರುವುದರಿಂದಲ್ಲ. ಹೀಗೆ ನೋಡುತ್ತಲೇ ಎದೆ ಸೆಟೆಸಿ, ಎದೆ ತುಂಬಿಕೊಂಡು ನಮಗಾಗಿ, ಎಲ್ಲರಿಗಾಗಿ ಕನಸು ಕಾಣುತ್ತಾ ಬದುಕು ನಡೆಸಬೇಕು. ಇಲ್ಲಿ ಇನ್ನೊಂದು ದೂರದಿಂದ ನೋಡಿದಾಗಲೂ ನಾವೆಲ್ಲರೂ ಈ ಕಾಮನಬಿಲ್ಲಲ್ಲಿ ಭರವಸೆಯ ಬಿಂದುಗಳಾಗಿ ಕಾಣ್ತೇವಿ ಗೊತ್ತಾ'' ಎಂದು ಹೇಳುತ್ತಾರೆ.

ಹೀಗೆ ಈ ಆರು ಕತೆಗಳ ಸಂಕಲನ ನಮ್ಮೆಲ್ಲರ ಜೀವನದಲ್ಲಿ ನಾವು ನಮ್ಮನ್ನು ಮತ್ತೆ ಮತ್ತೆ ಪುನರ್‌ನವೀಕರಿಸಿಕೊಳ್ಳುವ ಅಗತ್ಯವನ್ನು ಪ್ರತಿಪಾದಿಸುತ್ತದೆ. ಇಲ್ಲದಿದ್ದರೆ ರಾಮಕೃಷ್ಣ ಶಾಸ್ತ್ರಿಯಂಥವರು ಬೆಳೆಸಿಕೊಂಡಿರುವ ಮೇಲರಿಮೆ, ಸಿಂಗ್ ಸಾಹೇಬರಂಥವರು ಬೆಳೆಸಿಕೊಂಡಿರುವ ಕೀಳರಿಮೆ, ಆ ಯುವ ಅಧಿಕಾರಿಯಂಥವರು ಹಣ ಅಥವಾ ಇನ್ನಾವುದೋ ಒಂದರ ವ್ಯಸನಕ್ಕೆ ಬಿದ್ದು ತಮ್ಮನ್ನು ನಂಬಿದವರ ಬದುಕನ್ನು ನರಕವನ್ನಾಗಿಸುತ್ತಾರೆ, ರಾಮಸ್ವಾಮಿ ಮತ್ತು ಕೃಷ್ಣಸ್ವಾಮಿಯವರಂಥವರೂ ತಮ್ಮ ಹಿಂದಿನ ಬದುಕಿನ ನಡಾವಳಿಗಳಿಗೆ ಅಂಟಿಕೊಂಡು ತಮ್ಮ ಬದುಕನ್ನು ಕೊಳೆಸುತ್ತಾರೆ. ಈ ಎಲ್ಲಾ ಅಂಶಗಳನ್ನು ಗಮನಿಸಿದರೆ ಸತ್ಯನಾರಾಯಣ ಅವರ ಕತೆಯ ಹೆಸರಿನಲ್ಲಿ ಕೇಳಿರುವ ಪ್ರಶ್ನೆಗೆ ಹೌದು, ಇವೆಲ್ಲಾ ಮನುಷ್ಯರ ಬದುಕಿನ ಎಂದಿನ ಪಾಡನ್ನು ಮತ್ತು ಅದರಿಂದ ಹೊರಬರಬೇಕಾದ ಅಗತ್ಯವನ್ನು ಧ್ವನಿಸುವ ಕತೆಗಳೆಂದು ಉತ್ತರಿಸಬಹುದಾಗಿದೆ.

★ ★ ★

ಇದುವರೆಗೆ ಗಮನಿಸಿದ ಕತೆಗಳು ವ್ಯಕ್ತಿಯ ವೈಯಕ್ತಿಕ ಅಥವಾ ಕೌಟುಂಬಿಕ ಸಂಬಂಧಗಳಿಗೆ ಪ್ರಾಮುಖ್ಯ ನೀಡಿರುವಂಥವು ಎಂದು ಹೇಳಬಹುದು. ಇನ್ನು ಮುಂದೆ ಒಬ್ಬ ವ್ಯಕ್ತಿಯ ಅಥವಾ ಕುಟುಂಬದ ಬದುಕಿನ ಜೊತೆಗೆ ಸಾರ್ವಜನಿಕ ವಿದ್ಯಮಾನಗಳನ್ನು ತಳಕು ಹಾಕಿ ಸೃಷ್ಟಿಸಿರುವ

ಸಂಕಥನಗಳನ್ನು ಗಮನಿಸಬಹುದು. ಸತ್ಯನಾರಾಯಣ ಅವರ ಮೊದಲ ಕಥಾಸಂಕಲನದಲ್ಲಿರುವ 'ನಜೀರ್ ಸಾಬು ಚರಿತ್ರೆಯು' ಈ ರೀತಿಯ ಸಂಕಥನಕ್ಕೆ ಒಂದು ಒಳ್ಳೆಯ ಉದಾಹರಣೆ. ಈ ಕತೆಯ ಕೇಂದ್ರದಲ್ಲಿರುವುದು ಸೀತಾಲಕ್ಷ್ಮಿ ಎಂಬ ಮಹಿಳೆ. ಮೈಸೂರಿನಲ್ಲಿ ನೆಲೆಸಿದ್ದ ಶಿರಸ್ತೇದಾರನೊಬ್ಬನ ಐದು ಹೆಣ್ಣುಮಕ್ಕಳಲ್ಲಿ ಕೊನೆಯವಳಾದ ಇವಳು ಎಸ್.ಎಸ್.ಎಲ್.ಸಿ. ಪಾಸ್ ಮಾಡಿ ಬದುಕಿನಲ್ಲಿ ಹೆಚ್ಚಿನದೇನನ್ನೋ ಸಾಧಿಸಬೇಕೆಂದಿದ್ದವಳು. ಮೊದಲಿನಿಂದಲೂ ಅವಳಿಗೆ ಸಾರ್ವಜನಿಕ ಬದುಕಿನಲ್ಲಿ ಹೆಚ್ಚಿನ ಕುತೂಹಲ ಇರುತ್ತದೆ. ಆದರೆ ಅವಳ ಕುಟುಂಬದ ದುರ್ಬಲ ಆರ್ಥಿಕ ಸ್ಥಿತಿಯಿಂದಾಗಿ ಅವಳು ಬಿಸಿಲವಾಡಿ ಎಂಬ ಹಳ್ಳಿಯಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕನಾಗಿರುವ ಶ್ರೀನಿವಾಸಯ್ಯನನ್ನು ಮದುವೆಯಾಗಬೇಕಾಗುತ್ತದೆ. ಶ್ರೀನಿವಾಸಯ್ಯ ತನ್ನ ಮಾಸ್ತರಿಕೆಯ ಜೊತೆಗೆ ತನ್ನ ಪೂರ್ವಜರು ನಡೆಸಿಕೊಂಡು ಬಂದಿದ್ದ ದೇವಸ್ಥಾನದ ಪೂಜಾರಿಕೆ ಮತ್ತು ಹೊಲದ ಬೇಸಾಯದ ಕೆಲಸಗಳಲ್ಲೂ ವ್ಯಸ್ತನಾಗಿರುವ ಹಳ್ಳಿಯ ಸಂಪ್ರದಾಯನಿಷ್ಠ ಮನೋಭಾವದ ಬ್ರಾಹ್ಮಣ. ಅವನಿಗೆ ಊರಿನ ಜನರ ಸಂಪರ್ಕ ಸಾಕಷ್ಟಿದ್ದರೂ ತನ್ನ ಬದುಕಿನಲ್ಲಿ ಹೆಚ್ಚಿನದೇನನ್ನೂ ಸಾಧಿಸುವ ಉಮೇದಿಲ್ಲ.

ಹಳ್ಳಿಯ ನಿವಾಸಿಯಾದ ನಂತರವೂ ಸೀತಾಲಕ್ಷ್ಮಿ ತಾನು ಮೈಸೂರಿನಲ್ಲಿದ್ದಾಗ ರೂಢಿಸಿಕೊಂಡಿದ್ದ ಅಚ್ಚುಕಟ್ಟಿನ, ಒಪ್ಪಓರಣದ ನಗರ ಬದುಕಿನ ವಡವಳಿಕೆಗಳನ್ನೇ ಅನುಸರಿಸುತ್ತಾ ಹಳ್ಳಿಯ ಜನರ ಕೌತುಕಕ್ಕೆ ಕಾರಣಳಾಗಿರುತ್ತಾಳೆ. ಮೊದಮೊದಲು ಅವಳು ತನ್ನ ಗಂಡನನ್ನು ಪೂಜಾರಿಕೆ ಮತ್ತು ಬೇಸಾಯದ ಕೆಲಸಗಳನ್ನು ಬೇರೆಯವರಿಗೆ ವಹಿಸಿ ತನ್ನ ಬದುಕನ್ನು ಬದಲಾಯಿಸಿಕೊಳ್ಳಲು ಒತ್ತಾಯಿಸಿ ಆ ಪ್ರಯತ್ನದಲ್ಲಿ ಸೋಲುತ್ತಾಳೆ.

ಎಂಬತ್ತರ ದಶಕದ ಉತ್ತರಾರ್ಧದಲ್ಲಿ ಗ್ರಾಮೀಣ ಮಂತ್ರಿಯಾಗಿದ್ದ ನಜೀರ್‌ಸಾಬ್ ಅವರು ಜಾರಿಗೆ ತಂದ ಜಿಲ್ಲಾ ಮತ್ತು ಮಂಡಲ್ ಪಂಚಾಯತ್ ವ್ಯವಸ್ಥೆ ಸೀತಾಲಕ್ಷ್ಮಿಯ ಬದುಕನ್ನು ಬದಲಿಸುತ್ತದೆ. ಹಳ್ಳಿಗೆ ಬಂದ ಸರ್ಕಾರಿ ಅಧಿಕಾರಿಗಳೊಡನೆ ಧೈರ್ಯವಾಗಿ ವ್ಯವಹರಿಸುತ್ತಿದ್ದ ಅವಳನ್ನು ಊರಿನ ಜನರು ಮಂಡಲ್ ಪಂಚಾಯ್ತಿಯ ಚುನಾವಣೆಗೆ ನಿಲ್ಲಿಸಿ ಗೆಲ್ಲಿಸುತ್ತಾರೆ. ತದನಂತರ ಅವಳು ಸಾರ್ವಜನಿಕ ಕೆಲಸಗಳಲ್ಲಿ ಹೆಚ್ಚಿನ ಸಮಯ ವ್ಯಯಿಸಲು ಪ್ರಾರಂಭಿಸಿ ತನ್ನ ಪ್ರಭಾವವನ್ನು ಬೆಳೆಸಿಕೊಳ್ಳುತ್ತಾಳೆ. ಸರ್ಕಾರಿ ಅಧಿಕಾರಿಗಳ ಮೆಚ್ಚುಗೆಯನ್ನೂ ಪಡೆಯುತ್ತಾಳೆ. ಆದರೆ ಇದ್ಯಾವುದೂ ಅವಳ ಗಂಡನನ್ನು ಪ್ರಭಾವಿಸುವುದಿಲ್ಲ. ಒಮ್ಮೆ ಅವಳು ಶಸ್ತ್ರಚಿಕಿತ್ಸೆಗಾಗಿ ನಗರದ ಆಸ್ಪತ್ರೆಗೆ ಸೇರಿದಾಗ ಅವರಿಬ್ಬರು ಹತ್ತಿರ ಬರುವ ಸನ್ನಿವೇಶ ಒದಗುವ ಹಂತದಲ್ಲಿ ಕತೆ ಕೊನೆಗೊಳ್ಳುತ್ತದೆ. ಈ ಕತೆಯಲ್ಲಿ ಸೀತಾಲಕ್ಷ್ಮಿಯ ವ್ಯಕ್ತಿತ್ವದ ಚಿತ್ರಣ, ಅವಳ ನಗರವಾಸಿ ನಡವಳಿಕೆಗಳು ಹಳ್ಳಿಯಲ್ಲಿ ಮೂಡಿಸುವ ಸಂಚಲನ, ಅವಳ ವ್ಯವಹಾರ ಕುಶಲತೆ ಮುಂತಾದ ವಿಷಯಗಳನ್ನು ಬಹಳ ಸ್ವಾರಸ್ಯಕರವಾಗಿ ಚಿತ್ರವತ್ತಾಗಿ ನಿರೂಪಿಸಲಾಗಿದೆ. ಕತೆಯ ನಿರೂಪಣೆ ತೊಂಡಿ (ಮೌಖಿಕ) ಸಂಪ್ರದಾಯಕ್ಕೆ ಹತ್ತಿರವಾಗಿದ್ದು ಶಿಷ್ಟವರ್ಗದ ಭಾಷೆಯಲ್ಲೂ ಆಕರ್ಷಕವಾದ ಲಯ ಮತ್ತು ಗತಿಯನ್ನು ಸಾಧಿಸಬಹುದು ಎಂಬುದಕ್ಕೆ ಒಂದು ಒಳ್ಳೆಯ ಉದಾಹರಣೆಯಾಗಿದೆ.

'ಹೆಗ್ಗುರುತು' ಸಂಕಲನದಲ್ಲಿರುವ 'ಓಬಳಯ್ಯನ ಸುತ್ತಮುತ್ತ' ಎಂಬ ಕತೆಯ ಕೇಂದ್ರದಲ್ಲಿರುವ ಓಬಳಯ್ಯ ಬೆಂಗಳೂರಿನ ಹೊರವಲಯದಲ್ಲಿ ಆಫೀಸ್ ಕಛೇರಿಗಳೇ ಹೆಚ್ಚಾಗಿರುವ ಪ್ರದೇಶದಲ್ಲಿ ಫುಟ್‌ಪಾತ್‌ನಲ್ಲಿ ನಿಂತು ಗುಟ್ಕಾ, ಸಿಗರೇಟು, ಟೀ ಮತ್ತು ಬಿಸ್ಕತ್‌ಗಳನ್ನು ಮಾರಾಟ ಮಾಡಿ ಬದುಕುತ್ತಿರುವವನು. ಬೆಂಗಳೂರಿನಲ್ಲಿ, ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ ವಿದೇಶಿ ಬಂಡವಾಳ ಹೂಡಿಕೆಯ ವಿರುದ್ಧ ಬಂದ್ ನಡೆದಾಗ, ಸಾರ್ವಜನಿಕ ಸ್ಥಳಗಳಲ್ಲಿ ಈ ವಿಷಯದ ಬಗ್ಗೆ ಜನರಲ್ಲಿ ನಡೆಯುವ ಚರ್ಚೆಯನ್ನು ಮೌನವಾಗಿ ಕೇಳಿಸಿಕೊಳ್ಳುವ ಓಬಳಯ್ಯ ಆ ದಿನ ಸಂಜೆ ಸಭಾಂಗಣವೊಂದರಲ್ಲಿ

ನಡೆದ ಭಾಷಣಗಳನ್ನು ಕೇಳಿಸಿಕೊಳ್ಳುತ್ತಾನೆ. ಅಲ್ಲೇ ವಿದೇಶೀಯರು ಸಂಘಟಿತ ಚಿಲ್ಲರೆ ವ್ಯಾಪಾರದ ಸ್ವರೂಪದ ಬಗ್ಗೆ ತೋರಿಸುವ ಸಾಕ್ಷ್ಯಚಿತ್ರವನ್ನೂ ನೋಡುತ್ತಾನೆ.

ಅವನು ವ್ಯಾಪಾರ ನಡೆಸುತ್ತಿರುವ ಜಾಗದಲ್ಲಿ ಒಂದು ದರ್ಶಿನಿ ಹೋಟೆಲ್ ಪ್ರಾರಂಭವಾಗಿ ಅದರ ಮಾಲೀಕ ಇವನನ್ನು ಮತ್ತು ಇವನಂತಹ ಇತರ ವ್ಯಾಪಾರಿಗಳನ್ನು ಪೊಲೀಸ ರ ಮೂಲಕ ಎತ್ತಂಗಡಿ ಮಾಡಲು ಪ್ರಯತ್ನಿಸಿ ವಿಫಲನಾಗುತ್ತಾನೆ. ಆ ದರ್ಶಿನಿ ಹೋಟೆಲಿನಿಂದಾಗಿ ಇವನ ಗ್ರಾಹಕರೇನು ಕಡಿಮೆಯಾಗುವುದಿಲ್ಲ. ಅವನು ನೆಮ್ಮದಿಯಿಂದಿರುತ್ತಾನೆ.

ಆದರೆ ಅಮೇರಿಕಾದ ಬಂಡವಾಳಿಗರು ಪರೋಕ್ಷವಾಗಿ ಅವನ ಕೌಟುಂಬಿಕ ಬದುಕಿನಲ್ಲಿ ಬಿರುಕು ತಂದಿದ್ದಾರೆ. ಅದು ಆದದ್ದು ಇಂಜಿನಿಯರಿಂಗ್ ಶಿಕ್ಷಣ ಪಡೆದು ಅಮೇರಿಕಾದಲ್ಲಿ ಕೆಲಸ ಪಡೆದು ಅಲ್ಲಿ ತಂದೆತಾಯಿಗಳಿಗೆ ತಿಳಿಸದೆ ಪಂಜಾಬಿ ಯುವತಿಯನ್ನು ಮದುವೆಯಾಗಿ ಅವಳನ್ನು ಬೆಂಗಳೂರಿಗೆ ಕರೆದುಕೊಂಡು ಬಂದು ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿ ಮನೆಗೆ ಕರೆದುಕೊಂಡು ಬಂದ ಅವನ ಮಗ ರಮೇಶನಿಂದಾಗಿ. ಈ ರಮೇಶನನ್ನು ಇಂಜಿನಿಯರಿಂಗ್ ಓದಲು ಪ್ರೇರೇಪಣೆ ನೀಡಿದವನು ಅವರ ವಠಾರದ ಮನೆಯ ಹತ್ತಿರ ವಾಸವಾಗಿದ್ದ ಬ್ಯಾಂಕ್ ಅಧಿಕಾರಿ ಹಾಗೂ ಕಾರ್ಮಿಕ ನಾಯಕ ದಿವಾಕರ ಸ್ವಾಮಿ. ''ಏನೇ ಆದರೂ ರಮೇಶನಿಗೆ ಇಂಜಿನಿಯರಿಂಗ್ ಪ್ರವೇಶ ಪರೀಕ್ಷೆಗಳನ್ನು ಬರೆಸಿ ಯಲಹಂಕದ ಕಾಲೇಜಿನಲ್ಲಿ ಸೀಟು ಸಿಗುವಂತೆ ಚೆನ್ನಾಗಿ ಕುಮ್ಮಕ್ಕು ಕೊಟ್ಟವನು ಸ್ವಾಮಿಯೇ. ಓಬಳಯ್ಯ ಒಂದೆರಡು ಸಲ ತಮಾಷೆಗಾಗಿಯೇ ಕೇಳಿದ್ದ. ಯಾವಾಗೆಂದರೆ ಆವಾಗ, ಎಂಜಿನಿಯರ್‌ಗಳನ್ನೆಲ್ಲ ಕೂಲಿಕಾರರು ಎಂದು ಬಯ್ಯುತ್ತೀರಿ. ಅಮೇರಿಕಾದ ಕೂಲಿಗಳು ಎಂದೆಲ್ಲ ತಮಾಷೆ ಮಾಡುತ್ತೀರಿ, ಈಗ ನೋಡಿದರೆ ರಮೇಶನಂತವರು ಎಂಜಿನಿಯರಿಂಗ್ ಓದಬೇಕೆಂದು ಆಸೆಪಡುತ್ತೀರಿ. ಸ್ವಾಮಿ ಗಂಭೀರವಾಗಿಯೇ ಉತ್ತರಿಸಿದ್ದ. ಇದೆಲ್ಲ ರಮೇಶನ ಆಸೆಯೆಂದು, ಓಬಳಯ್ಯನಂತಹ ಹಿನ್ನೆಲೆಯಿಂದ ಬಂದವರು, ರಮೇಶನಂಥವರು ಇಂತಹ ಓದು ಕೆಲಸಗಳನ್ನು ಬಯಸುವುದು, ಅಮೇರಿಕಾಕ್ಕೂ ಹೋಗುವುದು ತಪ್ಪೇನಲ್ಲವೆಂದು ಸಮಾಧಾನ ಹೇಳಿದಾಗ ಮನುಷ್ಯ ಸ್ವಲ್ಪ ಎಡಬಿಡಂಗಿಯೆಂದು ಓಬಳಯ್ಯನಿಗೆ ಅನಿಸಿತ್ತು'' (ಹೆಗ್ಗುರುತು, ಪುಟ 94).

ಬೆಂಗಳೂರು ಬಂದ್ ನಡೆದ ದಿನ ಓಬಳಯ್ಯನ ಮನಸ್ಸು ಈ ದಿವಾಕರ ಸ್ವಾಮಿಗಾಗಿ ತಹತಹಿಸುವುದನ್ನು ಹಾಗೂ ಕತೆಯ ಕೊನೆಯಲ್ಲಿ ಓಬಳಯ್ಯನ ಮನಸ್ಸಿನಲ್ಲಿ ಆವಾಹನೆಯಾಗಿ ಬಂದ ಅವನು ಓಬಳಯ್ಯನಿಗೆ ಸಾಂತ್ವನ ನೀಡುವುದನ್ನು ಕಾಣಿಸಲಾಗಿದೆ. ಮುಕ್ತ ಆರ್ಥಿಕ ನೀತಿಯ ಈ ದಿನಗಳಲ್ಲಿ ಭಾರತದ ವಿವಿಧ ವರ್ಗದ ಜನರ ಬದುಕು ಎದುರಿಸುತ್ತಿರುವ ಸಮಸ್ಯೆಗಳನ್ನು ಮತ್ತು ಪಡೆದಿರುವ ಅವಕಾಶಗಳೆರಡನ್ನೂ ಈ ಕತೆ ಓದುಗನ ಮುಂದೆ ತೆರೆದಿಡುತ್ತದೆ.

'ಮಾರ್ಕ್ ಟುಲಿ ಹೇಳಬೇಕಾಗಿ ಬಂದ ಶ್ರೀ (ದಲಿತ) ರಾಮಚಂದ್ ಕತೆ'ಯನ್ನು ಒಂದು 'ವಿಚಾರ ಪ್ರಧಾನ ಕತೆ' ಎಂದು ಗುರುತಿಸಬಹುದು. ಒಂದು ಸಾಮಾಜಿಕ ವಿದ್ಯಮಾನದ ಸುತ್ತಲೂ ನಡೆಯುವ ಘಟನೆಗಳನ್ನು ನಿರೂಪಿಸಿ, ಈ ವಿದ್ಯಮಾನದ ಮತ್ತು ಅದಕ್ಕೆ ಪ್ರತಿಕ್ರಿಯೆಯಾಗಿ ನಡೆದ ಘಟನೆಗಳ ಹಿಂದಿನ ಸಾಮಾಜಿಕ ಹಿತಾಸಕ್ತಿಗಳನ್ನು ಗುರುತಿಸಿ ಅವುಗಳ ನೆಲೆ, ಹಿನ್ನೆಲೆಯ ಬಗ್ಗೆ ಚರ್ಚೆ ವಾಗ್ವಾದಗಳು ಹಾಗೂ ಸಾಕ್ಷ್ಯಾಧಾರಗಳ ಮಂಡನೆ ಇತ್ಯಾದಿಗಳಿಂದ ಈ ಕತೆಯನ್ನು ರೂಪಿಸಲಾಗಿದೆ. ಸಾಮಾಜಿಕ ಬದಲಾವಣೆಗಳ ಹಿಂದೆ ಇರುವ ವೈವಿಧ್ಯಮಯವಾದ ಸಾಮಾಜಿಕ ನೆಲೆಗಳನ್ನು ಈ ಕತೆ ಪರಿಣಾಮಕಾರಿಯಾಗಿ ನಿರೂಪಿಸುತ್ತದೆ. ಈ ಕತೆಯಲ್ಲಿ ಟುಲಿ ಹೇಳುವ ದಲಿತ ರಾಮಚಂದ್‌ನ ಕತೆಯನ್ನು ಮಾತ್ರ ನಿರೂಪಿಸಿದ್ದರೆ ಅದರಿಂದ ನಮ್ಮ ಸಮಾಜದಲ್ಲಿ ದಲಿತರಿಗೆ ತಮ್ಮ ಬದುಕನ್ನು ರೂಪಿಸಿಕೊಳ್ಳುವ ಅನೇಕ ಅವಕಾಶಗಳಿವೆ ಎಂಬ 'ಫೀಲ್‌ಗುಡ್' ಸಂದೇಶ ಹೊರಹೊಮ್ಮುತ್ತಿತ್ತು.

ಆದರೆ ಸತ್ಯನಾರಾಯಣ ಅವರ ಅನೇಕ ಕತೆಗಳಲ್ಲಿನಂತೆ ಇಲ್ಲಿ ಡಿ.ಸಿ. ಭರತ್‌ಕುಮಾರ್ ಅವರು ಹರಿಜನ ಯುವಕನನ್ನು ದೇವಸ್ಥಾನದ ಪೂಜಾರಿಯಾಗಿ ನೇಮಿಸಿದಾಗ ಉಂಟಾಗುವ ಸಾಮಾಜಿಕ ಸಂಚಲನ ಹಾಗೂ ಕೊನೆಗೆ ಜಿಲ್ಲಾಧಿಕಾರಿಯವರು ಆ ದಲಿತನನ್ನು ಪೂಜಾರಿಯಾಗಿ ನೇಮಿಸಿದ್ದು ಅವನಿಗೆ ಒಂದು ಕೆಲಸ ಕೊಡಿಸುವ ಉದ್ದೇಶದಿಂದ ಮಾತ್ರ ಎಂಬ ವ್ಯಾಖ್ಯಾನಕ್ಕೆ ಒಳಗಾಗಿ ಅವನಿಗೆ ಖಾಸಗಿ ಸಂಸ್ಥೆಯಲ್ಲಿ ಕೆಲಸ ಕೊಡಿಸುವಲ್ಲಿ ಕೊನೆಗೊಳ್ಳುತ್ತದೆ.

ನಮ್ಮಲ್ಲಿ ಕಳೆದ ಎರಡು ದಶಕಗಳಲ್ಲಿ, ಎಪ್ಪತ್ತರ ದಶಕದಲ್ಲಿ ನಡೆದ ಚಳುವಳಿಗಳ ಬಗ್ಗೆ ಸ್ವಲ್ಪ ಅತಿ ಎನ್ನುವಷ್ಟು ಚರ್ಚೆ ಮತ್ತು ಪ್ರಚಾರಗಳು ನಡೆದಿವೆ. ಸತ್ಯನಾರಾಯಣ ಅವರ 'ಲೋಕನಾಯಕರ ಮೇಲುಕೋಟೆ ಪುರಾಣ' ಎಂಬ ಕತೆಯಲ್ಲಿ ಜಯಪ್ರಕಾಶ ನಾರಾಯಣ ಅವರ ನಾಯಕತ್ವದಲ್ಲಿ ನಡೆದ ನವನಿರ್ಮಾಣ ಆಂದೋಲನದ ಹಿನ್ನೆಲೆಯಲ್ಲಿ ಸ್ವತಂತ್ರ ಭಾರತದ ಮೊದಲ ಕಾಲು ಶತಮಾನದಲ್ಲಿ ಈ ದೇಶದ ಜನಸಾಮಾನ್ಯರ ಬದುಕನ್ನು ಬದಲಿಸಲು ನಮ್ಮ ನಾಯಕಗಣ ಮತ್ತು ಅವರ ಅನುಯಾಯಿಗಳು ನಡೆಸಿದ ಕಾರ್ಯಕ್ರಮಗಳ ತೀಕ್ಷ್ಣವಾದ ವಿಮರ್ಶೆ ಇದೆ. ಈ ವಿಮರ್ಶೆಯನ್ನು ನಡೆಸುವವರು ಒಂದು ಆಶ್ರಮ ಶಾಲೆ ನಡೆಸುತ್ತಿರುವ ಗಾಂಧಿವಾದಿ ಹಾಗೂ ಅಲ್ಲಿ ಕೆಲವು ವರ್ಷಗಳ ಕಾಲ ಉತ್ಸಾಹ ಹಾಗೂ ದಕ್ಷತೆಯಿಂದ ಅಧ್ಯಾಪಕಿಯಾಗಿ ದುಡಿದ ಲಲಿತಾ ಎಂಬ ಯುವತಿ.

ನಮ್ಮ ರಾಜ್ಯದಲ್ಲಿ ಎಪ್ಪತ್ತರ ದಶಕದಲ್ಲಿ ಮುಖ್ಯಮಂತ್ರಿಯಾಗಿದ್ದ ದೇವರಾಜ ಅರಸರು ನಮ್ಮ ರಾಜಕೀಯ ಹಾಗೂ ಇತರ ಅಧಿಕಾರ ಕೇಂದ್ರಗಳಲ್ಲಿ ಅದುವರೆಗೆ ಅಂಚಿನಲ್ಲೇ ಉಳಿದಿದ್ದ ದುರ್ಬಲ ವರ್ಗದವರನ್ನು ಅಧಿಕಾರ ಸ್ಥಾನಗಳಲ್ಲಿ ಪ್ರತಿಷ್ಠಾಪಿಸಿ ಸಾಮಾಜಿಕ ಪರಿವರ್ತನೆ ತಂದರು ಎಂಬ ಸಂಗತಿ ವ್ಯಾಪಕವಾಗಿ ಪ್ರಚಾರಪಡೆದಿದೆ. ಸತ್ಯನಾರಾಯಣ ಅವರ 'ಸಬ್-ಸಬಾಲ್ಟ್ರನ್' ('ನಕ್ಸಲ್ ವರಸೆ' ಸಂಕಲನದಲ್ಲಿದೆ) ಕತೆಯಲ್ಲಿ ಹೀಗೆ ಅರಸು ಅವರ ಕೃಪಾಕಟಾಕ್ಷಕ್ಕೆ ಒಳಗಾದ ದಲಿತ ವ್ಯಕ್ತಿಯ ಬದುಕನ್ನು ಚಿತ್ರಿಸಲಾಗಿದೆ.

ಇಲ್ಲಿ ಹೆಸರಿಸಿರುವ ಈ ಐದು ಕತೆಗಳಂತಹ ಇನ್ನೂ ಹಲವು ಕತೆಗಳನ್ನು ಸತ್ಯನಾರಾಯಣ ಅವರು ಬರೆದಿದ್ದಾರೆ. ಅವುಗಳನ್ನು ಓದಿದಾಗ ನಮಗೆ ಅವರು ಕನ್ನಡ ಸಣ್ಣಕತೆಯ ವ್ಯಾಪ್ತಿಯನ್ನು ಹಿಗ್ಗಿಸಿದ್ದಾರೆ ಎಂದು ಅನಿಸುತ್ತದೆ. ಈ ಲೇಖನದಲ್ಲಿ ಸತ್ಯನಾರಾಯಣ ಅವರ ಕಥಾಸಾಹಿತ್ಯದ ವೈವಿಧ್ಯವನ್ನು ಗುರುತಿಸಲು ಸಾಧ್ಯವಾಗಿಲ್ಲ. 'ಗಾಂಧಿ ಬಜಾರ್' ಮಾಸಿಕದ ಜುಲೈ 2010ರ ಸಂಚಿಕೆಯಲ್ಲಿ ಕೆ. ರಘುನಾಥ್ ಅವರು ಬರೆದಿರುವ 'ಕೆ. ಸತ್ಯನಾರಾಯಣರ ಕಥಾಲೋಕ' ಎಂಬ ಲೇಖನದಲ್ಲಿ ಸತ್ಯನಾರಾಯಣ ಅವರ ಕಥೆಗಳಲ್ಲಿನ ವೈವಿಧ್ಯವನ್ನು ಸಾಕಷ್ಟು ಪರಿಣಾಮಕಾರಿಯಾಗಿ ಗುರುತಿಸಲಾಗಿದೆ.

ನಮ್ಮಲ್ಲಿ ಸಣ್ಣಕತೆಗಳ ಅಧ್ಯಯನಕಾರರಲ್ಲಿ ಪ್ರೊ. ಗಿರಡ್ಡಿ ಗೋವಿಂದರಾಜರು ಪ್ರಮುಖರು. ಅವರು ತಮ್ಮ 'ಸಣ್ಣಕತೆಯ ಸ್ವರೂಪ' ಎಂಬ ಲೇಖನದಲ್ಲಿ ಬ್ರಿಟಿಷ್ ವಿಮರ್ಶಕ ಬರ್ನಾರ್ಡ್ ಬರ್ಗೊಂಜಿ ಅವರನ್ನು ಅನುಸರಿಸಿ ಹೀಗೆ ಹೇಳಿದ್ದಾರೆ : ''ಸಣ್ಣಕತೆಯ ಪಾತ್ರಗಳು ಬದುಕಿನ ಬಲಿಪಶುಗಳು, ಅವಮಾನಿತರು, ನೊಂದವರು, ಹತಾಶರು ಮತ್ತು ಅನಾಥರು... ಆರೋಗ್ಯದ, ಜೀವನೋತ್ಸಾಹದ, ಬದುಕನ್ನು ಗೆಲ್ಲುವ ಛಲದ ಪಾತ್ರಗಳು ಸಣ್ಣಕತೆಗಳಲ್ಲಿ ಅಪರೂಪ'' (ಸಮಗ್ರ ವಿಮರ್ಶೆ, ಬೆಂಗಳೂರು, 2001, ಪುಟ 177). ಸತ್ಯನಾರಾಯಣ ಅವರು ಇದುವರೆಗೆ ಬರೆದಿರುವ ಕತೆಗಳಲ್ಲಿ ಗಮನಾರ್ಹ ಸಂಖ್ಯೆಯಲ್ಲಿ ಈ ವ್ಯಾಖ್ಯಾನವನ್ನು ತಪ್ಪು ಎಂದು ತೋರಿಸುವಂತಹ ಕತೆಗಳಿವೆ.

# ಹೆಗ್ಗುರುತು

**ಬಿ. ಜನಾರ್ದನ ಭಟ್**
'ಅಕ್ಷರ', ಬೆಳ್ಮಣ್ಣು, ಕಾರ್ಕಳ ತಾಲೂಕು, ಉಡುಪಿ

ಕೆ. ಸತ್ಯನಾರಾಯಣ ಕನ್ನಡದಲ್ಲಿ ಕಥನಕಲೆಯನ್ನು ಗಂಭೀರವಾಗಿ ತೆಗೆದುಕೊಂಡಿರುವ ಸಮಕಾಲೀನ ಲೇಖಕ. ಕನ್ನಡದ ಸಣ್ಣಕತೆಗಳ ಮುಂದಿನ ಪ್ರಾತಿನಿಧಿಕ ಸಂಕಲನಗಳು ಅವರ ಕತೆಗಳಿಲ್ಲದೆ ಹೋದರೆ ಅಪೂರ್ಣವಾಗುತ್ತವೆ. ತಮ್ಮ ಕತೆ ಹಾಗೂ ಕಾದಂಬರಿಗಳ ಮೂಲಕ ಅವರು ನಮ್ಮ ಕಾಲದ ಬದುಕನ್ನು ವಿಶಿಷ್ಟವಾಗಿ ಗ್ರಹಿಸುವ ಕೆಲಸವನ್ನು ಮಾಡುವುದಲ್ಲದೆ ಕಥನ ತಂತ್ರಗಳಲ್ಲಿಯೂ ಗಂಭೀರವಾದ ಪ್ರಯೋಗಗಳನ್ನು ಮಾಡುತ್ತಿದ್ದಾರೆ. ಅವರು ಮಾಸ್ತಿ ಮಾದರಿಯ ಕಥನವನ್ನು ಬಳಸಿದ್ದಾರೆ ಎಂದು ವಿಮರ್ಶಕರು ಗ್ರಹಿಸಿದ್ದಾರೆ. ಮಾಸ್ತಿಯವರು ಸತ್ಯನಾರಾಯಣರಿಗೆ ಪ್ರಿಯರಾದ ಲೇಖಕರು. ಹೆಗ್ಗುರುತು ಕಥಾಸಂಕಲನದಲ್ಲಿ ಮಾಸ್ತಿಗನ್ನಡಿ ಎಂಬ ಕತೆಯೂ ಇದೆ.

ಸತ್ಯನಾರಾಯಣರ ಕತೆಗಾರಿಕೆಯನ್ನು ಮಾಸ್ತಿಯವರಿಗೆ ಹೋಲಿಸಲು ಮುಖ್ಯ ಕಾರಣವೆಂದರೆ ಸತ್ಯನಾರಾಯಣರ ಕತೆಗಳಲ್ಲಿ ಒಬ್ಬ ನಿರೂಪಕ ತನ್ನ ಪರಿಚಯದ ಪರಿಧಿಯೊಳಗೆ ಬರುವ ವ್ಯಕ್ತಿಗಳ ಕತೆಗಳನ್ನು ನಿರೂಪಿಸುತ್ತಾ ಹೋಗುತ್ತಾನೆ. ಕೆಲವು ಕತೆಗಳಲ್ಲಿ ನಿರೂಪಕ ಒಬ್ಬ ಮುಖ್ಯ ಪಾತ್ರವಾಗಿಯೂ ಕತೆಯಲ್ಲಿ ಭಾಗವಹಿಸುತ್ತಾನೆ; ಇನ್ನು ಕೆಲವು ಕತೆಗಳಲ್ಲಿ ನಿರೂಪಕ ಪಾತ್ರವಾಗಿ ಬರುವುದಿಲ್ಲವಾದರೂ ಕತೆಯ ಬೆಳವಣಿಗೆಯನ್ನು ಗಮನಿಸಿ ನಮಗೆ ಹೇಳುವುದಕ್ಕೋಸ್ಕರವಾಗಿ ಹಲವಾರು ಸನ್ನಿವೇಶಗಳಲ್ಲಿ ಪ್ರವೇಶಪಡೆಯುತ್ತಾನೆ.

ಸತ್ಯನಾರಾಯಣರ ಕಥನ ವಿಧಾನ ಮಾಸ್ತಿಯವರದಲ್ಲ. ಮಾಸ್ತಿಯವರು ತಮ್ಮ ಕತೆಯ ಆಶಯವನ್ನು ಸರಳವಾಗಿ ಹಿಡಿದಿಡುತ್ತಾರೆ. ಓದುಗನಿಗೆ ಅರಿವಿನ ಆನಂದ ಉಂಟಾಗುತ್ತದೆ. ಸತ್ಯನಾರಾಯಣರು ತಮ್ಮ ಕತೆಯ ಆಶಯವನ್ನು ಉದ್ದೇಶಪೂರ್ವಕವಾಗಿ ಸಂಕೀರ್ಣಗೊಳಿಸುತ್ತಾರೆ. ಮಾಸ್ತಿಯವರ ಕೊನೆಯ ಕತೆ ಮಾಯಣ್ಣನ ಕನ್ನಡಿ ಮತ್ತು ಸತ್ಯನಾರಾಯಣರ ಮಾಸ್ತಿಗನ್ನಡಿ ಕತೆಗಳ ಹೋಲಿಕೆಯಿಂದ ಇದು ಸ್ಪಷ್ಟವಾಗುತ್ತದೆ. ಮಾಸ್ತಿಯವರ ಕತೆಯ ಮಾಯಣ್ಣನಲ್ಲಿರುವ ಒಂದು ಅಂಜನದ ಕನ್ನಡಿಯಲ್ಲಿ ಬದುಕಿನ ಗಹನವಾದ ಪ್ರಶ್ನೆಗಳನ್ನು ಸರಳವಾಗಿ ಅರ್ಥಮಾಡಿಸುವ ಶಕ್ತಿಯಿದೆ. ಅದು ಮಾಸ್ತಿಯವರ ಕಥನ ಕನ್ನಡಿಯೂ ಹೌದು. ಸತ್ಯನಾರಾಯಣ ಅದನ್ನು 'ಮಾಸ್ತಿಗನ್ನಡಿ ಮಾಡಿದಾಗ ಪ್ರತಿ ಮನೆಯ ಪ್ರತಿ ಕನ್ನಡಿಯೂ ಮಾಯಣ್ಣನ ಕನ್ನಡಿಯಾಗುತ್ತದೆ; ಆದರೆ ಅದನ್ನು ಗುರುತಿಸುವವರಿಲ್ಲ ಅಷ್ಟೆ. ಮತ್ತೆ ಭೂಲೋಕಕ್ಕೆ ಬರುವ ದಿವಂಗತ ಮಾಸ್ತಿಯವರು ದೊಂಬರ ಹುಡುಗಿಯ ಕಸೂತಿ ಲಂಗದಲ್ಲಿದ್ದ ನೂರಾರು ಕನ್ನಡಿಗಳನ್ನು ಕಂಡು ಉದ್ವೇಗದಿಂದ ಒಳಗಿನ ದೃಶ್ಯಾವಳಿಗಳನ್ನು ಮೊಗೆಯಲು ಪ್ರಾರಂಭಿಸುತ್ತಾರೆ.

ಅರ್ಥವೇನೆಂದರೆ ಸತ್ಯನಾರಾಯಣರು ಮಾಸ್ತಿಯವರ ಒಂದು ಕನ್ನಡಿಯ ಸರಳ ಗ್ರಹಿಕೆಯನ್ನು ನೂರಾರು ಕನ್ನಡಿಗಳ ಸಂಕೀರ್ಣ ಗ್ರಹಿಕೆಯತ್ತ ಒಯ್ಯಲು ಪ್ರಯತ್ನಿಸುತ್ತಿದ್ದಾರೆ! ಮಾಸ್ತಿಯವರ ಒಂದು ಕನ್ನಡಿ ಲೋಕೋತ್ತರವಾದ ಸಮಗ್ರ ದರ್ಶನವನ್ನು ನೀಡುವಂಥದ್ದು. ಸತ್ಯನಾರಾಯಣರ ಕನ್ನಡಿಗಳು ದಿವ್ಯಪ್ರಭೆಯನ್ನು ಕಳೆದುಕೊಂಡವುಗಳು, ಎಲ್ಲಿ ಬೇಕಾದರೂ ಸಿಗುವಂತಹವುಗಳು; ಒಂದಲ್ಲ – ನೂರಾರು ಸಣ್ಣಪುಟ್ಟ ಚಿತ್ರಗಳನ್ನು ಕಾಣಿಸುವಂಥವುಗಳು. ಮಾಸ್ತಿಯವರ ಕನ್ನಡಿ ಮನುಷ್ಯನ ಗುಣಶೀಲಗಳಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರ ತೋರಿಸುತ್ತದೆ; ಸತ್ಯನಾರಾಯಣರ ಕನ್ನಡಿ ಸಾಮಾಜಿಕ ಚಿತ್ರಗಳನ್ನು ತೋರಿಸುತ್ತದೆ.

ಸತ್ಯನಾರಾಯಣರ ಕತೆಗಳಲ್ಲಿ ನಮ್ಮ ಕಾಲದ ಅಂದರೆ ಆಧುನಿಕ ಬದುಕಿನ ಪ್ರಸ್ತುತ ಸನ್ನಿವೇಶಗಳಿರುತ್ತವೆ. ಸ್ವತಃ ನಿರೂಪಕನ ಪರಿಚಯದ ಪರಿಧಿಯೊಳಗೆ ಬರುವ ವ್ಯಕ್ತಿಗಳ ಕತೆಗಳು ಎನ್ನುವ ಸೂಚನೆಯಿಂದಲೇ ಇದು ಸ್ಪಷ್ಟವಾಗುತ್ತದೆ. ಸಾಹಿತಿಯ ಜವಾಬ್ದಾರಿಯಿರುವುದು ಪ್ರಸ್ತುತವನ್ನು ಪರಿಶೀಲಿಸುವುದರಲ್ಲಿ ಎಂದು ಸತ್ಯನಾರಾಯಣರು ನಂಬಿರುವುದು ಅವರ ಎಲ್ಲಾ ಕೃತಿಗಳಲ್ಲಿ ಸ್ಪಷ್ಟವಾಗುತ್ತದೆ. ಆಧುನಿಕ ಬದುಕನ್ನು ಎಲ್ಲಿ ಹಿಡಿಯಬೇಕು, ಹೇಗೆ ಗ್ರಹಿಸಬೇಕು ಎನ್ನುವುದರ ಹುಡುಕಾಟವೇ ಸತ್ಯನಾರಾಯಣರ ಸಾಹಿತ್ಯ ಯಾತ್ರೆಯ ಗುರಿ. ಈ ಕಥಾಸಂಕಲನವೂ ಅದೇ ಯಾತ್ರೆಯ ಒಂದು ಮಜಲು.

ಈ ಸಂಕಲನದಲ್ಲಿರುವ 10 ಕತೆಗಳು : ಪೂರ್ವನಾಮದ ವಲಸೆ, ಚಿಕ್ಕತಾಯಿ, ಡಾಕ್ಟರನ ಹುಚ್ಚುಮಗು, ಹೆಗ್ಗುರುತು, ಭವ–ರೋಗ–ವೈದ್ಯ, ಮಾಸ್ತಿಗನ್ನಡಿ, ಭ್ರಷ್ಟಾಚಾರದ (ನಾನ್ ಫಿಕ್ಷನ್), ಓಬಳಯ್ಯನ ಸುತ್ತಮುತ್ತ, ನಿಜ ಕವಲು, ಕೋಣ. ಒಂದೆರಡು ಕತೆಗಳನ್ನು ಮಾತ್ರ ಪರಿಶೀಲಿಸೋಣ.

ಪೂರ್ವನಾಮದ ವಲಸೆ ಕತೆಯಲ್ಲಿ ನಿರೂಪಕ ಮುಂಬಯಿಯಲ್ಲಿ ಉನ್ನತ ಉದ್ಯೋಗದಲ್ಲಿರುವವ, ತನ್ನಂತಹವರ ಕ್ಲಬ್ಬಿನಲ್ಲಿ ತನ್ನದೇ ಊರಾದ ಕೊಪ್ಪ (ಮಂಡ್ಯ ಜಿಲ್ಲೆ) ದ ಹೆಸರನ್ನು ತನ್ನ ಹೆಸರಿನ ಜೊತೆಗೆ ಹೊಂದಿರುವವನಾದ ಕೆ. ಎಂ. ಸ್ವಾಮಿ ಎಂಬವನ ಪೂರ್ವಾಪರವನ್ನು ತಿಳಿಯುವ ಪ್ರಯತ್ನ ಮಾಡುತ್ತಾನೆ. ಮೊದಲು ತನಗೆ ಕೊಪ್ಪದ ಯಾರೂ ಪರಿಚಯವಿಲ್ಲ, ನಿರೂಪಕನ ಜತೆಗೂ ಆತ್ಮೀಯತೆ ಬೆಳೆಸುವುದು ಇಷ್ಟವಿಲ್ಲ ಎಂದು ಬಿಗುಮಾನದಿಂದಿದ್ದ ಸ್ವಾಮಿ ನಿಧಾನವಾಗಿ ತನ್ನ ಬಾಲ್ಯವನ್ನು, ತನ್ನ ಆದಿಕರ್ನಾಟಕ ಜಾತಿಯ ಕಾರಣವಾಗಿ ತಾನು ಅನುಭವಿಸಿದ್ದ ಸಂಕಟಗಳನ್ನು, ಅದನ್ನು ಮೀರಲು ತಾನು ಮಾಡಿದ ಪ್ರಯತ್ನಗಳನ್ನು ಕಂತುಕಂತಾಗಿ ಬಿಚ್ಚಿಡುತ್ತಾನೆ.

ನಿರೂಪಕ ಈ ನಡುವೆ ಊರಿಗೆ ಹೋದಾಗ ಸ್ವಾಮಿಯ ಆದಿಕರ್ನಾಟಕ ಸಮುದಾಯದವರು ಉತ್ತಮ ಕೆಲಸಗಳನ್ನು ಪಡೆದು ಊರು ಬಿಟ್ಟುಹೋದರೂ, ತಮ್ಮ ಆಸ್ತಿಗಳನ್ನು ರಿಯಲ್ ಎಸ್ಟೇಟ್‌ನವರಿಗೆ ಮಾರದೆ ನಡೆಸುತ್ತಿದ್ದ ವಿಶಿಷ್ಟ ಪ್ರತಿಭಟನೆಯ ಸುದ್ದಿ ಸಿಗುತ್ತದೆ. ಈ ಎರಡು ಆಯಾಮಗಳ (ಸ್ವಾಮಿಯ ವೈಯಕ್ತಿಕ ವಿಚಾರ ಮತ್ತು ಅವನ ಸಮುದಾಯದವರ ಸಾಮುದಾಯಿಕ ನಿಲುವುಗಳು) ಮೂಲಕ ನಮಗೆ ಕೆ. ಎಂ. ಸ್ವಾಮಿಯ ಅಂತರಂಗದ ತೊಳಲಾಟ ಮತ್ತು ಬದುಕಿನ ಹೋರಾಟವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ನಿರೂಪಕನ ಹೆಂಡತಿ ಮತ್ತು ಊರಿನ ಸಾಮಾನ್ಯ ಪ್ರಜೆಯೊಬ್ಬರ ಮಾತುಗಳು ಸಾರ್ವಜನಿಕ ಅಭಿಪ್ರಾಯಗಳನ್ನು ಪ್ರತಿನಿಧಿಸುತ್ತವೆ.

ಕತೆಯ ಮೂಲಕ ಲೇಖಕರು ಕಾಣಿಸುವ ದರ್ಶನವೇ ಕತೆಯ ಮೂರನೆಯ ಆಯಾಮ. ಕೊನೆಯಲ್ಲಿ ನಿರೂಪಕ ಸ್ವಾಮಿಯ ಮುಂಬಯಿಯ ಹೊಸ ಫ್ಲ್ಯಾಟಿಗೆ ಭೇಟಿನೀಡುತ್ತಾನೆ. ಇಕ್ಕಟ್ಟಾದ ನಗರದ ವಾಹನಗಿಜಿಗಿಜಿಯ ರಸ್ತೆಯಲ್ಲಿ ಹಾದು ಬಂದು ಸ್ವಾಮಿಯ ಆಧುನಿಕ ಮನೆ ಹೊಕ್ಕರೆ

ಆಕಾಶಕ್ಕೆ ತೆರೆದುಕೊಳ್ಳುವ ಬಾಲ್ಕನಿ. ಇದರಿಂದಾಗಿ ಸ್ವಾಮಿಗೆ ತನ್ನ ಬೇರನ್ನು ಮರೆಯಲು ಸಾಧ್ಯವಾಗುತ್ತದೆ. ಸ್ವಾಮಿಯ ಈಗಿನ ಮನೆ ಮತ್ತು ಪೂರ್ವನಾಮದ ಸ್ಮೃತಿಯಾಗಲಿ ಹಂಗಾಗಲಿ ಇಲ್ಲದ ಅವನ ಮಗಳು ಸ್ವಾಮಿಯಂಥವರ ಭವಿಷ್ಯದ ಸ್ಥಿತ್ಯಂತರವನ್ನು ಸೂಚಿಸುವ ಸಂಗತಿಗಳಾಗುತ್ತವೆ.

ಕೊನೆಯ ಭಾಗದಲ್ಲಿ ಸ್ವಾಮಿ ಹೇಳುವ ಮಾತುಗಳು: ಬಾಲ್ಕನಿ ನೋಡಬನ್ನಿ. ಎಷ್ಟೊಂದು ವಿಶಾಲವಾಗಿದೆ. ಹೋಗಿ ನಿಂತರೆ ಎಲ್ಲವೂ ಮರೆತುಹೋಗುತ್ತೆ.... ಬಾಲ್ಕನಿಯಲ್ಲಿ ನಿಂತರೆ ವಿಶಾಲ ವಾದ ಆಕಾಶ ಕೈಗೆ ಸಿಗುವ ಹಾಗಿರುತ್ತದಲ್ಲ, ಈ ರೀತಿ ನಮ್ಮ ಕೈಗೇ ಸಿಗುವ ಆಕಾಶವನ್ನು ಬೇಕೆಂದಾಗ ಬೇಕೆಂದಷ್ಟು ನೋಡಲು ಸಾಧ್ಯವಾಗುವುದು ಕೂಡ ಒಂದು ನಿರಂತರ ಬೋನಸ್... ಅಲ್ಲವೇ? ಇದು ಕತೆಯ ಆಶಯವನ್ನು ರೂಪಕವಾಗಿ ಗ್ರಹಿಸುವ ಲೇಖಕರ ತಂತ್ರ. ಕೆ. ಸತ್ಯನಾರಾಯಣ ರೂಪಕಗಳನ್ನು ಸೃಷ್ಟಿಸುವ ಮೂಲಕ ತಮ್ಮಕತೆಗಳನ್ನು ಗ್ರಹಿಸಬೇಕಾದ ನೆಲೆಗಳನ್ನು ಸೂಚಿಸುತ್ತಾರೆ. ಸ್ವಾಮಿಯ ಮುಂಬಯಿಯ ಫ್ಲ್ಯಾಟ್ ಮತ್ತು ಅದರ ವಿಶಾಲವಾದ ಬಾಲ್ಕನಿ ಒಂದು ರೂಪಕ. ದಲಿತರ ಬಿಡುಗಡೆಯ ಒಂದು ಸಾಧ್ಯತೆಯನ್ನು ಇದು ವಾಸ್ತವವಾಗಿಯೂ ರೂಪಕವಾಗಿಯೂ ಗ್ರಹಿಸುವ ಕಾರಣ ಒಂದು ಅದ್ಭುತವಾದ ಕಥನಕ್ರಮವನ್ನು ಈ ಕತೆಯಲ್ಲಿ ಕಾಣಬಹುದು.

ಇಂತಹ ಕೆಲವು ಸಂದರ್ಭಗಳಲ್ಲಿ ರೂಪಕವೂ ವಾಚ್ಯವಾಗಿಬಿಡುತ್ತದೇನೋ ಅನ್ನುವ ಅನುಮಾನ ನನಗೆ.

ಮಾಸ್ತಿಗನ್ನಡಿ ಕತೆ ಇದಕ್ಕೊಂದು ಉದಾಹರಣೆಯೆನ್ನಬಹುದು.

ಭ್ರಷ್ಟಾಚಾರದ (ನಾನ್ ಫಿಕ್ಷನ್) (ಇದರ ಶೀರ್ಷಿಕೆಯಲ್ಲಿ ಬರುವ ಆವರಣ ಚಿಹ್ನೆ ಮುದ್ರಣ ದೋಷವಾಗಿರಬೇಕು ಅಥವಾ ನಾನ್ ಫಿಕ್ಷನನ್ನು ಅಭಿನಯಿಸಿ ತೋರಿಸುವ ತಂತ್ರವಿರಬಹುದು) ಎಂಬ ಕಥನದಲ್ಲಿ ಶೀರ್ಷಿಕೆಯೇ ಹೇಳುವಂತೆ ಆಧುನಿಕ ಸಮಾಜದ ಒಂದು ಸಮಸ್ಯೆಯಾದ ಭ್ರಷ್ಟಾಚಾರದ ಚಿತ್ರಗಳಿವೆ. ಭ್ರಷ್ಟಾಚಾರ ಎಷ್ಟು ಸೂಕ್ಷ್ಮವಾದ ಸ್ತರಗಳಲ್ಲಿ, ಆಯಾಮಗಳಲ್ಲಿ ಹಬ್ಬಿರಬಹುದು ಎನ್ನುವುದನ್ನು ಕಾಣಿಸುವ ಮೂರು ಕಥಾನಕಗಳು ಈ ಕತೆಯಲ್ಲಿವೆ. ಕತೆಯನ್ನು ಪೋಣಿಸಿರುವುದು ಈ ಆಶಯವೇ ಹೊರತು ಪಾತ್ರಗಳಲ್ಲ.

ಈ ರೀತಿ ಆಧುನಿಕ ಸಮಾಜದ ಹಳವಂಡಗಳನ್ನು ಪ್ರಜ್ಞಾಪೂರ್ವಕವಾಗಿ ಕಥನಕ್ಕೆ ಅಳವಡಿಸು ವಾಗ ಸತ್ಯನಾರಾಯಣರ ಕೆಲವು ಕತೆಗಳು ನಾನ್ ಫಿಕ್ಷನ್‌ಗಳಾಗುವತ್ತ ಚಲಿಸುತ್ತವೆ. ಅವು ಯು. ಆರ್. ಅನಂತಮೂರ್ತಿಯವರ ಅಮೇರಿಕದಲ್ಲಿ ವಿದ್ಯಾರಣ್ಯ ಮಾದರಿಯ ಅನುಭವಕಥನ ಗಳಾಗುತ್ತವೆನ್ನುವುದನ್ನು ಗಮನಿಸಬೇಕು. ಸಂಕಲನದ ಶೀರ್ಷಿಕೆಯೂ ಆಗಿರುವ ಹೆಗ್ಗುರುತು ಕತೆಯೂ ಇದೇ ಮಾದರಿಯದು. ಇದನ್ನೂ ನಾನ್‌ಫಿಕ್ಷನ್ ಅಥವಾ ಅನುಭವಕಥನ ಎಂದು ಕರೆಯಬಹುದು. ಈ ಮಾದರಿ ಸತ್ಯನಾರಾಯಣ ಬಳಸುವ ಇನ್ನೊಂದು ಮಾದರಿ ಎಂದು ನಾನು ಗುರುತಿಸುತ್ತಿದ್ದೇನೆ ಹೊರತು ಮಾಸ್ತಿ ಮಾದರಿಯ ಹಲವು ಆಯಾಮಗಳ ಪರಿಶೀಲನೆಗಿಂತ ಕಡಮೆಯದೆಂದಲ್ಲ.

ಸತ್ಯನಾರಾಯಣರ ಕತೆಗಳ ಶೀರ್ಷಿಕೆಗಳು ಕುತೂಹಲ ಹುಟ್ಟಿಸುತ್ತವೆ. ಹೆಗ್ಗುರುತು, ಕೋನ ಮುಂತಾದ ಶೀರ್ಷಿಕೆಗಳನ್ನು ಯಾವ ಕತೆಗೆ ಕೊಟ್ಟರೂ ಅರ್ಥಪೂರ್ಣವಾಗಿಯೇ ಕಾಣುತ್ತದೆ, ಅಥವಾ ಅರ್ಥ ಇಲ್ಲದ ಹಾಗೂ ಕಾಣುತ್ತದೆ. ನಿಜ ಕವಲು ಎಂಬ ಶೀರ್ಷಿಕೆ ನೋಡಿ. ಇದರ ಅರ್ಥ 1. ಸುಳ್ಳು ಕವಲು ಒಂದು ಇದೆ; ಅದನ್ನು ಅಲ್ಲಗಳೆಯುವ ನಿಜ ಕವಲು ಇದು. (ಉದಾಹರಣೆಗೆ ಭೈರಪ್ಪನವರ ಕವಲು ಕಾದಂಬರಿಯೂ ಮಹಿಳಾ ಸಮಸ್ಯೆಯ ಕುರಿತಾಗಿರುವುದರಿಂದ, ಅದಕ್ಕೆ ಪ್ರತಿಕ್ರಿಯೆಯಾಗಿ ಬರೆದಿರುವ ಕತೆಯೂ ಇದಾಗಿರಬಹುದು!). 2. ನಿರೂಪಕನಿಗೆ ಮಹಿಳೆಯರ

ಬದುಕಿನ ಒಂದು ಕವಲಿನ ವೈಚಾರಿಕ ದರ್ಶನ ಚೆನ್ನೈನ ಸೆಮಿನಾರಿನಲ್ಲಿ ಆಗಿತ್ತು. ಅದಕ್ಕಿಂತಲೂ ನಿಜವಾದ ಕವಲಿನ ದರ್ಶನ ರಾಜಮ್ಮ ಎಂಬ ಬಸ್ ಕಂಡಕ್ಟರಿಣಿಯ ಜೀವನದ ಮೂಲಕ ಸಿಕ್ಕಿತು.

ಚಿಕ್ಕತಾಯಿ ಕತೆಯ ಶೀರ್ಷಿಕೆಯ ಅರ್ಥವೇನೆಂದು ಕತೆ ಮುಗಿದ ಮೇಲೂ ಸ್ವಲ್ಪ ಯೋಚಿಸುವ ಹಾಗಾಗುತ್ತದೆ; ಆದರೆ ಇಲ್ಲಿ ಶೀರ್ಷಿಕೆಯೇ ಕಥನದ ಆಶಯವನ್ನು ಸ್ಪಷ್ಟಪಡಿಸುತ್ತದೆ ಎನ್ನುವುದು ಯೋಚಿಸಿದಾಗ ಹೊಳೆಯುತ್ತದಲ್ಲದೆ ಕತೆಯನ್ನು ಉದಾತ್ತವಾದ ನೆಲೆಗೆ ಏರಿಸುತ್ತದೆ.

ಸಂಕಲನದಲ್ಲಿರುವ ಒಂದು ಪ್ರಸಿದ್ಧ ಕತೆಯ ಶೀರ್ಷಿಕೆ ಡಾಕ್ಟರನ ಹುಚ್ಚುಮಗು. ಓದುವ ಮುಂಚೆ, ಇದು ಬಾಗಲೋಡಿ ದೇವರಾಯರ ಹುಚ್ಚ ಮುನಸೀಫ ಕತೆಯಂತೆ ನೇರವಾಗಿ ಶೀರ್ಷಿಕೆಯ ವ್ಯಕ್ತಿತ್ವದ ಪರಿಶೀಲನೆಯ ಕತೆಯಾಗಿದೆಯೇನೋ ಎಂಬಂತೆ – ಕಾಣಿಸುತ್ತದೆ. ಆದರೆ ಅಲ್ಲ; ಹುಚ್ಚು ಮಗು ಇಲ್ಲಿ ಮುಖ್ಯ ಪಾತ್ರವಲ್ಲ; ಡಾಕ್ಟರನೇ ಮುಖ್ಯ ಪಾತ್ರವಾಗಿರುವುದರಿಂದ ಇಲ್ಲಿಯೂ ಶೀರ್ಷಿಕೆ ದಾರಿ ತಪ್ಪಿಸುವಂತಿದೆ. ಅಲ್ಲದೆ ಕತೆಯ ಕೊನೆಯ ಭಾಗದಲ್ಲಿ ಸ್ವತಃ ಡಾಕ್ಟರನಿಗೆ ಹುಚ್ಚು ಹಿಡಿದಿದೆಯೇನೋ ಅನಿಸುತ್ತದೆ. ಕತೆ ಸಂಕೀರ್ಣವಾಗಿದೆ.

ಈ ಕತೆ ಲ್ಯೂಗಿ ಪಿರಾಂಡೆಲೋನ ವಾರ್ ಕತೆಯಂತೆ ಪ್ರಾರಂಭವಾಗುತ್ತದೆ. ಹಿರಿಯರೆಲ್ಲ ಕೂಡಿ ಚರ್ಚಿಸುವಾಗ ಮಕ್ಕಳ ಮೇಲಿನ ನಮ್ಮ ಪ್ರೀತಿ ತೋರುಗಾಣಿಕೆಯದು ಮತ್ತು ಸ್ವಾರ್ಥಪ್ರೇರಿತವಾದುದು ಎಂದು ನಿವೃತ್ತ ಡಾಕ್ಟರ್ ವಾದಿಸುತ್ತಾರೆ. ಅವರ ಸ್ವಂತ ಕತೆ ಅದಕ್ಕೆ ಉದಾಹರಣೆಯಾಗಿ ನಿಲ್ಲುತ್ತದೆ. ಕೊನೆಗೆ ಬುದ್ಧಿಮಾಂದ್ಯ ಮತ್ತು ಹುಚ್ಚರ ಅನಾಥಾಶ್ರಮವೊಂದಕ್ಕೆ ನಿಯಮಿತವಾಗಿ ಭೇಟಿಕೊಡುತ್ತಾ ತಮ್ಮ ಸತ್ತ ಮಗನನ್ನು ಅವರ ನಡುವೆ ಕಾಣುವ ಡಾಕ್ಟರರು ಹುಚ್ಚರೋ ನಿಜವಾಗಿ ಪ್ರೀತಿಸಲು ಕಲಿತವರೋ ಎನ್ನುವ ಸಂಧಿಗ್ಧದಲ್ಲಿ ಕತೆ ಮುಗಿಯುತ್ತದೆ. ಕತೆಗೆ ಒಂದು ಭರತವಾಕ್ಯವನ್ನು ನಿರೂಪಕ ಬರೆಯುತ್ತಾನೆ : ಇತಿಹಾಸ, ಕತೆ ಇನ್ನು ಸಾಕು. ನಾಳೆಯಿಂದಲಾದರೂ ಪ್ರೀತಿಸಬೇಕು. ಡಾಕ್ಟರರ ಕತೆಯಲ್ಲಿ ಮತ್ತು ಮೆಮೂನ್ ಹೌಸಿನ ಇತಿಹಾಸದಲ್ಲಿ ನಾವು ಕಾಣುವುದು ಮಕ್ಕಳ ಮೇಲಿನ ನಿರ್ವ್ಯಾಜ ಪ್ರೀತಿಯೇ? ಹೌದಾದರೆ ಯಾರದು? ಇವು ಅಸ್ಪಷ್ಟವಾಗಿ ಉಳಿಯುವುದರಲ್ಲಿಯೇ ಕತೆಯ ಯಶಸ್ಸು ಇದೆ. ಎಲ್ಲರೂ ತಮ್ಮ ಅಂತರಂಗವನ್ನು ಶೋಧಿಸಿಕೊಳ್ಳಬೇಕು ಎನ್ನುವ ಆಶಯವನ್ನು ಕೊನೆಯ ಮಾತು ನೀಡುತ್ತದೆ.

ಹೀಗೆ ಹಲವಾರು ಆಯಾಮಗಳಲ್ಲಿ ಕತೆಗಳಲ್ಲಿ ಬದುಕಿನ ಸಂಕೀರ್ಣತೆಗಳನ್ನು ತೋರಿಸುತ್ತಾ, ಆ ಮೂಲಕವೇ  ಬದುಕಿನ ಕೆಲವು ಮುಖಗಳನ್ನು ಅರ್ಥ ಮಾಡಿಸುತ್ತಾ ಹೋಗುವ ಕತೆಗಳನ್ನು ಕೆ. ಸತ್ಯನಾರಾಯಣ ಬರೆಯುತ್ತಿದ್ದಾರೆ. ಈ ಗ್ರಹಿಕೆಗಳು ಬಹುಪಾಲು ವ್ಯಕ್ತಿ ಕೇಂದ್ರಿತವಾಗಿವೆ; ಪೂರ್ವನಾಮದ ವಲಸೆಯಂತಹ ಕೆಲವು ಕತೆಗಳು ಹಾಗಿದ್ದೂ ಸಮಾಜದ ಸಮಗ್ರ ಚಿತ್ರವನ್ನು ತೋರಿಸುತ್ತವೆ.

*ಹೊಸಿಲ ರಂಗೋಳಿ ಅಳಿಸಿ ಹೋಗಿತ್ತು,*
*ವರುಷ ಕಾಲದಿ ಸುರಿದ ಸಲಿಲ ಧಾರೆಯಲಿ*
*ಹಸಿರ ರಂಗೋಲಿ ಉಸಿರಾಡುತ್ತಾ ಮಲಗಿತ್ತು,*
*ವಸುಂಧರೆಯ ಹಸಿ ಹೊಸಿಲ ಮಡಿಲಿನಲಿ*

# ತಂತಿ ಮೇಲಿನ ನಡಿಗೆ ಒಂದು ಚರ್ಚೆಯ ಪರಾಮರ್ಶೆ

**ಪ್ರೊ. ಎಂ.ಜಿ. ವಾರಿ**
ಬಾದಾಮಿ

ತಂತಿ ಮೇಲಿನ ನಡಿಗೆ – ಒಂದು ಚರ್ಚೆ ವಿಷಯದ ಕುರಿತಾದ ಮಾಧವ ಪೆರಾಜೆ ಅವರ ಪ್ರತಿಕ್ರಿಯೆಯನ್ನು ಗಮನಿಸಿದೆ. (ಅವರೇ ಹೇಳಿರುವ ಹಾಗೆ) ಭಾಷಿಕ ನೆಲೆಯಲ್ಲಷ್ಟೇ ತಮ್ಮ ಚಿಂತನಾ ಲಹರಿಯನ್ನು ಹರಿಸುತ್ತ, ದಾರಿ ತಪ್ಪಿದ ಹಾದಿಯಲ್ಲಿ ಮುನ್ನಡೆಯುತ್ತ, ವ್ಯಕ್ತಿಗತ ಗೇಲಿ ಮಾಡುವುದರ ಕಡೆ ಮುಖದಿರುಹಿದ್ದುದು ಸ್ಪಷ್ಟವಾಗುತ್ತದೆ. ಅವರು ಮಾಡುವ ಟೀಕೆಯ ಕೆಲವು ವಾಕ್ಯಗಳಿವು.

೧. ಆದರೆ ಕೇಶೀರಾಜನೇ ಮೊದಲಾದವರು ಕನ್ನಡಕ್ಕೆ ಸಹಜವಾದ ವ್ಯಾಕರಣವನ್ನು ಬರೆಯಲಿಲ್ಲ ಎನ್ನುವ ಶಂಕರ ಭಟ್ಟರ ವಾದವು ಒಂದು ತಪ್ಪು ಕಲ್ಪನೆಯಿಂದ ಬಂದಿರುವುದಾಗಿದೆ. – ಪುಟ –೮೫.

೨. ಇದರ ತಾತ್ಪರ್ಯ ಇಷ್ಟೇ. ಡಿ.ಎನ್. ಶಂಕರ ಭಟ್ಟರಿಗೆ ಕನ್ನಡ ವ್ಯಾಕರಣ ಪರಂಪರೆಯ ಬಗೆಗೆ – ಆಳವಾದ ಅರಿವೇ ಇಲ್ಲ. – ಪುಟ – ೮೬.

೩. ಇನ್ನು ಬರವಣಿಗೆಯು ಆಡುಮಾತಿಗನುಗುಣವಾಗಿರಬೇಕೆನ್ನುವುದು ಶುದ್ಧ ತಲೆಹರಟೆ ಹೊರತು ತರ್ಕಬದ್ಧವಾದುದಲ್ಲ. – ಪುಟ ೮೬.

೪. ಆದುದರಿಂದ 'ಷ' ಕಾರ 'ಞ' ಕಾರ, 'ಜ' ಕಾರದ ಉಚ್ಚಾರಣೆ ಯಾರಿಗೂ ಬರುವುದಿಲ್ಲವೆಂದು, ಅದು ಬೇಡವೆನ್ನುವುದು ಕೇವಲ ಮೂರ್ಖತನ ವಾಗುತ್ತದೆ – ಪುಟ – ೮೬.

೫. ಇವರು ಬಳಸುವ ಪದಗಳೆಲ್ಲ ಇವರಿಗೆ ಮತ್ತು ಆ ದೇವರಿಗೆ ಪ್ರೀತಿ! ಅಂದರೆ ಯಾವ ರೀತಿಯಿಂದಲಾದರೂ ಜನಗಳ ಗಮನ ಸೆಳೆದು ಜನಪ್ರಿಯರಾಗ ಬೇಕೆನ್ನುವ ಹಪಹಪಿಕೆ ಬಿಟ್ಟರೆ ಬೇರೇನೂ ಇದರಲ್ಲಿ ಕಂಡುಬರುವುದಿಲ್ಲ. – ಪುಟ – ೮೮.

ಇವು ಅವರ ಮಾತಿನ ವರಸೆಯ ಚಮತ್ಕಾರಿಕ ನುಡಿಗಳು. ಈ ಕುರಿತು ನನ್ನ ಅನಿಸಿಕೆ ಇಷ್ಟು–

೧. ವಿಶ್ಲೇಷಣೆಯಲ್ಲಿ ಯಾವುದೇ ಪೂರ್ವಾಗ್ರಹ ಪೀಡಿತ ಭಾವನೆಯಿಂದ ಮುಕ್ತರಾದ ವಸ್ತುನಿಷ್ಠತೆಯ ದೃಷ್ಟಿ ಇರಬೇಕಾಗಿತ್ತು.

೨. ವಿಷಯಕ್ಕೆ ನಿಷ್ಠರಾಗಿ ಮಾತನಾಡಬೇಕೆ ಹೊರತು ವ್ಯಕ್ತಿಗತ ಅಪಹಾಸ್ಯ, ಲೇವಡಿಯ ತಳಮಟ್ಟಕ್ಕೆ ಇಳಿಯಬಾರದು.

ಇನ್ನು ನನ್ನ ಬಗ್ಗೆ ನಾನು ಹೇಳಿಕೊಳ್ಳಬೇಕಷ್ಟೆ. ನಾನು ಒಬ್ಬ ಕನ್ನಡ ಅಧ್ಯಾಪಕ. ಸುಮಾರು ಇಪ್ಪತ್ತೆಂಟು ವರ್ಷಗಳ ತನಕ ಕೇಶೀರಾಜನ ಶಬ್ದಮಣಿದರ್ಪಣದ ಪಾಠ

ಬೋಧನೆಯನ್ನು – ಕೂಲಂಕಷ ಪರಿಶೀಲನೆಯೊಂದಿಗೆ – ಮಾಡುತ್ತ ಬಂದಿರುವೆ. ವಿದ್ಯಾರ್ಥಿಗಳ ಮಟ್ಟಕ್ಕೆ ಇಳಿದು ಮನವರಿಕೆ ಆಗುವ ಹಾಗೆ ತಿಳಿಹೇಳಲು ಪ್ರಯತ್ನಪಟ್ಟಿರುವೆನು. ಹಾಗೆಯೇ ಈ ಮುನ್ನ ನನ್ನೊಳಗೆ ನಾನು ಶಬ್ದಮಣಿದರ್ಪಣವನ್ನು ಆರ್ಥೈಸಿಕೊಳ್ಳುವ ದೃಷ್ಟಿಯಿಂದ ಹಲವು ತೊಡಕು ತೊಂದರೆಗಳು ಅಂದರೆ ವಿಸಂಗತಿ ಅಂಶಗಳು ಎದುರಾಗಿವೆ. ಅವುಗಳನ್ನು ಪರಿಹರಿಸುವ ನಿಟ್ಟಿನಲ್ಲಿ ತಪ್ಪು ಹೆಜ್ಜೆ ಇಟ್ಟಿದ್ದೂ ಇದೆ. ಅಂತೆಯೇ ಎಡವಿ ಮುಗ್ಗರಿಸಿದ್ದೂ ಇದೆ. ಈ ದಿಸೆಯಲ್ಲಿ ನಾನು ಸರಿ ದಾರಿಯ ಪಯಣದೊಂದಿಗೆ, ಕೇಶೀರಾಜನ ವಿಚಾರಧಾರೆಯನ್ನು, ಅಲ್ಲಿ ನುಸುಳಿಕೊಂಡು ಬರುವ ಎಡವಟ್ಟುಗಳನ್ನು ಪ್ರಾಮಾಣಿಕವಾಗಿ ಅರ್ಥೈಸಲು ಪ್ರಯತ್ನಿಸಿದ್ದೇನೆ. ಇದರ ಒಟ್ಟು ಫಲಶ್ರುತಿ ಎಂದರೆ ಕೇಶೀರಾಜನ ಶಬ್ದಮಣಿದರ್ಪಣ ಕುರಿತು ನನ್ನ ಕೆಲವು ಚಿಂತನೆಗಳನ್ನು ಸುಮಾರು ಹದಿಮೂರಕ್ಕೂ ಹೆಚ್ಚು ಲೇಖನ ಸ್ವರೂಪದಲ್ಲಿ ತೂರಿಬಿಟ್ಟಿದ್ದೇನೆ. ಅವೆಲ್ಲ ಬೇರೆ ಬೇರೆ ಸಂಶೋಧನಾ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಇದನ್ನು ಹೇಳುವ ಅಗತ್ಯವಾದರು ಏನಿತ್ತು ಎಂದೆನಿಸಬಹುದು. ಆದರೆ ಒಂದು ಸಂಗತಿ ನನಗೆ ಮನವರಿಕೆ ಆಗತೊಡಗಿತ್ತು. ಎಂದರೆ ಪ್ರಾಚೀನ ಶಾಸ್ತ್ರಕಾರರು, ವೈಯಾಕರಣರೆಲ್ಲ ಒಂದು ಸ್ಪಷ್ಟವಾದ ಪೂರ್ವಾಗ್ರಹ ಪೀಡಿತ ಕಲ್ಪಿತ ವಿಚಾರಗಳಿಗೆ ಒಳಗಾಗಿದ್ದಾರೆನ್ನುವುದು; ಸಂಸ್ಕೃತ ಮತ್ತು ಕನ್ನಡಗಳ ಸಂಬಂಧದ ಕುರಿತು ಇಲ್ಲ ಸಲ್ಲದ ವಿಚಾರಗಳ ಸುಳಿಯಲ್ಲಿ ಅವರೆಲ್ಲ ಸಿಲುಕಿಕೊಂಡು ಒದ್ದಾಡುತ್ತಿದ್ದಾರೆನ್ನುವುದು. ಈ ಇಬ್ಬಂದಿತನದ ಸಿಕ್ಕಿನಲ್ಲಿ ಸಿಲುಕಿಕೊಂಡವರಲ್ಲಿ ಕೇಶೀರಾಜನು ಒಬ್ಬನೆಂಬ ಅಂಶ ಕ್ರಮೇಣ ನನಗೆ ತಿಳಿಯಿತು. ಇದಕ್ಕೆ ನನ್ನ ಲೇಖನದ ತುಣುಕುಗಳನ್ನೇ ಉಲ್ಲೇಖಿಸುತ್ತೇನೆ.

''ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿರುವ ಲಿಂಗ ವಿಭಜನೆಯ ಮೂಲತತ್ತ್ವಗಳು ಬೇರೆ ಬೇರೆಯಾಗಿವೆ ಎನ್ನುವ ವಿಚಾರವನ್ನು ಕೇಶೀರಾಜ ಅಸ್ಪಷ್ಟವಾಗಿ (ನೋಡಿ ಸೂತ್ರ – ೧೬೬) ಬಲ್ಲವನಾಗಿದ್ದನು. ಆದರೂ ಸಂಸ್ಕೃತ ವ್ಯಾಕರಣಕ್ಕೆ ಕಟ್ಟುಬಿದ್ದು ೯೮ನೆಯ ಸೂತ್ರದಲ್ಲಿ ನವವಿಧ ಲಿಂಗ ವಿಭಜನೆ ಮಾಡಿರುವನಾದರೂ ೧೦೧ನೆಯ ಸೂತ್ರದಲ್ಲಿ ಮೊದಲಿನ ಮೂರನ್ನು ಉಳಿಸಿಕೊಂಡು, 'ಉಳಿದ ಲಿಂಗಮ್ ಒಳವಾಗಿರ್ದುದ್ದಮ್ ಕನ್ನಡದೊಳ್ ಪರಿವರ್ತಿಸವು' ಎಂದು ಹೇಳುತ್ತಾನೆ. ಆತ ಕೊಟ್ಟಿರುವ ಉದಾಹರಣೆಗಳನ್ನೇ ಗಮನಿಸಬಹುದು. ಪುಲ್ಲಿಂಗ ಮತ್ತು ಸ್ತ್ರೀಲಿಂಗಗಳಿಗೆ ಕೊಟ್ಟಿರುವ ಉದಾಹರಣೆಗಳು ಪುರುಷ, ಸ್ತ್ರೀಗೆ ಸಂಬಂಧಿಸಿದ ನಾಮಪದಗಳೇ ಆಗಿವೆ. ಇನ್ನು ನಪುಂಸಕಕ್ಕೆ ಕೊಟ್ಟಿರುವ ಉದಾಹರಣೆಗಳನ್ನು ಮೂರು ಭಾಗಗಳಾಗಿ ಗುರುತಿಸಬಹುದು.

೧. ಮರಂ, ಗಿಡ, ಬಳ್ಳಿ, ಪುಲ್ – ಸಸ್ಯಜಾತಿ

೨. ಪುಲಿ, ಕರಡಿ – ಪ್ರಾಣಿವರ್ಗ – ಚೇತನ ಉಳ್ಳವು.

೩. ಗಟ್ಟಂ, ಬೆಟ್ಟಂ, ಜಡೆ, ಕೊಡೆ,
ಕನ್ನಡಿ, ಕಳಶಂ, ಪೊದರ್ – ಅಚೇತನ ವಸ್ತುಗಳು.

'ತಿರ್ಯಗ್ಜೀ ವಂಗಳಪ್ಪ ಚೇತನಾಚೇತನ ವಸ್ತುಗಳ್ ನಪುಂಸಕಂಗಳ್' – ಎನ್ನುವಲ್ಲಿ ಕೇಶೀರಾಜನ ಇಂಗಿತ ಕನ್ನಡತನದ ಲಕ್ಷಣವನ್ನು ಗುರುತಿಸುವತ್ತಲೆ ಇತ್ತೆಂದು ಹೇಳಬಹುದು.[೧]

''............ ಸಂಸ್ಕೃತ ವ್ಯಾಕರಣ ಮರ್ಯಾದೆಯನ್ನು ಅನುಸರಿಸಿ ಲಿಂಗವನ್ನು ಶಾಬ್ದಿಕ ಧರ್ಮವೆಂಬಂತೆ ನಿರೂಪಿಸಿರುವುದು ಕಂಡುಬರುತ್ತದೆ. ಇವೆರಡನ್ನೂ ಕಲ್ಪಿಸಿಕೊಂಡು ಕನ್ನಡದಲ್ಲಿ ವಿವರಿಸುವುದೇ ತೀರ ಅಸಂಬದ್ಧ ಅಥವಾ ಕೃತಕವಾಗಿ ತೋರುತ್ತದೆ. ಈವರೆಗೆ ಚರ್ಚಿತ ವಿಷಯವನ್ನು ಹೀಗೆ ಅಡಕಗೊಳಿಸಬಹುದು.

೧. ಪುನ್, ಸ್ತ್ರೀ, ನಪ್, ಪುನ್ನಪ್ ಮತ್ತು ಸ್ತ್ರೀನಪ್– ಇವೆಲ್ಲ ನಿರ್ದಿಷ್ಟತತ್ವಾನುಸಾರಿಯಾಗಿವೆ.

ಪುನ್‌ಸ್ತ್ರೀ, ತ್ರಿಲಿಂಗ, ವಾಚ್ಯಲಿಂಗ, ಅವ್ಯಯಲಿಂಗ – ಈ ವಿಭಾಗಗಳಲ್ಲಿ ಶಾಬ್ದಿಕ ರೂಪ ರಚನೆಯೊಂದಿಗೆ ಅಥವಾ ಪದಘಟಕಗಳ ಸಂಬಂಧದ ಪರಿಕಲ್ಪನೆಯೊಂದಿಗೆ (ಸಂಸ್ಕೃತ ಮಾದರಿಗನುಸಾರವಾಗಿ) ಹುಟ್ಟುಹಾಕಲಾಗಿದೆ.

೨. ಸಂಸ್ಕೃತ ವ್ಯಾಕರಣ ಮರ್ಯಾದೆಯ ನೆರಳಿನಲ್ಲಿ ಉಳಿದೂ ಕನ್ನಡದ ಜೀವನಾಡಿಯನ್ನು ಕಾಣಲು ಯತ್ನಿಸಿ ಆರಂಭದಲ್ಲಿ ಯಶಸ್ವಿಯಾಗಿದ್ದಾನೆ. ಅಥವಾ ಮತ್ತೊಂದು ಮುಖದಿಂದ ನೋಡಿ ಹೇಳುವುದಾದರೆ ಈ ಯಶಸ್ವಿಯತ್ನದಲ್ಲೂ ಸಂಸ್ಕೃತ ತಾತ್ವಿಕ ಪರಿಕಲ್ಪನೆಯ ಮುಷ್ಠಿಯಿಂದ ಸಂಪೂರ್ಣ ಬಿಡಿಸಿಕೊಂಡು (ಕೇಶೀರಾಜನಿಗೆ ) ಯೋಚಿಸಲಾಗಿಲ್ಲ.

೩. ಸಂಸ್ಕೃತದ ಅಮರಚಂದ್ರನು ತನ್ನ 'ಸ್ಯಾದಿ ಸಮುಚ್ಚಯ'ದಲ್ಲಿ ನವವಿಧ ಲಿಂಗಗಳನ್ನು ಪ್ರಸ್ತಾಪಿಸಿ ವಿವರಣೆ ನೀಡಿದ್ದಾನೆ. ಈ ಒಂದು ಪರಿಕಲ್ಪನೆಯ ವಿವರಣೆಯಿಂದ ಕೇಶೀರಾಜ ಸ್ಪಷ್ಟವಾಗಿ ಪ್ರಭಾವಿತನಾಗಿದ್ದಾನೆ.''[೨]

ಈ ರೀತಿ ನಮ್ಮ ಪ್ರಾಚೀನ ವೈಯಾಕರಣರೆಲ್ಲ ಸಂಸ್ಕೃತ ಭಾಷೆ ಮತ್ತು ವ್ಯಾಕರಣದ ಕುರಿತಾಗಿ ಸಂಪೂರ್ಣ ತಪ್ಪು ಕಲ್ಪನೆಯನ್ನೇ ಉಳ್ಳವರಾಗಿದ್ದರು. ಸಂಸ್ಕೃತ ಪ್ರಾಚೀನ ಭಾಷೆ, (ಇದರಲ್ಲಿ ಎಳ್ಳಷ್ಟು ಸಂಶಯವಿಲ್ಲ). ದೇವ ಭಾಷೆ (ಧಾರ್ಮಿಕ ಪರಿಕಲ್ಪನೆಯ ಪಾವಿತ್ರ್ಯದ ಭಾವನೆ ನುಸುಳಿದೆ) ಎಲ್ಲಾ ಭಾಷೆಗಳಿಗೂ ತಾಯಿ ಮೂಲವಾದುದು, (ಕಳೆದೆರಡು ಶತಮಾನಗಳಿಂದ ಗೊತ್ತಾಗಿದೆ, ಸಂಸ್ಕೃತ ಮತ್ತು ಕನ್ನಡ ನಡುವಿನ ಸಂಬಂಧ ಸಾಕು ತಾಯಿಯ ಪಾತ್ರವೆಂದು). ಇದರಿಂದ ಸಂಸ್ಕೃತ ಭಾಷೆಯ ಒಳಾಂತರಂಗದ ನಿಯಮಾವಳಿಗಳು ಕನ್ನಡದಲ್ಲೂ ಯಥಾವತ್ತಾಗಿ ಕಂಡುಬರುತ್ತವೆ (ಹೀಗೆಂದು ನಾವಿನ್ನು ನಂಬಿಕೊಂಡು ಈ ತನಕವಾದರೂ ಕಬ್ಬಿಣದ ಕಡಲೆಯಾಗಿ ಮಾಡಿಕೊಂಡಿದ್ದೇವೆ; ವ್ಯಾಕರಣವೆಂದರೆ ಒಂದು ತಲೆನೋವಿನ ವಿಷಯವಾಗಿ ನಾವೇ ನಿರ್ಮಿಸಿಕೊಂಡಿದ್ದೇವೆ). ಹೀಗೆ ನಮ್ಮ ಪ್ರಾಚೀನ ಶಾಸ್ತ್ರಕಾರರು, ವ್ಯಾಕರಣ ರಚನಾಕಾರರು ಬಲವಾಗಿ ನಂಬಿದವರಾಗಿದ್ದರು. ಈಗಲೂ ಈ ಪೆಡಂಭೂತದ ಕಲ್ಪನೆಯ ಮಸುಕಿನಲ್ಲೇ ನಾವಿರುವುದು ಒಂದು ವಿಪರಾಸ್ಯದ ಮತ್ತು ವಿಷಾದದ ಸಂಗತಿ.

ಈ ನಂಬಿಕೆಯ ಅಪಕಲ್ಪನೆ ಹಿನ್ನೆಲೆಯಲ್ಲಿ ಅನೇಕ ಲೇಖನಗಳೂ ಗ್ರಂಥಗಳೂ ಪಿಎಚ್.ಡಿ. ಪ್ರಬಂಧಗಳು ಹೊರಬಂದಿವೆ. ಇದು ವಿದ್ವತ್ ಲೋಕದ ವಿಸಂಗತಿಯೆ ಹೌದು. ಈ ರೀತಿ ತಳಬುಡ ಆಧಾರವಿಲ್ಲದ ನಂಬಿಕೆಯೇ ಬೇರೆ. ಕಣ್ಣಿಗೆ ಕಾಣುವ ಬುದ್ಧಿಗೆ ಗೋಚರವಾಗುವ ವಾಸ್ತವ ಸತ್ಯಾಂಶವೆ ವಿಭಿನ್ನ. ಈ ಎಲ್ಲ ಅಂಶವನ್ನು ಅನಾವರಣಗೊಳಿಸಲು ನಿಜಕ್ಕೂ ಯಶಸ್ವಿ ಪ್ರಯತ್ನ ನಡೆಸಿದವರೆಂದರೆ ಡಿ.ಎನ್. ಶಂಕರಭಟ್ಟರು. ಕನ್ನಡ ಮತ್ತು ಸಂಸ್ಕೃತಗಳೆರಡೂ ಸಂಪೂರ್ಣ ಭಿನ್ನ ಭಾಷಾವರ್ಗಗಳಿಗೆ ಸೇರಿದ ಅಂಶವನ್ನು ಮತ್ತು ಕನ್ನಡದ ಅಸ್ಮಿತೆಯ ಅಂಶವನ್ನು ಎಳೆಎಳೆಯಾಗಿ ಬಿಡಿಸಿ ತೋರಿಸಿದ್ದಾರೆ. ನನ್ನ ಅಲ್ಪಮತಿಗೆ ತಿಳಿದ ವಿಷಯವೆಂದರೆ ಎಚ್.ಎಸ್. ಬಿಳಿಗಿರಿಯವರ ನಂತರ ನಾನು ಕಂಡಂತಹ ಸಮರ್ಥ ಭಾಷಾತಜ್ಞರೆಂದರೆ ಡಿ.ಎನ್. ಶಂಕರಭಟ್ಟರು. ಅವರ ಪುಸ್ತಕದ ಒಳತಿರುಳಿನ ಬಗ್ಗೆ ಮಾತನಾಡದೆ ಭಾಷಿಕ ನೆಲೆಯಲ್ಲಷ್ಟೆ ಕೈಯಾಡಿಸುತ್ತ ಅಪಹಾಸ್ಯ, ಲೇವಡಿ ಮಾಡುವುದು ಆರೋಗ್ಯಕರ ಲಕ್ಷಣವಂತು ಅಲ್ಲ.

ಅಂತೆಯೇ ಕನ್ನಡತನದ ಲಕ್ಷಣವನ್ನು ಎತ್ತಿ ತೋರುವ, ಹಾಗೆಯೇ ಸಂಸ್ಕೃತಕ್ಕಿಂತಲೂ ಹೇಗೆ ಭಿನ್ನ ಎಂಬುದನ್ನು ತೋರಿಸುವ ಒಂದೆರಡು ಉದಾಹರಣೆಗಳನ್ನು ಇದೀಗ ಪರಾಂಬರಿಸೋಣ –

೧. ಕನ್ನಡದಲ್ಲಿ ಮುಖ್ಯವಾಗಿ ನಾಮಪದಗಳು, ಕ್ರಿಯಾಪದಗಳು ಮತ್ತು ಗುಣಪದಗಳು

ಎಂಬುದಾಗಿ ಮೂರು ಪದವರ್ಗಗಳಿಗೆ ಸೇರುವ ಪದಗಳು ಬಳಕೆಯಲ್ಲಿವೆ.[೨] (ಪುಟ – ೭೫)

೨. ಸಂಸ್ಕೃತದಲ್ಲಿ ನಾಮಪದಗಳೊಂದಿಗೆ ಬರುವ ವಿಭಕ್ತಿ ಪ್ರತ್ಯಯಗಳು ನಾಮಪದಗಳ ಲಿಂಗ. ವಚನ ಮತ್ತು ವಿಭಕ್ತಿ ಪ್ರತ್ಯಯಗಳು ವಿಭಕ್ತಿಗಳನ್ನು ಮಾತ್ರ ಸೂಚಿಸುತ್ತವೆ. ಲಿಂಗ ಮತ್ತು ವಚನಗಳನ್ನು ಸೂಚಿಸಲು ಕನ್ನಡದಲ್ಲಿ ಬೇರೆಯೇ ಪ್ರತ್ಯಯಗಳಿವೆ. – (ಪುಟ–೧೨೭)

೩. ''....... ಹಾಗಾಗಿ ಸಂಸ್ಕೃತದಲ್ಲಿರುವ ಪದವರ್ಗಗಳೇ ಕನ್ನಡದಲ್ಲೂ ಇವೆ ಎಂದು ಹೇಳುವುದು ಸರಿಯಲ್ಲ. ಸಂಸ್ಕೃತದಲ್ಲಿ ನಾಮಪದ ಮತ್ತು ಕ್ರಿಯಾಪದ ಎಂಬುದಾಗಿ ಎರಡು ಮುಖ್ಯ ಪದವರ್ಗಗಳನ್ನು ಕಲ್ಪಿಸಿಕೊಂಡರೆ ಸಾಕು. ಆದರೆ ಕನ್ನಡದಲ್ಲಿ ಈ ಎರಡು ಪದವರ್ಗಗಳು ಮಾತ್ರವಲ್ಲದೆ ಗುಣಪದಗಳೆಂಬ ಮೂರನೆಯದೊಂದು ಮುಖ್ಯಪದವರ್ಗವನ್ನು ಕಲ್ಪಿಸಿಕೊಳ್ಳುವ ಅವಶ್ಯಕತೆ ಇದೆ. (ಪುಟ–೭೪.)

೪. ಈ ಎರಡು ಭಾಷೆಗಳಲ್ಲಿ ಬಳಕೆಯಾಗುವ ಜೋಡುಪದ (=ಸಮಾಸಪದ)ಗಳ ಒಳರಚನೆ ಮೇಲೆ ವಿವರಿಸಿದ ಹಾಗೆ ಒಂದಕ್ಕಿಂತ ಒಂದು ತೀರಾ ಭಿನ್ನವಾಗಿದೆ. ಆದಕಾರಣ ಈ ಪ್ರಯತ್ನ ಸಫಲವಾಗುವುದು ಅಸಂಭವವೇ. ಹಾಗಿದ್ದರೂ ನಮ್ಮ ವೈಯಾಕರಣಿಗಳು ಅದನ್ನು ಇವತ್ತಿಗೂ ಎಂದರೆ ಈ ಎರಡು ಭಾಷೆಗಳು ಬೇರೆ ಬೇರೆ ಭಾಷಾ ಕುಟುಂಬಗಳಿಗೆ ಸೇರಿದವುಗಳೆಂಬ ವಿಷಯ ತಿಳಿದ ಮೇಲೂ ಹಾಗೆಯೇ ಉಳಿಸಿಕೊಂಡು ಬಂದಿರುವುದು ನಿಜಕ್ಕೂ ಆಶ್ಚರ್ಯವನ್ನು ತರುವ ಸಂಗತಿ. (ಪುಟ–೧೨೧.)

೫. ಹೊಸಗನ್ನಡದ ಜೋಡುಪದ (=ಸಮಾಸ)ಗಳಲ್ಲಿ ಸಾಮಾನ್ಯವಾಗಿ ಎರಡನೆಯ ಅಂಗವಾಗಿ ಬರುವ ಪದ ನಾಮಪದವಾಗಿರುತ್ತದೆ. ಮೊದಲನೆಯದು ನಾಮಪದವಿರಬಹುದು, ಕ್ರಿಯಾಪದವಿರಬಹುದು, ಇಲ್ಲವೇ ಗುಣಪದವಿರಬಹುದು.
   ೧. ನಾಮಪದ ಇರುವವು : ಬಯಲಾಟ, ನೆಲಗಡಲೆ, ಕೈಮಗ್ಗ.
   ೨. ಕ್ರಿಯಾಪದ ಇರುವವು : ಕಡೆಗೋಲು, ಸಿಡಿಮದ್ದು, ತೂಗುದೀಪ.
   ೩. ಗುಣಪದ ಇರುವವು : ದೊಡ್ಡಮ್ಮ, ಕಿರುವೆರಳು, ಕಗ್ಗಲ್ಲು. (ಪುಟ–೧೧೦)

೬. ಈ ನಿಯಮಕ್ಕೆ ಅಪವಾದವಾಗಿ ಕಾಣಿಸುವ ಬೇರೆ ಕೆಲವು ಜೋಡುಪದಗಳೂ ಕನ್ನಡದಲ್ಲಿವೆ. ಉದಾಹರಣೆಗಾಗಿ ಕೈಪಿಡಿ, ಬಾನುಲಿ, ಇಳಿಜಾರು, ಒಡಹುಟ್ಟು ಮೊದಲಾದ ಜೋಡುಪದಗಳಲ್ಲಿ ಎರಡನೆಯ ಅಂಗವಾಗಿ ಒಂದು ಕ್ರಿಯಾಪದ ಬಂದಿರುವ ಹಾಗೆ ಕಾಣಿಸುತ್ತದೆ. ಆದರ ಇಲ್ಲಿ ಎರಡನೆಯ ಅಂಗಗಳಾಗಿ ಬಂದಿರುವ ಪಿಡಿ, ಉಲಿ, ಜಾರು, ಹುಟ್ಟು, ಮೊದಲಾದವುಗಳು ಹಿಡಿ, ಕಟ್ಟು, ನಗು, ಓದು, ತಪ್ಪು, ಬದುಕು ಮೊದಲಾದವುಗಳ ಹಾಗೆ 'ಸೊನ್ನೆ' ಪ್ರತ್ಯಯದ ಮೂಲಕ ತಯಾರಾಗಿರುವ ನಾಮಪದಗಳೆಂದು ಹೇಳಲು ಸಾಧ್ಯವಿದೆ.

ಕನ್ನಡದ ಜೋಡುಪದಗಳ ಈ ವಿಭಜನೆಯಲ್ಲಿ ಒಂದು ಮುಖ್ಯವಾದ ವಿಷಯವನ್ನು ಮನಸ್ಸಿನಲ್ಲಿಟ್ಟುಕೊಳ್ಳುವುದು ಅವಶ್ಯ. ಪ್ರತ್ಯಯಗಳನ್ನು ಬಳಸಿ ತಯಾರಿಸಿರುವ ನಾಮಪದಗಳ ಹಾಗೆಯೆ ಸಮಾಸವೆಂಬ ವಿಧಾನವನ್ನು ಬಳಸಿ ತಯಾರಿಸಿರುವ ಈ ಜೋಡುಪದಗಳೂ ಹಲವಾರು ವಿಷಯಗಳಲ್ಲಿ ಅನಿಯಮಿತವಾಗಿರುತ್ತವೆ. ಹಾಗಾಗಿ, ಮೇಲೆ ವಿವರಿಸಿರುವ ವಿಭಜನೆಗಳಿಗೆ ಅಪವಾದಗಳನ್ನು ಕಂಡುಹಿಡಿಯುವುದೇನೂ

ಕಷ್ಟವಲ್ಲ. ಎಂದರೆ ಈ ವಿಭಜನೆಗಳು ಭಾಷೆಯ ಒಂದು 'ಒಲವ'ನ್ನು ಸೂಚಿಸುತ್ತದೆಯಲ್ಲದೆ ತರ್ಕಬದ್ಧವಾದ ನಿಯಮವನ್ನಲ್ಲ. (ಪುಟ-೧೧೫.)

೭. ಪದಪ್ರತ್ಯಯಗಳು ಮತ್ತು ಪದರೂಪ ಪ್ರತ್ಯಯಗಳು.
ಭಾಷೆಗಳಲ್ಲಿ ಸಾಮಾನ್ಯವಾಗಿ ಎರಡು ರೀತಿಯ ಪ್ರತ್ಯಯಗಳು ಬಳಕೆಯಲ್ಲಿರುತ್ತವೆ. ಪದಗಳನ್ನು ತಯಾರಿಸುವಲ್ಲಿ (ಎಂದರೆ ಅವುಗಳ ಒಳರಚನೆಯಲ್ಲಿ) ಬರುವವುಗಳು ಒಂದು ರೀತಿಯವುಗಳಾದರೆ, ಪದಗಳ ಬೇರೆ ಬೇರೆ ರೂಪಗಳನ್ನು ತಯಾರಿಸುವಲ್ಲಿ ಬರುವವುಗಳು ಇನ್ನೊಂದು ರೀತಿಯವು. ಇವನ್ನು ಅನುಕ್ರಮವಾಗಿ 'ಪದಪ್ರತ್ಯಯ' ಮತ್ತು 'ಪದರೂಪಪ್ರತ್ಯಯ' ಎಂಬುದಾಗಿ ಕರೆಯಬಹುದು.[೪] (ಪುಟ-೨೩.)
ಪದಗಳೊಂದಿಗೆ ಪದಪ್ರತ್ಯಯಗಳು ಸುಲಭವಾಗಿ ಬೇರೆ ಭಾಷೆಗಳಿಂದ ಎರವಲಾಗಿ ಬರಬಲ್ಲವು. ಆದರೆ ಪದರೂಪ ಪ್ರತ್ಯಯಗಳು ಈ ರೀತಿ ಎರವಲಾಗಿ ಬರುವುದು ಬಹಳ ಅಪರೂಪ. (ಪುಟ-೨೪)

೮. ಪದಪ್ರತ್ಯಯ ಮತ್ತು ಪದರೂಪಪ್ರತ್ಯಯದ ನಡುವಿರುವ ಒಂದು ಮುಖ್ಯವಾದ ವ್ಯತ್ಯಾಸವೇನೆಂದರೆ, ಪದ ಪ್ರತ್ಯಯವು ಪದದ ಒಳರಚನೆಯಲ್ಲಿ ಬರುತ್ತಿದ್ದು, ಅದಕ್ಕೆ ಪದದ ತಯಾರಿಕೆಯಲ್ಲಿ ಒಂದು ಮುಖ್ಯವಾದ ಸ್ಥಾನವಿದೆ...
ಪದರೂಪ ಪ್ರತ್ಯಯಗಳ ಬಳಕೆ ಇದಕ್ಕಿಂತ ತೀರ ಭಿನ್ನವಾದುದು. ಪದವೊಂದನ್ನು ಅದರ ಬೇರೆ ಬೇರೆ ರೂಪಗಳಲ್ಲಿ ಬಳಸುವಾಗಲೆಲ್ಲ ನಾವು ಅವುಗಳ ರಚನೆಗೆ ಅವಶ್ಯವಾಗಿರುವ ಈ ಪದರೂಪ ಪ್ರತ್ಯಯಗಳನ್ನು ಆ ಪದಕ್ಕೆ ಸೇರಿಸುವುದರ ಮೂಲಕ ಪ್ರತಿಯೊಂದು ಬಾರಿಯೂ ಅದನ್ನು ಹೊಸದಾಗಿ ತಯಾರಿಸಿಯೇ ಬಳಸುತ್ತೇವೆ. (ಪುಟ-೨೫)

ಒಟ್ಟು ಚಿಂತನೆಯ ಸಾರವೆಂದರೆ ಕನ್ನಡ ವ್ಯಾಕರಣದ ರಚನಾ ನಿಯಮಾವಳಿಯು ಸಂಸ್ಕೃತಕ್ಕಿಂತ ಸಂಪೂರ್ಣ ಭಿನ್ನ ಎಂಬಂಶವನ್ನು ತೋರಿಸಿಕೊಡುವುದರ ಮೂಲಕ ಕನ್ನಡವನ್ನು ಸಂಸ್ಕೃತ ವ್ಯಾಕರಣದ ತೆಕ್ಕೆಯಿಂದ ಮುಕ್ತಗೊಳಿಸಿದ್ದು ಅವರ ಹೆಗ್ಗಳಿಕೆ. ಎಲ್ಲಿಯೂ ತಾವು ಹೇಳಿದ್ದೆ ಸರಿ ಎಂಬ ದಾರ್ಷ್ಟ್ಯ ಭಾವನೆ ಇದ್ದಂತಿಲ್ಲ. ಈ ಭಾಷಾ ರಚನಾಕ್ರಿಯೆಯ 'ಒಲವು' ಎತ್ತ ಸಾಗುತ್ತಿದೆ ಎಂದು ಕಂಡುಕೊಳ್ಳುವ ಪ್ರಕ್ರಿಯೆ ನಿರಂತರವಾದುದು – ಎಂಬ ಆಶಯ ಭಟ್ಟರದ್ದು ಆಗಿದೆ.

**ಟಿಪ್ಪಣಿಗಳು**

೧. ಹಳಗನ್ನಡ ಮತ್ತು ಬಾದಾಮಿ ಉಪಭಾಷೆ.
೬೮ನೇ ಅಖಿಲ ಭಾರತ ಕ.ಸಾ.ಸ.ಬಾಗಲಕೋಟೆ, ೨೦೦೦
ಲೇಖನ – 'ಲಿಂಗಮೊಂಬತ್ತು ತೆರಂ' – ಒಂದು ಟಿಪ್ಪಣಿ, ಪುಟ ೩೧, ೩೨

೨. ಇದೇ ಗ್ರಂಥ
ಲೇಖನ – 'ಲಿಂಗಮೊಂಬತ್ತು ತೆರಂ'–ಕೇಶೀರಾಜನ ಒಟ್ಟು ದೃಷ್ಟಿಯ ಒಂದು ಪರಾಮರ್ಶೆ, ಪುಟ೩೬.

೩. ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ, (i),(ii), (iii), (iv), (v), (vi)
ಮೂರನೇ ಮುದ್ರಣ – ೨೦೦೬.

೪. ಕನ್ನಡ ಪದಗಳ ಒಳ ರಚನೆ - (vii)(viii)
ಎರಡನೇ ಆವೃತ್ತಿ – ೨೦೦೨

# ಕನ್ನಡಕ್ಕೆ ಕತ್ತರಿ ಪ್ರಯೋಗ ಒಂದು ಚಿಂತನೆ

ಸು.ಕೃಷ್ಣ ನೆಲ್ಲಿ
ಬೆಳಗಾಂ – ೫೯೦೦೧೬

'ಕನ್ನಡಕ್ಕೆ ಕತ್ತರೀ ಪ್ರಯೋಗ'ದಲ್ಲಿನ ಚಿಂತಾಜನಕ ವಿವರಣೆಗಳನ್ನು ಓದಿದಾಗ ಉಂಟಾದ ಮನೋವೇದನೆಯಿಂದ ಕೂಡಿದ ಚಿಂತನೆಯಿದು. ವರ್ಣಮಾಲೆ ಯಿಂದ ಋ, ಐ,ಔ,ಖ,ಘ, ಛ, ಝ, ಠ, ಢ, ಧ, ಫ, ಭ, ಷ – ಈ ಅಕ್ಷರಗಳನ್ನು ಕೈ ಬಿಡಬಹುದು ಎನ್ನುವ ಅಭಿಪ್ರಾಯ ವ್ಯಕ್ತವಾಗಿದೆ. ಇದನ್ನು ವಿರೋಧಿಸಿ ಹಲವಾರು ಲೇಖನಗಳೂ ಬಂದಿವೆ. ಇವೆರಡೂ ವಿರೋಧಾಭಿಪ್ರಾಯಗಳ ಹಿಂದೆಯೂ (ಭಾವತೀವ್ರತೆಯ ಆವೇಶವನ್ನು ಹಿಂದಿಟ್ಟು) ಹಲವಾರು ಉದ್ದೇಶಗಳು, ಪ್ರಚೋದನೆಗಳು, ಪ್ರೇರಣೆಗಳು ಒತ್ತಡ ತರುತ್ತಿವೆ ಎಂಬ ವಾಸ್ತವಾಂಶವೂ ಗೋಚರವಾಗುತ್ತಿದೆ. ಎರಡೂ ಪಕ್ಷಗಳ ವಾದ, ಆತ್ಮಸಮರ್ಥನೆ ಗಳನ್ನು ಪರಿಶೀಲಿಸಲು ಇದು ಯೋಗ್ಯ ಸಮಯವಾಗಿದೆ.

ಸುಮಾರು ಆಗಸ್ಟ್ ೨೦೦೮ರಲ್ಲಿ 'ಶ, ಷ, ಸ'ಗಳ ಬಗ್ಗೆ ಧ್ವನಿಶಾಸ್ತ್ರದಲ್ಲಿನ ವಿಶ್ಲೇಷಣೆ ಹಾಗೂ ಇನ್ನಿತರ ಬೆಳವಣಿಗೆಗಳ ಬಗ್ಗೆ ಒಂದು ಸುದೀರ್ಘ ಲೇಖನವನ್ನು ಬರೆದಿದ್ದೆ. ಈಗಲೂ ಅದರಲ್ಲಿನ ವಿಷಯ ವಿಶ್ಲೇಷಣೆ, ವಿವೇಚನೆ, ತಾರ್ಕಿಕವಾಗಿ ವಾಸ್ತವವೂ, ಸಾಧಾರವೂ ಆಗಿದೆ ಎಂದು ಭಾವಿಸಿದ್ದೇನೆ. 'ಷ' ಅಕ್ಷರವನ್ನು ಕೈಬಿಡಬಾರದೆನ್ನುವುದು ನನ್ನ ನಿಲುವಾಗಿತ್ತು. ಆಗಿನ ನನ್ನ ಲೇಖನವನ್ನು 'ಅನುಬಂಧ ಅ' ಎಂದು ಜೋಡಿಸಿದ್ದೇನೆ.

ನಾನು 'ಷ' ಅಕ್ಷರದ ಔಚಿತ್ಯದ ಬಗ್ಗೆ ಮಾಡಿರುವ ವಿಶ್ಲೇಷಣೆಯನ್ನೇ ಮೇಲೆ ಹೇಳಿದ ಇನ್ನುಳಿದ ಅಕ್ಷರಗಳಿಗೂ ಅನ್ವಯಿಸಬಹುದು. ಹಾಗೆಂದೇ ನಾನು 'ಅನುಬಂಧ ಅ'ದ ಪ್ರಸ್ತಾಪ ಮಾಡಿರುವುದು. ಇದರಿಂದ ಹೊರಡುವ ಫಲಿತಾಂಶವನ್ನು ಕೆಳಕಂಡ ರೀತಿಯಲ್ಲಿ ಸಂಗ್ರಹಿಸಿದೆ.

ಧ್ವನಿಶಾಸ್ತ್ರದಂತೆ ವೈಜ್ಞಾನಿಕವಾಗಿ ಈ ಅಕ್ಷರಗಳ ಉಲಿಗಳನ್ನು ವಿಶ್ಲೇಷಿಸಿದಾಗ, ಅವುಗಳೆಲ್ಲವೂ ಭೌತಿಕವಾಗಿ ಅಸ್ತಿತ್ವದಲ್ಲಿರುವುದು ನಿಚ್ಚಳವಾಗಿದೆ. (ಎಂದರೆ voiced / voiceless ಉಗಮಸ್ಥಾನ, ಧ್ವನಿ ಉಂಟಾಗಲು ಸಹಕರಿಸುವ ಧ್ವನ್ಯಂಗಗಳು, ಯಾವ ರೀತಿಯಾಗಿ ಧ್ವನಿಯುಂಟಾಗುತ್ತದೆ ಎಂದು ಪರೀಕ್ಷೆ ಮಾಡಿ ವಾಸ್ತವವೆಂದು ದೃಢೀಕರಿಸಿರುವುದು). ಎರಡನೆಯದಾಗಿ, ಒಂದು ಉಲಿಗೂ ಮತ್ತೊಂದು ಉಲಿಗೂ (ಎಂದರೆ 'ಕ' ಅಲ್ಪಪ್ರಾಣ ಹಾಗೂ 'ಖ' ಮಹಾಪ್ರಾಣದ ನಡುವಿನ ವ್ಯತ್ಯಾಸ) ಗೊಂದಲವುಂಟಾಗದಂತಿರುವುದು.

ಇದರಿಂದ ಮತ್ತೊಂದು ಮುಖ್ಯವಾದ ಅಂಶ ಗೊತ್ತಾಗುತ್ತದೆ. 'ಕ' ಅಕ್ಷರವನ್ನು ಉಚ್ಚಾರ ಮಾಡಲು ಕಲಿತ ವಿದ್ಯಾರ್ಥಿಗೆ 'ಖ' ಎಂದು ಉಚ್ಚರಿಸಲು (ಗುರುವಿನ ಅಲ್ಪ ಪ್ರಯತ್ನದಿಂದ) ಸಾಧ್ಯವಾಗಿಯೇ ಆಗುತ್ತದೆ. ಎಂದ ಮೇಲೆ ಪ್ರಾಮಾಣಿಕವಾದ ಪ್ರಯತ್ನದಿಂದ, ಭಾಷಾನಿಷ್ಠೆಯಿಂದ, ಮುಂದಿನ ತಲೆಮಾರಿನವರ ಮೇಲಿನ ನಂಬಿಕೆಯಿಂದ ಮತ್ತು ಪ್ರೀತಿಯಿಂದ ಹಾಗೂ ನಮ್ಮಲ್ಲಿನ ಆತ್ಮಸ್ಥೈರ್ಯದಿಂದ ಅಲ್ಪಪ್ರಾಣ – ಮಹಾಪ್ರಾಣದ ಅಕ್ಷರಗಳನ್ನು ಮತ್ತು ಧ್ವನಿಗಳನ್ನು ನಮ್ಮ ವಿದ್ಯಾರ್ಥಿಗಳಿಗೆ ಕಲಿಸಿ ಸ್ಥಿರೀಕರಿಸಬಹುದು. (ಅಂದ ಹಾಗೆಯೇ ಇಂಗ್ಲಿಷಿನಲ್ಲಿಯೂ k,p,t ಗಳಿಗೆ ಒಂದು ನಿಯಮದಂತೆ ಮಹಾಪ್ರಾಣ ಎಂದರೆ/ $k^h/p^h/t^h$/ ಎಂಬುದಾಗಿ ಉಚ್ಚರಿಸುತ್ತಾರೆ. ಉರ್ದುವಿನಲ್ಲಿರುವ ಒಂದು ತೆರನ 'ಕ' ಉಚ್ಚಾರಣೆಗೆ 'qu' ರೀತಿ ಒತ್ತುಕೊಟ್ಟು ಉಚ್ಚರಿಸುತ್ತಾರೆ. ಮೂಲಭೂತವಾಗಿ, ಆಯಾ (ಮಾತೃ) ಭಾಷಿಕರು ಕೆಲವಷ್ಟು ಧ್ವನಿಗಳನ್ನು (ಹಾಗೂ ಅವುಗಳ ಸಂಕೇತರೂಪವಾದ ಲಿಪಿಯನ್ನು) ಅನನ್ಯವಾಗಿ ಎಂದರೆ ಪರಭಾಷೆಯವರು (ಎಷ್ಟೇ ನಿಷ್ಠೆಯಿಂದ ಕಲಿತರೂ) ಉಚ್ಚರಿಸದಂತೆ ಮಾತನಾಡುತ್ತಾರೆ. ಹಾಗೆಂದೇ ತೆನಾಲಿ ರಾಮಕೃಷ್ಣನದೊಂದು ಕತೆಯಲ್ಲಿ ಬರುವಂತೆ, ಅವನು ಸರ್ವಭಾಷಾ ಪಂಡಿತನ ಮಾತೃಭಾಷೆಯನ್ನು ಸ್ವಾರಸ್ಯಕರ ರೀತಿಯಲ್ಲಿ ಕಂಡುಹಿಡಿದದ್ದು ಎಲ್ಲರಿಗೂ ಗೊತ್ತಿರುವುದೇ ತಾನೇ?

ಇನ್ನೊಂದು ಉದಾಹರಣೆಯನ್ನು ನೋಡೋಣ. ಚೀನೀ ಭಾಷೆಯಲ್ಲಿನ ಲಿಪಿ 'ಚಿತ್ರಲಿಪಿ' ಎಂದು ಎಲ್ಲರಿಗೂ ಗೊತ್ತು. ಅಲ್ಲಿನ ವಿಸ್ತಾರ ಭೂಪ್ರದೇಶದಲ್ಲಿ ಮಾತನಾಡುವ ಜನರ ಭಾಷಾ ವೈವಿಧ್ಯ ಎಷ್ಟು ಕಲ್ಪನಾತೀತವಾಗಿರಬೇಕು. ಒಂದೇ ಶಬ್ದಕ್ಕೆ – ಅದೇಕೆ ಒಂದೇ ಧ್ವನಿಗೆ – ಅವರು ಮಾತನಾಡುವ ರೀತಿಯಲ್ಲಿ ಬೇರೆ ಬೇರೆ ಪ್ರಾಂತಗಳಲ್ಲಿ ಬೇರೆ ಬೇರೆ ಅರ್ಥ ಉಂಟಾಗುತ್ತದೆ. 'ಚಿತ್ರಲಿಪಿ' ಯೊಂದೇ ಅವರಲ್ಲಿ ಭಾಷಾಬಾಂಧವ್ಯ ಉಂಟು ಮಾಡಿರುವುದು. ಒಬ್ಬ ವ್ಯಕ್ತಿ ವಿದ್ಯಾವಂತನೆನಿಸಿಕೊಳ್ಳಬೇಕಾದರೆ ಅವನು ಕನಿಷ್ಠ ಪಕ್ಷ ೨೦೦೦ ಚಿತ್ರಲಿಪಿಗಳನ್ನಾದರೂ ಕಲಿತಿರಬೇಕು. ಇದಕ್ಕೆಲ್ಲಾ ಹೋಲಿಸಿದರೆ ನಮ್ಮ ಕನ್ನಡ ಸುಲಿದ ಬಾಳೆ ಹಣ್ಣಿನಂತೆ ಅಲ್ಲವೆ?

''ಋ, ಐ, ಔ...ಷ, ಭ, ಷ'' ಇವುಗಳನ್ನು ತೆಗೆದುಹಾಕಲು ಒತ್ತಾಯಿಸುತ್ತಿರುವವರ ವಾದವೊಂದು ಉಲ್ಲೇಖವಾದಂತೆ ಹೀಗಿದೆ– ''ಸಂಸ್ಕೃತ ಮಹಾಪ್ರಾಣ ಅಕ್ಷರಗಳನ್ನು ಉಚ್ಚರಿಸಲು ಕಷ್ಟ. ಆದ್ದರಿಂದ ಕನ್ನಡವನ್ನು ಸರಿಪಡಿಸೋಣ'' ಎಂದು. (ಗುಲ್ಬರ್ಗಾ – ಬೀದರ್ ಗ್ರಾಮೀಣ ಪ್ರದೇಶಗಳಲ್ಲಿ 'ಸರಿಯಾಗು' ಎಂದರೆ ಸಾಯು, ನಾಶವಾಗು ಎಂದಾಗುತ್ತದೆ. ಎಂತಹ ವಿಡಂಬನೆಯಲ್ಲವೆ?) ಈ ಉಲ್ಲೇಖ ಸತ್ಯವಾದರೆ, ಇಂತಹ ಅಭಿಪ್ರಾಯಗಳು ಸತ್ಯಶೋಧನೆಗೆ ಅಡ್ಡಿಯಾಗುವಂತಹವು. ಸಮುದಾಯದಲ್ಲಿ ಎರಡು ಗುಂಪುಗಳನ್ನಾಗಿಸಿ, ಮೊದಲಿನ ಗುಂಪಿಗೆ ಎಲ್ಲ ಬುದ್ಧಿ ಸಾಮರ್ಥ್ಯ, ಕಲಿಕಾ ಯೋಗ್ಯತೆಯನ್ನು ಆರೋಪಿಸಿ, ಎರಡನೆಯ ಗುಂಪಿಗೆ ಎಲ್ಲವನ್ನು ನಿರಾಕರಿಸಿ ಅವರನ್ನು ಅಧೋಗತಿಗೆ ತಳ್ಳುವ ಮನೋಭಾವನೆ ಇಲ್ಲಿ ಕೆಲಸ ಮಾಡುತ್ತಿದೆ. ಮೇಲ್ನೋಟಕ್ಕೆ ಅವರಿಗೆ ಸಹಾನುಭೂತಿ ತೋರುತ್ತಾ ಮೊದಲನೆಯ ಗುಂಪಿನವರನ್ನೂ ಅವರ ಜತೆಗೆ ಸೇರಿಸುವಂತೆ ಸುಲಭದ ಅಕ್ಷರ, ಉಚ್ಚಾರಣೆಗಳಷ್ಟನ್ನೇ ಸಾರ್ವತ್ರಿಕವಾಗಿ ಬಹಿರಂಗವಾಗಿ ಕಲಿಸಿಕೊಡುವ ತಾರತಮ್ಯ ಭಾವನೆ ಇಲ್ಲಿ ಕೆಲಸ ಮಾಡುತ್ತಿದೆ.

ಹಿಂದೆ ಸಂಸ್ಕೃತ ಮತ್ತು ಅದರಲ್ಲಿನ ವೇದ, ವೇದಾಂಗ ಸಂಪತ್ತು ಕೇವಲ ಕೆಲವರ್ಗದವರಲ್ಲಿ ಮಾತ್ರ ಸೀಮಿತವಾಗಿದ್ದಾಗಲೂ, ಅವರು ಇದೇ ನೆಪವನ್ನು (ಎಂದರೆ ಉಳಿದವರಿಗೆ ಸಂಸ್ಕೃತ ಭಾಷೆ ದಕ್ಕುವುದು ಕಷ್ಟ. ಇತ್ಯಾದಿ) ಉಳಿದವರಿಗೆ ನಿರಾಕರಿಸಲು ಮುಂದೆ ಮಾಡುತ್ತಿದ್ದರಲ್ಲವೆ? ಅಂತಹ ಸಂಕುಚಿತ ಮನಸ್ಕತೆಯ ದುಷ್ಪ್ರಭಾವ ಇಂದಿಗೂ ಉಳಿದುಕೊಂಡು ಬಂದಿಲ್ಲವೇ? ಈಗ ಕನ್ನಡ

ಭಾಷೆಯ ವಿಷಯದಲ್ಲೂ ನಡೆಯಬೇಕೆ?

ಈ ವಿಷಯವಾಗಿ, ನಮ್ಮ ಕಣ್ಣ ಮುಂದೆಯೇ ೨೦-೨೧ ಶತಮಾನದಲ್ಲಿ ನಡೆದ, ನಡೆಯುತ್ತಿರುವ ಭಾಷಾ ಪವಾಡವೊಂದನ್ನು ವಿವರಿಸುತ್ತೇನೆ. ೧೯೪೮ನೇ ವರ್ಷ ಮಧ್ಯಪ್ರಾಚ್ಯದಲ್ಲಿ 'ಇಸ್ರೇಲ್' ಎಂಬ ನೂತನ ರಾಷ್ಟ್ರವೊಂದು ಭೀಕರವಾದ ದುರ್ಭರ ಸನ್ನಿವೇಶದಲ್ಲಿ ಪ್ಯಾಲೆಸ್ಟೈನ್ ಪ್ರದೇಶದಲ್ಲಿ ಜನ್ಮ ತಾಳಿತು. ಯಹೂದ್ಯರು ೧೯೦೦ ವರ್ಷಗಳ ಕಾಲ ಜಗತ್ತಿನಾದ್ಯಂತ ಅತ್ಯಂತ ಹೀನಾಯಕರವಾಗಿ, ಯಾರಿಗೂ ಬೇಡದವರಾಗಿ, ಎಲ್ಲರ ಕಣ್ಣಿಗೂ ಅಪಶಕುನದಂತೆ ಚುಚ್ಚುವ ಮುಳ್ಳಾಗಿ, ಮಾನವ ಕುಲಕ್ಕೇ ಕಲಂಕವೆಂಬಂತೆ ಹರಿದು ಹಂಚಿಹೋಗಿದ್ದರು. ಅವರು ಚರಿತ್ರೆಯ ಪುಟಗಳಿಂದ ಹಿಟ್ಲರ್‌ನಿಂದಾಗಿ ಅಳಿಸಿ ಹೋಗುವ ಸ್ಥಿತಿಯಲ್ಲಿದ್ದಾಗಲೇ ಪವಾಡ ಸದೃಶವಾಗಿ ಮೇಲೆದ್ದು ಪುಟ್ಟದೊಂದು ರಾಜ್ಯವನ್ನು ತಮ್ಮದಾಗಿ ಕಟ್ಟಿಕೊಂಡರು. 'ಯಹೂದೀ ಧರ್ಮ' ವೊಂದೇ ಅವರೆಲ್ಲರನ್ನೂ ಬಂಧಿಸಿದ್ದ ಸರಪಣಿ. ಅವರೆಲ್ಲರೂ ಪ್ರಪಂಚದ ಬೇರೆ ಬೇರೆ ಭಾಗಗಳಿಂದ ಬಂದವರು, ತರಹ ತರಹೆಯ ಮಾತನಾಡುವವರು. ಸ್ವಾತಂತ್ರ್ಯ ಘೋಷಣೆಯಾದ ಕೂಡಲೇ ಸರಕಾರ ವಿಶ್ವದಾದ್ಯಂತ ಯಹೂದೀ ಧರ್ಮೀಯರಿಗೆ ತಮ್ಮ ನಾಡಿಗೆ ಒಳವಲಸೆ ಬರಲು ಆಹ್ವಾನವಿತ್ತಿತು. ಅವರೆಲ್ಲರೂ ಬೇರೆ ಬೇರೆ ಭಾಷೆಯವರು, (ಅಕ್ಷರಸ್ಥರು, ಅನಕ್ಷರಸ್ಥರು) ರಷ್ಯನರು, ಜರ್ಮನರು, ಪೋಲರು, ಹಂಗೆರಿಯವರು, ಫ್ರೆಂಚರು, ತುರ್ಕಿ, ಕುರ್ದಿಶ್, ಅರಬ್ಬೀ, ಯಮನಿ, ಇಥಿಯೋಪಿಯನ್, ಸೋಮಾಲೀ, ಮಲಯಾಳಂ, ಪಾರ್ಸಿ, ಇಂಗ್ಲಿಷ್ ಇತ್ಯಾದಿ. ಈಗ ಸರಕಾರ ಅವರೆಲ್ಲರಿಗೂ ಅವರ ಪ್ರಾಚೀನ ಧರ್ಮ, ಗ್ರಂಥವಾದ ಟಾಲ್ಮುಡ್‌ನ ಭಾಷೆ 'ಹೀಬ್ರೂ' ಎಂಬುದನ್ನೇ ತಮ್ಮ ರಾಷ್ಟ್ರಭಾಷೆಯನ್ನಾಗಿ ಘೋಷಿಸಿತು. ಸರಕಾರ ಹೊರಗಿನಿಂದ ಬಂದ ಎಲ್ಲರಿಗೂ, ಎಂದರೆ, ಎಲ್ಲರಿಗೂ 'ಹೀಬ್ರೂ' ಭಾಷೆಯನ್ನು ಕಲಿಯಬೇಕೆಂದು ಕಡ್ಡಾಯ ಮಾಡಿತು., ಕಲಿಸುವ ವ್ಯವಸ್ಥೆ ಮಾಡಿತು, ಯಾರಿಗೂ 'ಹೀಬ್ರೂ' ಕಲಿಯಲು ಕ್ಲಿಷ್ಟವೆಂದು ಹೊರಗಿಡಲಿಲ್ಲ, ಹೀಗಾಗಿ 'ಒಂದೇ ನಾಡು, ಒಂದೇಧರ್ಮ, ಒಂದೇ ಭಾಷೆ' ಎಂಬ ಭದ್ರ ಬುನಾದಿಯ ಮೇಲೆ ಈ ಪುಟ್ಟ ರಾಷ್ಟ್ರ ಎಲ್ಲರ ಗಮನ ಸೆಳೆದಿದೆ. ಇಂದು ಹೀಬ್ರೂ ವಿಶ್ವವಿದ್ಯಾಲಯ ವಿಶ್ವವಿಖ್ಯಾತವಾಗಿದೆ – ಅಲ್ಲಿನ ವೈಜ್ಞಾನಿಕ, ವಿದ್ವಾಂಸರ, ಸಂಶೋಧನಗಳಿಂದ, ವಿಶ್ವದ ಜ್ಞಾನ ಭಂಡಾರಕ್ಕೆ ಅವರು ಕೊಡುತ್ತಿರುವ ಅಮೋಘ ಕಾಣಿಕೆಯಿಂದ. ಈಗಿನ ಹೀಬ್ರೂ ಭಾಷೆಯಲ್ಲಿ ಅವರ ಟೋರಾದ ಭಾಷೆಯ ಜತೆಜತೆಗೆ ಇಪ್ಪತ್ತನೆಯ ಶತಮಾನದ ಎಲ್ಲ ಐರೋಪ್ಯ ಭಾಷೆಗಳ ಶಬ್ದ ಸಂಪತ್ತಿನ ಲಾಭವೂ ಬೆರೆತಿದೆ.

ನಮ್ಮ ಕನ್ನಡ ಭಾಷೆ,ಕನ್ನಡ ವರ್ಣಮಾಲೆ, ಕನ್ನಡ ಲಿಪಿ ಇವೆಲ್ಲವೂ ಕನ್ನಡಿಗರಿಗಾಗಿ – ಎಂದರೆ ಎಲ್ಲ ಕನ್ನಡಿಗರಿಗೂ ಕನ್ನಡವನ್ನು ಪ್ರೀತಿಯಿಂದ ಕಲಿತು ಮಾತನಾಡುವವರಿಗಾಗಿಯೂ ಆ ವಾಗ್ದೇವಿ ಸರಸ್ವತಿ ಪ್ರದಾನ ಮಾಡಿರುವ ಅಮೂಲ್ಯ ವರಪ್ರಸಾದ. ಹಲವು ಧರ್ಮ, ಸಂಸ್ಕೃತಿಗಳು ಕನ್ನಡನಾಡನ್ನು ಬೆಸೆಯುವ ಭಾಷೆಯಾದ ಕನ್ನಡವನ್ನು ಯಾಕೆ ಒಡೆಯಬೇಕು? ಹಾಗೆ ಒಡೆಯುವುದೆಂದರೆ, ಜನರನ್ನೂ ಒಡೆದಂತೆಯೇ ಆಗುತ್ತದೆ.

## ಅನುಬಂಧ ಅ

### ಶ ಷ ಸ – ಒಂದು ಚಿಂತನೆ

೧. ಶ, ಷ, ಸ – ಇವು ಕ್ರಮವಾಗಿ ಕನ್ನಡ ವರ್ಣಮಾಲೆಯ ೫೧,೫೨ ಮತ್ತು ೫೩ನೆಯ ಅಕ್ಷರಗಳು. ಕನ್ನಡ ಮಾತೃಭಾಷೆಯಾಗಿರುವ ಬಲ್ಲಿದರು ಈ ಮೂರು ದನಿಗಳನ್ನು ನುಡಿಯುವಾಗ ಬೇರೆ ಬೇರೆಯಾಗಿ ಗುರುತಿಸಬಲ್ಲರೇ? ಅಥವಾ ಈ ಮೂರು ಉಲಿಗಳನ್ನು

ಬರೆಯುವಾಗ ಬೇರೆ ಬೇರೆಯೆಂದು ಗುರುತಿಸಬಲ್ಲರೇ? ಇದೇ ಮೂರು ದನಿಗಳನ್ನು ಯಾವ ಯಾವ ಸಂದರ್ಭಗಳಲ್ಲಿ ಬೇರೆ ಬೇರೆಯಾಗಿ ಗುರುತಿಸಬಲ್ಲರು. ಯಾವಾಗ ಗುರುತಿಸಲಾರರು? ನುಡಿಯುವಾಗ ಕೇಳುಗರು ಯಾವ ಉಲಿಯನ್ನು ಮತ್ತೊಂದು ಬೇರೆ ಉಲಿಯೊಂದಿಗೆ ಸಮೀಕರಿಸಿ ಗೊಂದಲಕ್ಕೆ ಈಡಾಗುತ್ತಾರೆ ಇಲ್ಲವೇ ಬರೆಹದಲ್ಲಿ ಗೊಂದಲದಿಂದ ತಪ್ಪಾಗಿ ಬರೆಯುತ್ತಾರೆ? ಈ ಎಲ್ಲಾ ಪ್ರಶ್ನೆಗಳೂ ಒಂದರ ಹಿಂದೆ ಒಂದು ಎಂಬಂತೆ ಏಳುವುದು ಸಹಜ.

೨. ಧ್ವನಿಶಾಸ್ತ್ರದಲ್ಲಿ ಈಗಾಗಲೇ ಶ, ಷ, ಸ – ಈ ಉಲಿಗಳನ್ನು ವೈಜ್ಞಾನಿಕವಾಗಿ ಗುರುತಿಸಿ ವಿಶ್ಲೇಷಿಸಿದೆ. ಅವುಗಳ ಉಗಮ ಸ್ಥಾನ, ಧ್ವನಿ ಉಂಟಾಗಲು ಸಹಕರಿಸುವ ಧ್ವನ್ಯಂಗಗಳು, ಅವುಗಳು ಧ್ವನ್ಯಂಗಗಳ ಯಾವ ಸ್ಥಳದಲ್ಲಿ ಯಾವ ರೀತಿಯಾಗಿ ಯಾವ ಮಟ್ಟಿಗೆ ಕೆಲಸ ನಿರ್ವಹಿಸಿ ಈ ಧ್ವನಿಗಳನ್ನು ಉಂಟುಮಾಡುತ್ತವೆ. ಅವುಗಳಲ್ಲಿ ತಟಸ್ಥ ಯಾವ ಅಂಗ, ಕ್ರಿಯಾಶೀಲ ಯಾವ ಅಂಗ, ವಾಯುವಿನ ಚಲನೆಯ ದಿಕ್ಕು, ಮಾರ್ಗ, ಹಾಗೂ ಒತ್ತಡದ ಪ್ರಮಾಣ ಎಂತಹುದು ಎಂದೆಲ್ಲಾ ನಿಖರವಾಗಿ ಗುರುತಿಸಿ ವಿವರಿಸಿದೆ. ಇದರ ಪರಿಣಾಮ ವೆಂದರೆ ಶ, ಷ, ಸ – ಇವು ಮೂರು ಸ್ವತಂತ್ರವಾದ ತಮ್ಮದೇ ಆದ ಅಸ್ತಿತ್ವವನ್ನು ಹೊಂದಿರುವುದು ನಿಚ್ಚಳವಾಗಿದೆ.[೧]

೩. ಸ ಮತ್ತು ಶ – ಇವೆರಡೂ ಸರ್ವಸಾಧಾರಣವಾಗಿ ಎಲ್ಲ ಭಾಷೆಗಳಲ್ಲಿಯೂ ಅಸ್ತಿತ್ವದಲ್ಲಿರುವ ಅಕ್ಷರ/ಧ್ವನಿಗಳು. ಹಾಗೆಂದೇ ಇವುಗಳ ಪ್ರತ್ಯೇಕ ಅಸ್ತಿತ್ವವನ್ನು Minimal Pairs (ಕನಿಷ್ಟ ಅಸಮ ಯುಗ್ಮಗಳು) ಇವುಗಳನ್ನು ಪತ್ತೆ ಹಚ್ಚಿ, ಜೋಡಿಸಿ ನೋಡಿದಾಗ ಸಾಧಿಸಿ ತೋರಿಸಬಹುದು. ಇದನ್ನು 'ಅನುಬಂಧ–ಆ'ದಲ್ಲಿ ತೋರಿಸಿದೆ. ಹೀಗಾಗಿ 'ಸ' ಮತ್ತು 'ಶ' ಉಲಿಗಳಲ್ಲಿ ಗೊಂದಲ ಆಗುವಂತಿಲ್ಲ.

೪. ಶ ಮತ್ತು ಷ – ಇವುಗಳ ವಿಶ್ಲೇಷಣೆ ಧ್ವನಿಶಾಸ್ತ್ರದನ್ವಯ ಆಗಿರುವುದೊಂದೇ ಸರಿಯಷ್ಟೆ. ಈ ಉಲಿಗಳು ಪದರೂಪದಲ್ಲಿ ಹೇಗೆ ಕಂಡುಬರುತ್ತವೆ ಎಂದು ನೋಡುವುದು ಇನ್ನೊಂದು ವಿಶ್ಲೇಷಣಾ ಕ್ರಮ. ಒಂದು ಪದದ ಆರಂಭದಲ್ಲಿ ಶ (ಅಥವಾ ಷ) ಬಂದಾಗ ಅದರ ಮುಂದಿನ ಉಲಿ/ಅಕ್ಷರ ಯಾವುದು ಆಗಿರುವುದು ಸಾಧ್ಯ, ಯಾವುದು ಆಗಿಲ್ಲ ಎಂದು ಪಟ್ಟಿ ಮಾಡಿ ನೋಡಿದಾಗ ನಮಗೆ ಕೆಲವು ಮಹತ್ವದ ಮಾದರಿಗಳು (Patterns) ಸಿಗುತ್ತವೆ. ಅದೇ ರೀತಿ ಪದಮಧ್ಯದಲ್ಲಿ ಶ (ಅಥವಾ ಷ) ಬಂದಾಗ ಅದರ ಹಿಂದೆ – ಮುಂದೆ (ಅಕ್ಕಪಕ್ಕದಲ್ಲಿ) ಬರುವ ಅಕ್ಷರಗಳನ್ನು ಗುರುತಿಸಿದಾಗಲೂ ನಮಗೆ ಒಂದೊಂದು ಅಸಾಮಾನ್ಯವಾದ ಮಾದರಿಗಳು ಕಾಣಸಿಗುತ್ತವೆ. ಕೊನೆಯದಾಗಿ, ಒಂದು ಪದದ ಕೊನೆಯ ಉಲಿಯಾಗಿ ಶ (ಅಥವಾ ಷ) ಬಂದಾಗಲೂ ಇಂತಹುದೇ ವಿಭಿನ್ನವಾದ ಮಾದರಿಗಳು ಕಾಣಿಸಿಕೊಳ್ಳುತ್ತವೆ. ಇವೆಲ್ಲವನ್ನೂ ಪಟ್ಟಿ ಮಾಡಿ, ಈ ಎಲ್ಲಾ ಮಾದರಿಗಳನ್ನು ಪರೀಕ್ಷಿಸಿದಾಗ, ಒಂದು ಪ್ರಮುಖ ವಾದ ಅಂಶ ಗೋಚರವಾಗುತ್ತದೆ. – 'ಶ ಮತ್ತು ಷ ಗಳಿಗೆ ತಮ್ಮದೇ ಆದ ಪ್ರತ್ಯೇಕವಾದ ಅಸ್ತಿತ್ವವಿದೆ. ಒಂದು ಇನ್ನೊಂದರ ಬದಲಿಗೆ ಬರುವಂತಿಲ್ಲ'.[೨]

೫. ಮೇಲೆ ನೋಡಿದಂತೆ ಶ, ಷ, ಸ ಗಳನ್ನು ಉಲಿಯುವಾಗ ಅವುಗಳ ಧ್ವನಿ ಪರಿಸರವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇದನ್ನೇ ತಿರುವುಮುರುವಾಗಿ ನೋಡಿದರೆ ಇಂತಿಂತಹ ಧ್ವನಿ ಪರಿಸರದಲ್ಲಿ ಇಂತಿಂತಹ ಧ್ವನಿ/ ಉಲಿ ಉಂಟಾಗುತ್ತದೆ ಎಂಬುದನ್ನೂ ಪರೀಕ್ಷೆ ಮಾಡಿ ನೋಡಬಹುದು. 'ಸಂಗದೋಷ' ಎಂಬಂತೆ 'ಸಂಗದ ಮಹತ್ವ'ವನ್ನು ಇದು ಎತ್ತಿ

ತೋರಿಸುತ್ತದೆ. ಈ ಮಾತು ನಿಜವಾದರೆ, ಬರೆಹದಲ್ಲಿಯೂ ಈ ಶಿಸ್ತನ್ನು ಕಾಯ್ದುಕೊಳ್ಳುವುದು ಕಷ್ಟಕರವಲ್ಲ. ಇದರ ಅರ್ಥವೇನೆಂದರೆ, ಶಿಕ್ಷಿತರು ಖಂಡಿತವಾಗಿಯೂ ಶ, ಷ, ಸ ಈ ಮೂರು ಉಲಿಗಳು ಬೇರೆ ಬೇರೆ ಎಂದು ನುಡಿಯಲ್ಲಿಯಷ್ಟೇ ಏಕೆ, ಬರೆಹದಲ್ಲಿಯಂತೂ ವಾಸ್ತವವಾಗಿ ಗುರುತಿಸಬಲ್ಲರು.

೬. ನುಡಿ ಮತ್ತು ಬರೆಹದ ವಿಷಯದಲ್ಲಿ ಅವುಗಳ ನಡುವಿನ ಅಂತರ, ವ್ಯತ್ಯಾಸಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ನಮ್ಮ ಜೀವನದಲ್ಲಿ 'ಸತ್ಯ'ಕ್ಕೆ ಒಂದು ಸರಳವಾದ ಸರ್ವಸಮ್ಮತವಾದ ಅರ್ಥವನ್ನು ಹೀಗೆ ಕೋಡುತ್ತೇವೆ. ''ನುಡಿದಂತೆ ನಡೆಯುವುದು, ನಡೆದಂತೆ ನುಡಿಯುವುದು'' ಆದರೆ ಇದು ಕಾರ್ಯಸಾಧ್ಯವಲ್ಲದ ಆದರ್ಶ ಮಾತ್ರ ಎಂದು ಯಾರಿಗೆ ತಾನೆ ಗೊತ್ತಿಲ್ಲ? ಅದನ್ನೇ ಅನುಸರಿಸಿ, ''ನುಡಿದಂತೆ ಬರೆಯಬೇಕು, ಬರೆದಂತೆ ನುಡಿಯಬೇಕು'' ಎಂದು ಹೇಳಿದರೆ ಅದೂ ಕೂಡಾ ಕೇವಲ ಅರ್ಧ ಸತ್ಯ ಮಾತ್ರವಷ್ಟೇ? ಏಕೆಂದರೆ ನುಡಿದಂತೆ ಬರೆಯುವುದು ಅತ್ಯಂತ ದುಷ್ಕರ, ಅಸಾಧ್ಯವೆಂದೇ ಹೇಳಬಹುದು.[೨] ಅಮೂರ್ತವಾದ ವಾಣಿ ಸ್ವರೂಪದಲ್ಲಿರುವ ಭಾಷೆಯನ್ನು ಎರಡು ಆಯಾಮವುಳ್ಳ ಸಪಾಟದ ಕಾಗದದ ಮೇಲೆ ಪಡಿಯಿಳಿಸುವುದು ಕಲ್ಪನಾತೀತ. ಬರೆಹ ಯಾವಾಗಲೂ ಅಪರಿಪೂರ್ಣ. ಅದು ವಾಣಿಯ ಸುಸಂಬದ್ಧತೆಯನ್ನು ಸಾಂದರ್ಭಿಕ ರಸವತ್ತತೆಯನ್ನು ಎಂದಿಗಾದರೂ ಪಡೆದೀತೋ? ಅದಕ್ಕೆ ವಾಣಿಯಲ್ಲಿರುವ 'ಶಾಪಾನುಗ್ರಹಶಕ್ತಿ' ಇರಲೇ ಆರದು. (ಎಂದರೆ ಶಾಪದಲ್ಲಿನ ರೌದ್ರ, ಉದ್ವೇಗ, ದುಗುಡ, ಆವೇಶ, ಆಕ್ರೋಶ ಇತ್ಯಾದಿಗಳಾಗಲೀ, ಅನುಗ್ರಹದಲ್ಲಿನ ಶಾಂತಿ, ತಾಳ್ಮೆ, ತೃಪ್ತಿ, ತೋಷ, ಆನಂದ ಇತ್ಯಾದಿಗಳಾಗಲೀ, ಅವುಗಳ ಜತೆ ಜತೆಗೆ ಉಂಟಾಗುವ ಧ್ವನಿಯಲ್ಲಿನ ವ್ಯಂಗ್ಯ, ಇಂಗಿತಾರ್ಥ, ಏರಿಳಿತ, ಮೈಕುಲುಕು, ಅಡೆ-ತಡೆ, ಉಗ್ಗು, ಬಿಕ್ಕಳಿಕೆ ಇತ್ಯಾದಿ ಆಂಗಿಕ ಅಭಿನಯಗಳಾಗಲೀ ಬರೆಹಗಳಲ್ಲಿ ಪಡಿ ಮೂಡುವುದಿಲ್ಲ.) ಒಟ್ಟಿನಲ್ಲಿ ಬರೆಹ ವಾಣಿಯಂತೆ ಪ್ರತ್ಯಕ್ಷಾನುಭವವನ್ನು ಕೊಡಮಾಡದು. ಮೊದಲು ಮನುಷ್ಯ ಕಲಿಯುವುದು ಮಾತನಾಡುವುದನ್ನು ಬರೆಯುವುದನ್ನು ಏನಿದ್ದರೂ ಕಲಿಯುವುದು ಆಮೇಲೆ. ನುಡಿ ಮೊದಲು, ಲಿಪಿ ಅನಂತರ.

೭. ಹೀಗೆಂದ ಮಾತ್ರಕ್ಕೆ ಬರೆಹ ಅಮುಖ್ಯವೇನಲ್ಲ. ಬರೆಹವನ್ನು ಮನುಷ್ಯ ಕಂಡು ಹಿಡಿಯದೇ ಹೋಗಿದ್ದರೆ ನಾವಿನ್ನೂ ಕತ್ತಲ ರಾಜ್ಯದಲ್ಲಿ ಕೊಳೆಯಬೇಕಾಗುತ್ತಿತ್ತು. ಬರೆಹ ಮಾನವನ ನಾಗರೀಕತೆಯ ಬುನಾದಿ, ನೆನಪಿನ ಕೋಶ. ಆ ಬುನಾದಿಯ ಮೇಲೆಯೇ ನಾಗರಿಕತೆಯ ಕಟ್ಟೋಣ ನವನವೀನವಾಗಿ ಪುನರಪಿ ನಿರ್ಮಾಣಗೊಳ್ಳುತ್ತಿರುವುದು. ಇದೆಲ್ಲಾ ಸಾಧ್ಯವಾಗಿರುವುದು ಈ ಬರೆಹರೂಪದ ಭಾಷಾನಿಧಿಯಿಂದ. ಮಾನವನ ಸಾಧನೆಯ ಸಾಕ್ಷ್ಯಗಳು ಮಾದರಿಗಳು ನಮಗೆ ಕರಗತವಾಗುತ್ತಿರುವುದು ಈ ಲಿಪಿಯ ಮಾಧ್ಯಮದಿಂದ. ನಮ್ಮ ಸಾಧನೆಯ ಗುರುತುಗಳು, ನಮ್ಮ ಕಲ್ಪನೆಗಳು, ವಿಚಾರಗಳು, ನಮ್ಮ ಮುಂದಿನ ತಲೆಮಾರಿಗೆ ತಲುಪಬೇಕಾದದ್ದೂ ಕೂಡ ನಾನಾ ಪ್ರಕಾರಗಳ ರೂಪದಲ್ಲಿರುವ ಬರೆವಣಿಗೆಯ ಮೂಲಕವೇ ಸರಿ. ಹಾಗೆಂದೇ ನುಡಿ – ಲಿಪಿಯನ್ನು ಸಂವಹನ ಯುಗಲಗಳು ಎಂದು ಸಮಾನ ಗಂಭೀರತೆಯಿಂದ ಸ್ವೀಕರಿಸಬೇಕಾಗುತ್ತದೆ.

೮. ಪ್ರಪಂಚದ ಯಾವ ಭಾಷೆಯಲ್ಲಿಯೂ ಬರೆಹದಲ್ಲಿ ಒಂದು ಧ್ವನಿಯುಲಿಗೆ ಅದರದೇ ಆದೊಂದು ಅನನ್ಯವಾದ ಸಂಕೇತ ಇರುವಂತಹ ವ್ಯವಸ್ಥೆ ಕಂಡುಬರುವುದಿಲ್ಲ. ಅತ್ಯಂತ ಕನಿಷ್ಠತಮವಾದ ಬೇಡಿಕೆ ಇದು ಎಂದು ಎಲ್ಲರೂ ಒಪ್ಪುತ್ತಾರೆ. ಇಂಗ್ಲಿಷಿನಿಂದೊಂದು ಅತಿ

ಸಾಧಾರಣವಾದ ಉದಾಹರಣೆಯನ್ನು ನೋಡಬಹುದು. /ಕ/ಉಲಿಗೆ k (peak), ck (pick), c (pact), cc (peccavi), ch (pachyderm), que (pique) ಅಲ್ಲದೆ queue (ಕ್ಯೂ) ಎಂದೆಲ್ಲಾ spelling (ಅಕ್ಷರ ಜೋಡಣೆ) ಸಿಗುತ್ತದೆ. ಆದರೆ k ಸಂಕೇತಕ್ಕೆ kn ಎಂದು (n)ಸೇರಿಸಿಕೊಂಡಾಗ, ಅದರ ಉಲಿ/ನ/ (ಉದಾ – knot,knee ಇತ್ಯಾದಿ. ಒಂದೇ ಒಂದು ಅಪವಾದ knesset - ಕ್ನೆಸಿಟ್ ಎಂಬುದು ಹೀಬ್ರೂ ಪದ) ಎಂದಾಗುತ್ತದೆ. ಶ್ರೀಮನ್ ನಾರಾಯಣನ (n) ಸಾನ್ನಿಧ್ಯದಲ್ಲಿ ಕೃಷ್ಣ (k)ಮಹಾಮೌನಿ : ಸ್ವಾರಸ್ಯವೆಂದರೆ, ಷೇಕ್ಸ್ಪಿಯರ್ ಮಹಾಕವಿಯ ಸ್ವಹಸ್ತಾಕ್ಷರ ಎಂದು ಹೇಳಲಾಗುವ ಹತ್ತು ಬೇರೆ ಬೇರೆ ನಮೂನೆಯ ರುಜುಗಳಲ್ಲಿ ಇರುವ ಸ್ಪೆಲಿಂಗ್ (spelling) ವಿವಿಧತೆ ಎಂಥವರನ್ನೂ ಅಚ್ಚರಿಗೆಡವುತ್ತದೆ. ಇದು ಸುಪ್ರಸಿದ್ಧವಾದ Ripley ಯ Believe it or not ದಲ್ಲಿ ದಾಖಲೆಯಾಗಿದೆ.[೬] ತನ್ನ ಮಾತೃಭಾಷೆಯಲ್ಲಿನ ಈ ಅವ್ಯವಸ್ಥೆ, ವಿಕ್ಷಿಪ್ತತೆ, ಅಸಂಬದ್ಧತೆಗಳನ್ನು ಕಂಡು ಮನನೊಂದು ಕನಲಿ ವಿಚಲಿತನಾದ ಇಪ್ಪತ್ತನೆಯ ಶತಮಾನದ ಚಿಂತಕ, ನಾಟಕಕಾರ, ಜಿ.ಬಿ.ಷಾ ಭಾಷೆಯ ಸುಧಾರಣೆಯ ಕನಸು ಕಂಡನು. ಅದಕ್ಕಾಗಿಯೇ ತನ್ನ ಮೃತ್ಯುಪತ್ರದಲ್ಲಿ ತನ್ನ ಬಹುಪಾಲು ಆಸ್ತಿಯನ್ನು ಮೀಸಲಾಗಿಟ್ಟನು. ಸರಕಾರವೇ ಇಂತಹ ಕಾರ್ಯವನ್ನು ಕೈಗೂಡಿಸಲೆಂದು ಒತ್ತಾಯ ಮಾಡಿದ್ದನು. ಇತ್ತೀಚೆಗಷ್ಟೇ ಸರಕಾರವು ನೇಮಿಸಿದ ಆಯೋಗ ಈ ಕೆಲಸ ಅಸಾಧ್ಯವೆಂದು ತೀರ್ಮಾನಿಸಿದೆ. ಅವನ ಇಚ್ಛೆಯಂತೆ ಭಾಷೆಯ ಸುಧಾರಣಾ ಕಾರ್ಯ ಆಗದೆ ಅಪೂರ್ಣವಾಗಿ ಉಳಿದಿದೆ.

೯. ಕನ್ನಡದ ವರ್ಣಮಾಲೆ ನಮ್ಮ ಭಾಷೆಯ ಉಲಿಗಳೆಲ್ಲವನ್ನು ಪಡಿ ಹಿಡಿಯಲು ಸಮರ್ಥ ವಾಗಿದೆ. ಇತರ ಭಾರತೀಯ ಭಾಷೆಗಳಿಗೆ ಹೋಲಿಸಿದರೆ, ಈ ಮಾತು ಸ್ಪಷ್ಟವಾಗುತ್ತದೆ. ತಮಿಳಿನಲ್ಲಿ ವರ್ಗಾಕ್ಷರಗಳಲ್ಲಿನ ಮಿತತ್ವ, ದೇವನಾಗರೀ ಲಿಪಿಯಲ್ಲಿನ ಎ, ಒ ಸ್ವರಾಕ್ಷರಗಳ ನಾಪತ್ತೆ, ಬಂಗಾಳಿಯಲ್ಲಿನ ಸ,ಶ,ಷ ಗಳ ನಡುವಿನ ಕ್ಲಿಷ್ಟತೆ, ಉರ್ದು ಭಾಷಿಕರು ಮೊದಲನೆಯ ಅಕ್ಷರ ಸಂಯುಕ್ತಾಕ್ಷರವಾದರೆ ಸೇರಿಸಿಕೊಳ್ಳುವ ಊರೆಗೋಲಿನಂತಹ 'ಇ' ಅಕ್ಷರ (ಇಸ್ಕೂಲ್, ಇಸ್ತ್ರೀ ಇತ್ಯಾದಿ) ಇಂತಹ ಕೊರತೆಗಳು ಕನ್ನಡದಲ್ಲಿಲ್ಲ. ನಮ್ಮ ವರ್ಣಮಾಲೆ ಸ್ಥಿರೀಕರಣಗೊಂಡಿದೆ. (ಇಂಗ್ಲಿಷಿನ ಧ್ವನಿಗಳಾದ /f/v/z/z ಇತ್ಯಾದಿ ನಮ್ಮಲ್ಲಿ ಇರದಿದ್ದರೇನು? ನಾವೇನೂ ಆ ಭಾಷೆಯಲ್ಲಿ ಮಾತನಾಡಬೇಕಾಗಿಲ್ಲವಲ್ಲ?) ನಮ್ಮ ಭಾಷೆ ಇರುವುದು ನಮಗಾಗಿ, ನಮ್ಮಿಂದ, ನಮ್ಮ ನಿಷ್ಠೆ, ನಮ್ಮ ಶ್ರಮದಿಂದ, ನಮ್ಮವರಿಗಾಗಿ. ನಮ್ಮ ಜನರ ಮಧ್ಯೆ ಸಂವಹನದ ಮಾಧ್ಯಮವಾಗಿ ನಮ್ಮ ಕನ್ನಡ ನುಡಿ ಅತ್ಯಂತ ಸಮರ್ಥವಾಗಿ ಕೆಲಸ ಮಾಡುತ್ತಿದೆ, ನುಡಿಯಲ್ಲಿಯೂ, ಬರೆಹದಲ್ಲಿಯೂ, ಇದು ನಾಡಿಗೇ ಗೊತ್ತಿರುವ ಸತ್ಯ.

೧೦. ಕನ್ನಡ ಲಿಪಿಯ ಸುಧಾರಣೆಯ ಬಗ್ಗೆ ಈಗಾಗಲೇ ಅನೇಕ ವಿದ್ವಾಂಸರು, ಚಿಂತಕರು, ಅನ್ವೇಷಕರು ಚಿಂತನೆ ಮಾಡಿದ್ದಾರೆ. ಕಾರ್ಯಸಾಧನೆಯ ನೀಲನಕ್ಷೆಯನ್ನು ಮುಂದಿಟ್ಟಿದ್ದಾರೆ. ಪ್ರೊ. ಬಿ.ಎಂ.ಶ್ರೀ, ಟೈಪ್‌ರೈಟರ್‌ನ ಪರಿಣತ ಶ್ರೀ ಅನಂತ ಸುಬ್ಬರಾವ್ ಮುಂತಾದ ಮಹನೀಯರು ಈ ಕ್ಷೇತ್ರದಲ್ಲಿ ದುಡಿದಿದ್ದಾರೆ. ಮುದ್ರಣ ಯಂತ್ರಗಳು, ಟೈಪ್‌ರೈಟರ್‌ಗಳು, ಕಂಪ್ಯೂಟರ್‌ಗಳು – ಹೀಗೆ ಒಂದೊಂದು ನೂತನ ಆವಿಷ್ಕಾರದ ಸಮಯದಲ್ಲಿಯೂ ಕನ್ನಡ ಲಿಪಿಯ ಸುಧಾರಣೆಯ ಬಗ್ಗೆ ಚಿಂತನೆಗಳು, ಚರ್ಚೆಗಳು ಆಗುತ್ತಿವೆ. ಆದರೆ ಶ ಷ ಗಳ ಬಗ್ಗೆ ಚಿಂತನೆಯಾಯಿತೋ ಇಲ್ಲವೋ ತಿಳಿಯದು. ಭಾಷಾಶಾಸ್ತ್ರದ (ಧ್ವನಿಶಾಸ್ತ್ರದ) ದೃಷ್ಟಿಯಿಂದ ಈ ಎರಡೂ ಅತ್ಯಗತ್ಯ, ಒಂದಕ್ಕೊಂದು ಪೂರಕ ಎಂದು ನೋಡಿದ್ದಾಗಿದೆ.

೧೧. ಒಂದು ವೇಳೆ 'ಷ' ಅಕ್ಷರವನ್ನು ಕೈಬಿಟ್ಟು 'ಶ'ವನ್ನು ಅದರ ಜಾಗದಲ್ಲಿ ದುಡಿಸಿಕೊಂಡರೆ ಏನಾದೀತು? ಈ ಕೆಳಗಿನ ಉದಾಹರಣೆಯನ್ನು ನೋಡಿ.
ಎಲ್ಲ ಪಕ್ಶಕಾರರಿಗೂ ತಿಳಿಸುವುದೇನೆಂದರೆ, ಯಾರಾದರೂ ಕೃಶಿಕರು ತಮ್ಮ ಕೃಶಿ ಭೂಮಿಯನ್ನು ಕೃಶಿಯೇತರ ಚಟುವಟಿಕೆಗಳಿಗೆ ಎಂದರೆ ಉದ್ದಿಮೆದಾರರಿಗೆ ಮಾರಿದರೆ, ಆಗ ಉದ್ದಿಮೆದಾರರು ನಿರ್ದೋಶಿಗಳೆಂದು ತೀರ್ಮಾನಿಸಲು ನಮಗೆ ಸಂತೋಶವಾಗುತ್ತದೆ.

೧೨. ಇಂತಹ ಬರೆಹ ಕಾರ್ಯಸಾಧ್ಯವೇನೋ ಹೌದು. ಆದರೆ ಕಾರ್ಯಸಾಧುವಲ್ಲ.

೧೩. ಏಕೆಂದರೆ ಇಂತಹ ಹೊಸ ಬಗೆಯ ಬರವಣಿಗೆಗೆ ನಮ್ಮ ಕಣ್ಣು ಹೊಂದಿಕೊಳ್ಳಬೇಕು. ಅದನ್ನು ಆ ಕೂಡಲೇ ನಮ್ಮ ಮಸ್ತಿಷ್ಕ ಗ್ರಹಿಸಬೇಕು. ಅದು ಹಾಗೆಯೇ ಬುದ್ಧಿಗೆ ಗೋಚರವಾಗಬೇಕು. ಪರಿಣಾಮವಾಗಿ ನಮ್ಮ ಮನಸ್ಸು ಅದನ್ನು ಆಪ್ಯಾಯಮಾನವೆಂದು ಒಪ್ಪಿಕೊಳ್ಳಬೇಕು.

೧೪. ಇಂದಿನವರೆಗೆ ನಮ್ಮಲ್ಲಿ ನಿಧಿಯಂತೆ ಸಂಗ್ರಹವಾಗಿರುವ ಎಲ್ಲ ಗ್ರಂಥ ಭಂಡಾರವನ್ನು ಪುನರಪಿ ತಿದ್ದುಪಡಿ ಮಾಡುವುದು, ಟೈಪ್‌ರೈಟರ್, ಮುದ್ರಣಯಂತ್ರದ ಅಚ್ಚು ಜೋಡಿಸುವ ಕೆಲಸ, ಕಂಪ್ಯೂಟರ್‌ಗಳ ಕೆಲಸಕಾರ್ಯಗಳಲ್ಲಿ ಬದಲಾವಣೆಗಳು, ಹಾಗೆಯೇ ಮುಂದಿನ ಪೀಳಿಗೆಗಳಿಗೆ (ಕೆಲವಾರು ತಲೆಮಾರಿನವರೆಗಾದರೂ) ಈ ಮಾರ್ಪಾಡಿನ ಅಭ್ಯಾಸ ಮಾಡಿಸುವುದು – ಈ ಪರಿಶ್ರಮಗಳು ಸಮಯ, ಧನ, ತಾಳ್ಮೆ, ದೃಢತೆ, ಧೀಶಕ್ತಿಯನ್ನು ಮುಂದಿನ ಯುವಪೀಳಿಗೆಯಲ್ಲಿ ನಿರೀಕ್ಷಿಸುತ್ತವೆ.

೧೫. ಹಾಗೂ ಒಂದು ಪಕ್ಷ, ಮೇಲಿನದಲ್ಲೆವೂ ಒದಗಿಬಂದರೂ ಇದರ ಪರಿಣಾಮ (ಎಂದರೆ ಷ ವರ್ಣವನ್ನೂ ತೆಗೆದುಹಾಕಿ ಶ ವರ್ಣವನ್ನು ಅದರ ಸ್ಥಾನದಲ್ಲಿ ಸ್ವೀಕರಿಸುವುದು) ನಗಣ್ಯ ವೆನಿಸಿದರೆ ಆಶ್ಚರ್ಯವಾಗುವುದಿಲ್ಲ. ಬಹುಶಃ G.B. Shaw ರವರ ಕೊನೆಯಾಸೆಯನ್ನು ಈಡೇರಿಸಲಾಗದಿದ್ದುದಕ್ಕೆ ಇಂಥದ್ದೊಂದು ಕಾರಣವಿದ್ದರೆ ಸೋಜಿಗವೆನಿಸುವುದಿಲ್ಲ.

೧೬. ಕೊನೆಯದಾಗಿ, ಭಾಷೆ ಜೀವಂತವಾದೊಂದು ಪ್ರಕ್ರಿಯೆ, ನಮ್ಮ ದೇಹದಲ್ಲಿ ಪ್ರತಿ ನಿಮಿಷವೂ ಸಾವಿರಾರು ಜೀವಕೋಶಗಳು ಹುಟ್ಟುತ್ತವೆ ಹಾಗೂ ಸಾಯುತ್ತವೆ. ಹಾಗೆಯೇ ಎಲ್ಲ ಸತ್ತ ಜೀವಕೋಶಗಳೂ ದೇಹದಿಂದ ಕೂಡಲೇ ವಿಸರ್ಜಿಸಲ್ಪಡುವುದಿಲ್ಲ. ಜೀವ ಹೋದ ಶರೀರದಲ್ಲಿ ಮಾತ್ರ ಸತ್ತಜೀವಕೋಶಗಳನ್ನು ಪ್ರಕೃತಿ ನಾಶಮಾಡುತ್ತದೆ. ಇನ್ನೊಂದು ಮಾತು – ನಮ್ಮ ದೇಹದಲ್ಲಿನ ಸಮಸ್ತ ಅಂಗಾಂಗಗಳೂ ನಮಗೆ ಕ್ರಿಯಾಶೀಲವಾಗಿರುವುದು ಗೋಚರವಾಗುವುದಿಲ್ಲ. ಉದಾ – ನಮ್ಮ ಕೂದಲು, ಉಗುರು, ಕಿರುಬೆರಳು (ಕಾಲಿನ) ಅಪೆಂಡಿಕ್ಸ್ ಎಂಬ ಕರಳಿನ ಭಾಗ. ಹೀಗಿದ್ದರೂ ನಮ್ಮ ದೇಹ ಆರೋಗ್ಯವಾಗಿರುತ್ತದೆ (ಜೀವವಿರುವವರೆಗೂ) ಜೀವಂತವಾಗಿರುತ್ತವೆ. ಇದು ಭಾಷೆ ಎಂಬ ಜೀವಂತಿಕೆಯ ಪ್ರಕ್ರಿಯೆಗೂ ಅನ್ವಯವಾಗುತ್ತದೆ. ಕುವೆಂಪು ಹೇಳುವಂತೆ – ''ಇಲ್ಲಿ ಯಾವುದೂ ಮುಖ್ಯವಲ್ಲ ಯಾವುದೂ ಅಮುಖ್ಯವಲ್ಲ...'' ಭಾಷೆ ಒಂದು ಮಹಾವೃಕ್ಷದಂತೆ – ಯಾವ ಸಮಯದಲ್ಲಿ ನೋಡಿದರೂ ಅದರಲ್ಲಿ ಕೆಲವು ಕೊಂಬೆಗಳಲ್ಲಿ ಹೊಸ ಚಿಗುರು ಹುಟ್ಟಿರುತ್ತದೆ. ಮೊಗ್ಗು ತಳಿದಿರುತ್ತದೆ, ದಟ್ಟ ಹಸಿರಾದ ಎಲೆಗಳು ಥಳಥಳಿಸುತ್ತಿರುತ್ತವೆ. ಇನ್ನೊಂದು ಪಾರ್ಶ್ವದಲ್ಲಿ ನೋಡಿದರೆ ಅಲ್ಲಿ ಕೊಂಬೆ ರೆಂಬೆಗಳು ಒಣಗಿ ಕಡ್ಡಿಯಾಗಿ ಗಾಳಿಯನ್ನು ಗೀರುತ್ತಿರುತ್ತವೆ. ಆದರೂ ಆ ಮರ ಒಣಕಡ್ಡಿಗಳನ್ನು ತನ್ನ ಮೈ ಕೊಡವಿಕೊಂಡು ಬೀಳಿಸಿಕೊಳ್ಳದು. ಬೀಳುವುದಾದರೆ ಅದಾಗಿಯೇ ಬೀಳಬೇಕು. ಜೀವಂತ ಮರಕ್ಕೆ ಯಾವುದೂ ಅಪ್ರಯೋಜನಕಾರಿಯಲ್ಲ. ಯಾವುದೂ ಭಾರವಲ್ಲ. ಯಾರಿಗೆ ಗೊತ್ತು – ಆ ಶಿವನ ಒಲ್ಮೆಯ ಕಣ್ಣು ಬಿದ್ದು ಯಾವಾಗ

ಕೊರಡು ಕೊನರುವುದೋ ಎಂದು.

೧೭. ಮಿದುಳಿಗೆ ಬುದ್ಧಿಗೆ ಹೃದಯಕ್ಕೆ ಭಾವನೆಗಳಿಗೆ ವ್ಯಾಯಾಮ ಕೊಟ್ಟ ಇಂತಹ ಚಿಂತನೆ ಸಶೇಷವಾಗಿದ್ದರೆ ಚೆನ್ನ.

## 'ಅನುಬಂಧ ಆ'

## ಕನಿಷ್ಟ ಅಸಮ ಯುಗ್ಮಗಳು

I. 'ಶ' ಮತ್ತು 'ಸ' ಸಂಕೇತಗಳ ಸಂಬಂಧಗಳನ್ನು ಈ ಮೂರು ರೀತಿಯಲ್ಲಿ ನೋಡಬಹುದು.

i) ಎರಡೂ ಪದಗಳಲ್ಲಿ ಒಂದು ಅಥವಾ ಎರಡು ಸಮಾನಾರ್ಥಗಳು ದೊರಕಿದರೂ ಕೂಡ ಒಂದು ಪದದಲ್ಲಿ ಇನ್ನೂ ಹೆಚ್ಚಿನ ವಿಶೇಷಾರ್ಥಗಳು ಕಾಣಸಿಗುತ್ತವೆ. ಇಂತಹವುಗಳನ್ನು (r) ಎಂದು ಸೂಚಿಸಿದೆ. r=richer in meaning

ಉದಾ :

ಶಂಕರ – ೧. ಆನಂದವನ್ನುಂಟುಮಾಡುವವನು. ೨. ಶಿವ, ಪರಮೇಶ್ವರ

ಸಂಕರ – ೧. ಶಂಕರ, ಶಿವ (ಈ ಅರ್ಥವೇ ಅಲ್ಲದೆ ಉಳಿದೆರಡು ಅರ್ಥಗಳು ಹೀಗಿವೆ – ೨. ಬೆರೆತು ಕೊಂಡಿರುವಿಕೆ, ಕಲಬೆರಕೆ, ಮಿಶ್ರಣ. ೩. ಕಾವ್ಯದಲ್ಲಿಯ ಮಿಶ್ರಾಲಂಕಾರ. )

ಇಂತಹ ಪದಗಳನ್ನು ಪಟ್ಟಿ ಮಾಡಿದೆ.

| ಶ | ಸ | ಶ | ಸ | ಶ | ಸ |
|---|---|---|---|---|---|
| ಶಂಕರ | ಸಂಕರ (r) | ಶಾಟಿ | ಸಾಟಿ (r) | ಶಿರ | ಸಿರ (r) |
| ಶಂಕು (r) | ಸಂಕು | ಶಾಮ | ಸಾಮ | ಶಿಲೆ | ಸಿಲೆ(r) |
| ಶಂಬರ (r) | ಸಂಬರ | ಶಾರಿ | ಸಾರಿ | ಶುಕ | ಸುಕ (r) |
| ಶಕಲ (r) | ಸಕಲ | ಶಾಲೆ | ಸಾಲೆ | ಶೂಲ | ಸೂಲ (r) |
| ಶಮ | ಸಮ (r) | ಶಿತ | ಸಿತ | ಶೋಧನ (r) | ಸೋದನ |
| ಶರ | ಸರ (r) | ಶಿದ್ದಿ | ಸಿದ್ಧಿ | ಶ್ರವಣ (r) | ಸ್ರವಣ |
| ಶರಣ (r) | ಸರಣ | ಶೀತ (r) | ಸೀತ | ಶುದ್ಧಿ(r) | ಸುದ್ದಿ |
| ಶರದ (r) | ಸರದ | ಶೀರ್ಣ(r) | ಸೀರ್ಣ | | |
| ಶಲಾಕೆ (r) | ಸಲಾಕೆ | ಶುದ್ಧ(r) | ಸುದ್ದ | | |
| ಶಲ್ಯ (r) | ಸಲ್ಲೆಯ | ಶೂರ | ಸೂರ (r) | | |
| ಶಶಿ | ಸಸಿ | ಶೆಲೆ | ಸೆಲೆ (r) | | |

ii) ಎರಡೂ ಪದಗಳು ಬೇರೆ ಬೇರೆ ಅರ್ಥಗಳನ್ನು ಕೊಡುತ್ತವೆ. ಇವನ್ನು (d) ಎಂದು ಗುರುತಿಸಿದೆ.

ಉದಾ – ಶಕ್ತಿ –೧, ಕೆಚ್ಚು, ಬಲ– ೨ – ಪ್ರತಿಭೆ, ೩. ದುರ್ಗೆ, ಪಾರ್ವತಿ, ೪. ಈಟಿ, ಸಬಳ

ಸಕ್ತಿ – ೧, ಸಂಬಂಧ, ಹೊದಿಕೆ – ೨. ಶ್ರದ್ಧೆ ಆಸಕ್ತಿ.

| ಶ | ಸ | ಶ | ಸ |
|---|---|---|---|
| ಶಕ್ತಿ | ಸಕ್ತಿ | ಶಾಯಿ | ಸಾಯಿ |
| ಶಲ | ಸಲ | ಶಾಲ | ಸಾಲ |
| ಶಾಂತ | ಸಾಂತ | ಶಾಲು | ಸಾಲು |

| | | | |
|---|---|---|---|
| ಶಾಣ | ಸಾಣ | ಶಾವಿಗೆ | ಸಾವಿಗೆ |
| ಶಾಣೆ | ಸಾಣೆ | ಶುಂಡ | ಸುಂಡ |
| ಶಾರಿ | ಸಾರಿ | | |

iii) ಎರಡು ಪದಗಳೂ ತತ್ಸಮ-ತದ್ಭವ ಸಂಬಂಧ ಹೊಂದಿದೆ.
ಶಕುನಿ - ಸಕುನಿ, ಶನಿ-ಸನಿ, ಶಬ-ಸಬ, ಶವ-ಸವ, ಶಶ-ಸಸ, ಶಾಂತಿ-ಸಾಂತಿ, ಶಿಂಪು-ಸಿಂಪು, ಶಿಬಿರ-ಸಿಬಿರ, ಶಿಬಿಕೆ-ಸಿಬಿಕೆ, ಶಿರ-ಸಿರ, ಶಿರಾ-ಸಿರಾ, ಶಿರೀಷ-ಸಿರೀಸ, ಶ್ರೀ-ಸಿರಿ, ಶಿಲುಕು-ಸಿಲುಕು, ಸಿಲ್ಕು, ಶಿವ-ಸಿವ, ಶಿಶು-ಸಿಸು, ಶಿಶಿರ-ಸಿಸಿರ, ಶೀಕರ-ಸೀಕರ, ಶೀಧು-ಸೀಧು, ಶುಂಠ-ಸುಂಟ, ಶುಂಠಿ-ಸುಂಟಿ, ಶುಂಡಾಲ-ಸುಂಡಾಲ, ಶುನಕ-ಸುನಕ, ಶೂಲೆ-ಸೂಲೆ, ಶೇಲೆ-ಸೇಲೆ, ಶೃಗಾಲ-ಸೃಗಾಲ, ಶೇವಲ-ಸೇವಾಳ, ಶೇಷ-ಸೇಸ, ಶೇಷೆ-ಸೇಸೆ, ಶುಚಿ-ಸುಚಿ...

II 'ಷ' ಮತ್ತು 'ಸ'ಗಳ mininal pair ಕನಿಷ್ಠ ಅಸಮಯುಗ್ಮ ಇದೆ. (ಷಂಡ-ಸಂಡ ) 'ಷಂಡ' ೧. ಸಮೂಹ, ಗುಂಪು. ೨. ನಪುಂಸಕ ಮತ್ತು ೩. ಅಡವಿ, ಕಾಡು ಎಂಬ ಅರ್ಥಗಳನ್ನು ಸೂಚಿಸಿದರೆ, 'ಸಂಡ' ಮೂರನೆಯ ಅರ್ಥವನ್ನು ಹೊಂದಿಲ್ಲ. ಇಷ್ಟಾದರೂ 'ಷ' ಮತ್ತು 'ಸ'ಗಳು ಸ್ವತಂತ್ರವಾದ ರೂಪಗಳು ಎಂದು ಗೊತ್ತಾಗುತ್ತದೆ.

**ಗಮನಿಸಬೇಕಾದ ಮುಖ್ಯಾಂಶಗಳು (ಕಿಟ್ಟೆಲ್ ನಿಘಂಟು ನೋಡಿ)**
೧. ಷ ಅಕ್ಷರದ ಕೆಳಗೆ ನಿಘಂಟಿನಲ್ಲಿ ಒಟ್ಟು ೧೧೭ ಪದಗಳನ್ನು ಕೊಟ್ಟಿದೆ. ಮೊದಲನೆಯ ಪದವೇ ಷಕ್ಕು ಎಂಬ ಹೊರಭಾಷೆಯ ಪದ. ಎರಡನೆಯ ಪದವೇ 'ಷಟ್ಕ' (ಎಂದರೆ ಆರು, ಆರರ ಗುಂಪು) ಮುಂದಿನ ಎಲ್ಲಾ ಪದಗಳೂ ಆರು, ಹದಿನಾರು, ಇಪ್ಪತ್ತಾರು, ಐವತ್ತಾರು, ಒಂದು ನೂರಾಆರು - ಹೀಗೆ ಇಂತಹ ಗುಂಪುಗಳ ವಿವರಣೆಯನ್ನು ಹೊಂದಿದೆ. ಷಟ್/ಷಡ್/ ಷಣ್/ಷಷ್/ಷೋ- ಪೂರ್ವಪದವಾಗಿ ಬರುವ ಈ ಪದಗಳಲ್ಲಿ 'ವಿಶೇಷಾರ್ಥಗಳನ್ನು' ಸೂಚಿಸುವ ಪಾರಿಭಾಷಿಕ ಪದಗಳು, ಸಮಾಸಗಳು ಸೇರಿವೆ. ಷಡಾನನ, ಷಣ್ಮುಖ, ಷಾಣ್ಮಾತುರ - ಹೀಗೆ (ಬಹುವ್ರೀಹಿ ಸಮಾಸದ) ದೇವತೆಗಳ ಹೆಸರುಗಳಿವೆ. ಹೀಗೆ 'ಷಟ್' ಸಂಬಂಧಿತವಾದ ಪದಗಳ ಸಂಖ್ಯೆ (೬೮)
೨. 'ಶ' ನಂತರ ಟ (೨ ಬಾರಿ) ಠ (ಬಾರಿ) ಣ (೨ ಬಾರಿ) ಷ (೨ ಬಾರಿ) ಮಾತ್ರ ಬಂದಿದೆ.
೩. 'ಷ'ಧ್ವನಿಯು (ಉಲಿಯು) ಅದರ ಮುಂದೆ ಬರುವ ಟ, ಠ, ಢ,ಣ, ಧ್ವನಿಗಳಿಂದ 'ಸೆಳೆ'ಯಲ್ಪಡುತ್ತದೆ. ಇದನ್ನೇ 'ಷ' ಪದಮಧ್ಯದಲ್ಲಿ ಬಂದಾಗಲೂ ನಾವು ಗಮನಿಸಬಹುದು.
೪. 'ಶ' ಮತ್ತು 'ಷ' ಗಳಲ್ಲಿ ಯಾವುದೆಂದೂ ಇನ್ನೊಂದು ಜಾಗದಲ್ಲಿ ಬರಲಾರದು.

ಇದೇ ರೀತಿ ಶ ಮತ್ತು ಷಗಳು ನಡುವೆ ಪದಮಧ್ಯದಲ್ಲಿ ಬರುವ ಪದಗಳು.
ಹಾಗೆಯೇ ಶ ಮತ್ತು ಷಗಳಲ್ಲಿ ಮುಕ್ತಾಯವಾಗುವ ಪದಗಳು - ಇವೆಲ್ಲವೂ ಶ ಮತ್ತು ಷ ಗಳಿಗಿರುವ ವಿಶಿಷ್ಟ ಸ್ಥಾನವನ್ನು ತೋರಿಸಿಕೊಡುತ್ತವೆ.

**ಟಿಪ್ಪಣಿಗಳು**

೧. ಶ,ಷ, ಸ, – ಈ ಮೂರು ಉಲಿಗಳನ್ನು ಹೀಗೆ ವಿವರಿಸಲಾಗಿದೆ.

ಶ – voiceless, palato alvelar, fricative

ಷ – voice, rectro-flex, post - alveolar, fricative (found only in Indian languages)

ಸ – voiceless, apico-alveolar, fricative sibilant.

(Ref : R.K. Bansal - An outline of general Phonetics.)

CIEFL - Hyderabad.

೨. ........the precise phonetiv quality of a sound segment vanes according to the context in which it occurs.

(ibid .P.37)

೩. In many ways, moreover, the written language is a far worse vehicle of communication than the spoken. (Palmer, 'Grammar' (p.28) Penguin 1971)

೪. i)ಇಂಗ್ಲಿಷಿನ ಇಂದಿನ ಲಿಖಿತ ಸ್ವರೂಪಕ್ಕೆ ಚಾರಿತ್ರಿಕ ಹಿನ್ನೆಲೆಯಿದೆ. ಮಧ್ಯಕಾಲೀನ ಭಾಷೆಯಲ್ಲಿ ಉಚ್ಚಾರಣೆ, ಸಂರಚನೆ ಹಾಗೂ ಬರೆಹದಲ್ಲಿ ಸ್ಥಳದಿಂದ ಸ್ಥಳಕ್ಕೆ ಬದಲಾವಣೆಗಳು, ವಿಭಿನ್ನತೆಗಳು ಇರುವುದು ಅನಿವಾರ್ಯವಾಗಿತ್ತು. ೧೫ನೆಯ ಶತಮಾನದಲ್ಲಿ ಮುದ್ರಣಯಂತ್ರದ ಬಳಕೆ ಪ್ರಾರಂಭವಾಯಿತು. ಇಂಗ್ಲಿಷ್ ಮುದ್ರಣಕಾರ ಕ್ಯಾಕ್ಸ್‌ಟನ್ ಆಗ್ನೇಯ ಇಂಗ್ಲೆಂಡ್‌ನವನು. ಅವನು ಅಲ್ಲಿನ ಆಡುಭಾಷೆಯನ್ನೇ ಪ್ರಧಾನವಾಗಿ ಉಪಯೋಗಿಸಿದ. ಅವನು ಯುರೋಪ್ ಖಂಡದಲ್ಲಿಂದ ಕಲಿತುಬಂದವನು. ಅವನ ಹಾಗೆಯೇ ಇತರ ಮುದ್ರಣಕಾರರೂ ಸಹ ಡಚ್, ಫ್ಲೆಮಿಷ್, ಜರ್ಮನ್ ಭಾಷೆಗಳ ಸಂಪರ್ಕದಿಂದ ಬಂದವರು. ಅವರು ಭಾಷಾಕೋವಿದರು ಎನ್ನುವುದಕ್ಕಿಂತಲೂ ಮಿಗಿಲಾಗಿ ಮುದ್ರಣ ತಂತ್ರಜ್ಞರು. ಹೀಗಾಗಿ ಅವರು ತಮ್ಮ ಅಚ್ಚು ಮೊಳೆ ಜೋಡಿಸುವ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸುವ ಸಂದರ್ಭದಲ್ಲಿ ಪುಟ ವಿನ್ಯಾಸ, ಸಾಲುಗಳ ಏಕರೂಪತೆಗೆ ಮಹತ್ವಕೊಟ್ಟರು. ತಮ್ಮ ಅನುಕೂಲತೆ, ಆವಶ್ಯಕತೆ ಹಾಗೂ ಆಶುರಚನಾ ಸಾಮರ್ಥ್ಯಕ್ಕೆ ಅನುಗುಣವಾಗಿ ಇಂಗ್ಲಿಷ್ ಪದಗಳ ಅಕ್ಷರ ಜೋಡಣೆಯಲ್ಲಿ ಕೈಯಾಡಿಸಿದರು. ಅವರು ಜೋಡಿಸಿದ ಮೊಳೆಯನ್ನು ಶಾಶ್ವತವಾಗಿ ಲಿಖಿತ ಭಾಷೆಯ ರೂಪ ತಳೆಯಿತು. ವರ್ಷಗಳು ಉರುಳಿದಂತೆ ಜನಸಂಖ್ಯೆ, ಜನರ ನಡುವಿನ ವೈವಿಧ್ಯ ಹೆಚ್ಚಾಗಿ ಬೆಳೆಯಿತು. ಬಳಸುವ ಭಾಷೆಯಲ್ಲಿ ಉಚ್ಚಾರಣೆ, ಅರ್ಥವಂತಿಕೆ, ನೂತನ ಪದಗಳ ಸೇರ್ಪಡೆ, ಎಲ್ಲವೂ ಹೆಚ್ಚಾಯಿತು. ಆದರೆ ಮುದ್ರಣಗೊಂಡಿದ್ದ ಅಕ್ಷರಜೋಡಣೆ ಮಾತ್ರ ಹಿಂದಿನಂತೆಯೇ ಮುಂದುವರಿದಿತ್ತು. ಹೀಗಾಗಿ ಜೀವಂತ ಭಾಷೆಯಲ್ಲಿನ ಉಚ್ಚಾರಣೆಗೂ, ೧೫–೧೬ನೆಯ ಶತಮಾನದಷ್ಟು ಪೂರ್ವದಲ್ಲಿಯೇ ಮರಗಟ್ಟಿ ಜಡವಾಗಿದ್ದ ಅಕ್ಷರ ಜೋಡಣೆ (spelling)ಗೂ ಮಧ್ಯೆ ಭಾರಿಯಾದ ಕಂದರ ಏರ್ಪಟ್ಟಿತು. ಈ ಕಂದರ ಎಂದೆಂದಿಗೂ ಅಲಂಘ್ಯವಾಗಿಯೇ ಉಳಿದೀತೇನೋ ಎಂಬ ಅನುಮಾನವಿದ್ದರೆ ಆಶ್ಚರ್ಯವೇನಿಲ್ಲ.

ii) ಇಂಗ್ಲಿಷಿನ spelling ಮತ್ತು ಉಚ್ಚಾರಗಳು ಇನ್ನಿತರ ಯುರೋಪಿನ ಭಾಷೆಗಳಿಗೆ ಹೋಲಿಸಿದರೆ ತುಂಬಾ ಸುಲಭವೇನೋ ಎಂಬ ಅನಿಸಿಕೆ ಉಂಟಾಗುತ್ತದೆ. ಇಂಗ್ಲಿಷಿನ ಭಾಷಾ ಬುಡಕಟ್ಟಿಗೆ ಸೇರಿದ ಜರ್ಮನ್, ಡಚ್, ಫ್ಲೆಮಿಷ್, ಯಿಡ್ಡಿಷ್ ಭಾಷೆಗಳು, ಲ್ಯಾಟಿನ್ ಮೂಲದಿಂದ ಹುಟ್ಟಿ ಬಂದ ರೋಮಾನ್ ಭಾಷೆಗಳಾದ ಫ್ರೆಂಚ್, ಸ್ಪಾನಿಷ್, ಇಟಾಲಿಯನ್, ಮುಂತಾದ ಭಾಷೆಗಳು, ಸ್ಲವೋನಿಕ್ ಭಾಷಾವರ್ಗಕ್ಕೆ ಸೇರಿದ ಸರ್ಬೋ–ಕ್ರೋಟ್, ರಷ್ಯನ್, ಪೋಲಿಷ್ ಮುಂತಾದವುಗಳು ಅತಿರೇಕವೆಂದು ನಮಗೆ ಅನಿಸುವಷ್ಟು ಚಿತ್ರವಿಚಿತ್ರವಾಗಿವೆ.

iii) ಕೆಲವು ಭಾಷೆಗಳಲ್ಲಿ ವ್ಯಂಜನಾಕ್ಷರಗಳು ಅತಿರಂಜನೆಯಾದಂತೆ ಒತ್ತೊತ್ತಾಗಿ ಬರುತ್ತವೆ. ಹಾಗೆಯೇ ನಾವು ಊಹಿಸಲಾರಂತಹ ಒತ್ತಕ್ಷರಗಳು ಕಾಣಸಿಗುತ್ತವೆ. Sicherheitsdienst (SD ಎಂಬ ಗೂಢಾಚಾರಿ ಸಂಸ್ಥೆ) ಯಲ್ಲಿ ವ್ಯಂಜನಗಳನ್ನು ನೋಡಿ (s-ch-rh-tsd-nst); ಹಣ್ಣು ತರಕಾರಿಗಳಿಗೆ ಈ ಪದಪುಂಜ ovoshchifrukty (-v-shch-fr-kt). Schwyz ಇದು ಸ್ವಿಟ್ಜರ್‌ಲೆಂಡ್ ದೇಶಕ್ಕೆ ತನ್ನ ಹೆಸರು ಕೊಟ್ಟಿರುವ 'ಶ್ವೀಟ್ಸ್' ಎಂಬ ನಗರ. ಸುಪ್ರಸಿದ್ಧ ಸಂಗೀತಜ್ಞ ಡ್ವಾಷ್ಯಾಕ್‌ನ ಹೆಸರನ್ನು ಹೀಗೆ ಬರೆಯುತ್ತಾರೆ. Dvorak ಎಂದು. Du Vigneaud (ವೀನ್ಯೋ) ನೊಬೆಲ್ ಪ್ರಶಸ್ತಿ ವಿಜೇತನಾದ ವಿಜ್ಞಾನಿ. ರಷ್ಯಾದ ಒಂದು ನಗರದ ಹೆಸರು shcherbakov (ಷ್ಟ್ಸರ್ ಅಥವಾ ಷ್‌ಟ್‌ಷರ್) ಎಂದಿದೆ. Shchi (ಷೀ ಹಾಗೂ ಷ್‌ಟ್‌ಷೀ ಎಂಬ ಎರಡೂ ಉಚ್ಚಾರಗಳಿವೆ.) ಇದು ರಷ್ಯಾದ ಕೋಸುಗಡ್ಡೆಯ ಸೂಪ್.

iv) JEDRZEJCZAK-ಇದಾವ ಗುಪ್ತ ಸಂದೇಶವನ್ನು ರವಾನೆ ಮಾಡುವ ಸಂಕೇತ? ಇದು ಅಂಥದ್ದೇನಲ್ಲ! ಈ ಹೆಸರಿನ ಈಜುಗಾರ್ತಿ ಜುಲೈ ೨೦೦೫ರಲ್ಲಿ ನಡೆದ ಯುರೋಪಿಯನ್ ಚಾಂಪಿಯನ್‌ಷಿಪ್ ಕ್ರೀಡಾಕೂಟದಲ್ಲಿ ೪೦೦ಮೀ. ಫ್ರಿ ಸ್ಟೈಲ್ ಈಜುವ ಪಂದ್ಯದಲ್ಲಿ ಹಿಂದಿನ ರೆಕಾರ್ಡ್ ಮುರಿದು ಸುವರ್ಣ ಪದಕವನ್ನು ಗೆದ್ದುಕೊಂಡಳು. (ದ ವಿಜಯ್ ಟಾಯ್‌ಮ್ಸ್, ಜುಲೈ ೩೦, ೨೦೦೫) (ಅವಳ ಹೆಸರಿನ ಉಚ್ಚಾರ ನನಗೆ ತಿಳಿದಿಲ್ಲ.)

೫. ಈ ಮೇಲಿನ ಉದಾಹರಣೆಗಳೆಲ್ಲ ಇಂಗ್ಲಿಷ್‌ನಿಂದ ಹೊರತಾದ ಯುರೋಪಿಯನ್ ಭಾಷೆಗಳದೆಂದು ಗೊತ್ತೇ ಇದೆ. ಆದರೂ ಈ ಹೆಸರುಗಳನ್ನು (ಪದಗಳನ್ನು) ಓದುವಾಗ (೧) ಅಕ್ಷರಜೋಡಣೆಯ ಕ್ರಮದಿಂದ ಇಲ್ಲವೇ (೨) ಆಯಾ ಭಾಷಿಕ ಸ್ವಂತ ಉಚ್ಚಾರದ ಅನುಕರಣೆ ಮಾಡುತ್ತಾ ಓದುತ್ತೇವೆ. ಮೊದಲನೆಯ ಕ್ರಮದಲ್ಲಿ ಓದಿದರೆ ನಾವು ನಿಜವಾಗಿಯೂ ಆಯಾ ಭಾಷೆಗಳಿಗೆ ಅಪಚಾರ ಮಾಡುವಂತೆ ಓದುತ್ತೇವೆ. ಏಕೆಂದರೆ ಬರೆಹಕ್ಕೂ ನುಡಿಗೂ ಇರುವ ಅಂತರ ನಮಗೆ ತಿಳಿದಿರುವುದಿಲ್ಲ. ಎರಡನೆಯ ಕ್ರಮವಾದ ಆಯಾ ಭಾಷಿಕರ ಉಚ್ಚಾರವನ್ನು ಅನುಸಕರಿಸಿದರೆ, ಸಹಜವಾಗಿಯೇ ನಮ್ಮ ಕಣ್ಣು ನ ಅಕ್ಷರ ಜೋಡಣೆಯನ್ನು ನೋಡುತ್ತಿದ್ದರೂ ನಮ್ಮ ಮಿದುಳಿನಲ್ಲಿ ಅದರ ಹಿಂದಿನ ನುಡಿಯ ಉಚ್ಚಾರವೇ ಪ್ರತಿಧ್ವನಿಸುತ್ತಿರುತ್ತದೆ. ಒಟ್ಟಿನಲ್ಲಿ ಬರೆಹಕ್ಕೂ ನುಡಿಗೂ ಇರುವ ಅಂತರ, ಅಸಮರ್ಪಕತೆ, ಅಪರಿಪೂರ್ಣತೆ ಎಲ್ಲಾ ಭಾಷೆಯಲ್ಲಿಯೂ ಅನುಭವಕ್ಕೆ ಬರುತ್ತದೆ.

vi) ಭಾಷೆ (ಗುಡಿಯ ರೂಪದಲ್ಲಿ) ಒಂದು ಸಮುದಾಯವನ್ನು ಒಂದು ಕಟ್ಟಳೆಗೆ, ಕಟ್ಟುಪಾಡಿಗೆ ಬಂಧಿಸಿರುತ್ತದೆ. ಮಾತೃಭಾಷೆಯಲ್ಲಿ ಒಂದು ಜನ ಸಮುದಾಯ ವ್ಯವಹರಿಸುವಾಗ 'ತಾವೆಲ್ಲ ಒಂದೇ' ಎಂಬ ಒಗ್ಗಟ್ಟಿನ ಅರಿವಿರುತ್ತದೆ. ಆ ಭಾಷೆಗೆ ಹೊರಗಿನವನು ಬಂದು ಅದನ್ನು (ಎರಡನೆಯ ಭಾಷೆ ಯಾಗಿ) ಕಲಿತು ವ್ಯವಹರಿಸಿದರೂ ಮಾತೃಭಾಷಿಕರ ಹಾಗೆ ಅವನು ಎಂದಿಗೂ ಆ ಸಮುದಾಯದಲ್ಲಿ ಕರಗಿ ಹೋಗಲಾರ. ನುಡಿಯ ರೂಪದಲ್ಲಿ ಮಾತ್ರ ಹೀಗಿಲ್ಲ. ಬರೆಹ ರೂಪದಲ್ಲಿ ಅವನು ವ್ಯವಹರಿಸಿದಾಗಲೂ ಅವನ 'ಹೊರಗಿನತನ' (outside) ಮುಚ್ಚಿಡಲಾಗುವುದಿಲ್ಲ. ಬರೆಹವೂ ಕೂಡ (ಅದರಲ್ಲೂ spelling ಮತ್ತು ಉಚ್ಚಾರ) ಸ್ವಂತ ಸಮುದಾಯದ ಸಂಕೇತವಾದ್ದರಿಂದ ಹೊರಗಿನವರನ್ನು ಗುರುತಿಸುವಂತಹ ಕೆಲಸ ಮಾಡುತ್ತವೆ. ಇದು ಭಾಷೆಯಲ್ಲಿ ಅಡಗಿರುವ ಸಮುದಾಯದ ಸ್ವರಕ್ಷಣಾ ತಂತ್ರ.

ಸಂಸಾರಿಯಾದರೂ ಸನ್ಯಾಸಿಯಾದರೂ
ಸರಿದ ಬಾಳಿನಲಿ ಉಳಿವುದು
ಸರಿಸಲಾಗದ ಬಯಲೆಂಬ ಬಯಲು

# ಬೀದರ
## ಜಿಲ್ಲೆಯ
# ಜೈನ ಶಾಸನಗಳ
### ಸಾಂಸ್ಕೃತಿಕ ಆಯಾಮಗಳು

**ಡಾ. ಅಪ್ಪಣ್ಣ ಎನ್. ಹಂಜೆ**
ಸಹ ಪ್ರಾಧ್ಯಾಪಕರು
ಇತಿಹಾಸ ವಿಭಾಗ,
ಸ.ಪ್ರ.ದ. ಕಾಲೇಜು, ಗದಗ– 582101

**1. ಪೀಠಿಕೆ**

ಕನ್ನಡನಾಡಿನ ಉತ್ತರದ ತುದಿಯಂಚಿನಲ್ಲಿರುವ ಬೀದರ ಜಿಲ್ಲೆಯ ಭೂಭಾಗವು, ಉತ್ತರ ಅಕ್ಷಾಂಶ $17^0$ $35^1$ ರಿಂದ $18^0$ $25^1$ ರವರೆಗೆ ಮತ್ತು ಪೂರ್ವ ರೇಖಾಂಶ $76^0$ $42^1$ ರಿಂದ $77^0$ $39^1$ ರವರೆಗಿನ ಪ್ರದೇಶದಲ್ಲಿ ಒಟ್ಟು 5458.00 ಚ.ಕಿ.ಮೀ. ಭೌಗೋಳಿಕ ವಿಸ್ತೀರ್ಣವನ್ನು ಹೊಂದಿದೆ. ಸಮುದ್ರಮಟ್ಟದಿಂದ ಸುಮಾರು 2,206 ಅಡಿ ಎತ್ತರದಲ್ಲಿದೆ. ದಖನ್ ಪ್ರಸ್ಥಭೂಮಿಯಲ್ಲಿರುವ ಈ ಪ್ರದೇಶವು ಸಮಶೀತೋಷ್ಣ ಹವಾಮಾನವನ್ನು ಹೊಂದಿದೆ. ಈ ಪ್ರದೇಶದಾದ್ಯಂತ ಅಲ್ಲಲ್ಲಿ ಎತ್ತರವಾದ ಅಟ್ಟಣೆಗಳಿರುವುದರಿಂದ ಇದನ್ನು 'ಅಟ್ಟಳೆನಾಡು' ಎಂತಲೂ ಕರೆಯುವರು. ಈ ಜಿಲ್ಲೆಯ ಪೂರ್ವದಲ್ಲಿ ಆಂಧ್ರಪ್ರದೇಶದ ನಿಜಾಮಾಬಾದ ಮತ್ತು ಮೇದಕ, ಉತ್ತರ ಮತ್ತು ಪಶ್ಚಿಮದಲ್ಲಿ ಮಹಾರಾಷ್ಟ್ರದ ನಾಂದೇಡ, ಲಾತೂರು ಮತ್ತು ಉಸ್ಮಾನಾಬಾದ, ದಕ್ಷಿಣಕ್ಕೆ ಗುಲಬರ್ಗಾ ಜಿಲ್ಲೆಗಳು ಮೇರೆಗಳಾಗಿವೆ. ಪ್ರಸ್ತುತ ಈ ಜಿಲ್ಲೆಯಲ್ಲಿ ಬೀದರ, ಹುಮನಾಬಾದ, ಬಸವ ಕಲ್ಯಾಣ, ಭಾಲ್ಕಿ, ಔರಾದ ಎಂಬ ಐದು ತಾಲ್ಲೂಕುಗಳು, ಎರಡು ಉಪವಿಭಾಗಗಳು, ಮೂವತ್ತು ಹೋಬಳಿಗಳು, ಆರುನೂರಾ ಇಪ್ಪತ್ತೊಂದು ಗ್ರಾಮಗಳಿವೆ.[1] 2011ರ ಜನಗಣತಿಯ ಪ್ರಕಾರ ಒಟ್ಟು 25,70,868 ಜನಸಂಖ್ಯೆಯಿದೆ. ಈ ಜಿಲ್ಲೆಯಲ್ಲಿ ಹರಿದಿರುವ ಗೋದಾವರಿ ನದಿಯ ಉಪನದಿ ಮಾಂಜರಾ, ಮಾಂಜರಾ ನದಿಯ ಉಪನದಿ ಕಾರಂಜಾ, ಭೀಮಾನದಿಯ ಉಪನದಿಗಳಾದ ಮುಲ್ಲಾಮರಿ ಮತ್ತು ಕಾಗಿಣಾ ನದಿಗಳು, ಮಾಣಿಕನಗರನಾಲಾ, ಚುಳಕಿನಾಲಾ, ಮಧುರತೊರೆ, ಗಂಡೋರಿನಾಲಾ, ಹುಡುಗಿಹಳ್ಳ, ಹಳ್ಳಿಖೇಡನಾಲಾ ಮೊದಲಾದ ತೊರೆ ಮತ್ತು ನಾಲಾಗಳು, ಗುರುನಾನಕಝುರಿ, ನರಸಿಂಹಝುರಿ, ಪಾಪನಾಶಝುರಿ, ಗಾಯಮುಖಝುರಿ, ಶುಕ್ಲತೀರ್ಥ, ಬೊಮ್ಮಗೊಂಡೇಶ್ವರನ ಕೆರೆ ಇತ್ಯಾದಿ ನೀರಿನಾಸರೆಗಳು ಇತಿಹಾಸಪೂರ್ವ ಮತ್ತು ಇತಿಹಾಸ ಕಾಲದ ಮಾನವನ ಸಂಸ್ಕೃತಿಗಳಿಗೆ ಆಶ್ರಯವೊಡ್ಡಿವೆ. ಈ ವಿಚಾರವು ಉಜ್ಜನಿ, ಔರಾದ, ಕಮಲನಗರ, ಚಿಂಚೋಳಿ, ಖೇಡ, ಜಮಾಲಪುರ, ತುಳಜಾಪುರ, ನಿಡೋಡಾ, ಬಳ್ಳೂರು, ಮುರಗ, ಮುಂಗನಾಳ, ರಾಯಪಲ್ಲಿ, ಸಂಗಮ, ಇಸ್ಲಾಂಪುರ, ಉಜ್ಜಳಂಬ, ಗೋರಟಾ, ಬಸವಕಲ್ಯಾಣ, ಮಿರಕಲ್ಲ, ಹುಲಸೂರು, ಅಳವಾಯಿ, ಭಾಲ್ಕಿ,

ಲಖಣಗಾಂವ, ಕಡವಾಡ, ಕಮಠಾಣ, ಬಗದಾಳ, ಬೀದರ, ಸುಲ್ತಾನಪುರ, ಚಿಟಗುಪ್ಪ, ಹಳ್ಳಿಖೇಡ, ಹುಮನಾಬಾದ ಮೊದಲಾದೆಡೆಗಳಲ್ಲಿ ಬೆಳಕಿಗೆ ಬಂದಿರುವ ಇತಿಹಾಸಪೂರ್ವ ಮತ್ತು ಇತಿಹಾಸ ಆರಂಭ ಕಾಲಾವಧಿಯ 161ಕ್ಕೂ ಹೆಚ್ಚು ಜನವಸತಿ ನೆಲೆಗಳಿಂದ ದೃಢಪಡುತ್ತದೆ.[2] ಈ ಜಿಲ್ಲೆಯ ಭೂಪ್ರದೇಶವು ಅಂದು ಕುಂತಳನಾಡು, ಅಟ್ಟಳೆನಾಡು, ಭಲ್ಲುಂಕೆನಾಡು, ಕಲ್ಯಾಣನಾಡು, ಮೈಲಾರನಾಡು, ಸವಲಕ್ಕೆನಾಡು, ಧರಿನಾಡು, ಅಟ್ಟಳೆ–300, ಘಟ್ಟ–24, ಬೀರಿಗೆ–40, ಭಲ್ಲುಂಕೆ–84, ಮನ್ನೆದಡಿ–1000, ಜಫರ್ ಇತ್ಯಾದಿ ಆಡಳಿತ ವಿಭಾಗಗಳಲ್ಲಿ ಅಂತರ್ಗತವಾಗಿತ್ತು.[3]

ಬೀದರ ಪ್ರದೇಶದ ಸಂಪದ್ಭರಿತವಾದ ಭೌಗೋಳಿಕ ಸಂಪನ್ಮೂಲಗಳು ಮಗಧದ ನಂದರು, ಮೌರ್ಯರು, ಶಾತವಾಹನರು, ಚುಟುಗಳು, ನಾಗರು, ಬನವಾಸಿ ಕದಂಬರು, ವಾಕಾಟಕರು, ಬಾದಾಮಿ ಚಲುಕ್ಯರು, ಮಳಖೇಡದ ರಾಷ್ಟ್ರಕೂಟರು, ಕಲ್ಯಾಣದ ಚಾಳುಕ್ಯರು, ಮಂಗಳವಾಡದ (ಕಲ್ಯಾಣದ) ಕಲಚೂರಿಯರು, ರಂಜೋಳದ (ರಂಜೇರು) ಸಿಂಧರು, ದೇವಗಿರಿ ಸೇವುಣರು, ವಾರಂಗಲ್ಲಿನ ಕಾಕತೀಯರು, ಗೊಂಕನಾಡಿನ ಬಾಣರು, ಹೈಹಯರು, ದೆಹಲಿಯ ಖಿಲ್ಜಿಗಳು ಮತ್ತು ತುಘಲಕ್‌ರು, ವಿಜಯನಗರದ ಅರಸರು, ಬಹಮನಿ ಸುಲ್ತಾನರು, ಬರೀದಶಾಹಿಗಳು, ಮರಾಠರು, ಮೊಗಲರು, ವಿಜಾಪುರದ ಆದಿಲ್‌ಷಾಹಿಗಳು, ಹೈದರಾಬಾದಿನ ನಿಜಾಮರು, ಆಸಫ್‌ಶಾಹಿಗಳು, ಫ್ರೆಂಚರು, ಬ್ರಿಟಿಷರು ಮೊದಲಾದವರನ್ನೂ ಆಕರ್ಷಿಸಿವೆ.[4] ಆ ಮನೆತನಗಳೆಲ್ಲವೂ ಈ ಪ್ರದೇಶದಲ್ಲಿ ತಮ್ಮ ಆಳ್ವಿಕೆಯ ಪ್ರಭಾವವನ್ನು ಹೊಂದುವುದರೊಂದಿಗೆ ಸಮಕಾಲೀನ ಬೌದ್ಧ, ಜೈನ, ಶೈವ, ವೈಷ್ಣವ, ಸೌರ, ಶಾಕ್ತ, ವೀರಶೈವ, ಮುಸ್ಲಿಂ, ಸೂಫಿ, ಸಿಖ್, ಕ್ರೈಸ್ತ ಮೊದಲಾದ ಧರ್ಮಗಳು ಮತ್ತು ಪಂಥಗಳಿಗೆ ಉದಾರವಾಗಿ ಆಶ್ರಯ–ಪ್ರೋತ್ಸಾಹವನ್ನು ಕೊಡಮಾಡಿವೆ. ಹಾಗಾಗಿ ಆ ಎಲ್ಲ ಧರ್ಮಗಳು ಮತ್ತು ಪಂಥಗಳ ಸಾಂಸ್ಕೃತಿಕ ಚಟುವಟಿಕೆಗಳು ಈ ಜಿಲ್ಲೆಯ ಸಂಸ್ಕೃತಿ ಮತ್ತು ಇತಿಹಾಸದೊಂದಿಗೆ ಹಾಸುಹೊಕ್ಕಾಗಿ ಸಾಗಿ ಬಂದಿವೆ.

ವಿವಿಧತೆಯಲ್ಲಿ ಏಕತೆಯನ್ನು ಮೆರೆದ ಮತ್ತು ಮೆರೆಯುತ್ತಿರುವ ಬೀದರ ಜಿಲ್ಲೆಯ ಪ್ರದೇಶದಲ್ಲಿ ಪ್ರಾಚೀನ ಕಾಲದಿಂದಲೂ ವೈಶಿಷ್ಟ್ಯಮಯವಾದ ಸಾಂಸ್ಕೃತಿಕ ಬದುಕು ರೂಪುಗೊಂಡು ಬೆಳೆದು ಬಂದಿದೆ. ಅಂತಾಗಿ ಇಲ್ಲಿಯ ಇತಿಹಾಸ, ಸಂಸ್ಕೃತಿ, ಧರ್ಮ, ಸಮಾಜ, ವಾಸ್ತುಕಲೆ, ಶಿಲ್ಪಕಲೆ, ಜನಪದಕಲೆ, ಚಿತ್ರಕಲೆ, ಸಾಹಿತ್ಯ, ಸಂಪ್ರದಾಯ, ಸಂಗೀತ, ಶಿಕ್ಷಣ, ಅರ್ಥವ್ಯವಸ್ಥೆ, ನೆಲ, ಜಲ, ಭಾಷೆ, ಆಹಾರ, ವೇಷಭೂಷಣ ಮೊದಲಾದವುಗಳು ವೈವಿಧ್ಯಮಯವಾಗಿವೆ. ಈ ಜಿಲ್ಲೆಯ 'ಬಿದರಿ ಲೋಹಕಲೆ'ಯ ಕಲಾಕೃತಿಗಳು ಜಗತ್ಪ್ರಸಿದ್ಧವಾಗಿವೆ. ಬಹಮನಿ ರಾಜ್ಯದ ಪ್ರಧಾನಮಂತ್ರಿ ಮಹಮ್ಮದ ಗವಾನ್‌ನ (ಕ್ರಿ.ಶ. 1447–1481) ಆಳ್ವಿಕೆಯ ಕಾಲದಲ್ಲಿ ಪರ್ಶಿಯಾದಿಂದ ಆಗಮಿಸಿದ ಮಿಶ್ರಲೋಹ ಪರಿಣಿತರು ಬೀದರ ಪ್ರದೇಶದಲ್ಲಿ ಈ ಕಲೆಯನ್ನು ಪ್ರಸಾರ ಮಾಡಿದರು. ಈ ಕಲೆಯಲ್ಲಿ ಪಾರಂಗತನಾಗಿದ್ದ ಅಬ್ದುಲ್ಲಾಬಿನ್ ಖೈಬರ್ ಎಂಬಾತನಿಂದ ಈ ಜಿಲ್ಲೆಯ ರಾಮಣ್ಣ ಎಂಬ ಹಿಂದೂ ಕಲಾವಿದನು ಈ ಕಲೆಯನ್ನು ಕಲಿತು ಹೆಸರುವಾಸಿಯಾಗಿದ್ದನು. ತಾಮ್ರ, ಹಿತ್ತಾಳೆ, ಸತುಗಳ ಮಿಶ್ರ ಕಪ್ಪುಲೋಹದಿಂದ ಈ ಕಲೆಯ ಕಲಾಕೃತಿಗಳು ತಯಾರಾಗುತ್ತಿದ್ದವು. ಇಂದು ಈ ಕಲೆಯ ಇಪ್ಪತ್ತೆರಡು ಕಾರ್ಯಾಗಾರಗಳು ವಿವಿಧೆಡೆಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ವಂಶಪಾರಂಪರ್ಯವಾಗಿ ಕೆಲವು ಮುಸ್ಲಿಂ ಮತ್ತು ಹಿಂದೂ ಕುಶಲಕರ್ಮಿಗಳು ಈ ಕಲೆಯನ್ನು ತಮ್ಮ ಬದುಕಿನ ಪ್ರಧಾನ ಕಸುಬು ಮಾಡಿಕೊಂಡು ಅಭಿವೃದ್ಧಿಗೊಳಿಸುತ್ತಿದ್ದಾರೆ.

ಜೀವದಯೆ, ಅಹಿಂಸೆ, ದಾನಗುಣ, ಅನೇಕಾಂತವಾದ, ಬ್ರಹ್ಮಚರ್ಯ, ಶಾಖಾಹಾರ, ಅಪರಿಗ್ರಹ, ತ್ಯಾಗ, ಕ್ಷಮೆ ಮೊದಲಾದ ಲೋಕಹಿತಕಾರಿಯಾದ ತತ್ತ್ವ–ಸಿದ್ಧಾಂತಗಳನ್ನು ಮಾನವಕುಲಕ್ಕೆ

ಬೋಧಿಸಿ ಸನ್ಮಾರ್ಗದ ದಾರಿತೋರಿಸಿರುವ ಜೈನ ಧರ್ಮವು ಕನ್ನಡನಾಡಿನ ಇತಿಹಾಸ ಮತ್ತು ಸಂಸ್ಕೃತಿಯೊಂದಿಗೆ ಹಾಸುಹೊಕ್ಕಾಗಿದೆ. ಈ ನಾಡಿನಲ್ಲಿ ಜೈನ ಧರ್ಮದ ಪ್ರಾಚೀನತೆ, ಪ್ರಸಾರ ಮತ್ತು ಪ್ರಭಾವ 1ನೆಯ ತೀರ್ಥಂಕರ ಆದಿನಾಥನ ಕಾಲದಿಂದಲೂ ಗೋಚರಿಸುತ್ತದೆ. ಆದರೆ ಇದು ಕ್ರಿ.ಶ. ಸುಮಾರು 4ನೆಯ ಶತಮಾನದಲ್ಲಿ ಪ್ರವರ್ಧಮಾನಕ್ಕೆ ಬಂದಿತು. ಆ ಕಾಲದಲ್ಲಿ ಉತ್ತರ ಭಾರತವು ಹನ್ನೆರಡು ವರ್ಷಗಳ ಕಾಲ ಬರಗಾಲಕ್ಕೊಳಪಡುವುದನ್ನು ತಮ್ಮ ದಿವ್ಯದೃಷ್ಟಿಯಿಂದ ಮುಂಚಿತ ವಾಗಿಯೇ ಅರಿತ ಅಂತಿಮ (ಪಂಚಮ) ಶ್ರುತಕೇವಲಿ ಭದ್ರಬಾಹು ಭಟ್ಟಾರಕರು (ಕ್ರಿ.ಪೂ. 394–365) ಮುನಿಸಮುದಾಯದ ಚಾರಿತ್ಯ ಮತ್ತು ಸಂಯಮದ ಪಾಲನೆಗಾಗಿ ತಮ್ಮ ಶಿಷ್ಯ ಮಗಧದ ನಂದ ಮನೆತನದ ಚಂದ್ರಗುಪ್ತ (ಕ್ರಿ.ಪೂ. 372–366) ಹಾಗೂ ಹನ್ನೆರಡು ಸಾವಿರ ಮುನಿಗಳೊಂದಿಗೆ ಉಜ್ಜಯಿನಿಯಿಂದ ದಕ್ಷಿಣ ಭಾರತದ ಶ್ರವಣಬೆಳಗೊಳಕ್ಕೆ ಆಗಮಿಸಿದರು.[5] ಆ ಮುನಿಗಳು ಇಂದಿನ ಕನ್ನಡ ನಾಡನ್ನೊಳಗೊಂಡಂತೆ ತಮಿಳುನಾಡು, ಕೇರಳ, ಆಂಧ್ರಪ್ರದೇಶ, ಮಹಾರಾಷ್ಟ್ರಗಳಲ್ಲಿ ಧರ್ಮಪ್ರಸಾರದ ಮೂಲಕ ಜೈನ ಚಟುವಟಿಕೆಗಳಿಗೆ ಪ್ರೇರಣೆ ನೀಡಿದರು. ಅಂದಿನಿಂದ ಕನ್ನಡ ನಾಡಿನಾದ್ಯಂತ ಕಾಲಾಂತರದಲ್ಲಿ ಸಾವಿರಾರು ಜೈನ ಮುನಿಗಳು, ಆರ್ಯಿಕೆಯರು (ಕಂತಿಯರು), ಭಟ್ಟಾರಕರು, ಕವಿಗಳು ಜೈನ ತತ್ವ–ಸಿದ್ಧಾಂತ, ಶಾಸ್ತ್ರ–ದರ್ಶನ ಇತ್ಯಾದಿ ವಿಚಾರಗಳಿಗೆ ಸಂಬಂಧಿ ಸಿದಂತೆ ಕೃತಿ–ಕಾವ್ಯಗಳನ್ನು ರಚಿಸುವ ಮೂಲಕ ವಿಹಾರ ಕೈಗೊಂಡು ಧರ್ಮಪ್ರಸಾರ ಮತ್ತು ಜೈನ ಚಟುವಟಿಕೆಗಳಿಗೆ ಪ್ರೇರಣೆ–ಸ್ಫೂರ್ತಿ ಕೊಡುವ ಪರಂಪರೆಯನ್ನು ಮುಂದುವರಿಸಿಕೊಂಡು ಬಂದರು. ಜೊತೆಗೆ ಕೆಲವು ಅರಸು ಮನೆತನಗಳ (ತಲಕಾಡಿನ ಗಂಗರು, ಮಳಖೇಡದ ರಾಷ್ಟ್ರಕೂಟರು, ಬಂಕಾಪುರದ ಚಲ್ಲಕೇತನರು, ದೋರಸಮುದ್ರದ ಹೊಯ್ಸಳರು, ನವಲಗುಂದದ ಕತ್ತಲೆಕುಲ, ಮಾಸವಾಡಿಯ ವಾಜಿವಂಶ, ತುಳುನಾಡು ಮತ್ತು ಕರಾವಳಿ ಪ್ರದೇಶದ ಅರಸು ಮನೆತನಗಳು ಇತ್ಯಾದಿ) ಉಗಮ, ಉನ್ನತಿ, ಪ್ರವರ್ಧಮಾನ ಮತ್ತು ಬೆಳವಣಿಗೆಗೆ ಮಾರ್ಗದರ್ಶನ ಮಾಡಿದರು. ಅದರ ಫಲವಾಗಿ ಸಮಕಾಲೀನ ಅರಸರು, ರಾಣಿಯರು, ಯುವರಾಜರು, ಅಧಿಕಾರಿಗಳು, ಶ್ರಾವಕರು, ಶ್ರಾವಿಕೆಯರು, ಜೈನಾಭಿಮಾನಿಗಳು (ಜೈನಧರ್ಮಾಸಕ್ತರು) ಜೈನ ಧರ್ಮದ ತತ್ವ–ಸಿದ್ಧಾಂತಗಳ ಪ್ರಭಾವ ಮತ್ತು ಮುನಿಗಳ ಉಪದೇಶಗಳ ಪ್ರೇರಣೆಗೊಳಗಾಗಿ ಸಾವಿರಾರು ಬಸದಿಗಳನ್ನು ನಿರ್ಮಿಸಿದರು. ತೀರ್ಥಂಕರರು, ಯಕ್ಷ–ಯಕ್ಷಿಯರು, ಬಾಹುಬಲಿ ಮೊದಲಾದ ಶಿಲ್ಪಗಳನ್ನು ಪ್ರತಿಷ್ಠಾಪಿಸುವ ಮೂಲಕ ಆರಾಧನೆಗೆ ಚಾಲನೆ ನೀಡಿದರು. ಹಾಗೆಯೇ ಆ ಬಸದಿಗಳು ಮತ್ತು ಶಿಲ್ಪಗಳ ಪೂಜೆ–ಪುನಸ್ಕಾರ, ಖಂಡಸ್ಫುಟಿತ ಜೀರ್ಣೋದ್ಧಾರ, ಮುನಿಗಳ ಆಹಾರದಾನ ಇತ್ಯಾದಿ ಸಾಂಸ್ಕೃತಿಕ ಚಟುವಟಿಕೆಗಳಿಗೆ ಉದಾರವಾಗಿ ದಾನ–ದತ್ತಿಗಳನ್ನು ಕೊಡಮಾಡಿದರು. ಮನುಕುಲದ ಏಕತೆ, ವಿಶ್ವಶಾಂತಿ, ಲೋಕದ ಸಮಸ್ತ ಜೀವಿಗಳ ಕಲ್ಯಾಣಕ್ಕಾಗಿ ಪಂಚಕಲ್ಯಾಣ ಪ್ರತಿಷ್ಠಾ ಪೂಜಾಮಹೋತ್ಸವಗಳನ್ನು ಕೈಗೊಳ್ಳುವ ಮೂಲಕ ಸಮಾಜಕ್ಕೆ ಪರೋಪಕಾರ ಬದುಕು, ಸಾಮರಸ್ಯ ಜೀವನ, ಕೋಮು–ಸೌಹಾರ್ದತೆಯ ಸಂದೇಶವನ್ನು ನೀಡಿ ಮನುಕುಲವನ್ನು ಶಾಂತಿ–ಅಹಿಂಸೆಗಳ ಮಾರ್ಗದಲ್ಲಿ ಕೊಂಡೊಯ್ದರು. ಜೊತೆಗೆ ಜೈನ ಮತ್ತು ಜೈನೇತರ ಕವಿಗಳಿಗೆ ಆಶ್ರಯ–ಪ್ರೋತ್ಸಾಹ ಕೊಡುವುದರೊಂದಿಗೆ ಪ್ರಾಕೃತ, ಸಂಸ್ಕೃತ, ಕನ್ನಡ ಭಾಷೆಗಳ ಸಾಹಿತ್ಯವೂ ಉಜ್ವಲವಾಗಿ ಬೆಳೆದು ಬರಲು ಶ್ರಮಿಸಿದರು.

ಬೀದರ ಜಿಲ್ಲೆಯ ಪ್ರದೇಶದಲ್ಲಿ ಕ್ರಿಸ್ತಶಕಾರಂಭದಿಂದಲೂ ಜೈನ ಧರ್ಮದ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು ಸಾಗಿ ಬಂದಿವೆ. ದೇವಸೇನಸೂರಿ (ಕ್ರಿ.ಶ. 938) 'ದರ್ಶನಸಾರ' ಎಂಬ ಪ್ರಾಕೃತ ಕೃತಿಯಲ್ಲಿ

ಕಲ್ಲಾಣೇ ವರಣಯರೇ ದುಣ್ಣಿಸವಿ ಪಂಚ ಉತ್ತರೇ ಜಾದೇ ।
ಜಾವಣಿಯಸಂಘ ಭಾವೋ ಸಿರಿಕಲಸಾದೋ ಹುಸೇವಡದೋ ॥

ವಿಕ್ರಮ ಸಂವತ್ಸರ 205ರಲ್ಲಿ ಅಂದರೆ ಕ್ರಿ.ಶ. 148ರಲ್ಲಿ ಶ್ವೇತಾಂಬರ ಪಂಥದ ಶ್ರೀಕಲಶಮುನಿ ಕಲ್ಯಾಣಪಟ್ಟಣದಲ್ಲಿ ಜಾವಣಿಯ ಸಂಘವನ್ನು ಸ್ಥಾಪನೆ ಮಾಡಿದನೆಂದು ಯಾಪನೀಯ ಸಂಘದ ಆವಿಷ್ಕಾರ ತೇದಿಯನ್ನು ನಮೂದಿಸಿದ್ದಾನೆ.[6] ಇಂದಿನ ಬೀದರ ಜಿಲ್ಲೆಯ ತಾಲ್ಲೂಕು ಕೇಂದ್ರ ಬಸವಕಲ್ಯಾಣವೇ ಆ ಕಲ್ಯಾಣಪಟ್ಟಣವಾಗಿದೆ. ಕಲ್ಯಾಣಿ, ಕಲ್ಯಾಣಪುರ, ಕಸಬಾಕಲ್ಯಾಣ, ಕಸಬಾಕಲ್ಯಾಣಬಾದ ಎಂಬಿತ್ಯಾದಿಯಾಗಿ ಕರೆಯಿಸಿಕೊಂಡಿರುವ ಈ ಪಟ್ಟಣವು ಕ್ರಿ.ಶ. ಸುಮಾರು 12ನೆಯ ಶತಮಾನದಲ್ಲಿ ಬಸವಣ್ಣನವರ ಸಮಾಜೋ-ಧಾರ್ಮಿಕ ಕ್ರಾಂತಿಗೆ ಕೇಂದ್ರಸ್ಥಾನವಾಗಿತ್ತು. ಹಾಗಾಗಿ ಈ ಪಟ್ಟಣಕ್ಕೆ ಬಸವಣ್ಣನವರ ಹೆಸರನ್ನಿಡಬೇಕೆಂದು ಸೊಲ್ಲಾಪುರದ ಶ್ರೀ ಬಾಬಾಸಾಹೇಬ ವಾರದ ಅವರ ನೇತೃತ್ವದಲ್ಲಿ ಜರುಗಿದ ಹೋರಾಟದ ಫಲವಾಗಿ 'ಬಸವಕಲ್ಯಾಣ' ಎಂಬ ಅಭಿದಾನ ಬಂದಿದೆ. ಈ ಪಟ್ಟಣವು ಕ್ರಿ.ಶ. ಸುಮಾರು 2ನೆಯ ಶತಮಾನದಲ್ಲಿಯೇ ಪ್ರಸಿದ್ಧ ಜೈನ ಕೇಂದ್ರ ವಾಗಿದ್ದು, ಯಾಪನೀಯಸಂಘ ಪರಂಪರೆಯ ಮುನಿಗಳ ಬೀಡಾಗಿತ್ತೆಂಬ ವಿಚಾರ 'ದರ್ಶನಸಾರ' ಕೃತಿಯ ನಿರೂಪಣೆಯಿಂದ ಖಚಿತವಾಗುತ್ತದೆ. ಈ ನಗರದ ಜೈಶಂಕರ ಕಾಲೋನಿಯಲ್ಲಿ ಆರ್.ಎಂ. ಷಡಕ್ಷರಯ್ಯ ಅವರು ಕ್ರಿ.ಶ. ಸುಮಾರು 2ನೆಯ ಶತಮಾನದಷ್ಟು ಪ್ರಾಚೀನ ಜನವಸತಿಯ ನೆಲೆಯನ್ನು ಬೆಳಕಿಗೆ ತಂದಿದ್ದಾರೆ.[7] ಈ ನೆಲೆಯೂ ಈ ನಗರದಲ್ಲಿ ಕ್ರಿ.ಶ. ಸುಮಾರು 2ನೆಯ ಶತಮಾನದಲ್ಲಾಗಲೇ ಜೈನ ವಸತಿ ಇತ್ತೆಂಬುದನ್ನು 'ದರ್ಶನಸಾರ' ಕೃತಿಯ ನಿರೂಪಣೆಯನ್ನು ದೃಢೀಕರಿಸುತ್ತದೆ. ಉತ್ತರ ಭಾರತದ ಪ್ರಸಿದ್ಧ ಜೈನಮುನಿ ಪಾದಲಿಪ್ತಾಚಾರ್ಯನು ಕ್ರಿ.ಶ. ಸುಮಾರು 1ನೆಯ ಶತಮಾನದಲ್ಲಿ ದಕ್ಷಿಣ ಭಾರತದೆಡೆಗೆ ವಿಹಾರ ಕೈಗೊಂಡು ಗುಲಬರ್ಗಾ ಜಿಲ್ಲೆಯ ಮಳಖೇಡ ಮತ್ತು ಸೇಡಂ ಪರಿಸರಕ್ಕೆ ಆಗಮಿಸಿದ್ದ ಸಂದರ್ಭದಲ್ಲಿ ಇಲ್ಲಿ ಶ್ವೇತಾಂಬರ ಪರಂಪರೆಯ ಮುನಿಗಳು ಮತ್ತು ಧರ್ಮಾನುಯಾಯಿಗಳು ನೆಲೆಸಿದ್ದರೆಂದು ಹರಿಭದ್ರಸೂರಿಯ 'ಸಮ್ಯಕ್ತ್ವಸಪ್ತತಿ' (ಕ್ರಿ.ಶ. ಸುಮಾರು 7ನೆಯ ಶತಮಾನ) ಕೃತಿಯಲ್ಲಿ ಪ್ರಸ್ತಾಪವಿದೆ.[8] ಇಂದಿನ ಬಸವಕಲ್ಯಾಣ ಪಟ್ಟಣದಿಂದ ಮೊಳಕೆಯೊಡೆದ ಯಾಪನೀಯ ಸಂಘವು ಖಾನಾಪುರ ತಾಲ್ಲೂಕಿನ ಹಲಸಿಯಲ್ಲಿ ಪಲ್ಲವಿಸಿ, ಸವದತ್ತಿ ತಾಲ್ಲೂಕಿನಲ್ಲಿ ಮಲಪ್ರಭಾ ನದಿಯ (ಮಳಪಹಾರಿ) ಬಯಲಿನಲ್ಲಿರುವ ಎಲ್ಲಮ್ಮದೇವಿ ಗುಡ್ಡವನ್ನು (ಮೈಳಾಪತೀರ್ಥ) ಕೇಂದ್ರವಾಗಿಟ್ಟುಕೊಂಡು ಕ್ರಮೇಣ ನಾಡಿನಾದ್ಯಂತ ಪ್ರಸರಿಸಿ ಕ್ರಿ.ಶ. ಸುಮಾರು 14ನೆಯ ಶತಮಾನದಲ್ಲಿ ದಿಗಂಬರ ಪಂಥದಲ್ಲಿ ವಿಲೀನವಾಯಿತು. ಅಸ್ಪೃಶ್ಯರಾದಿಯಾಗಿ ಮತಾಂತರಿಗಳ ಪಾರಮಾರ್ಥಿಕ ಆಶೋತ್ತರ ಮತ್ತು ಕಲ್ಯಾಣವನ್ನು ಧ್ಯೇಯೋದ್ದೇಶವನ್ನಾಗಿ ಹೊಂದಿದ್ದ ಯಾಪನೀಯ ಸಂಘವು ಸಮಕಾಲೀನ ಜೈನ ಸಂಸ್ಕೃತಿ, ಸಮಾಜ, ತತ್ವ-ದರ್ಶನ, ಆಚಾರ-ವಿಚಾರಗಳಲ್ಲಿ ಶುದ್ಧೀಕರಣ, ಏಕೀಕರಣ, ನವೀಕರಣ, ಆಧುನೀಕರಣವನ್ನು ಮೂಡಿಸಲು ಕಂಕಣಬದ್ಧವಾಗಿತ್ತು. ಕನ್ನಡ ನಾಡಿನಲ್ಲಿ ಜೈನ ಧರ್ಮದ ಪ್ರಭಾವನೆ ಮತ್ತು ಪುನರುಜ್ಜೀವನದ ಉತ್ಥಾನಕ್ಕೆ, ಉಜ್ವಲವಾದ ಸ್ಥಾನಮಾನ ನಿರ್ದೇಶನಕ್ಕೆ, ಸಹಸ್ರಾರು ಸಂಖ್ಯೆಯಲ್ಲಿ ಬಸದಿಗಳ ನಿರ್ಮಾಣ ಮತ್ತು ಜೀರ್ಣೋದ್ಧಾರಕ್ಕೆ, ಜಿನಬಿಂಬಗಳು ಮತ್ತು ಶಾಸನದೇವತೆಯರಾದ ಯಕ್ಷ-ಯಕ್ಷಿಯರ ಶಿಲ್ಪಗಳ ಪ್ರತಿಷ್ಠಾಪನೆ-ಆರಾಧನೆಗೆ, ವಿಪುಲ ಸಾಹಿತ್ಯ ಕೃಷಿಗೆ ಯಾಪನೀಯಸಂಘ ಪರಂಪರೆಯ ಮುನಿಗಳ ಸ್ಫೂರ್ತಿ, ಪ್ರೇರಣೆ, ಪ್ರಭಾವ, ಪರಿಶ್ರಮ, ಕೊಡುಗೆ ಅಪಾರವಾಗಿದೆ.[9]

ಬೀದರ ಪ್ರದೇಶದಲ್ಲಿ ಕ್ರಿ.ಶ. ಸುಮಾರು 2ನೆಯ ಶತಮಾನದಲ್ಲಾಗಲೇ ಜೈನಧರ್ಮೀಯರ ವಾಸ್ತವ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ಗೋಚರಿಸಿದರೂ, ಅಂದಿನಿಂದ 10ನೆಯ

ಶತಮಾನದವರೆಗಿನ ಕಾಲಾವಧಿಯಲ್ಲಿ ಜರುಗಿದ ಜೈನ ಚಟುವಟಿಕೆಗಳ ಕುರಿತು ಇದುವರೆಗೂ ಯಾವುದೇ ದಾಖಲೆಗಳು ಲಭ್ಯವಾಗಿಲ್ಲ. ಕ್ರಿ.ಶ. ಸುಮಾರು 14ನೆಯ ಶತಮಾನದಿಂದ 19ನೆಯ ಶತಮಾನದವರೆಗಿನ ಕಾಲಾವಧಿಯಲ್ಲಿ ಜರುಗಿದ ಜೈನ ಚಟುವಟಿಕೆಗಳ ದಾಖಲೆಗಳೂ ದೊರೆತಿಲ್ಲ. 19ನೆಯ ಶತಮಾನದಿಂದೀಚೆಗೆ ಮುನಿಗಳು, ಆರ್ಯಿಕೆಯರು ಮತ್ತು ಭಟ್ಟಾರಕರ ಸ್ಫೂರ್ತಿ-ಪ್ರೇರಣೆಯಿಂದ ಕೆಲವು ಸಂಘ-ಸಂಸ್ಥೆಗಳು ವಿವಿಧ ಜೈನ ಚಟುವಟಿಕೆಗಳನ್ನು ಕೈಗೊಳ್ಳುತ್ತ ಧರ್ಮದ ಪುನರುಜ್ಜೀವನ ಮತ್ತು ಪ್ರಸರಣಕ್ಕೆ ಶ್ರಮಿಸುತ್ತಿವೆ. ಈಗ ಲಭ್ಯವಿರುವ ಕ್ರಿ.ಶ. ಸುಮಾರು 10ನೆಯ ಶತಮಾನದಿಂದ 14ನೆಯ ಶತಮಾನದವರೆಗಿನ ಹಲವು ದಾಖಲೆಗಳಿಂದ (ಬಸದಿಗಳು, ಶಿಲ್ಪಗಳು, ಶಾಸನಗಳು, ಸಾಹಿತ್ಯ ಇತ್ಯಾದಿ) ಈ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ ಉಜ್ಜಳಂಬ, ಉಮಾಪುರ, ಗೋರಟಾ (ಬಿ.), ಘರತಾಪುರ, ನಾರಾಯಣಪುರ, ಬಸವಕಲ್ಯಾಣ, ಮಿರಕಲ್ಲ, ಸಸ್ತಾಪುರ, ಹುಲಸೂರು, ಶಿವಪುರ, ಮೋರಖಂಡಿ, ಭಾಲ್ಕಿ ತಾಲ್ಲೂಕಿನ ಅಳವಾಯಿ, ಧನ್ನುರಾ (ಎಚ್.), ಭಾಲ್ಕಿ, ಜವಳಗಾ, ಲಖಣಗಾಂವ, ಹಲಸಿ, ಬೇಲೂರು, ಬೀದರ ತಾಲ್ಲೂಕಿನ ಅಲಿಯಂಬರ, ಕಾಡವಾದ, ಕಮಠಾಣ, ಬರೂರು, ಬೀದರ, ಔರಾದ ತಾಲ್ಲೂಕಿನ ಔರಾದ, ಹುಮನಾಬಾದ ತಾಲ್ಲೂಕಿನ ಚಿಟಗುಪ್ಪ, ಬೋರಂಪಳ್ಳಿ, ಹಳ್ಳಿಖೇಡ ಮೊದಲಾದ ಗ್ರಾಮಗಳಲ್ಲಿ ಜೈನ ಧರ್ಮದ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು ವಿಜೃಂಭಣೆಯಿಂದ ಜರುಗಿರುವುದು ಮನದಟ್ಟಾಗುತ್ತದೆ. ಆ ಚಟುವಟಿಕೆಗಳ ಕೆಲವು ವಿವರಗಳು ಈ ಜಿಲ್ಲೆಯ ಜೈನ ಶಾಸನಗಳ ಮೂಲಕ ಇಂದಿಗೂ ಅಜರಾಮರವಾಗಿ ಉಳಿದು ಬಂದಿವೆ.

## 2. ಬೀದರ ಜಿಲ್ಲೆಯ ಜೈನ ಶಾಸನಗಳು

ಬೀದರ ಜಿಲ್ಲೆಯಲ್ಲಿ ಇದುವರೆಗೆ ಹುಮನಾಬಾದ ತಾಲ್ಲೂಕಿನಲ್ಲಿ ಹದಿನೇಳು, ಬಸವಕಲ್ಯಾಣ ತಾಲ್ಲೂಕಿನಲ್ಲಿ ಎಪ್ಪತ್ತುಮೂರು, ಭಾಲ್ಕಿ ತಾಲ್ಲೂಕಿನಲ್ಲಿ ಇಪ್ಪತ್ತೈದು, ಬೀದರ ತಾಲ್ಲೂಕಿನಲ್ಲಿ ಎಪ್ಪತ್ತೆಂಟು, ಔರಾದ ತಾಲ್ಲೂಕಿನಲ್ಲಿ ನಾಲ್ಕು - ಹೀಗೆ ಒಟ್ಟು ಒಂದುನೂರಾ ತೊಂಭತ್ತೆಂಟು ಶಾಸನಗಳು ಬೆಳಕಿಗೆ ಬಂದಿವೆ. ಇವುಗಳಲ್ಲಿ ಒಂದುನೂರಾ ಇಪ್ಪತ್ತುಮೂರು ಕನ್ನಡ, ಏಳು ನಾಗರೀ, ಅರವತ್ತಾರು ನಸ್ಕ್ (ಇವುಗಳಲ್ಲಿ ಒಂದೆರಡು ಥುಲ್ತ್) ಲಿಪಿಯಲ್ಲಿವೆ. ಒಂದುನೂರಾ ಹದಿನಾರು ಕನ್ನಡ, ಒಂಭತ್ತು ಸಂಸ್ಕೃತ, ಒಂದು ತೆಲಗು, ಅರವತ್ತೆಂಟು ಪರ್ಶಿಯನ್ ಮತ್ತು ಅರಾಬಿಕ್, ಮೂರು ಮರಾಠಿ ಭಾಷೆಯಲ್ಲಿವೆ. ಆಂಧ್ರಪ್ರದೇಶದ ಹೈದರಾಬಾದಿನಲ್ಲಿರುವ ರಾಜ್ಯ ಸರ್ಕಾರದ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಬೀದರ ನಗರದ ಅಕ್ಕಪಕ್ಕದ ಬಾವಿಯೊಂದರಲ್ಲಿ ದೊರೆತ್ತಿದ್ದ ಕ್ರಿ.ಶ. 1444ರ ಶಾಸನವನ್ನು ಸಂಗ್ರಹಿಸಲಾಗಿದೆ. ಇದರಲ್ಲಿ ನಸ್ಕ್, ನಾಗರೀ ಲಿಪಿಗಳು ಮತ್ತು ಅರಾಬಿಕ್, ಪರ್ಶಿಯನ್, ಸಂಸ್ಕೃತ ಭಾಷೆಗಳನ್ನು ಬಳಸಲಾಗಿದೆ. ಬೀದರ ತಾಲ್ಲೂಕಿನ ಅಷ್ಟೂರದ ಕ್ರಿ.ಶ. 1609ರ ಶಾಸನದಲ್ಲಿ ಥುಲ್ತ್, ನಾಗರೀ ಲಿಪಿಗಳು ಮತ್ತು ಮರಾಠಿ, ಪರ್ಶಿಯನ್ ಭಾಷೆಗಳನ್ನು ಬಳಸಲಾಗಿದೆ. ಈ ಎಲ್ಲ ಶಾಸನಗಳೂ ವಿವಿಧ ಶಾಸನ ಸಂಪುಟಗಳು, ಪಿಎಚ್.ಡಿ. ಮಹಾಪ್ರಬಂಧಗಳು, ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ ವಾರ್ಷಿಕ ವರದಿಗಳು ಮತ್ತು ಸಂಶೋಧನ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿವೆ.[10] ಅವುಗಳಲ್ಲಿ ಬಸವಕಲ್ಯಾಣ ತಾಲ್ಲೂಕಿನ ಬಸವಕಲ್ಯಾಣದಲ್ಲಿ ಎರಡು, ಗೋರಟಾದಲ್ಲಿ ಏಳು, ಉಜ್ಜಳಂಬದಲ್ಲಿ ಒಂದು, ಭಾಲ್ಕಿ ತಾಲ್ಲೂಕಿನ ಭಾಲ್ಕಿಯಲ್ಲಿ ಒಂದು, ಅಳವಾಯಿಯಲ್ಲಿ ಒಂದು, ಹಲಸಿಯಲ್ಲಿ ಒಂದು, ಧನ್ನುರಾದಲ್ಲಿ ಒಂದು, ಜವಳಗಾದಲ್ಲಿ ಒಂದು, ಬೀದರ ತಾಲ್ಲೂಕಿನ ಕಮಠಾಣದಲ್ಲಿ ಒಂದು, ಬರೂರದಲ್ಲಿ ಒಂದು, ಔರಾದ ತಾಲ್ಲೂಕಿನ ಔರಾದದಲ್ಲಿ

ಒಂದು–ಹೀಗೆ ಒಟ್ಟು ಹದಿನೆಂಟು ಜೈನ ಶಾಸನಗಳಿವೆ. ಹುಮನಾಬಾದ ತಾಲ್ಲೂಕಿನಲ್ಲಿ ಇದುವರೆಗೆ ಜೈನ ಶಾಸನಗಳು ದೊರೆತಿಲ್ಲ. ಈಗ ದೊರೆತಿರುವ ಹದಿನೆಂಟು ಜೈನ ಶಾಸನಗಳಲ್ಲಿ ಭಾಲ್ಕಿ ತಾಲ್ಲೂಕಿನ ಅಳವಾಯಿಯ ಕ್ರಿ.ಶ. 1077ರ ಶಾಸನವು ಪ್ರಾಚೀನವಾಗಿದೆ. ಉಳಿದೆಲ್ಲ ಶಾಸನಗಳು ಕ್ರಿ.ಶ. ಸುಮಾರು 12ನೆಯ ಶತಮಾನಕ್ಕೆ ಸಂಬಂಧಿಸಿವೆ. ಈ ಎಲ್ಲ ಶಾಸನಗಳು ಕನ್ನಡ ಲಿಪಿ ಮತ್ತು ಭಾಷೆಯಲ್ಲಿವೆ. ಅಪರೂಪಕ್ಕೆ ಒಂದೆರಡು ಶಾಸನಗಳಲ್ಲಿ ಕೆಲವು ಸಾಲುಗಳು ಸಂಸ್ಕೃತ ಭಾಷೆಯಲ್ಲಿವೆ.

**3. ಶಾಸನಗಳ ಸಾಂಸ್ಕೃತಿಕ ಆಯಾಮಗಳು**

ಬೀದರ ಜಿಲ್ಲೆಯ ಜೈನ ಶಾಸನಗಳಲ್ಲಿ ಸಮಕಾಲೀನ ಆಳರಸರಾದಿ ಅಧಿಕಾರಿಗಳ ರಾಜಕೀಯ ಸ್ವರೂಪ, ಆಡಳಿತ ವಿಭಾಗಗಳು, ಮುನಿಗಳು, ಆರ್ಯಿಕೆಯರು, ಭಟ್ಟಾರಕರ ಪಾಂಡಿತ್ಯ, ಧರ್ಮಪ್ರಸಾರ ಮತ್ತು ಅವರು ಸಾಂಸ್ಕೃತಿಕ ಚಟುವಟಿಕೆಗಳಿಗೆ ಕೊಡಮಾಡಿದ ಸ್ಫೂರ್ತಿ–ಪ್ರೇರಣೆ, ಬಸದಿಗಳ ನಿರ್ಮಾಣ ಮತ್ತು ಜೀರ್ಣೋದ್ಧಾರ, ಶಿಲ್ಪಗಳ ಪ್ರತಿಷ್ಠಾಪನೆ ಮತ್ತು ಆರಾಧನೆ, ಸಾಮಾಜಿಕ ವ್ಯವಸ್ಥೆ, ಆರ್ಥಿಕ ಸ್ಥಿತಿಗತಿ, ಲಿಪಿಕಾರರು ಮತ್ತು ಶಾಸನ ಸಾಹಿತ್ಯ, ಸ್ಥಳನಾಮಗಳು ಮೊದಲಾದ ವಿವರಗಳು ನಿರೂಪಿತವಾಗಿವೆ. ಇವೆಲ್ಲವೂ ಈ ಪ್ರದೇಶದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಇತಿಹಾಸದ ಜೊತೆಗೆ ಜೈನ ಧರ್ಮದ ಪ್ರಾದೇಶಿಕ ಇತಿಹಾಸಧ್ಯಯನಕ್ಕೂ ಅಪರೂಪದ ಆಕರಗಳಾಗಿವೆ.

**3.1. ರಾಜಕೀಯ ಸ್ವರೂಪ**

ಬೀದರ ಜಿಲ್ಲೆಯ ಇಂದಿನ ಪ್ರದೇಶವು ನಂದರು, ಮೌರ್ಯರು, ಶಾತವಾಹನರು, ಚುಟುಗಳು, ನಾಗರು, ಬನವಾಸಿ ಕದಂಬರು, ಬಾದಾಮಿ ಚಲುಕ್ಯರು, ವಾಕಾಟಕರ ಆಳ್ವಿಕೆಯ ಪ್ರಭಾವದಲ್ಲಿತ್ತೆಂಬುದನ್ನು ಈ ಜಿಲ್ಲೆಯಲ್ಲಿ ಮತ್ತು ಇದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ದೊರೆತ ಶಾಸನಗಳಾದಿ ವಿವಿಧ ಪುರಾತತ್ವ ಅವಶೇಷಗಳು ಮತ್ತು ಸಮಕಾಲೀನ ಸಾಹಿತ್ಯಿಕ ದಾಖಲೆಗಳು ದೃಢಪಡಿಸುತ್ತವೆ.[11] ಆದರೆ ಆ ಮನೆತನಗಳ ಆಳ್ವಿಕೆಯ ಕಾಲಾವಧಿಗಳಲ್ಲಿ ಈ ಪ್ರದೇಶದಲ್ಲಿ ಜೈನ ಧರ್ಮಕ್ಕೆ ಸಂಬಂಧಿಸಿದಂತೆ ಜರುಗಿರಬಹುದಾದ ಚಟುವಟಿಕೆಗಳ ಕುರುಹುಗಳು ಇದುವರೆಗೆ ಬೆಳಕಿಗೆ ಬಂದಿಲ್ಲ. ಗುಲಬರ್ಗಾ ಜಿಲ್ಲೆಯ ಮಳಖೇಡವನ್ನು ರಾಜಧಾನಿ ಮಾಡಿಕೊಂಡು ಆಳ್ವಿಕೆ ಕೈಗೊಂಡಿದ್ದ ರಾಷ್ಟ್ರಕೂಟರ ಕಾಲದ ಕೆಲವು ಜೈನ ವಾಸ್ತುಶಿಲ್ಪಾವಶೇಷಗಳು ಮತ್ತು ಸಾಹಿತ್ಯಿಕ ಕುರುಹುಗಳು ಈ ಪ್ರದೇಶದ ಔರಾದ, ಹಳ್ಳಿಖೇಡ ಮೊದಲಾದೆಡೆಗಳಲ್ಲಿ ಗೋಚರಿಸುತ್ತವೆ. ಆದರೆ ಈ ಪ್ರದೇಶದ ಇಂದಿನ ಬಸವಕಲ್ಯಾಣವನ್ನು ರಾಜಧಾನಿ ಮಾಡಿಕೊಂಡು ಆಳ್ವಿಕೆ ಮಾಡಿದ ಚಾಳುಕ್ಯ ಮನೆತನಕ್ಕೆ ಸಂಬಂಧಿಸಿದ ಕ್ರಿ.ಶ. ಸುಮಾರು 12ನೆಯ ಶತಮಾನದ ಕೆಲವು ಜೈನ ಶಾಸನಗಳೇ ಈ ಜಿಲ್ಲೆಯಲ್ಲಿ ದೊರೆತಿರುವ ಪ್ರಾಚೀನ ಜೈನ ಶಾಸನ ಕುರುಹುಗಳಾಗಿವೆ. ಈಗ ಈ ಜಿಲ್ಲೆಯಲ್ಲಿ ಲಭ್ಯವಿರುವ ಜೈನ ಶಾಸನಗಳು ಈ ಪ್ರದೇಶದಲ್ಲಿ ಆಳ್ವಿಕೆ ಕೈಗೊಂಡಿದ್ದ ಕಲ್ಯಾಣದ ಚಾಳುಕ್ಯ ಮನೆತನದ ಅರಸರು, ಮಹಾಮಂಡಳೇಶ್ವರರು ಮತ್ತು ಅವರ ಆಧೀನದಲ್ಲಿ ಆಳಿದ ಹಾಗೂ ಅವರಿಗೆ ಆಡಳಿತದ ನಿರ್ವಹಣೆಯಲ್ಲಿ ಸಹಾಯಕರಾಗಿದ್ದ ದಂಡನಾಯಕರು, ಸೇನಬೋವರು, ಗಾವುಂಡರು, ಪೆರ್ಗ್ಗಡೆಗಳು ಮೊದಲಾದ ಅಧಿಕಾರಿಗಳ ರಾಜಕೀಯ (ಆಡಳಿತ) ಸ್ವರೂಪವನ್ನು ನಿರೂಪಿಸಿವೆ. ಅಳವಾಯಿಯ ಕ್ರಿ.ಶ. 1077, ಬಸವಕಲ್ಯಾಣದ ಕ್ರಿ.ಶ. 1097, ಭಾಲ್ಕಿಯ ಕ್ರಿ.ಶ. 1099, ಬರೂರದ ಕ್ರಿ.ಶ. 1115, ಉಜ್ಜಳಂಬದ ಕ್ರಿ.ಶ. 1120, ಧನ್ನುರಾದ ಕ್ರಿ.ಶ. 1132ರ ಶಾಸನಗಳಲ್ಲಿ ಕಲ್ಯಾಣದ ಚಾಳುಕ್ಯ ಮನೆತನದ ತ್ರಿಭುವನಮಲ್ಲದೇವನ (6ನೆಯ ವಿಕ್ರಮಾದಿತ್ಯ) ಪ್ರಶಸ್ತಿಗಳು ಮತ್ತು ಆತನು

ಕಲ್ಯಾಣಪುರದ ನೆಲೆವೀಡಿನಿಂದ ಅರಸುಗೈಯುತ್ತಿದ್ದ ವಿವರಗಳಿವೆ.[12] ಧನ್ನೂರಾದ ಕ್ರಿ.ಶ. 1132ರ ಮತ್ತು ಗೋರಟಾದ ಕ್ರಿ.ಶ. 1133ರ ಶಾಸನಗಳು ಭೂಲೋಕಮಲ್ಲದೇವನ (ಇಮ್ಮಡಿ ಸೋಮೇಶ್ವರ) ಪ್ರಶಸ್ತಿಗಳು ಮತ್ತು ಆಳ್ವಿಕೆಯನ್ನು ಉಲ್ಲೇಖಿಸಿವೆ.[13]

ಕಲ್ಯಾಣದ ಚಾಳುಕ್ಯ ಮನೆತನದ ಅರಸರ ಕಾಲದಲ್ಲಿ ವಿಸ್ತಾರವಾಗಿದ್ದ ಸಾಮ್ರಾಜ್ಯದಲ್ಲಿ ಅವರ ಪಾದಪದ್ಮೋಪಜೀವಿಗಳಾಗಿ ಯುವರಾಜರು ಮತ್ತು ಮಹಾಮಂಡಳೇಶ್ವರರು, ಮಹಾಸಾಮಂತರು, ಪ್ರಭುಗಾವುಂಡರು, ಗಾವುಂಡರು ಕೆಲವು ಆಡಳಿತ ವಿಭಾಗಗಳಲ್ಲಿ ಮತ್ತು ಪ್ರಮುಖ ನಗರಗಳಲ್ಲಿ ಒಡೆಯರಾಗಿ ಆಳುತ್ತಿದ್ದರು. ಭಾಲ್ಕಿಯ ಕ್ರಿ.ಶ. 1099ರ ಶಾಸನದಲ್ಲಿ ತ್ರಿಭುವನಮಲ್ಲದೇವನ ಮಹಾಮಂಡಳೇಶ್ವರ ಕುಮಾರ ಹೆಮ್ಮಾಡಿದೇವನ ಪ್ರಶಸ್ತಿಗಳು ಮತ್ತು ಈತನು ರಾಜಧಾನಿಪಟ್ಟಣ ಭಲ್ಲುಂಕೆಯ (ಇಂದಿನ ಭಾಲ್ಕಿ) ಆಳ್ವಿಕೆಯನ್ನು ನೋಡಿಕೊಳ್ಳುತ್ತಿದ್ದ ವಿವರಗಳಿವೆ.[14] ಹೆಮ್ಮಾಡಿದೇವನು 6ನೆಯ ವಿಕ್ರಮಾದಿತ್ಯನ ಮೊಮ್ಮಗನೂ ಇಮ್ಮಡಿ ಸೋಮೇಶ್ವರನ ಮಗನೂ ಆದ ಪ್ರತಾಪಚಕ್ರವರ್ತಿ ತ್ರಿಭುವನಮಲ್ಲ ಇಮ್ಮಡಿ ಜಗದೇಕಮಲ್ಲನಾಗಿದ್ದಾನೆ.[15] ಉಜ್ಜಳಂಬದ ಕ್ರಿ.ಶ. 1120ರ ಶಾಸನವು ತ್ರಿಭುವನಮಲ್ಲದೇವನ ಮಹಾಮಂಡಳೇಶ್ವರ ವೈಸಕುಲದ ಶ್ರೀಯಮರಸನು ಭತ್ತಗ್ರಾಮ (ಉಪಭೋಗಕ್ಕೋಸುಗ ನೀಡಿದ ಗ್ರಾಮ) ಉಜ್ಜಳಂಬದ ಪರಿಸರದಲ್ಲಿ ಆಳ್ವಿಕೆ ಕೈಗೊಂಡಿದ್ದನ್ನು ನಿರೂಪಿಸಿದೆ. ಈ ಶಾಸನವು ಶ್ರೀಯಮರಸನ ಪ್ರಶಸ್ತಿಗಳು ಮತ್ತು ಈತನು ಮಲ್ಲ, ಬರ್ಮ್ಮ ಎಂಬುವವರ ಮರಮಾಂಗ, ಶಿರವನ್ನು ಛೇದಿಸಿದನೆಂದು ವರ್ಣಿಸಿದೆ. ಶ್ರೀಯಮರಸನು ಹಲವು ದಂಡಯಾತ್ರೆಗಳನ್ನು ಕೈಗೊಂಡು ಅವುಗಳಲ್ಲಿ ಯಶಸ್ವಿಯಾಗಿ ತನ್ನ ಒಡೆಯ ತ್ರಿಭುವನಮಲ್ಲ ದೇವನ ಪ್ರೀತಿಗೆ ಪಾತ್ರನಾಗಿದ್ದನು. ಹಾಗಾಗಿ ತ್ರಿಭುವನಮಲ್ಲದೇವನು ನಿಷ್ಠೆಯಿಂದ ಸೇವೆಸಲ್ಲಿಸಿದ ಈತನಿಗೆ ಕೌಟುಂಬಿಕ ಜೀವನ ನಿರ್ವಹಣೆಗಾಗಿ ಉಜ್ಜಳಂಬವನ್ನು ಭತ್ತಗ್ರಾಮ ರೂಪದಲ್ಲಿ ಉಂಬಳವಾಗಿ (ಇನಾಮ) ಕೊಟ್ಟಂತೆ ತೋರುತ್ತದೆ.

ಮಹಾಮಂಡಳೇಶ್ವರರ ಆಧೀನದಲ್ಲಿ 'ಆಳುವ ಮಹಾಸಾಮಂತರು ಮತ್ತು 'ಸುಂಕದ ಮಹಾಸಾಮಂತರು ಕಾರ್ಯನಿರ್ವಹಿಸುತ್ತಿದ್ದರು. ಇವರು ಅರಸನಿಂದಲೋ ಅಥವಾ ಮಹಾಮಂಡಳೇಶ್ವರನಿಂದಲೋ ಗೌರವಕ್ಕೆ ಪಾತ್ರರಾಗಿ ಅವರಿಂದ ಮಾನ್ಯತೆಯನ್ನು ಪಡೆದುಕೊಂಡು ಆಳುತ್ತಿದ್ದರು. ಅಂತಾಗಿ ಇವರನ್ನು 'ಮನ್ನೆಯರು' ಎಂತಲೂ ಕರೆಯಲಾಗುತ್ತಿತ್ತು.[16] ಆಳವಾಯಿಯ ಕ್ರಿ.ಶ. 1077ರ ಶಾಸನದಲ್ಲಿ ಮನ್ನೆಯ ಎಡೆಯರಸನ ಪ್ರಸ್ತಾಪವಿದೆ.[17] ಈತನು ಅಟ್ಟಳೆ-300 ಆಡಳಿತ ವಿಭಾಗದ ಪುಲುಗೆ-60 ಉಪವಿಭಾಗದಲ್ಲಿ ಆಳ್ವಿಕೆ ಕೈಗೊಂಡಿದ್ದನು. ಬರೂರದ ಕ್ರಿ.ಶ. 1115ರ ಶಾಸನದಲ್ಲಿ ಅಟ್ಟಳೆ-300 ಆಡಳಿತ ವಿಭಾಗದ ಮನ್ನೆಯರ ಪ್ರಸ್ತಾಪವಿದೆ.[18] ಆದರೆ ಈ ಶಾಸನದಲ್ಲಿ ಅವರ ಹೆಸರುಗಳು ಮತ್ತು ಅವರ ಆಳ್ವಿಕೆಯ ಕುರಿತಾದ ವಿವರಗಳಿಲ್ಲ. ಮಹಾಸಾಮಂತರ ಆಧೀನದಲ್ಲಿ 'ಪ್ರಭುಗಾವುಂಡರು ತಮ್ಮ ಪ್ರಭುತ್ವಕ್ಕೊಳಪಟ್ಟಿದ್ದ ಗ್ರಾಮಗಳ ರಕ್ಷಣೆ, ಮೇಲ್ವಿಚಾರಣೆ, ಆಡಳಿತವನ್ನು ನೋಡಿಕೊಳ್ಳುವುದರೊಂದಿಗೆ ಆ ಗ್ರಾಮಗಳಲ್ಲಿ ವಿವಿಧ ಸಾಮಾಜಿಕ, ಧಾರ್ಮಿಕ, ಲೋಕೋಪಯೋಗಿ ಚಟುವಟಿಕೆಗಳನ್ನೂ ಕೈಗೊಳ್ಳುತ್ತಿದ್ದರು. ಆಳರಸರಾದಿಯಾಗಿ ಪ್ರಜೆಗಳು ವಿವಿಧ ಸಾಂಸ್ಕೃತಿಕ ಕಾರ್ಯಗಳಿಗೆ ದಾನ-ದತ್ತಿಗಳನ್ನು ಕೊಡುತ್ತಿದ್ದ ಸಂದರ್ಭದಲ್ಲಿ ಪ್ರಭುಗಾವುಂಡರು ಉಪಸ್ಥಿತ ಇರುತ್ತಿದ್ದರು. ಆ ದಾನ-ದತ್ತಿಗಳನ್ನು ರಕ್ಷಿಸುವುದೂ, ಸುರಕ್ಷಿತವಾಗಿ ಮುಂದುವರಿಸಿಕೊಂಡು ಬರುವುದೂ ಇವರ ಕರ್ತವ್ಯವಾಗಿತ್ತು.[19] ಆಳವಾಯಿಯ ಕ್ರಿ.ಶ. 1077ರ ಶಾಸನದಲ್ಲಿ ಪ್ರಭುಗಾವುಂಡ ವೈಜರಸ ಮತ್ತು ಪ್ರಭುಗಾವುಂಡ ಪೊಲ್ಲಮಯ್ಯನ ಉಲ್ಲೇಖಗಳಿವೆ.[20] ಇವರು ಕೆಲವು ಗಾವುಂಡರು ಸ್ಥಳೀಯ ಯಾವುದೋ ಒಂದು ಕಾರ್ಯಕ್ಕೆ ದಾನ-ದತ್ತಿಗಳನ್ನು ಕೊಡುತ್ತಿದ್ದ ಸಂದರ್ಭದಲ್ಲಿ

ಉಪಸ್ಥಿತರಿದ್ದರು. ಬರೂರದ ಕ್ರಿ.ಶ. 1115ರ ಶಾಸನದಲ್ಲಿ ಬರವೂರದ ಪ್ರಭುಗಾವುಂಡ ಆದಿತ್ಯಭಟ್ಟನ ಪುತ್ರ ಪ್ರಭುಗಾವುಂಡ ಚಂಗದೇವಭಟ್ಟ, ಕುಮಾರಸ್ವಾಮಿ ಭಟ್ಟೋಪಾಧ್ಯಾಯ, ರುದ್ರಭಟ್ಟ, ಮಲ್ಲದೇವಭಟ್ಟ, ಮುಚ್ಚಿದೇವಭಟ್ಟ ಎಂಬ ಐವರು ಪ್ರಭುಗಾವುಂಡರು ಶಾಂತಿನಾಥ ಬಸದಿಗೆ ಸುಂಕಗಳನ್ನು ದಾನ ಮಾಡಿದ ನಿರೂಪಣೆಯಿದೆ.[21] ಗಾವುಂಡರು ಗ್ರಾಮದ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಇವರು ಗ್ರಾಮದ ರಕ್ಷಣೆ ಮತ್ತು ಸುಂಕಗಳ ಸಂಗ್ರಹಣೆಯೊಂದಿಗೆ ಅರಸರು, ಮಹಾಮಂಡಳೇಶ್ವರರು, ಮಹಾಸಾಮಂತರ ಪರವಾಗಿ ಯುದ್ಧಗಳಲ್ಲಿ ಭಾಗವಹಿಸುತ್ತಿದ್ದರು.[22] ಅಳವಾಯಿಯ ಕ್ರಿ.ಶ. 1077ರ ಶಾಸನದಲ್ಲಿ ಚಿಲ್ಲಗಾವುಂಡ ಮತ್ತು ಹಳ್ಳಗಾವುಂಡನ ಪ್ರಸ್ತಾಪಗಳಿವೆ.[23] ಇವರಿಬ್ಬರೂ ಅಳವಾಯಿಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು.

ಅರಸರು, ಮಹಾಮಂಡಳೇಶ್ವರರು, ಮಹಾಸಾಮಂತರು, ಪ್ರಭುಗಾವುಂಡರು, ಗಾವುಂಡರಿಗೆ ಆಡಳಿತದಲ್ಲಿ ಸಹಾಯಕರಾಗಿ ದಂಡನಾಯಕರು, ರಾಜಾಧ್ಯಕ್ಷರು, ಅಂತಃಪುರಾಧ್ಯಕ್ಷರು, ನಿಯೋಗಿಗಳು, ಪಡೆವಳರು, ಹಡಪವಳರು, ಪ್ರತಿಹಾರರು, ಪೆರ್ಗಡೆಗಳು, ಸೇನಬೋವರು, ತಳಾರರು ಇತ್ಯಾದಿ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದರು. ಇವರಲ್ಲಿ ದಂಡನಾಯಕರು ಆಳರಸರಿಂದ ಸಾಮ್ರಾಜ್ಯದ ವಿವಿಧ ಇಲಾಖೆಗಳಿಗೆ ನೇಮಕವಾಗುತ್ತಿದ್ದರು. ನೇಮಕದ ಸಂದರ್ಭದಲ್ಲಿ ಅರಸರಿಂದ ದಂಡವನ್ನು ಸಾಂಕೇತಿಕವಾಗಿ ಪಡೆಯುತ್ತಿದ್ದರು. ಅಂತಾಗಿ ಇವರನ್ನು 'ದಂಡನಾಯಕರು' ಎಂದು ಕರೆಯಲಾಗುತ್ತಿತ್ತು.[24] ಧನ್ನುರಾದ ಕ್ರಿ.ಶ. 1132ರ ಶಾಸನದಲ್ಲಿ ಧನ್ನವುರದ ದಂಡನಾಯಕ ಮಹೇಶ್ವರ, ಈತನ ಪುತ್ರ ಮಲ್ಲದೇವ, ಈತನ ಪುತ್ರರಾದ ಗೋಪದೇವ ಮತ್ತು ಪ್ರಧಾನಿ ಕಾಳಿಮಯ್ಯನ ಪ್ರಸ್ತಾಪವಿದೆ.[25] ಇವರೆಲ್ಲರೂ ಸ್ಥಳೀಯ ಬಸದಿಗೆ ದಾನ-ದತ್ತಿಗಳನ್ನು ಕೊಟ್ಟಿದ್ದಾರೆ. ಔರಾದದ ಕ್ರಿ.ಶ. ಸುಮಾರು 12ನೆಯ ಶತಮಾನದ ಶಾಸನದಲ್ಲಿ ದಂಡನಾಯಕನ ಉಲ್ಲೇಖವಿದೆ.[26] ಈ ಶಾಸನದ ಅಕ್ಷರಗಳು ತುಂಬಾ ಸವೆದಿರುವುದರಿಂದ ಆತನ ಹೆಸರು ಮತ್ತು ಕಾರ್ಯ ಚಟುವಟಿಕೆಗಳು ಅಸ್ಪಷ್ಟವಾಗಿವೆ. ಪೆರ್ಗ್ಗಡೆಗಳು ಗ್ರಾಮದಲ್ಲಿ ತೆರಿಗೆ ಸಂಗ್ರಹಿಸುವ ಅಧಿಕಾರ ಹೊಂದಿದ್ದರು. ಹಾಗಾಗಿ ಇವರನ್ನು 'ಸುಂಕದ ಪೆರ್ಗ್ಗಡೆ', 'ಹೆರ್ಜ್ಜುಂಕದ ಪೆರ್ಗ್ಗಡೆ' ಎಂತಲೂ ಕರೆಯಲಾಗುತ್ತಿತ್ತು.[27] ಬರೂರದ ಕ್ರಿ.ಶ. 1115ರ ಶಾಸನದಲ್ಲಿ ಛಪ್ಪನ್ನ ಹೆಜ್ಜುಂಕ ಪೆರ್ಗ್ಗಡೆಗಳು ಮತ್ತು ಉಜ್ಜಳಂಬದ ಕ್ರಿ.ಶ. 1120ರ ಶಾಸನದಲ್ಲಿ ಪೆರ್ಗ್ಗಡೆ ಚಾವುಂಡಮಯ್ಯ, ಸುಂಕವೆರ್ಗ್ಗಡೆ ಏಚರಸನ ನಿರೂಪಣೆಗಳಿವೆ.[28] ಸೇನಬೋವರು ಗಾವುಂಡರ ಆಧೀನದಲ್ಲಿ ಗ್ರಾಮದ ಲೆಕ್ಕಪತ್ರಗಳನ್ನು ಬರೆಯುತ್ತಿದ್ದರು. ಜೊತೆಗೆ ಗ್ರಾಮಗಳಲ್ಲಿ ವಿವಿಧ ಚಟುವಟಿಕೆಗಳಿಗೆ ಆಳರಸರಾದಿಯಾಗಿ ಪ್ರಜೆಗಳು ಕೊಡಮಾಡಿದ ದಾನ-ದತ್ತಿಗಳ ವಿವರಗಳನ್ನೂ ಬರೆದಿಡುತ್ತಿದ್ದರು. ತರುವಾಯ ಆ ವಿವರಗಳನ್ನು ಶಾಸನಗಳ ರೂಪದಲ್ಲಿ ಪ್ರಕಟಿಸಲಾಗುತ್ತಿತ್ತು. ಅಳವಾಯಿಯ ಕ್ರಿ.ಶ. 1077ರ ಶಾಸನವನ್ನು ಅಟ್ಟಳೆಯ ಸೇನಬೋವ ಅಗ್ಗಳಯ್ಯನು ಬರೆದಿದ್ದಾನೆ.[29]

### 3.2. ಆಡಳಿತ ವಿಭಾಗಗಳು

ಕನ್ನಡ ನಾಡನ್ನಾಳಿದ ಬಹುತೇಕ ಅರಸು ಮನೆತನಗಳೆಲ್ಲವೂ ವಿಸ್ತಾರವಾಗಿದ್ದ ಸಾಮ್ರಾಜ್ಯವನ್ನು ವ್ಯವಸ್ಥಿತ ಆಡಳಿತದ ಅನುಕೂಲಕ್ಕಾಗಿ ರಾಜ್ಯ, ಮಂಡಲ, ವಿಷಯ, ದೇಶ, ನಾಡು, ಕಂಪಣ ಇತ್ಯಾದಿ ವಿಭಾಗಗಳಲ್ಲಿ ವಿಂಗಡಿಸಿದ್ದವು.[30] ಇಂದಿನ ಬೀದರ ಜಿಲ್ಲೆಯ ಪ್ರದೇಶದಲ್ಲಿಯೂ ಕೆಲವು ಆಡಳಿತ ವಿಭಾಗಗಳಿದ್ದವು. ಇಲ್ಲಿಯ ಜೈನ ಶಾಸನಗಳಲ್ಲಿ ಒಂದೆರಡು ವಿಭಾಗಗಳ ಪ್ರಸ್ತಾಪಗಳಿವೆ. ಬರೂರದ ಕ್ರಿ.ಶ. 1115ರ ಶಾಸನದಲ್ಲಿ ಅಟ್ಟಳೆ-300 ವಿಭಾಗದ ಉಲ್ಲೇಖವಿದೆ.[31] ಇದು ಕುಂತಳನಾಡಿನಲ್ಲಿ

ಪ್ರಮುಖ ವಿಭಾಗವಾಗಿತ್ತು. ಬಾದಾಮಿ ಚಲುಕ್ಯರ ಕಾಲದಿಂದ ಕ್ರಿ.ಶ. ಸುಮಾರು 12ನೆಯ ಶತಮಾನದವರೆಗೂ ಅಸ್ತಿತ್ವದಲ್ಲಿದ್ದ ಈ ವಿಭಾಗದಲ್ಲಿ ಇಂದಿನ ಬಸವಕಲ್ಯಾಣ ತಾಲ್ಲೂಕಿನ ಕೆಲವು ಗ್ರಾಮಗಳು, ಭಾಲ್ಕಿ, ಬೀದರ, ಹುಮನಾಬಾದ ತಾಲ್ಲೂಕುಗಳು ಮತ್ತು ಆಂಧ್ರಪ್ರದೇಶದ ಜಹಿರಾಬಾದ ತಾಲ್ಲೂಕಿನ ಕೆಲವು ಗ್ರಾಮಗಳು ಸೇರಿದಂತೆ ಒಟ್ಟು ಮುನ್ನೂರು ಗ್ರಾಮಗಳಿದ್ದವು. ಈ ವಿಭಾಗದ ಮಧ್ಯದಲ್ಲಿ ಕಾರಂಜಾ ನದಿ ಹರಿಯುತ್ತಿದ್ದ ಕಾರಣ ನದಿಯಾಚೆಯ (ಬಲಬದಿಯ) ಭಾಗವನ್ನು 'ಮೇಲಟ್ಟಳೆ' ಎಂದೂ, ನದಿಯಿಚಿನ (ಎಡಬದಿಯ) ಭಾಗವನ್ನು 'ಕೀಳಟ್ಟಳೆ' ಎಂದೂ ಕರೆಯಲಾಗುತ್ತಿತ್ತು. ಇಂದಿನ ಬೀದರ ತಾಲ್ಲೂಕಿನ ಅಟ್ಟಾಳ ಗ್ರಾಮವೇ ಅಟ್ಟಳೆ-300 ವಿಭಾಗದ ಕೇಂದ್ರ ಪಟ್ಟಣವಾಗಿತ್ತು. ಈ ವಿಭಾಗದಲ್ಲಿ ಭಲ್ಲುಂಕೆ-84, ಪುಲುಗೆರೆ-60, ಬೀರಿಗೆ-40, ಘಟ್ಟ-24, ಪುಲಿಚರ-30, ನಾಗಾವೆ-12 ಎಂಬಿತ್ಯಾದಿ ಉಪವಿಭಾಗಗಳಿದ್ದವು.[32] ಅಳವಾಯಿಯ ಕ್ರಿ.ಶ. 1077ರ ಶಾಸನದಲ್ಲಿ ಪುಲುಗೆ-60 ವಿಭಾಗದ ಪ್ರಸ್ತಾಪವಿದೆ.[33] ಇದು ಅಟ್ಟಳೆ-300 ವಿಭಾಗದ ಉಪವಿಭಾಗವಾಗಿದೆ. ಇದರಲ್ಲಿ ಇಂದಿನ ಭಾಲ್ಕಿ ಮತ್ತು ಮಹಾರಾಷ್ಟ್ರದ ಲಾತೂರು ಜಿಲ್ಲೆಯ ಉದ್ಗೀರ (ಉದಯಗಿರಿ) ತಾಲ್ಲೂಕಿನ ಕೆಲವು ಗ್ರಾಮಗಳು ಸೇರ್ಪಡೆಯಾಗಿದ್ದವು.

### 3.3. ಮುನಿಗಳು

1ನೆಯ ತೀರ್ಥಂಕರ ಆದಿನಾಥನಾದಿಯಾಗಿ ಮಹಾವೀರನವರೆಗಿನ ಇಪ್ಪತ್ನಾಲ್ಕು ತೀರ್ಥಂಕರರೆಲ್ಲರೂ ಉತ್ತರ ಭಾರತದಲ್ಲಿ ಜನಿಸಿ ಧರ್ಮವನ್ನು ಪುನರುಜ್ಜೀವನಗೊಳಿಸಿ ಆ ಭಾಗದಲ್ಲಿಯೇ ನಿರ್ವಾಣ ಹೊಂದಿದ್ದಾರೆ. ಅವರಲ್ಲಿ ಆದಿನಾಥ, ನೇಮಿನಾಥ, ಪಾರ್ಶ್ವನಾಥ, ಮಹಾವೀರ ತೀರ್ಥಂಕರರು ಧರ್ಮಪ್ರಸಾರಕ್ಕಾಗಿ ದಕ್ಷಿಣ ಭಾರತಕ್ಕೆ ಆಗಮಿಸಿದ್ದರೆಂಬುದು ಜೈನ ಮತ್ತು ಜೈನೇತರ ಕೃತಿ-ಕಾವ್ಯಗಳಲ್ಲಿ ಪ್ರಸ್ತಾಪಗಳಿವೆ. ಮಹಾವೀರನ ನಿರ್ವಾಣದ ತರುವಾಯ ಆತನ ತತ್ವೋಪದೇಶಗಳನ್ನು ಕ್ರಮವಾಗಿ ಮೂವರು ಕೇವಲಿಗಳು (ಗೌತಮಸ್ವಾಮಿ, ಸುಧರ್ಮಾಚಾರ್ಯ, ಜಂಬೂಸ್ವಾಮಿ), ಐವರು ಶ್ರುತಕೇವಲಿಗಳು (ವಿಷ್ಣು, ನಂದಿಮಿತ್ರ, ಅಪರಾಜಿತ, ಗೋವರ್ಧನ, ಭದ್ರಬಾಹು), ಹನ್ನೊಂದು ದಶಪೂರ್ವಧಾರಿಗಳು (ವಿಶಾಖಾಚಾರ್ಯ, ಪ್ರೋಷ್ಠಿಲಾಚಾರ್ಯ, ಕ್ಷತ್ರಿಯಾಚಾರ್ಯ, ಜಯಸೇನಾಚಾರ್ಯ, ನಾಗಸೇನ ಆಚಾರ್ಯ, ಸಿದ್ಧಾರ್ಥಾಚಾರ್ಯ, ಧೃತಿಸೇನಾಚಾರ್ಯ, ವಿಜಯಾಚಾರ್ಯ, ಬುದ್ಧಿಲಿಂಗಾಚಾರ್ಯ, ದೇವಾಚಾರ್ಯ, ಧರ್ಮಸೇನಾಚಾರ್ಯ), ಐವರು ಏಕಾದಶಾಂಗಧರರು (ನಕ್ಷತ್ರಾಚಾರ್ಯ, ಜಯಪಾಲ ಆಚಾರ್ಯ, ಪಾಂಡವ ಆಚಾರ್ಯ, ಧ್ರುವಸೇನ ಆಚಾರ್ಯ, ಕಂಸಾಚಾರ್ಯ), ನಾಲ್ವರು ಆಚಾರಾಂಗಧರರು (ಸುಭದ್ರಾಚಾರ್ಯ, ಯಶೋಭದ್ರಾಚಾರ್ಯ, ಭದ್ರಬಾಹು ಆಚಾರ್ಯ, ಲೋಹಾಚಾರ್ಯ), ಐವರು ಏಕಾಂಗವೇದಧರರು (ಅಹಿಬಲ್ಯ ಆಚಾರ್ಯ, ಮಾಘನಂದ್ಯಾಚಾರ್ಯ, ಧರಸೇನಾಚಾರ್ಯ, ಪುಷ್ಪದಂತ ಆಚಾರ್ಯ, ಭೂತಬಲಿ ಆಚಾರ್ಯ) ಶ್ರುತರೂಪದಲ್ಲಿ ಮುಂದುವರಿಸಿಕೊಂಡು ಬಂದರು.[34]

ಗುಜರಾತಿನ ಗಿರಿನಾರ ಪರ್ವತದ ಚಂದ್ರಗುಹೆಯಲ್ಲಿ ಮಹಾತಪಸ್ಸು ಮಾಡುತ್ತಿದ್ದ ಧರಸೇನಾಚಾರ್ಯರು ಹದಿನಾಲ್ಕು ಪೂರ್ವಗಳಲ್ಲಿ ಎರಡನೆಯದಾದ ಅಗ್ರಾಯಣೀಯ ಐದನೆಯ ಚಯನಲಬ್ಧಿ ವಸ್ತುವಿನ ಇಪ್ಪತ್ತು ಪ್ರಾಭೃತಗಳಲ್ಲಿ ನಾಲ್ಕನೆಯ ಮಹಾಕರ್ಮಪ್ರಕೃತಿ ಪ್ರಾಭೃತವನ್ನು ಸಂಪೂರ್ಣವಾಗಿ ಗುರುಪರಂಪರೆಯಿಂದ ತಿಳಿದು ಗ್ರಹಿಸಿಕೊಂಡಿದ್ದರು. ಇವರು ತಾವು ತಿಳಿದ ಜ್ಞಾನವು (ತೀರ್ಥಂಕರರ ಉಪದೇಶ) ತಮ್ಮ ಅವಸಾನದೊಂದಿಗೆ ನಶಿಸಿ ಹೋಗಬಾರದೆಂದು,

ಇದನ್ನು ಗ್ರಂಥರೂಪದಲ್ಲಿ ಸಂಗ್ರಹಿಸಬೇಕೆಂದು ಆಂಧ್ರಪ್ರದೇಶದ ವೇಣಾಕ ನದಿಯ ದಡದಲ್ಲಿದ್ದ ಮುನಿಸಂಘಕ್ಕೆ ತೀಕ್ಷ್ಣಬುದ್ಧಿಯುಳ್ಳ ಮುನಿಗಳನ್ನು ಕಳುಹಿಸಬೇಕೆಂಬ ಸಂದೇಶವನ್ನು ಕಳುಹಿಸಿದರು. ಇದರಂತೆ ಪುಷ್ಪದಂತ ಮತ್ತು ಭೂತಬಲಿ ಎಂಬಿಬ್ಬರು ವಿನಯಶೀಲರೂ ಸಮರ್ಥರೂ ತೀಕ್ಷ್ಣಬುದ್ಧಿಯುಳ್ಳವರೂ ಆದ ಏಕಪಾಠಿ ದಿಗಂಬರ ಮುನಿಗಳನ್ನು ಕಳುಹಿಸಿದರು. ಇವರಿಗೆ ತಮ್ಮ ಜ್ಞಾನವನ್ನು ಧಾರೆಯೆರೆದು ಅಂಕುಲೇಶ್ವರಕ್ಕೆ ಕಳುಹಿಸಿಕೊಟ್ಟರು. ಇವರಿಬ್ಬರೂ ಅಂಕುಲೇಶ್ವರದಲ್ಲಿ ಚಾತುರ್ಮಾಸವನ್ನು (ವರ್ಷಾಯೋಗ) ಕೈಗೊಂಡರು. ತರುವಾಯ ಪುಷ್ಪದಂತಮುನಿ ತಮ್ಮ ಸಹೋದರ ಅಳಿಯನೂ (ಸಹೋದರಿಯ ಪುತ್ರ), ಶಿಷ್ಯನೂ ಆದ ಯೋಗಿರಾಟ್ (ಯೋಗಿಗಳ ಅಧೀಶ್ವರ) ಜಿನಪಾಲಿತಮುನಿಯ ಜೊತೆಗೆ ಕನ್ನಡನಾಡಿನ ವನವಾಸದೇಶಕ್ಕೆ (ಇಂದಿನ ಬನವಾಸಿ ಪ್ರದೇಶ) ಆಗಮಿಸಿದರು. ಭೂತಬಲಿಮುನಿ ತಮಿಳುನಾಡಿನ ಮಧುರೈಗೆ ತೆರಳಿದರು. ಪುಷ್ಪದಂತಮುನಿ ಮಹಾಕರ್ಮಪ್ರಕೃತಿ ಪ್ರಾಭೃತವನ್ನು ಆರು ಖಂಡಗಳಲ್ಲಿ ರಚಿಸಬೇಕೆಂಬ ಸಂಕಲ್ಪದಿಂದ ಮೊದಲನೆಯ ಖಂಡವಾದ ಜೀವಸ್ಥಾನ ಖಂಡದ ಆರಂಭದ ಸತ್ಪ್ರರೂಪಣೆಯ 177 ಸೂತ್ರಗಳನ್ನು ರಚಿಸಿ ಜಿನಪಾಲಿತಮುನಿಯ ಮೂಲಕ ಭೂತಬಲಿಮುನಿಗೆ ಕಳುಹಿಸಿಕೊಟ್ಟರು. ಭೂತಬಲಿಮುನಿ ಜೀವಸ್ಥಾನದ ಉಳಿದ ಏಳು ಅನುಗಮಗಳನ್ನು (ದ್ರವ್ಯಪ್ರಮಾಣಾನುಗಮ, ಕ್ಷೇತ್ರಾನುಗಮ, ಸ್ಪರ್ಶನಾನುಗಮ, ಕಾಲಾನುಗಮ, ಅಂತರಾನುಗಮ, ಭಾವಾನುಗಮ, ಅಲ್ಪಬಹುತ್ವಾನುಗಮ) ಮತ್ತು ಮಹಾಕರ್ಮಪ್ರಕೃತಿ ಪ್ರಾಭೃತದ ಕ್ಷುದ್ರಬಂಧ, ಬಂಧಸ್ವಾಮಿತ್ವವಿಚಯ, ವೇದನಾ, ವರ್ಗಣಾ, ಮಹಾಬಂಧ ಎಂಬ ಐದು ಖಂಡಗಳ ಸೂತ್ರಗಳನ್ನು ರಚಿಸಿದರು.[35]

ಧರಸೇನಾಚಾರ್ಯರ ಪ್ರೇರಣೆಯಿಂದ ಅವರ ಶಿಷ್ಯರಾದ ಪುಷ್ಪದಂತ ಮತ್ತು ಭೂತಬಲಿ ಮುನಿಗಳು ತಮಗೆ ತಿಳಿದಿದ್ದ ಮಹಾಕರ್ಮಪ್ರಕೃತಿ ಪ್ರಾಭೃತದ ಇಪ್ಪತ್ನಾಲ್ಕು ಅಧಿಕಾರಗಳಲ್ಲಿರುವ ಕೆಲವು ವಿಷಯಗಳನ್ನು ಆರು ಖಂಡಗಳಲ್ಲಿ ವಿಭಾಗಿಸಿಕೊಂಡು ತಾಳೆಗರಿ ಗ್ರಂಥ ರಚಿಸಿದರು. ಹೀಗಾಗಿ ಈ ಗ್ರಂಥವು 'ಷಟ್ಖಂಡಾಗಮ' ಎಂದು ಹೆಸರಾಗಿದೆ. ಪ್ರಾಕೃತ ಭಾಷೆಯಲ್ಲಿರುವ ಈ ಗ್ರಂಥದಲ್ಲಿ ಒಟ್ಟು ನಲವತ್ತಾರು ಸಾವಿರ ಶ್ಲೋಕಗಳಿವೆ. ಇವೆಲ್ಲವೂ ಜೀವ-ಕರ್ಮಗಳ ಸಂಯೋಗದಿಂದ ಉಂಟಾಗುವ ಪರ್ಯಾಯಗಳ ಸ್ವರೂಪವನ್ನು ಸವಿಸ್ತಾರವಾಗಿ ವರ್ಣಿಸಿವೆ. ಈ ಗ್ರಂಥವನ್ನು ಜ್ಯೇಷ್ಠಮಾಸದ ಶುಕ್ಲಪಂಚಮಿಯ ದಿನದಂದು (ಮಹಾವೀರನ ನಿರ್ವಾಣದ 614 ವರ್ಷಗಳ ನಂತರ ಅಂದರೆ ಕ್ರಿ.ಶ. 73ರಲ್ಲಿ) ಪೂರ್ಣಗೊಳಿಸಿ ಮಹಾಪೂಜೆಯನ್ನು ನೆರವೇರಿಸಿದರು. ಅಂದಿನಿಂದ ಆ ದಿನವನ್ನು 'ಶ್ರುತಪಂಚಮಿ' ಎಂದು ಕರೆದು ಪ್ರತಿ ವರ್ಷವೂ ಆ ದಿನದಂದು ಶಾಸ್ತ್ರ ಗ್ರಂಥಗಳನ್ನು ಪೂಜಿಸುವ ರೂಢಿ ಜೈನಧರ್ಮೀಯರಲ್ಲಿ ಒಂದು ಮಹಾಪರ್ವವಾಗಿ ಬೆಳೆದು ಬಂದಿದೆ.[36] ಪುಷ್ಪದಂತ ಮತ್ತು ಭೂತಬಲಿ ಮುನಿಗಳಷ್ಟೇ ಆಗಮಜ್ಞಾನಿಯಾಗಿದ್ದ ಗುಣಧರಮುನಿ ಹದಿನಾಲ್ಕು ಪೂರ್ವಗಳಲ್ಲಿ ಐದನೆಯದಾದ ಜ್ಞಾನಪ್ರವಾದದ ಹತ್ತನೆಯ ವಸ್ತುವಿನಲ್ಲಿ ಮೂರನೆಯ ಪೇಜ್ಜಪ್ರಾಭೃತವನ್ನು ಗ್ರಹಣಧಾರಣೆ ಮಾಡಿಕೊಂಡಿದ್ದರು. ಇವರು ಅಂಗಜ್ಞಾನವು ದಿನದಿಂದ ದಿನಕ್ಕೆ ಲೋಪವಾಗುತ್ತಿರುವುದನ್ನು ಕಂಡು ಪ್ರವಚನವಾತ್ಸಲ್ಯದಿಂದ ಕ್ರಿ.ಶ. ಸುಮಾರು 2ನೆಯ ಶತಮಾನದಲ್ಲಿ ಹದಿನಾರು ಸಾವಿರ ಪದಪ್ರಮಾಣವುಳ್ಳ 'ಪೇಜ್ಜದೋಸಪಾಹುಡ'ವನ್ನು 180 ಗಾಹೆಗಳಲ್ಲಿ ಸಂಗ್ರಹಿಸಿ ರಚಿಸಿದರು. ಇದನ್ನೇ 'ಕಷಾಯಪ್ರಾಭೃತ' (ಕಷಾಯಪಾಹುಡ) ಎಂದು ಕರೆಯಲಾಗಿದೆ. ಷಟ್ಖಂಡಾಗಮ ಮತ್ತು ಕಷಾಯಪ್ರಾಭೃತ ಗ್ರಂಥಗಳು ದಿಗಂಬರ ಪಂಥದ ಮೂಲ ಆಗಮಗಳಾಗಿವೆ. ಅನಂತರ ಕಾಲಾಂತರದಲ್ಲಿ ಆ ಉಪದೇಶಗಳ ಪ್ರಚಾರ, ಧರ್ಮದ ಪುನರುಜ್ಜೀವನ ಮತ್ತು ಪ್ರಸಾರ, ಜಿನಾಲಯಗಳ ನಿರ್ಮಾಣ ಮತ್ತು ಶಿಲ್ಪಗಳ ಪ್ರತಿಷ್ಠಾಪನಾ ಕಾರ್ಯದಲ್ಲಿ ಸಹಸ್ರಾರು ಮುನಿಗಳು,

ಕಂತಿಯರು, ಭಟ್ಟಾರಕರ ಸ್ಫೂರ್ತಿ-ಪ್ರೇರಣೆ ಗಮನಾರ್ಹವಾಗಿದೆ. ಅವರಲ್ಲಿ ಬಹುತೇಕ ಮುನಿಗಳು ದಕ್ಷಿಣ ಭಾರತದವರು. ಅದರಲ್ಲಿಯೂ ಕನ್ನಡ ನಾಡಿನವರು ಎಂಬುದು ಹೆಮ್ಮೆಯ ಸಂಗತಿಯಾಗಿದೆ.

20ನೆಯ ಶತಮಾನದ ಪೂರ್ವಾರ್ಧದಲ್ಲಿ ದಿಗಂಬರ ಮುನಿಪರಂಪರೆ ಹ್ರಾಸವಾಗುವ ಸಂದರ್ಭದಲ್ಲಿ ಈ ನಾಡಿನ ಅನೇಕ ಮಹಾಮುನಿ ದಿಗ್ಗಜರು (ಆಚಾರ್ಯಶ್ರೀ ಶಾಂತಿಸಾಗರ, ಸಿದ್ಧಸಾಗರ, ಆದಿಸಾಗರ, ಕುಲಭೂಷಣ, ದೇಶಭೂಷಣ, ಕುಂಥುಸಾಗರ, ನೇಮಿಸಾಗರ, ಪಾಯಸಾಗರ, ಮಹಾಬಲ, ವಿದ್ಯಾಸಾಗರ, ವಿದ್ಯಾನಂದ, ಅನಂತಕೀರ್ತಿ, ಜಯಸೇನ, ಸುಬಲಸಾಗರ ಇತ್ಯಾದಿ) ರಾಷ್ಟ್ರಾದ್ಯಂತ ಸಂಚರಿಸಿ ಧರ್ಮದ ಪುನರುಜ್ಜೀವನ ಮತ್ತು ಪ್ರಸಾರ ಕೈಗೊಂಡು ಜೈನಧರ್ಮ ಮತ್ತು ಮುನಿಪರಂಪರೆಯ ಶ್ರೀಮಂತ ಇತಿಹಾಸವು ಅವಿಚ್ಛಿನ್ನವಾಗಿ ಮುಂದುವರಿಯಲು ಚಾಲನೆ ನೀಡಿದರು. ಪ್ರಸ್ತುತ ನೂರಾರು ಮುನಿಗಳು, ಆರ್ಯಿಕೆಯರು, ಭಟ್ಟಾರಕರು ಆ ಪರಂಪರೆಯನ್ನು ಮುಂದುವರಿಸಿದ್ದಾರೆ. ಆ ಮುನಿಪುಂಗವರ ಸಾತ್ವಿಕ ಶುದ್ಧ ಚಾರಿತ್ರ್ಯ, ಆದರ್ಶ, ಉಪದೇಶ, ಕಠೋರ ತಪಸ್ಸು, ಸಾಧನೆ ಮತ್ತು ಕೊಡುಗೆಗಳ ಪ್ರಭಾವದಿಂದಾಗಿ ಇಂದು ಮುನಿ ದೀಕ್ಷೆಯನ್ನು ಸ್ವೀಕರಿಸುವವರ ಸಂಖ್ಯೆ ಈ ನಾಡಿನಲ್ಲಿಯೇ ಅಪಾರವಾಗಿದೆ.

ಪದ್ಮಿನೀ ರಾಜಹಂಸಾಶ್ಚ ನಿರ್ಗ್ರಂಥಾಶ್ಚ ತಪ್ರೋಧನಾಃ ।
ಯಂ ದೇಶಮುಪಸರ್ಪಂತಿ ದುರ್ಭಿಕ್ಷಂ ತತ್ರನೋಭವೇತ್ ॥

'ಪದ್ಮಿನಿ ಸ್ತ್ರೀ, ರಾಜಹಂಸ ಪಕ್ಷಿ ಮತ್ತು ನಿರ್ಗ್ರಂಥ ಮುನಿಗಳು ವಿಹಾರ ಮಾಡುವ ಪ್ರದೇಶವು ಸುಭೀಕ್ಷೆಯನ್ನು ಹೊಂದಿರುತ್ತದೆ'.[37] ಹಾಗಾಗಿಯೇ ಈ ನಾಡಿನ ಪ್ರದೇಶವು ಮುನಿಗಳ ವಿಹಾರ ಮತ್ತು ಕಠೋರ ತಪಸ್ಸಿನ ಪ್ರಭಾವದಿಂದಾಗಿ ಯಾವಾಗಲೂ ಶಾಂತಿ-ಸುವ್ಯವಸ್ಥೆ ಹಾಗೂ ಸುಭಿಕ್ಷೆಯಿಂದ ಕೂಡಿದ್ದು ಸಂಪದ್ಭರಿತವಾಗಿದೆ. ಬೀದರ ಜಿಲ್ಲೆಯ ಪ್ರದೇಶದಲ್ಲಿ ಕ್ರಿ.ಶ. ಸುಮಾರು 2ನೆಯ ಶತಮಾನದ ಪೂರ್ವದಿಂದಲೂ ಮೂಲಸಂಘ ಮತ್ತು ಯಾಪನೀಯ ಸಂಘ ಪರಂಪರೆಗಳ ಮುನಿಗಳು, ಕಂತಿಯರು, ಭಟ್ಟಾರಕರು ಕೈಗೊಂಡ ವಿಹಾರ, ಧರ್ಮಪ್ರಸಾರ, ಸಾಂಸ್ಕೃತಿಕ ಚಟುವಟಿಕೆಗಳ ಕುರುಹುಗಳು ಗೋಚರಿಸುತ್ತವೆ. ಬಸವಕಲ್ಯಾಣದಲ್ಲಿ ಶ್ರೀಕಲಶಮುನಿ ಕ್ರಿ.ಶ. 148ರಲ್ಲಿ ಯಾಪನೀಯ ಸಂಘವನ್ನು ಸ್ಥಾಪಿಸಿ ಧರ್ಮಪ್ರಸಾರ ಮಾಡಿದ ಕುರಿತು ದೇವಸೇನಸೂರಿಯ 'ದರ್ಶನಸಾರ' ಕೃತಿಯಲ್ಲಿ ಪ್ರಸ್ತಾಪವಿದೆ.[38] ಕಮಠಾಣದ ಕ್ರಿ.ಶ. ಸುಮಾರು 12ನೆಯ ಶತಮಾನದ ಪಾದಪೀಠ ಶಾಸನದಲ್ಲಿ ಮೂಲಸಂಘದ ಉಲ್ಲೇಖವಿದೆ.[39] ಇದರಿಂದ ಯಾಪನೀಯ ಮತ್ತು ಮೂಲಸಂಘಗಳೆರಡೂ ಪರಂಪರೆಗಳ ಮುನಿಗಳು, ಕಂತಿಯರು, ಭಟ್ಟಾರಕರು ಈ ಪ್ರದೇಶದಲ್ಲಿ ಧರ್ಮಪ್ರಸಾರದೊಂದಿಗೆ ಸಮಾಜವನ್ನು ಜಾಗೃತಗೊಳಿಸಿರುವುದು ಸ್ಪಷ್ಟವಾಗುತ್ತದೆ. ಆದರೆ ಯಾಪನೀಯ ಸಂಘ ಮತ್ತು ಆ ಪರಂಪರೆಯ ಮುನಿಗಳು ಉಲ್ಲೇಖಿತ 'ದರ್ಶನಸಾರ' ಕೃತಿಯನ್ನು ಹೊರತುಪಡಿಸಿ ಶಾಸನಾಧಾರಗಳಾವವೂ ಇದುವರೆಗೆ ಬೆಳಕಿಗೆ ಬಂದಿಲ್ಲ. ಇಲ್ಲಿಯ ಕೆಲವು ಶಾಸನಗಳು ಈ ಪ್ರದೇಶದಲ್ಲಿ ಧರ್ಮಪ್ರಸಾರಗೈದ ಮುನಿಗಳು ಮತ್ತು ಕಂತಿಯರ ಪಾಂಡಿತ್ಯ, ತಪಸ್ಸು, ವಿದ್ವತ್ತು, ಆಚಾರ-ವಿಚಾರಗಳನ್ನು ಮನದುಂಬಿ ವರ್ಣಿಸಿವೆ. ಅವರು ಧರ್ಮಪ್ರಸಾರದೊಂದಿಗೆ ಆಳರಸರಾದಿ ಪ್ರಜೆಗಳು ವಿವಿಧ ಜೈನ ಸಾಂಸ್ಕೃತಿಕ ಚಟುವಟಿಕೆಗಳನ್ನು ಕೈಗೊಳ್ಳಲು ಪ್ರೇರಕರಾಗಿದ್ದಾರೆ.

ಅಳವಾಯಿಯ ಕ್ರಿ.ಶ. 1077ರ ಶಾಸನದಲ್ಲಿ ಮರೆಕಲ್ಲದ ಕಮಳಸಿರಿ ಕಂತಿಯ ಪ್ರಸ್ತಾಪವಿದೆ.[40] ಪುಲುಗೆರೆ-60 ವಿಭಾಗದಲ್ಲಿ ಮಹಾಸಾಮಂತಗೈಯುತ್ತಿದ್ದ ಎಡೆಯರಸನು ತೂವಗಾವೆಯಲ್ಲಿ ತನಗೆ

ಸೇರಿದ್ದ ಕಮ್ಮತದಲ್ಲಿ ನಲವತ್ತು ಮತ್ತರು ಭೂಮಿಯನ್ನು ಜೈನ ಧರ್ಮದ ಯಾವುದೋ ಕಾರ್ಯಕ್ಕೆ ಕಮಳಸಿರಿಕಂತಿಯ ಪಾದಗಳನ್ನು ತೊಳೆದು ದಾನ ಮಾಡಿದ್ದಾನೆ. ಗೋರಟಾದ ಕ್ರಿ.ಶ. 1118, 1130 ಮತ್ತು 12ನೆಯ ಶತಮಾನದ ಶಾಸನಗಳಲ್ಲಿ ವೀರಸೇನಸಿದ್ಧಾಂತದೇವ, ಕ್ರಿ.ಶ. 1130 ಮತ್ತು 12ನೆಯ ಶತಮಾನದ ಶಾಸನಗಳಲ್ಲಿ ವೀರಸೇನಸಿದ್ಧಾಂತದೇವನ ಶಿಷ್ಯ ತ್ರಿಭುವನಸಿದ್ಧಾಂತದೇವ, ಕ್ರಿ.ಶ. ಸುಮಾರು 12ನೆಯ ಶತಮಾನದ ಶಾಸನದಲ್ಲಿ ಮುನಿಸುವ್ರತಸಿದ್ಧಾಂತದೇವ, ಮೋರಖಂಡಿಯ ಕ್ರಿ.ಶ. ಸುಮಾರು 12ನೆಯ ಶತಮಾನದ ಶಾಸನದಲ್ಲಿ ಗಂಡವಿಮುಕ್ತದೇವ ಮತ್ತು ಈತನ ಶಿಷ್ಯರಾದ ಮಲಧಾರಿನಂದಿ ಭಟ್ಟಾರಕ ಹಾಗೂ ದೇವೇಂದ್ರಮುನಿ, ಕ್ರಿ.ಶ. ಸುಮಾರು 12ನೆಯ ಶತಮಾನದ ಶಾಸನದಲ್ಲಿ ಚಂದ್ರಸೇನದೇವ (?) ಮುನಿಯ ಪಾಂಡಿತ್ಯ, ತಪಸ್ಸು, ಸ್ವಾಧ್ಯಾಯ ಮತ್ತು ನಿಯಮಾದಿಗಳ ವರ್ಣನೆಗಳಿವೆ.[41] ಈ ಮುನಿಗಳಲ್ಲಿ ವೀರಸೇನಸಿದ್ಧಾಂತದೇವನು ಗೋರಟಾದಲ್ಲಿಯೇ ಸಲ್ಲೇಖನ ವ್ರತದಿಂದ ಸಮಾಧಿಮರಣ ಹೊಂದಿರುವುದನ್ನು ಈತನನ್ನು ಹೆಸರಿಸಿರುವ ಕ್ರಿ.ಶ. ಸುಮಾರು 12ನೆಯ ಶತಮಾನದ ನಿಷಿಧಿಶಾಸನವು ಪರೋಕ್ಷವಾಗಿ ದೃಢಪಡಿಸುತ್ತದೆ. ತ್ರಿಭುವನಸಿದ್ಧಾಂತದೇವನು ಅಭಿನವ ಗಣಧರನಂತಿದ್ದನೆಂದೂ, ಸಂಸಾರಗಳಿಗೆ ಅಂತ್ಯ ಹಾಡಲೆಂದೇ ಜನಿಸಿದವನೆಂದೂ, ಶುದ್ಧ ಚಾರಿತ್ರವುಳ್ಳವನೆಂದೂ ವರ್ಣಿತನಾಗಿದ್ದಾನೆ. ಈತನು ಸಮಾಧಿಮರಣದಿಂದ ದೇಹತ್ಯಾಗ ಮಾಡಿ 'ಪರಮಾತ್ಮತತ್ವ'ವನ್ನು ಪಡೆದನೆಂದು ಶಾಸನದಲ್ಲಿ ಹೇಳಿದೆ.

ಬಸವಕಲ್ಯಾಣದ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿರುವ ಕ್ರಿ.ಶ. ಸುಮಾರು 12ನೆಯ ಶತಮಾನದ ನಿಷಿಧಿ ಶಾಸನದಲ್ಲಿ ಭದ್ರಸೇನಸಿದ್ಧಾಂತದೇವ ಮತ್ತು ಈತನ ಶಿಷ್ಯ ನಯಸೇನಮುನಿಯ ಪಾಂಡಿತ್ಯ, ತಪಸ್ಸು ಇತ್ಯಾದಿ ವರ್ಣನೆಗಳಿವೆ.[42] ಚೌಕಾಕಾರದ ಸ್ತಂಭದಂತಿರುವ ಈ ನಿಷಿಧಿಗಲ್ಲಿನ ಮೇಲ್ಭಾಗದ ಒಂದು ಬದಿಯ ಶಿಲ್ಪಪಟ್ಟಿಕೆಯಲ್ಲಿ ಪರ್ಯಂಕಾಸೀನ ಜಿನನಿದ್ದಾನೆ. ಈತನ ಬಲಬದಿಯಲ್ಲಿ ಇಬ್ಬರು ಮುನಿಗಳು ಸಲ್ಲೇಖನ ವ್ರತವನ್ನು ಬೋಧಿಸುತ್ತಿರುವ ಮತ್ತು ಎಡಬದಿಯಲ್ಲಿ ಇಬ್ಬರು ಶ್ರಾವಕರು ಆ ವ್ರತವನ್ನು ಆಲಿಸುತ್ತಿರುವ ನಿರೂಪಣೆ ಚಿತ್ರಿತವಾಗಿದೆ. ಅದೇ ಸ್ಥಳದಲ್ಲಿರುವ ಕ್ರಿ.ಶ. 1097ರ ಶಾಸನದಲ್ಲಿ ಜಕ್ಕಣಬ್ಬೆ ಎಂಬುವವಳು ಮುನಿಗಣಕ್ಕೆ ಆಹಾರದಾನದ ವ್ಯವಸ್ಥೆಯನ್ನು ಮಾಡಿಸಿದ ಪ್ರಸ್ತಾಪವಿದೆ.[43] ಬರೂರದ ಕ್ರಿ.ಶ. 1115ರ ಶಾಸನದಲ್ಲಿ ಮುನಿಗಳು ಮತ್ತು ಕಂತಿಯರ ಆಹಾರದಾನಕ್ಕೆ ಪ್ರಭುಗಾವುಂಡರು, ವ್ಯಾಪಾರಿಗಳು, ಪೆರ್ಗ್ಗಡೆಗಳು ಮೊದಲಾದವರು ತಾವು ಖರೀದಿಸಿದ ಮತ್ತು ಮಾರಾಟ ಮಾಡಿದ ಸರಕುಗಳ ಮೇಲಿನ ತೆರಿಗೆಗಳನ್ನು ದಾನ ಮಾಡಿದ ನಿರೂಪಣೆಯಿದೆ.[44] ಧನ್ನುರಾದ ಕ್ರಿ.ಶ. 1132ರ ಶಾಸನದಲ್ಲಿ ಮುನಿಗಳ ಆಹಾರದಾನಕ್ಕೆ ದಂಡನಾಯಕ ಮಹೇಶ್ವರನ ಪುತ್ರ ಮಲ್ಲದೇವ, ಈತನ ಪುತ್ರರಾದ ಗೋಪದೇವ ಮತ್ತು ಪ್ರಧಾನಿ ಕಾಳಿಮಯ್ಯ ಭೂದಾನ ಮಾಡಿದ ಉಲ್ಲೇಖವಿದೆ.[45] ಈ ಮೂರೂ (ಬಸವಕಲ್ಯಾಣ, ಬರೂರು, ಧನ್ನುರಾ) ಶಾಸನಗಳಲ್ಲಿ ಪ್ರಸ್ತಾಪಿತ ಮುನಿಗಳ ಹೆಸರುಗಳು ಮತ್ತು ಅವರು ಕೈಗೊಂಡ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಿಕ ಚಟುವಟಿಕೆಗಳ ವಿವರಗಳು ಅಸ್ಪಷ್ಟವಾಗಿವೆ.

### 3.4. ಬಸದಿಗಳು

ಬಸದಿಗಳು ತೀರ್ಥಂಕರರು ಕೇವಲಜ್ಞಾನದ (ಜ್ಞಾನೋದಯ) ತರುವಾಯ ಪ್ರಥಮೋಪದೇಶ ಕೈಗೊಳ್ಳುವ 'ಸಮವಸರಣ ಮಂಟಪದ ವಾಸ್ತುರೂಪದ ಸಂಕ್ಷಿಪ್ತ ಪ್ರತಿನಿಧಿಗಳಾಗಿವೆ. ಸಮವಸರಣ ಮಂಟಪವು ಸರ್ವತೋಭದ್ರ ವಿನ್ಯಾಸದಲ್ಲಿರುತ್ತದೆ. ಆದರೆ ಬಸದಿಗಳ

ನಿರ್ಮಾಣದಲ್ಲಿ ಸಾಮಾನ್ಯವಾಗಿ ಆ ಮಂಟಪದ ಉತ್ತರ ಅಥವಾ ಪೂರ್ವ ಪಾರ್ಶ್ವವನ್ನು ಅಳವಡಿಸಲಾಗಿರುತ್ತದೆ. ಆ ಮಂಟಪವು ಅಂತರಿಕ್ಷದಲ್ಲಿ (ಎತ್ತರವಾದ ಪ್ರದೇಶ) ಇರುತ್ತದೆ. ಆ ಕಲ್ಪನೆಯಲ್ಲಿ ಬಹುತೇಕ ಪ್ರಾಚೀನ ಬಸದಿಗಳು ಬೆಟ್ಟ-ಗುಡ್ಡಗಳ ನೆತ್ತಿಯಲ್ಲಿ, ಎತ್ತರವಾದ ಪ್ರದೇಶದಲ್ಲಿ ಪೂರ್ವ ಅಥವಾ ಉತ್ತರಾಭಿಮುಖವಾಗಿ ನಿರ್ಮಾಣವಾಗಿವೆ. ಕಾಲಾಂತರದಲ್ಲಿ ನದಿ ತೀರದಲ್ಲಿ, ಕೆರೆಯ ದಡಗಳಲ್ಲಿ, ಊರು-ಕೇರಿಗಳಲ್ಲಿ, ಕಾಡು-ಮೇಡುಗಳಲ್ಲಿ ನಿರ್ಮಾಣವಾಗುತ್ತ ಬಂದಿವೆ.[46] ಕನ್ನಡ ನಾಡಿನಲ್ಲಿ ಜೈನ ಮುನಿಗಳು, ಕಂತಿಯರು, ಭಟ್ಟಾರಕರು ಮತ್ತು ಕವಿಗಳ ಧರ್ಮಪ್ರಸಾರ, ಕೃತಿ-ಕಾವ್ಯಗಳ ರಚನೆ, ಅಹಿಂಸಾ ತತ್ವದ ಆಕರ್ಷಣೆಯ ಬೋಧನೆ ಮತ್ತು ಆದರ್ಶಮಯ ಕಠಿಣ ಜೀವನ ಶೈಲಿಯ ಪ್ರಭಾವ ಮತ್ತು ಪ್ರೇರಣೆಯಿಂದ ಆಳರಸರಾದಿ ಪ್ರಭುವರ್ಗ, ಅಧಿಕಾರಿವರ್ಗ, ವ್ಯಾಪಾರಿವರ್ಗ, ಜೈನಾಭಿಮಾನಿಗಳು ಮತ್ತು ಶ್ರಾವಕರು ತಮ್ಮ ನ್ಯಾಯಾರ್ಜಿತ ಸಂಪತ್ತನ್ನು

> ಜಿನೇಂದ್ರ ಭವನೋದ್ಧಾರಂ ಪುಸ್ತಕಂ ತಥಾ ।
> ಸಂಘಶ್ಚತುರ್ವಿಧಶ್ಚೇತಿ ಸಂಪ್ರೋಕ್ತಂ ಕ್ಷೇತ್ರ ಸಪ್ತಕಂ ॥

'ಬಸದಿಗಳ ನಿರ್ಮಾಣ-ಜೀರ್ಣೋದ್ಧಾರ, ಜಿನಬಿಂಬಗಳ ಪ್ರತಿಷ್ಠಾಪನೆ, ಶಾಸ್ತ್ರಗ್ರಂಥಗಳ ಪ್ರಕಟನೆ, ಮುನಿ-ಕಂತಿ-ಶ್ರಾವಕ-ಶ್ರಾವಿಕೆ ಎಂಬ ನಾಲ್ಕು ಸಂಘಗಳಿಗೆ ಆಹಾರಾದಿ ದಾನ' - ಈ ಏಳು ಕ್ಷೇತ್ರಗಳಲ್ಲಿ ವ್ಯಯ ಮಾಡುತ್ತ ಧರ್ಮಕಲ್ಯಾಣದೊಂದಿಗೆ ತಮ್ಮ ಆತ್ಮಕಲ್ಯಾಣಕ್ಕೂ ಹಾದಿಯನ್ನು ರೂಪಿಸಿಕೊಂಡಿದ್ದಾರೆ. ಅಂತಾಗಿ ಈ ನಾಡಿನಲ್ಲಿ ಕ್ರಿಸ್ತಶಕಾರಂಭದಿಂದಲೂ ಬಸದಿಗಳ ನಿರ್ಮಾಣ ಪರಂಪರೆ ಅವಿಚ್ಛಿನ್ನವಾಗಿ ಸಾಗಿ ಬಂದಿದೆ. ಆ ಪರಂಪರೆ ಇಂದಿಗೂ ಸಾಂಗವಾಗಿ ಮುಂದುವರೆದಿದೆ. ಮೊದಮೊದಲು ಬಸದಿಗಳನ್ನು ಮರ, ಮಣ್ಣು, ಕಟ್ಟಿಗೆ ಮತ್ತು ಇಟ್ಟಿಗೆಗಳಿಂದ ನಿರ್ಮಿಸಲಾಗುತ್ತಿತ್ತು. ಹಾಗಾಗಿ ಅವು ಇಂದು ಉಳಿದು ಬಂದಿಲ್ಲ. ಅವುಗಳಲ್ಲಿ ಕೆಲವು ಬಸದಿಗಳ ಇಟ್ಟಿಗೆಯ ತಲವಿನ್ಯಾಸಗಳು ಗುಡ್ನಾಪುರ, ತಲಕಾಡು, ಹಲಸಿ, ಪಟ್ಟದಕಲ್ಲು, ಕವಂಚೂರು, ಬನವಾಸಿ, ಅರೆತಿಪ್ಪೂರು, ನೊಣಮಂಗಲ, ವಿಜಯಮಂಗಲ, ಶ್ರವಣಬೆಳಗೊಳ ಮೊದಲಾದೆಡೆಗಳಲ್ಲಿ ಇಂದಿಗೂ ಉಳಿದು ಬಂದಿವೆ.

ಬೀದರ ಜಿಲ್ಲೆಯ ಪ್ರದೇಶದಲ್ಲಿ ಬಸದಿಗಳ ನಿರ್ಮಾಣ ಪರಂಪರೆ ಪ್ರಾಚೀನ ಕಾಲದಿಂದಲೂ ವಿಜೃಂಭಣೆಯಿಂದ ಸಾಗಿ ಬಂದಿದೆ. ಬಸವಕಲ್ಯಾಣದಲ್ಲಿ ಕ್ರಿ.ಶ. ಸುಮಾರು 2ನೆಯ ಶತಮಾನದಲ್ಲಿಯೇ ಯಾಪನೀಯಸಂಘ ಪರಂಪರೆಯ ಬಸದಿ ಇದ್ದುದನ್ನು ದೇವಸೇನಸೂರಿ ತನ್ನ 'ದರ್ಶನಸಾರ' ಕೃತಿಯಲ್ಲಿ ನಮೂದಿಸಿದ್ದಾನೆ.[47] ಯಾಪನೀಯಸಂಘ ಪರಂಪರೆಯ ಮುನಿಗಳು ಪಾರ್ಶ್ವನಾಥ ತೀರ್ಥಂಕರ ಮತ್ತು ಆತನ ಯಕ್ಷಿ ಪದ್ಮಾವತಿಯ ಪ್ರತಿಷ್ಠಾಪನೆ, ಆರಾಧನೆಗೆ ಹೆಚ್ಚು ಒತ್ತುಕೊಟ್ಟಿದ್ದರು. ಅಂತಾಗಿ ಬಸವಕಲ್ಯಾಣದಲ್ಲಿ ಕ್ರಿ.ಶ. ಸುಮಾರು 2ನೆಯ ಶತಮಾನದಲ್ಲಿದ್ದ ಬಸದಿ ಪ್ರಾಯಶಃ ಪಾರ್ಶ್ವನಾಥನದ್ದಾಗಿದ್ದಂತೆ ತೋರುತ್ತದೆ. ಕನ್ನಡನಾಡಿನ ಪ್ರಪ್ರಥಮ ಬಸದಿಯೆಂಬ ಕೀರ್ತಿಗೆ ಪಾತ್ರವಾಗಿರುವ ಆ ಬಸದಿ ಇಂದು ಉಳಿದು ಬಂದಿಲ್ಲ. ಭಾಲ್ಕಿಯ ಕ್ರಿ.ಶ. 1099ರ ಶಾಸನದಲ್ಲಿ ಕಲ್ಯಾಣದ ಚಾಳುಕ್ಯ ಮನೆತನದ 6ನೆಯ ವಿಕ್ರಮಾದಿತ್ಯನ ಮೊಮ್ಮಗ ಮಹಾಮಂಡಳೇಶ್ವರ ಹೆಮ್ಮಾಡಿದೇವನು (ಇಮ್ಮಡಿ ಜಗದೇಕಮಲ್ಲ) ರಾಜಧಾನಿಪಟ್ಟಣ ಭಲ್ಲುಂಕೆಯಲ್ಲಿ ತ್ರೈಪುರುಷ, ಕಪಿಲೇಶ್ವರ, ಉತ್ತರೇಶ್ವರ, ಭಲ್ಲುಂಕೇಶ್ವರ ದೇವಾಲಯಗಳಿಗೆ ದೀಪದ ಎಣ್ಣೆಗಾಗಿ ಗಾಣಗಳು ಹಾಗೂ ಗದ್ಯಾಣಗಳನ್ನು ದಾನ ಮಾಡುತ್ತಿದ್ದ ಸಂದರ್ಭದಲ್ಲಿ 'ಬ್ರಹ್ಮಜಿನಾಲಯ'ಕ್ಕೂ ಒಂದು ಗಾಣವನ್ನು ದಾನ ಮಾಡಿದ ಪ್ರಸ್ತಾಪವಿದೆ.[48] ಜೈನ ಮತ್ತು ವೈಷ್ಣವ ಧರ್ಮಗಳ ಸಾಮರಸ್ಯದ ಸಂಕೇತವಾಗಿ ನಿರ್ಮಾಣವಾಗಿರುವ 'ಬ್ರಹ್ಮಜಿನಾಲಯ'ಗಳು ಸಮಕಾಲೀನ ಧಾರ್ಮಿಕ ಮತ್ತು

ಸಾಮಾಜಿಕ ವ್ಯವಸ್ಥೆಯ ಹಿನ್ನೆಲೆಯಲ್ಲಿ ಗಮನೀಯವಾಗಿವೆ.

ಕನ್ನಡ ನಾಡಿನಲ್ಲಿ ಕ್ರಿ.ಶ. ಸುಮಾರು 11ನೆಯ ಶತಮಾನದವರೆಗೂ ರಾಜ್ಯಧರ್ಮವಾಗಿ ಮೆರೆದ ಜೈನ ಧರ್ಮಕ್ಕೆ ತದನಂತರದ ಕಾಲದಲ್ಲಿ ಪ್ರಭುವರ್ಗದ ಬಲ, ಉತ್ತೇಜನ, ಆಶ್ರಯ, ಪ್ರೋತ್ಸಾಹಗಳು ಇಳಿಮುಖವಾಗುತ್ತ ಬಂದುದ್ದರಿಂದ ಇದರ ಬೇರುಗಳು ಸಡಿಲುಗೊಳ್ಳಲಾರಂಭಿಸಿದವು.[49] ಈ ನಾಡಿನಲ್ಲಿ ಪ್ರತಿಯೊಂದು ಧರ್ಮವು ತನ್ನ ಶ್ರೇಷ್ಠತೆಯನ್ನು ದೃಢೀಕರಿಸಲು, ತಾನು ಪ್ರಾಪಂಚಿಕ ಶಕ್ತಿಯಾಗಿ ಬೆಳೆಯಲು ಮತ್ತು ತನ್ನ ವಲಯವನ್ನು ವಿಸ್ತರಿಸಲು ಮತ್ತೊಂದು ಧರ್ಮದೊಂದಿಗೆ ಘರ್ಷಣೆಗಳಲ್ಲಿ ತೊಡಗುತ್ತ ಬಂದಿರುವುದು ಸಮಕಾಲೀನ ಪುರಾತತ್ವ ಮತ್ತು ಸಾಹಿತ್ಯಿಕ ಕುರುಹುಗಳು ದೃಢಪಡಿಸುತ್ತವೆ. ಆ ಘರ್ಷಣೆಗಳು ಕ್ರಿ.ಶ. ಸುಮಾರು 10ನೆಯ ಶತಮಾನದವರೆಗೂ ಶೀತಲಮಯವಾಗಿದ್ದವು. ತರುವಾಯದ ಕಾಲದಿಂದೀಚೆಗೆ ಬಹಿರಂಗವಾಗಿಯೇ ಪ್ರಾರಂಭವಾದವು. ಅಂದಿನ ಅರಸು ಮನೆತನಗಳೂ ತಮ್ಮ ಆಳ್ವಿಕೆಯನ್ನು ಭದ್ರಪಡಿಸಿಕೊಳ್ಳುವ ಉದ್ದೇಶದಿಂದ ಪ್ರಬಲವಾದ ಧರ್ಮಗಳೆಡೆಗೆ ಸಹಜವಾಗಿಯೇ ಆಸಕ್ತವಾದವು. ಜೈನಧರ್ಮೀಯರ ಮೇಲೆ ತಂಜಾವೂರಿನ ಚೋಳ ಮನೆತನದ ಕೆಲವು ಅರಸರು, ಕಾಳಾಮುಖ ಶೈವರು, ವೈಷ್ಣವರು, ಶ್ರೀವೈಷ್ಣವರು, ವೀರಶೈವರು, ಮುಸಲ್ಮಾನರು, ನವಾಬರು ಕೈಗೊಂಡ ಆಕ್ರಮಣಗಳಲ್ಲಿ ಸಹಸ್ರಾರು ಜೈನಧರ್ಮೀಯರು ಹಿಂಸಿಸಲ್ಪಟ್ಟರು, ಕೊಲೆಯಾದರು, ಮತಾಂತರರಾದರು. ಆ ಆಕ್ರಮಣಗಳಲ್ಲಿ ಸಾವಿರಾರು ಬಸದಿಗಳು ನಾಶವಾದವು. ನೂರಾರು ಬಸದಿಗಳು ರೂಪಾಂತರವಾದವು.[50] ಇದಕ್ಕೆ ಗದಗ ಜಿಲ್ಲೆಯ ಲಕ್ಕುಂಡಿ, ಮುಳಗುಂದ, ಲಕ್ಷ್ಮೇಶ್ವರ, ಗಾವರವಾಡ, ಕಣವಿ, ಧಾರವಾಡ ಜಿಲ್ಲೆಯ ಅಣ್ಣಿಗೇರಿ, ಬಳ್ಳಾರಿ ಜಿಲ್ಲೆಯ ಕೋಗಳಿ, ವಿಜಾಪುರ ಜಿಲ್ಲೆಯ ತಾಳಿಕೋಟೆ, ಹಾವೇರಿ ಜಿಲ್ಲೆಯ ಅಬ್ಬಲೂರು, ಹಾಸನ ಜಿಲ್ಲೆಯ ಶ್ರವಣಬೆಳಗೊಳ, ಬಸ್ತಿಹಳ್ಳಿ, ಶಿವಮೊಗ್ಗ ಜಿಲ್ಲೆಯ ಸೊರಬ, ರಾಮನಗರ ಜಿಲ್ಲೆಯ ಕಲ್ಯ, ಕೊಪ್ಪಳ ಜಿಲ್ಲೆಯ ಯಲಬುರ್ಗಾ, ಗುಲಬರ್ಗಾ ಜಿಲ್ಲೆಯ ಇಂಗಳಗಿ ಮೊದಲಾದೆಡೆಯ ಹಲವು ಶಾಸನಗಳು ಮತ್ತು ರಾಘವಾಂಕನ ಸೋಮನಾಥ ಚರಿತ್ರೆ, ಬ್ರಹ್ಮಶಿವನ ಸಮಯಪರೀಕ್ಷೆ, ನಯಸೇನನ ಧರ್ಮಾಮೃತ, ಬಸವಣ್ಣನವರ ವಚನಗಳು, ಶಾಂತನಿರಂಜನನ ಅಬ್ಬಲೂರು ಚರಿತೆ, ಕುಮಾರರಾಮನ ಸಾಂಗತ್ಯಗಳು, ಶ್ರುತಕೀರ್ತಿಯ ವಿಜಯಕುಮಾರಿ ಚರಿತ್ರೆ, ದೇವಚಂದ್ರನ ರಾಜಾವಳಿ ಕಥಾಸಾರ ಮೊದಲಾದ ಕೆಲವು ಕೃತಿ–ಕಾವ್ಯಗಳು ಜ್ವಲಂತ ಸಾಕ್ಷಿಸಂಕೇತಗಳಾಗಿವೆ. ಮೂಲತಃ 'ಪರಸ್ಪರೋಪಗ್ರಹೋ ಜೀವಾನಾಂ' ಹಾಗೂ 'ಬದುಕು ಮತ್ತು ಬದುಕಲು ಬಿಡು' ಸ್ವಭಾವದ ಅಹಿಂಸಾರಾಧಕರಾದ ಜೈನಧರ್ಮೀಯರು ತಮ್ಮ ಮೇಲೆ ನಡೆಯುತ್ತಿದ್ದ ಆಕ್ರಮಣಗಳಿಗೆ ಉಗ್ರತೆಗಾಗಲೀ, ಪ್ರತೀಕಾರಕ್ಕಾಗಲೀ, ದೇವಾಲಯಗಳ ನಾಶಕ್ಕಾಗಲೀ ತೊಡಗದೇ ಆ ಆಕ್ರಮಣಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಮತ್ತು ತಮ್ಮ ಬಸದಿಗಳನ್ನು ಉಳಿಸಿಕೊಳ್ಳಲು ಸಮಕಾಲೀನ ಧರ್ಮೀಯರೊಂದಿಗೆ ಒಡಂಬಡಿಕೆ, ಸಾಮರಸ್ಯ, ಸಮನ್ವಯತೆಯನ್ನು ಸಾಧಿಸಲು ಮುಂದಾಗಿ ಅವರ ಅನುಗ್ರಹ ಪಡೆದು ಅವರೊಂದಿಗೆ ಸಹಕರಿಸಿ, ಆಶ್ರಯಿಸಿ ಬಾಳುವುದು ಅನಿವಾರ್ಯವಾಯಿತು. ಆ ಹಿನ್ನೆಲೆಯಲ್ಲಿ ವೈಷ್ಣವ ಧರ್ಮೀಯರ (ಮಹಾಜನರು/ಬ್ರಾಹ್ಮಣರು) ಅಗ್ರಹಾರಗಳಲ್ಲಿ ಅವರ ಒಪ್ಪಿಗೆ–ಮನ್ನಣೆಯನ್ನು ಪಡೆದು ನಿರ್ಮಾಣವಾದ, ಅವರ ರಕ್ಷಣೆಗೆ ಒಳಪಡಿಸಿದ, ಅವರಿಂದ ದಾನ–ದತ್ತಿಗಳನ್ನು ಪಡೆದ, ಅವರು ಸಂರಕ್ಷಣೆಯ ಹೊಣೆಹೊತ್ತ ಬಸದಿಗಳು 'ಬ್ರಹ್ಮಜಿನಾಲಯ' ಎಂದು ಕರೆಯಲ್ಪಟ್ಟವು.

ಕನ್ನಡ ನಾಡಿನಲ್ಲಿ ಕ್ರಿ.ಶ. ಸುಮಾರು 10ನೆಯ ಶತಮಾನದಿಂದಲೇ ವೈಷ್ಣವರು ಜೈನಧರ್ಮೀಯರ ಮೇಲೆ ಪ್ರಭುತ್ವವನ್ನು ಸಾಧಿಸಲು ಪ್ರಯತ್ನಿಸಿದ ಕುರಿತಾಗಿ ಕೆಲವು ಶಾಸನಾಧಾರಗಳಿವೆ.[51] ಆದರೆ ಅವರು ಬಸದಿಗಳನ್ನು ಸಂರಕ್ಷಣೆಯ ಹೊಣೆಹೊತ್ತು ತಮ್ಮ ಸುಪರ್ದಿಗೆ ತೆಗೆದುಕೊಂಡು ಅವುಗಳಿಗೆ

'ಬ್ರಹ್ಮಜಿನಾಲಯ' ಎಂಬ ಹೆಸರಿಡುವ ಪರಂಪರೆ ಕವಿವರಕಾಮಧೇನು ದಾನಚಿಂತಾಮಣಿ ಅತ್ತಿಮಬ್ಬೆಯ ಕಾಲದಲ್ಲಿ ಲಕ್ಕುಂಡಿಯಿಂದಲೇ ಪ್ರಪ್ರಥಮವಾಗಿ ಪ್ರಾರಂಭವಾದಂತೆ ತೋರುತ್ತದೆ.

ಆ ಸತಿ ಮುಮ್ಮಾಡಿಸಿದಾ
ಸಾಸಿರದಯ್ನೂ‘ು ಬಸದಿಗಿದು ಕಳಶಮೆನಲ್ಬಾ
ಸುರಮಾಯ್ತು ಜಿನೇಂದ್ರಾವಾಸಂ
ತೊಳಗುವ ಸುವರ್ಣ್ನಕಳಶೋನ್ನತಿಯಿಂ ||

ಆಗಲೇ ನಾಡಿನಾದ್ಯಂತ ಸಾಸಿರದಯ್ನೂರು ಬಸದಿಗಳನ್ನು ನಿರ್ಮಿಸಿದ್ದ ಅತ್ತಿಮಬ್ಬೆ ಅಗ್ರಹಾರ ಲಕ್ಕುಂಡಿಯಲ್ಲಿ ಆ ಬಸದಿಗಳಿಗೆಲ್ಲ ಕಳಶಪ್ರಾಯವಾದ 1501ನೆಯ ಬಸದಿಯನ್ನು ನಿರ್ಮಿಸಲು ಸ್ಥಳೀಯ ಮಹಾಜನರಿಂದ ನಿವೇಶನವನ್ನು ಪಡೆದು ಕ್ರಿ.ಶ. 1007ರಲ್ಲಿ ಆದಿನಾಥ ಬಸದಿಯನ್ನು ನಿರ್ಮಿಸಿದಳು. ಅದು ಕ್ರಿ.ಶ. 1040ರಲ್ಲಿ (?) ಆಕಸ್ಮಿಕವಾಗಿ ಕುಸಿದು ಬೀಳಲಾಗಿ ಅದನ್ನು ದೆಯ್ವ ಭರತಾರ್ಯನು ಕ್ರಿ.ಶ. 1048-49ರಲ್ಲಿ (?) ಹೊಸದಾಗಿ ಮಾಡಿಸಿದನು. ಇದೇ ಸಂದರ್ಭದಲ್ಲಿ ಸ್ಥಳೀಯ ಮಹಾಜನರು ಜೈನಧರ್ಮೀಯರ ಮೇಲೆ ಪರೋಕ್ಷವಾಗಿ ತಮ್ಮ ಪ್ರಭುತ್ವವನ್ನು ಸಾಧಿಸುವ ಉದ್ದೇಶದಿಂದ ಈ ಬಸದಿಯನ್ನು ತಮ್ಮ ಸುಪರ್ದಿಗೆ ತೆಗೆದುಕೊಂಡು ಇದರ ಸಂರಕ್ಷಣೆಯ ಹೊಣೆಹೊತ್ತು, 'ಆ ಜಿನನಿಗೂ ತಮ್ಮ ಬ್ರಹ್ಮನಿಗೂ ಭೇದವಿಲ್ಲ'ವೆಂದು ಬಗೆದು (ಅಂದರೆ ಬ್ರಹ್ಮ ಮತ್ತು ಜಿನ ಬೇರೆ ಅಲ್ಲ, ಇಬ್ಬರೂ ಒಂದೇ ಎನ್ನುವ ಸಮನ್ವಯ ತಂತ್ರ) ಇದಕ್ಕೆ_

ಬ್ರಹ್ಮನೆದಲ್ನಮಗಾದೀ
ಬ್ರಹ್ಮಜಿನಂ ತಾನೆನುತ್ತೆ ಸಾಸಿರ್ವ್ವರುಮೀ
ಬ್ರಹ್ಮಜಿನನಿಳಯಕಿತ್ತ
ವ್ರ್ರಹ್ಮಜಿನಾಳಯಮೆನಿಪ್ಪ ಪೆಸರಂ ಮುದದಿಂ ||

'ಬ್ರಹ್ಮಜಿನಾಲಯ' ಎಂದು ಹೆಸರಿಟ್ಟರು. ಜೊತೆಗೆ ಈ ಬಸದಿಯ ನವರಂಗದಲ್ಲಿ ಚತುರ್ಮುಖ ಬ್ರಹ್ಮನ ಶಿಲ್ಪವನ್ನೂ ಪ್ರತಿಷ್ಠಾಪಿಸಿದರು. ತಂಜಾವೂರಿನ ಚೋಳ ಮನೆತನದ ಕೋಪರಕೇಸರಿ ವಿಜಯರಾಜೇಂದ್ರದೇವ ರಾಜಾಧಿರಾಜನು ಕಲ್ಯಾಣದ ಚಾಳುಕ್ಯ ಮನೆತನದ 1ನೆಯ ಸೋಮೇಶ್ವರನ ವಿರುದ್ಧ ದಂಡಯಾತ್ರೆಯನ್ನು ಕೈಗೊಂಡಿದ್ದ ಸಂದರ್ಭದಲ್ಲಿ ಈ ಬಸದಿ ಚೋಳ ಪಡೆಯ ಕೋಪಾಗ್ನಿಯಲ್ಲಿ ಬೆಂಕಿಗೆ ಆಹುತಿಯಾಯಿತು. ಇದನ್ನು ಕ್ರಮವಾಗಿ ನಾಕಿ (ಆಣಿಕಾರ ನಾಗಿಸೆಟ್ಟಿ) ಮತ್ತು ಸಿರಿಪಾಳಸೆಟ್ಟಿ ಎಂಬಾತರು ಜೀರ್ಣೋದ್ಧಾರ ಪಡಿಸಿದರು.52 ಕನ್ನಡ ನಾಡಿನಲ್ಲಿ ವೈಷ್ಣವರ ಸಂರಕ್ಷಣೆಗೆ ಒಪ್ಪಿಸಿದ್ದ, ಅವರು ಸಂರಕ್ಷಣೆಯ ಹೊಣೆಹೊತ್ತು ತಮ್ಮ ಸುಪರ್ದಿಗೆ ತೆಗೆದುಕೊಂಡಿದ್ದ ಮತ್ತು ತಮ್ಮ ಪ್ರಭುತ್ವವನ್ನು ಸಾಧಿಸಿದ್ದ ಬಸದಿಗಳ ಕುರಿತಾಗಿ ಬಳ್ಳಾರಿ ಜಿಲ್ಲೆಯ ಬಾಗಳಿ, ಶಿವಮೊಗ್ಗ ಜಿಲ್ಲೆಯ ಈಸೂರು, ಕಳಸವಳ್ಳಿ, ಕುಪ್ಪಟೂರು, ನಿಡುಗಲ್ಲು, ಸಾಲಿಯೂರು, ಶಿರಾ, ಬೆಳಗಾವಿ ಜಿಲ್ಲೆಯ ಬಡ್ಲಿ, ಹೂಲಿ, ಗದಗ ಜಿಲ್ಲೆಯ ಚಿಕ್ಕಹಂದಿಗೋಳ, ಹಾವೇರಿ ಜಿಲ್ಲೆಯ ಬೆಳವತ್ತಿ, ತಿಳವಳ್ಳಿ, ಗುಲಬರ್ಗಾ ಜಿಲ್ಲೆಯ ಸೇಡಂ, ರಾಯಚೂರು ಜಿಲ್ಲೆಯ ಹಿರಿಯಗಬ್ಬೂರು ಮೊದಲಾದೆಡೆಗಳಲ್ಲಿ ಶಾಸನಾಧಾರಗಳು ಗೋಚರಿಸುತ್ತವೆ. ಅಂತಹ ಬಸದಿಗಳಲ್ಲಿ ಭಾಲ್ಕಿಯ ಬ್ರಹ್ಮಜಿನಾಲಯವೂ ಒಂದಾಗಿದೆ. ಇದು ಯಾವ ತೀರ್ಥಂಕರನ ಬಸದಿವೆಂಬುದು ಶಾಸನದಲ್ಲಿ ಸ್ಪಷ್ಟವಿಲ್ಲ. ಆದರೆ ಈ ನಗರದ ಪಶ್ಚಿಮಕ್ಕೆ ದಾಡಿಗಿ ಬೇಸದಲ್ಲಿರುವ (ಅಗಸಿ) ಹನುಮಾನ

ದೇವಾಲಯದ ಮುಂಭಾಗದಲ್ಲಿ ಕ್ರಿ.ಶ. ಸುಮಾರು 11ನೆಯ ಶತಮಾನದ ಪರ್ಯಂಕಾಸೀನ ತೀರ್ಥಂಕರ ಮತ್ತು ಅಂಬಿಕಾ ಯಕ್ಷಿಯ ಶಿಲ್ಪಗಳಿವೆ. ಇವು ಈ ನಗರದಲ್ಲಿದ್ದ ಬ್ರಹ್ಮಜಿನಾಲಯದಲ್ಲಿ ಪ್ರತಿಷ್ಠಾಪಿತವಾಗಿದ್ದ ಶಿಲ್ಪಗಳಾಗಿರಬಹುದು. ಅಂತಾಗಿ ಬ್ರಹ್ಮಜಿನಾಲಯವು ನೇಮಿನಾಥ ತೀರ್ಥಂಕರನ ಬಸದಿಯಾಗಿತ್ತೆಂದೂ, ಈ ತೀರ್ಥಂಕರನ ಶಿಲ್ಪವು ನೇಮಿನಾಥನದೆಂದೂ ಪ್ರಸ್ತುತ ಅಂಬಿಕಾ ಯಕ್ಷಿಯ ಶಿಲ್ಪದಿಂದ ಖಚಿತವಾಗುತ್ತದೆ. ಆ ಬಸದಿ ಕಾಲಾಂತರದಲ್ಲಿ ಜೀರ್ಣೋದ್ಧಾರ ವಾಗುತ್ತ ಹಿಂದೂ-ಮುಸ್ಲಿಂ ವಾಸ್ತು ಸ್ವರೂಪವನ್ನು ಪಡೆದು ಇಂದಿಗೂ ಉಳಿದು ಬಂದಿದೆ. ಆದರೆ ಈಗ ಇದು ತುಂಬಾ ಜೀರ್ಣಾವಸ್ಥೆಯಲ್ಲಿದೆ.

ಬಸವಕಲ್ಯಾಣದ ಕ್ರಿ.ಶ. 1097ರ ಶಾಸನದಲ್ಲಿ ಕಲ್ಯಾಣ ನಗರದಲ್ಲಿ ಹಲವರು ಮುಂಚೆ (ಪ್ರಾಯಶಃ ಬಾದಾಮಿ ಚಲುಕ್ಯ ಮತ್ತು ಮಳಖೇಡದ ರಾಷ್ಟ್ರಕೂಟ ಮನೆತನಗಳ ಆಳ್ವಿಕೆಯ ಕಾಲಾವಧಿಯಲ್ಲಿ) ನಿರ್ಮಿಸಿದ್ದ ಬಸದಿಗಳನ್ನು ಕಾಲಾಂತರದಲ್ಲಿ ದಾನಚಿಂತಾಮಣಿ ಜೀರ್ಣೋದ್ಧಾರ ಮಾಡಿಸಿದ ಹಾಗೂ ಆ ಬಸದಿಗಳಲ್ಲಿ ಚಂದ್ರಪ್ರಭನಾಥ ಬಸದಿಯನ್ನು 'ಕಲ್ಯಾಣದ ಗೋಷ್ಠಿ'ಯ ಸದಸ್ಯರಾಗಿದ್ದ ರಚ್ಚಮಲ್ಲ, ರವಿಯಣ್ಣ, ದೇವಪಾರ್ಯ, ಚಟ್ಟಪ್ಪ, ಭರತ, ಶ್ರೀಪತಿ, ರಾವದೇವ ಮೊದಲಾದವರು ಕೂಡಿಕೊಂಡು ಜೀರ್ಣೋದ್ಧಾರ ಮಾಡಿಸಿ ದಾನ-ದತ್ತಿಗಳನ್ನು ಕೊಡಮಾಡಿದ ಪ್ರಸ್ತಾಪವಿದೆ.[53] ಆದರೆ ಆ ಬಸದಿಗಳೆಲ್ಲವೂ ಕಾಲಾಂತರದಲ್ಲಿ ನಾಶವಾಗಿವೆ. ಆ ಬಸದಿಗಳ ಅಳಿದುಳಿದ ವಾಸ್ತು-ಶಿಲ್ಪ ಅವಶೇಷಗಳನ್ನು ಸ್ಥಳೀಯ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಿಸಲಾಗಿದೆ. ಬರೂರದ ಕ್ರಿ.ಶ. 1115ರ ಶಾಸನದಲ್ಲಿ ಬರವೂರ ನಗರದ ಶಾಂತಿನಾಥ ಬಸದಿಯ ಅಂಗಭೋಗ, ನೈವೇದ್ಯ, ಖಂಡಸ್ಫುಟಿತ ಜೀರ್ಣೋದ್ಧಾರ ಮತ್ತು ಮುನಿ-ಕಂತಿಯರ ಆಹಾರದಾನಕ್ಕೆ ಪ್ರಭುಗಾವುಂಡ ಆದಿತ್ಯಭಟ್ಟನ ಪುತ್ರ ಪ್ರಭುಗಾವುಂಡ ಚಂಗದೇವಭಟ್ಟ, ಕುಮಾರಸ್ವಾಮಿ ಭಟ್ಟೋಪಾಧ್ಯಾಯ, ರುದ್ರಭಟ್ಟ, ಮಲ್ಲದೇವಭಟ್ಟ, ಮುಚ್ಚಿದೇವಭಟ್ಟ ಎಂಬ ಐವರು ಪ್ರಭುಗಾವುಂಡರು, ಮಹಾಜನರು, ಪಂಚಮಠಸ್ಥಾನದವರು, ನಖರರು, ಹನ್ನವಣಿಗರು, ಅಟ್ಟಳೆ-300 ವಿಭಾಗದ ಮನ್ನೆಯರು, ಕಿಳಟ್ಟಳೆ ನೂರ್ವೈವರು, ಛಪ್ಪನ್ನ ಹೆಜ್ಜುಂಕ ಪೆರ್ಗ್ಗಡೆಗಳು ದಾನ ಮಾಡಿದ ನಿರೂಪಣೆಯಿದೆ.[54] ಈ ಬಸದಿ ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ಹಿಂದೂ-ಮುಸ್ಲಿಂ ವಾಸ್ತು ಸ್ವರೂಪವನ್ನು ಪಡೆದು ಇಂದಿಗೂ ಉಳಿದು ಬಂದಿದೆ. ಆದರೆ ಪ್ರಸ್ತುತ ತುಂಬಾ ಶಿಥಿಲಾವಸ್ಥೆಯಲ್ಲಿದೆ. ಉಜ್ಜಳಂಬದ ಕ್ರಿ.ಶ. 1120ರ ಶಾಸನದಲ್ಲಿ ಶ್ರೀಯಮರಸ, ದೇವಣಸೆಟ್ಟಿ, ಬೆನಕಿಸೆಟ್ಟಿ, ಶಂಕರಸೆಟ್ಟಿ, ವರ್ಧಮಾನಸೆಟ್ಟಿ, ಬೀಚಿಸೆಟ್ಟಿ ಮೊದಲಾದ ವ್ಯಾಪಾರಿಗಳು ಮತ್ತು ಮಂಡವದ ಹೆಗ್ಗಡೆ ಚಾಮುಂಡಮಯ್ಯನ ಆಣತಿಯಂತೆ ಮಲ್ಲರಸನು ಭತ್ತಗ್ರಾಮ ಉಜ್ಜಳದ ಬಸದಿಯ ಪೂಜೆ, ಪುನಸ್ಕಾರ, ಸ್ನಾನ (ಅಭಿಷೇಕ), ನೈವೇದ್ಯಕ್ಕೆ ಕೆಲವು ಸುಂಕಗಳನ್ನು ದಾನ ಮಾಡಿದ ಉಲ್ಲೇಖವಿದೆ.55 ಈ ಬಸದಿ ಇಂದಿಗೂ ಉಳಿದು ಬಂದಿದೆ. ಆದರೆ ಇದು ಈಗ ತುಂಬಾ ಜೀರ್ಣಾವಸ್ಥೆಯಲ್ಲಿದೆ. ಧನ್ನುರಾದ ಕ್ರಿ.ಶ. 1132ರ ಶಾಸನದಲ್ಲಿ ಪ್ರಭುಗಾವುಂಡ ಮಹೇಶ್ವರ ದಂಡನಾಯಕ, ಈತನ ಪುತ್ರ ಮಲ್ಲದೇವ ದಂಡನಾಯಕ, ಈತನ ಪುತ್ರರಾದ ಗೋಪದೇವ, ಪ್ರಧಾನಿ ಕಾಳಿಮಯ್ಯ ಮೊದಲಾದವರು ಅರಹಂತದೇವರ ನೈವೇದ್ಯ, ಜೀರ್ಣೋದ್ಧಾರ, ನಂದಾದೀಪ, ಮುನಿಗಳ ಆಹಾರ ದಾನಕ್ಕೆ ತೋಟ, ಭೂಮಿ, ಭತ್ತವನ್ನು ದಾನ ಮಾಡಿದ ನಿರೂಪಣೆಯಿದೆ.56 ಈ ಬಸದಿ ಇಂದು ಉಳಿದು ಬಂದಿಲ್ಲ.

ಔರಾದದ ಕ್ರಿ.ಶ. ಸುಮಾರು 12ನೆಯ ಶತಮಾನದ ಪಾದಪೀಠ ಶಾಸನದಲ್ಲಿ ದಂಡನಾಯಕ ನೊಬ್ಬನ (ಅಕ್ಷರಗಳು ಸವೆದಿರುವುದರಿಂದ ಹೆಸರು ಸ್ಪಷ್ಟವಿಲ್ಲ) ಧರ್ಮಪತ್ನಿ ನಾಗಾಂಬಿಕೆಯು ಅಮರವಾಡಿಕೆ ನಗರದಲ್ಲಿ ಪಾರ್ಶ್ವನಾಥ ಕೂಟವನ್ನು (ಬಸದಿ) ನಿರ್ಮಿಸಿದ ವಿವರಗಳಿವೆ.[57] ಆ

ಕೂಟದಲ್ಲಿ ಪ್ರತಿಷ್ಠಾಪಿತವಾಗಿದ್ದ ಪಾರ್ಶ್ವನಾಥ ತೀರ್ಥಂಕರನ ಕಾಯೋತ್ಸರ್ಗ ಶಿಲ್ಪವು ಇಂದಿಗೂ ಉಳಿದುಬಂದಿದೆ. ಇದನ್ನು ಈಗ ಅಮರೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಪ್ರಾಂಗಣದ ಕಟ್ಟೆಯಲ್ಲಿ ಸೇರಿಸಿ ಕಟ್ಟಲಾಗಿದೆ. ಗೋರಟಾದ ಕ್ರಿ.ಶ. ಸುಮಾರು 12ನೆಯ ಶತಮಾನದ ಶಾಸನದಲ್ಲಿ ಮುನಿಸುವ್ರತಸಿದ್ಧಾಂತದೇವನ ಶಿಷ್ಯೆ ಪದ್ಮಾವತಿ ಎಂಬಾಕೆಯು ಮಾಡಿಸಿದ ಬಸದಿಗೆ ದೇವಿಸೆಟ್ಟಿ ದಾನ ಮಾಡಿದ ಪ್ರಸ್ತಾಪವಿದೆ.[58] ಇದೇ ಗ್ರಾಮದ ಕ್ರಿ.ಶ. ಸುಮಾರು 12ನೆಯ ಶತಮಾನದ ಶಾಸನದಲ್ಲಿ ತ್ರಿಭುವನಸಿದ್ಧಾಂತದೇವನ ಶಿಷ್ಯೆ ಹಮ್ಮಿಕಬ್ಬೆಯ ಪುತ್ರರಾದ ಚಿನ್ನಿಸೆಟ್ಟಿ ಮತ್ತು ಬಾಚಣರಾಯ ಎಂಬುವವರು ಬಸದಿಯಲ್ಲಿ ಕಟ್ಟೆಯನ್ನು ಮಾಡಿಸಿದ ಉಲ್ಲೇಖವಿದೆ.[59] ಗೋರಟಾದ ಈ ಎರಡೂ ಶಾಸನಗಳು ಗ್ರಾಮದ ಮಧ್ಯದಲ್ಲಿರುವ ಮಹಾದೇವ ದೇವಾಲಯದ ನವರಂಗದ ದೇವಕೋಷ್ಠಗಳ ಕೆಳಪಟ್ಟಿಕೆಗಳ ಮೇಲಿವೆ. ಈ ದೇವಾಲಯವೇ ಮುನಿಸುವ್ರತಸಿದ್ಧಾಂತದೇವನ ಶಿಷ್ಯೆ ಪದ್ಮಾವತಿ ಮಾಡಿಸಿದ ಬಸದಿಯಾಗಿದೆ. ಆದರೆ ಇದು ಯಾವ ತೀರ್ಥಂಕರನ ಬಸದಿಯಾಗಿತ್ತೆಂಬುದು ಸ್ಪಷ್ಟವಿಲ್ಲ. ಸ್ಥಳೀಯ ವೀರಶೈವ ಧರ್ಮೀಯರು ಇದನ್ನು ತಮ್ಮ ಸುಪರ್ದಿಗೆ ತೆಗೆದುಕೊಂಡು ಕ್ರಿ.ಶ. 1939ರಲ್ಲಿ ಜೀರ್ಣೋದ್ಧಾರಪಡಿಸುತ್ತಿದ್ದ ಸಂದರ್ಭದಲ್ಲಿ ಗರ್ಭಗೃಹದಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಿ ಮಹಾದೇವ ದೇವಾಲಯವನ್ನಾಗಿ ರೂಪಾಂತರಿಸಿರುವುದು ಮುಖಮಂಟಪದ ಸ್ತಂಭದ ಮೇಲಿರುವ ಎರಡು ಸಾಲುಗಳ ಸಮಕಾಲೀನ ಶಾಸನವು ಪರೋಕ್ಷವಾಗಿ ದೃಢಪಡಿಸುತ್ತದೆ. ಜೀರ್ಣೋದ್ಧಾರದ ಸಂದರ್ಭದಲ್ಲಿ ಸಾಮಾನ್ಯರಿಗೆ ಇದು ಪರಿವರ್ತಿತ ದೇವಾಲಯವೆಂದು ಊಹಿಸಲಾಗದಷ್ಟು ಎಚ್ಚರಿಕೆ ವಹಿಸಲಾಗಿದೆ. ಆದರೆ ಇದರ ಕೆಲವು ವಾಸ್ತು ಲಕ್ಷಣಗಳು ಮತ್ತು ಶಾಸನಗಳನ್ನು (ಸಿಂಹಪೀಠ, ಲಲಾಟಪಟ್ಟಿ, ದೇವಕೋಷ್ಠಗಳ ಪಟ್ಟಿಕೆಯ ಮೇಲಿರುವ ಶಾಸನಗಳು) ಸೂಕ್ಷ್ಮವಾಗಿ ಅವಲೋಕಿಸಿದಾಗ ಇದು ಮೂಲತಃ ಬಸದಿಯಾಗಿತ್ತೆಂಬುದು ಖಚಿತವಾಗುತ್ತದೆ.

ಉತ್ತರಾಭಿಮುಖವಾಗಿರುವ ಈ ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ತೆರೆದ ಅಂತರಾಳ, ನವರಂಗ ಮತ್ತು ತೆರೆದ ಮುಖಮಂಟಪಗಳಿವೆ. ಗರ್ಭಗೃಹದಲ್ಲಿ ಸಿಂಹಪೀಠವಿದ್ದು, ಇದರ ಮೇಲೆ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ದ್ವಾರಬಂಧವು ರತ್ನ, ಸ್ತಂಭ, ಬಳ್ಳಿಯಿಂದ ಅಲಂಕೃತವಾಗಿರುವ ತ್ರಿಶಾಖೆಗಳನ್ನೊಳಗೊಂಡಿದೆ. ಲಲಾಟ ಪಟ್ಟಿಯಲ್ಲಿದ್ದ ಜಿನಬಿಂಬವನ್ನು ಶಿವಲಿಂಗವನ್ನಾಗಿ ರಚಿಸುವಲ್ಲಿ ಕಲಾಕಾರ ತೋರಿರುವ ಕೈಚಳಕ, ಕೌಶಲ್ಯ ಮತ್ತು ಚಾಣಾಕ್ಷತೆಯನ್ನು ಮೆಚ್ಚಲೇಬೇಕು.[60] ಪೇದ್ಯಾಪಿಂಡದಲ್ಲಿ (ದ್ವಾರಶಾಖೆಗಳ ಕೆಳಭಾಗ) ದ್ವಾರಪಾಲಕರ ಸ್ಥಾನಕ ಉಬ್ಬುಶಿಲ್ಪಗಳಿವೆ. ನವರಂಗದ ಮಧ್ಯದಲ್ಲಿ ರುದ್ರಕಾಂತ ಪ್ರಕಾರದ ನಾಲ್ಕು ಸ್ತಂಭಗಳಿವೆ. ಇವು ಕ್ರಮವಾಗಿ ಪೀಠ, ಪಾದ, ದಂಡ, ಘಟ, ಫಲಕ, ಬೋದಿಗೆಯನ್ನು ಹೊಂದಿವೆ. ಈ ನಾಲ್ಕೂ ಸ್ತಂಭಗಳಿಗೆ ಹೊಂದಿಕೊಂಡಂತೆ ಮಧ್ಯದಲ್ಲಿ ಚೌಕಾಕಾರದ ನೃತ್ಯ (ರಂಗ) ವೇದಿಕೆಯಿದೆ. ವಿತಾನದಲ್ಲಿ ಪದ್ಮಮಂಡಲದ ಅಲಂಕಾರದ ಕೆತ್ತನೆಯಿದೆ. ಭಿತ್ತಿಯಲ್ಲಿ ಭದ್ರಕ ಪ್ರಕಾರದ ಹನ್ನೆರಡು ಅರ್ಧಗಂಬ ಗಳಿವೆ. ದ್ವಾರಬಂಧದಲ್ಲಿ ರತ್ನ, ಸ್ತಂಭ, ಬಳ್ಳಿಯಿಂದ ರೂಪಿತವಾಗಿರುವ ತ್ರಿಶಾಖೆಗಳಿವೆ. ದ್ವಾರದ ಲಲಾಟಪಟ್ಟಿಯಲ್ಲಿದ್ದ ಜಿನಬಿಂಬವನ್ನೂ ಶಿವಲಿಂಗವನ್ನಾಗಿಸಿದೆ. ಪೇದ್ಯಾಪಿಂಡದಲ್ಲಿರುವ ದ್ವಾರಪಾಲಕರ ಉಬ್ಬುಶಿಲ್ಪಗಳು ಆಕರ್ಷಕವಾಗಿವೆ. ಉದುಂಬರದ (ಹೊಸ್ತಿಲು) ಮುಮ್ಮುಖದಲ್ಲಿ ಸಿಂಹ ಮತ್ತು ರತ್ನಪಟ್ಟಿಕೆಯ ಕೆತ್ತನೆಗಳಿವೆ. ಇದಕ್ಕೆ ಹೊಂದಿಕೊಂಡಂತೆ ಮುಂಭಾಗದಲ್ಲಿರುವ ಚಂದ್ರಶಿಲಾ ರಚನೆ ಗಮನೀಯವಾಗಿದೆ. ತೆರೆದ ಮುಖಮಂಟಪದ ಮುಂಬದಿಯಲ್ಲಿ ರುದ್ರಕಾಂತ ಪ್ರಕಾರದ ಎರಡು ಸ್ತಂಭಗಳಿವೆ. ಈ ಮಂಟಪದಲ್ಲಿ ಸುತ್ತಲೂ ಕಕ್ಷಾಸನವಿದೆ. ಈ ದೇವಾಲಯದ ಹೊರಭಾಗವು ಸಂಪೂರ್ಣ ಜೀರ್ಣೋದ್ಧಾರವಾಗಿರುವುದರಿಂದ ಮೂಲ ವಾಸ್ತು ಸ್ವರೂಪವು ಸ್ಪಷ್ಟವಾಗುವುದಿಲ್ಲ.

ಈ ಗ್ರಾಮದಲ್ಲಿರುವ ಎರಡು ನಿಷಿಧಿಗಲ್ಲುಗಳ ಮೇಲ್ಭಾಗದ ಶಿಲ್ಪಪಟ್ಟಿಕೆಗಳಲ್ಲಿ ಪಾರ್ಶ್ವನಾಥ ತೀರ್ಥಂಕರನ ಉಬ್ಬುಶಿಲ್ಪಗಳಿವೆ.[61] ಈ ಹಿನ್ನೆಲೆಯಲ್ಲಿ ಇದು ಪಾರ್ಶ್ವನಾಥ ತೀರ್ಥಂಕರನ ಬಸದಿಯಾಗಿದ್ದಂತೆ ತೋರುತ್ತದೆ. ಹಲಸಿಯ ಕ್ರಿ.ಶ. ಸುಮಾರು 12ನೆಯ ಶತಮಾನದ ಶಾಸನದಲ್ಲಿ ಬಸದಿಗೆ ದಾನ ಮಾಡಿದ ವಿವರವಿದೆ.[62] ಈ ಶಾಸನದ ಅಕ್ಷರಗಳು ತುಂಬಾ ಸವೆದಿರುವುದರಿಂದ ಅದು ಯಾವ ತೀರ್ಥಂಕರನ ಬಸದಿಯಾಗಿತ್ತೆಂಬುದು ಸ್ಪಷ್ಟವಿಲ್ಲ.

**3.5. ಮಾನಸ್ತಂಭಗಳು**

ತೀರ್ಥಂಕರರು ಕೇವಲಜ್ಞಾನದ ತರುವಾಯ ಪ್ರಥಮೋಪದೇಶ ಕೈಗೊಳ್ಳುವ ಸರ್ವತೋಭದ್ರ ವಿನ್ಯಾಸದ ಸಮವಸರಣ ಮಂಟಪದ ನಾಲ್ಕೂ ದಿಕ್ಕುಗಳ ದ್ವಾರಬಂಧಗಳ ಮುಂಭಾಗಗಳಲ್ಲಿ ಒಂದೊಂದು ಮಾನಸ್ತಂಭಗಳು ಇರುತ್ತವೆ. ಬಸದಿಗಳ ವಾಸ್ತು ನಿರ್ಮಾಣದ ಸಂಕೀರ್ಣದಲ್ಲಿ ಬೆಳೆದು ಬಂದಿರುವ ಮಾನಸ್ತಂಭಗಳು ಆ ಸ್ತಂಭಗಳ ಪ್ರತಿನಿಧಿಯಾಗಿವೆ. ಇವು ಆಕಾರ, ಪ್ರಮಾಣ, ಸ್ವರೂಪ ಇತ್ಯಾದಿ ಲಕ್ಷಣಗಳಲ್ಲಿಯೂ ಆ ಸ್ತಂಭಗಳನ್ನೇ ಅನುಸರಿಸುತ್ತವೆ. ಇವು ಭಕ್ತರು ಬಸದಿಗಳನ್ನು ಪ್ರವೇಶಿಸುವ ಮುನ್ನ ಅವರಲ್ಲಿರುವ ಕಷಾಯಗಳನ್ನು (ಕ್ರೋಧ, ಮಾನ, ಮಾಯಾ, ಲೋಭ) ದೂರಮಾಡಿ ಅವರಲ್ಲಿ ಧಾರ್ಮಿಕ ಶ್ರದ್ಧೆಯನ್ನುಂಟು ಮಾಡುತ್ತವೆ. ಹಾಗಾಗಿ ಇವುಗಳನ್ನು 'ಮಾನಸ್ತಂಭ' ಎಂದು ಕರೆಯಲಾಗಿದೆ. ಜೈನಾಗಮಗಳು 'ಮಾನಸ್ತಂಭಗಳ ಎತ್ತರವು ಅವು ನಿರ್ಮಾಣವಾದ ಬಸದಿಗಳ ಗರ್ಭಗೃಹದಲ್ಲಿ ಪ್ರತಿಷ್ಠಾಪಿತವಾದ ತೀರ್ಥಂಕರರ ಶರೀರಾಕೃತಿಯ ಹನ್ನೆರಡು ಪಟ್ಟು ಎತ್ತರವಾಗಿರಬೇಕು' ಎಂದು ನಿರ್ದೇಶಿಸುತ್ತವೆ. ಪ್ರಾಚೀನ ಮತ್ತು ಅರ್ವಾಚೀನ ಬಹುತೇಕ ಮಾನಸ್ತಂಭಗಳು ಆ ನಿರ್ದೇಶನದಂತೆಯೇ ನಿರ್ಮಾಣವಾಗಿವೆ. ಆದರೆ ಕೆಲವು ಮಾನಸ್ತಂಭಗಳನ್ನು ಭವ್ಯವಾಗಿ ತೋರಿಸುವ ಉದ್ದೇಶದಿಂದ ಆ ನಿರ್ದೇಶನವನ್ನು ಮೀರಿದ ನಿದರ್ಶನಗಳೂ (ಉಡುಪಿ ಜಿಲ್ಲೆಯ ಕಾರ್ಕಳದ ಹಿರಿಯಂಗಡಿ ಇತ್ಯಾದಿ) ಗೋಚರಿಸುತ್ತವೆ. ಭಾರತದ ಸಂದರ್ಭದಲ್ಲಿ ಕುಷಾಣರು (ಉತ್ತರಪ್ರದೇಶದ ಕಹಾನ) ಮತ್ತು ಕಳಿಂಗದ ಚೇದಿವಂಶದ ಮಹಾಮೇಘವಾಹನ ಖಾರವೇಲನ (ಒಡಿಸಾದ ರಾಜಧಾನಿ ಭುವನೇಶ್ವರದ ಬಳಿ ಉದಯಗಿರಿ ಬೆಟ್ಟ) ಕಾಲದಿಂದಲೂ ಮಾನಸ್ತಂಭಗಳ ನಿರ್ಮಾಣ ಪರಂಪರೆ ಸಾಗಿ ಬಂದಿದೆ. ಕನ್ನಡ ನಾಡಿನಲ್ಲಿ ಮಾನಸ್ತಂಭಗಳ ನಿರ್ಮಾಣವು ತಲಕಾಡಿನ ಗಂಗರು ಮತ್ತು ಮಳಖೇಡದ ರಾಷ್ಟ್ರಕೂಟರ ಕಾಲದಲ್ಲಿ ಆರಂಭವಾಯಿತು. ಅದು ಕಲ್ಯಾಣದ ಚಾಳುಕ್ಯರು ಮತ್ತು ದೋರಸಮುದ್ರದ ಹೊಯ್ಸಳರ ಕಾಲದಲ್ಲಿ ಅಭಿವೃದ್ಧಿ ಹೊಂದಿ ವಿಜಯನಗರ ಮನೆತನದ ಕಾಲದಲ್ಲಿ ಉಚ್ಛ್ರಾಯ ಹಂತವನ್ನು ತಲುಪಿತು. ಇಂದು ಬಸದಿಗಳ ಮುಂಭಾಗಗಳಲ್ಲಿ ಮಾನಸ್ತಂಭಗಳ ನಿರ್ಮಾಣ ಸಾಮಾನ್ಯವಾಗಿದೆ.[63]

ಬೀದರ ಜಿಲ್ಲೆಯ ಪ್ರದೇಶದಲ್ಲಿಯೂ ಬಸದಿಗಳ ಮುಂಭಾಗಗಳಲ್ಲಿ ಮಾನಸ್ತಂಭಗಳ ನಿರ್ಮಾಣ ಪರಂಪರೆ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದೆ. ಬಸವಕಲ್ಯಾಣ ನಗರದಲ್ಲಿ ಕಲ್ಯಾಣದ ಗೋಷ್ಠಿಯ ಸದಸ್ಯರು ಜೀರ್ಣೋದ್ಧಾರಪಡಿಸಿದ್ದ ಚಂದ್ರಪ್ರಭನಾಥ ಬಸದಿಯ ಮುಂಭಾಗದಲ್ಲಿ ಈಶ್ವರಸೆಟ್ಟಿ ಎಂಬಾತನು ಮಾನಸ್ತಂಭವನ್ನು ಮಾಡಿಸಿರುವುದು ಕ್ರಿ.ಶ. 1097ರ ಶಾಸನದಲ್ಲಿ ದಾಖಲಾಗಿದೆ.[64] ಈ ನಗರದ ಕೋಟೆಯ ಆವರಣದಲ್ಲಿದ್ದ ಸ್ತಂಭದ ಮೇಲ್ತುದಿಯ ಭಾಗವನ್ನು ಸ್ಥಳೀಯ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯದ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಲಾಗಿದೆ. ಇದರ ಮೂರು ಮುಖಗಳಲ್ಲಿ ತೀರ್ಥಂಕರರ ಪರ್ಯಂಕಾಸೀನ ಉಬ್ಬುಶಿಲ್ಪಗಳಿವೆ. ಇದರ ಮೇಲ್ಭಾಗವು ಗೋಪುರದಂತಿದೆ. ಇದುವೇ ಈ ನಗರದಲ್ಲಿ ಈಶ್ವರಸೆಟ್ಟಿ ನಿರ್ಮಿಸಿದ್ದ

ಮಾನಸ್ತಂಭದ ಮೇಲ್ತುದಿಯ ಭಾಗವಾಗಿರುವಂತೆ ತೋರುತ್ತದೆ. ಅಲಿಯಂಬರ ಗ್ರಾಮದಲ್ಲಿದ್ದ ಬಸದಿಯ ಮುಂಭಾಗದಲ್ಲಿಯೂ ಮಾನಸ್ತಂಭ ನಿರ್ಮಾಣವಾಗಿತ್ತು. ಅದರ ಮೇಲ್ತುದಿಯ ಭಾಗವು ಇಂದಿಗೂ ಉಳಿದು ಬಂದಿದೆ. ಇದು ಈಗ ಹನುಮಾನ ದೇವಾಲಯದ ಮುಂಭಾಗದಲ್ಲಿದೆ. ಇದರ ನಾಲ್ಕೂ ಮುಖಗಳಲ್ಲಿ ತೀರ್ಥಂಕರರ ಕಾಯೋತ್ಸರ್ಗ ಉಬ್ಬುಶಿಲ್ಪಗಳಿವೆ.

ಕಮಠಾಣದ ಪಾರ್ಶ್ವನಾಥ ಬಸದಿಯ ಮುಂಭಾಗದಲ್ಲಿ ಆಚಾರ್ಯಶ್ರೀ ಶ್ರುತಸಾಗರಮುನಿ ಮಹಾರಾಜರ ಸ್ಫೂರ್ತಿ-ಪ್ರೇರಣೆಯಿಂದ ಬೀದರ ನಗರದ ಶ್ರೀ ಶಾಂತಿನಾಥ ನೇಮಿನಾಥ ವನಕುದರೆ ಮತ್ತು ಶ್ರೀಮತಿ ಶಕುಂತಲಾ ಧನ್ಯಕುಮಾರ ರೋಖಡೆ ಅವರು 2004ರಲ್ಲಿ ಮಾನಸ್ತಂಭವನ್ನು ನಿರ್ಮಿಸಿದ್ದಾರೆ. ಕೆಂಪು ಕಣಶಿಲೆಯಲ್ಲಿ ನಿರ್ಮಾಣವಾಗಿರುವ ಇದರ ಕೆಳಭಾಗದಲ್ಲಿ ಮೂರು ವೇದಿಕೆಗಳು, ಮಧ್ಯದಲ್ಲಿ ಕಾಂಡ ಮತ್ತು ಮೇಲ್ತುದಿಯಲ್ಲಿ ಚೌಕಾಕಾರದ ಸರ್ವತೋಭದ್ರ ವಿನ್ಯಾಸದ ಮಂಟಪವಿದೆ. ಮಂಟಪದಲ್ಲಿ ಪರ್ಯಂಕಾಸೀನ ತೀರ್ಥಂಕರರ ಚತುರ್ಮುಖ (ಚೌಮುಖ) ಶಿಲ್ಪವಿದೆ. ಬೀದರ ನಗರದ ಚಂದ್ರಪ್ರಭನಾಥ ಬಸದಿಯ ಮುಂಭಾಗದಲ್ಲಿ ಜಿಲ್ಲೆಯ ಸಮಸ್ತ ಶ್ರಾವಕರೆಲ್ಲರೂ ಕೂಡಿಕೊಂಡು 2004ರಲ್ಲಿ ಮಾನಸ್ತಂಭವನ್ನು ನಿರ್ಮಿಸಿದ್ದಾರೆ. ಇದರ ಲಕ್ಷಣಗಳು ಈ ಮೇಲಿನ ಮಾನಸ್ತಂಭದಂತಿವೆ.

**ಅಡಿಟಿಪ್ಪಣಿಗಳು**

1. ಅಭಿಶಂಕರ ಕೆ. (ಸಂ.), ಬೀದರ ಜಿಲ್ಲೆಯ ಗೆಜೆಟಿಯರ್ (1971), ಪು. 1-8. ಪಾಟೀಲ ಇಂದುಮತಿ, ಬೀದರ ಜಿಲ್ಲೆಯ ಅರಸು ಮನೆತನಗಳು (2006), ಪು. 6-7. ಸೆನ್ಸಸ್ ಆಫ್ ಇಂಡಿಯಾ-2001, ಡಿಸ್ಟ್ರಿಕ್ಟ್ ಪಾಪ್ಯುಲೇಶನ್ ಬುಕ್‌ಲೇಟ್-ಬೀದರ, ಸೀರೀಜ್-30. ವಿಸಾಜಿ ಜಿ.ಬಿ., ಭಾಲ್ಕಿ ತಾಲೂಕು ದರ್ಶನ (2010), ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪ್ಪೋ ಮತ್ತು ಪ್ರಕಾಶನ ಗುಲಬರ್ಗಾ.
2. ಷಡಕ್ಷರಯ್ಯ ಆರ್.ಎಂ., ಪ್ರಿ ಹಿಸ್ಟಾರಿಕ್ ಆ್ಯಂಡ್ ಅರ್ಲಿ ಹಿಸ್ಟಾರಿಕ್ ಕಲ್ಚರಸ್ ಇನ್ ಬೀದರ ಡಿಸ್ಟ್ರಿಕ್ಟ್ ವಿತ್ ಸ್ಪೆಶಲ್ ರೆಫರನ್ಸ್ ಟು ಮಾಂಜ್ರಾ ಆ್ಯಂಡ್ ಕಾರಂಜಾ ವ್ಯಾಲೀಸ್ (1985), ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ. ಶಿವತಾರಕ್ ಕೆ.ಬಿ., ಕರ್ನಾಟಕದ ಪುರಾತತ್ವ ನೆಲೆಗಳು (2001), ಪು. 461-491. ಪಾಟೀಲ ಇಂದುಮತಿ, ಪೂರ್ವೋಕ್ತ, ಪು. 8-10.
3. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-8, ಪ್ರಸ್ತಾವನೆ, ಪು. ಥಥತ-ಥಥಥ. ಪಾಟೀಲ ಇಂದುಮತಿ, ಪೂರ್ವೋಕ್ತ, ಪು. 14-18.
4. ಅದೇ, ಪು. ಥಥ-ಥಥತ. ಅಭಿಶಂಕರ ಕೆ. (ಸಂ.), ಪೂರ್ವೋಕ್ತ, ಪು. 23-85. ಪಾಟೀಲ ಇಂದುಮತಿ, ಪೂರ್ವೋಕ್ತ, ಪು. 19-70.
5. ಹಂಜೆ ಅಪ್ಪಣ್ಣ ಎನ್., ಸಾಹಿತ್ಯ ಮತ್ತು ಶಾಸನಗಳಲ್ಲಿ ಭದ್ರಬಾಹು ಭಟ್ಟಾರಕರು ಮತ್ತು ಚಂದ್ರಗುಪ್ತ, ಅರವಂಟಿಗೆ ಸಂ. 1/1 (ಜೂನ್-2008), ಪು. 10-19, ಜೈನ ಅಧ್ಯಯನ ಸಂಸ್ಥೆ ಶ್ರವಣಬೆಳಗೊಳ.
6. ಹಂಪ ನಾಗರಾಜಯ್ಯ, ಯಾಪನೀಯ ಸಂಘ (1999), ಪು. 25-26.
7. ಷಡಕ್ಷರಯ್ಯ ಆರ್.ಎಂ., ಶಿಲ್ಪಶಾಸನಗಳು, ಬೀದರ ಜಿಲ್ಲಾ ದರ್ಶನ (2005), ಸೋಮನಾಥ ಯಾಳವಾರ ಮತ್ತು ಪ್ರೇಮಾ ಸಿರ್ಶೆ (ಸಂ.), ಪು. 42.
8. ಅಕ್ಕಿ ಡಿ.ಎನ್., ಜಿನದನಿ (2010), ಪು. 130. ಗುಲಬರ್ಗಾ ಜಿಲ್ಲೆಯ ಜೈನ ಪರಂಪರೆ (2010), ಪು. 6-7.
9. ಹಂಪ ನಾಗರಾಜಯ್ಯ, ಪೂರ್ವೋಕ್ತ, ಪು. 69-78.
10. ಬೈರೋಡಗಿ ಜೆ.ಎಂ., ಬೀದರ ಜಿಲ್ಲೆಯ ಶಾಸನಗಳು (1990), ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ. ಕ.ವಿ.ಶಾ.ಸಂ. 8, (2006), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ. ಹಂಜೆ ಅಪ್ಪಣ್ಣ ಎನ್., ಕಮಠಾಣದ ಪಾರ್ಶ್ವನಾಥ ತೀರ್ಥಂಕರನ ಶಿಲ್ಪ ಮತ್ತು ಪಾದಪೀಠ

ಶಾಸನ, ಸಾಧನೆ ಸಂ. 35/3 (ಜುಲೈ–ಸಪ್ಟೆಂಬರ್/2010), ಪು. 39–43, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು.
11. ಪಾಟೀಲ ಇಂದುಮತಿ, ಪೂರ್ವೋಕ್ತ.
12. ಕ.ವಿ.ಶಾ.ಸಂ. 8, ಶಾ.ಸಂ. 67, 13, 3, 2, 70.
13. ಅದೇ, ಶಾ.ಸಂ. 54, 22.
14. ಅದೇ, ಶಾ.ಸಂ. 2.
15. ಗೋಪಾಲ್ ಬಾ.ರಾ., ಬೀದರ್ ಜಿಲ್ಲೆಯ ಶಾಸನಗಳು–2, ಮಾನವಿಕ ಕರ್ನಾಟಕ ಸಂ. 3/4 (ಆಗಸ್ಟ್–1973), ಪು. 29–32, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.
16. ನಾಗಯ್ಯ ಜೆ.ಎಂ., ಆರನೆಯ ವಿಕ್ರಮಾದಿತ್ಯನ ಶಾಸನಗಳು:ಒಂದು ಅಧ್ಯಯನ (1992), ಪು. 230–250.
17. ಕ.ವಿ.ಶಾ.ಸಂ. 8, ಶಾ.ಸಂ. 13.
18. ಅದೇ, ಶಾ.ಸಂ. 70.
19. ನಾಗಯ್ಯ ಜೆ.ಎಂ., ಪೂರ್ವೋಕ್ತ, ಪು. 249–250.
20. ಕ.ವಿ.ಶಾ.ಸಂ. 8, ಶಾ.ಸಂ. 13.
21. ಅದೇ, ಶಾ.ಸಂ. 70.
22. ನಾಗಯ್ಯ ಜೆ.ಎಂ., ಪೂರ್ವೋಕ್ತ, ಪು. 253.
23. ಕ.ವಿ.ಶಾ.ಸಂ. 8, ಶಾ.ಸಂ. 13.
24. ನಾಗಯ್ಯ ಜೆ.ಎಂ., ಪೂರ್ವೋಕ್ತ, ಪು. 331.
25. ಕ.ವಿ.ಶಾ.ಸಂ. 8, ಶಾ.ಸಂ. 22.
26. ಅದೇ, ಶಾ.ಸಂ. 2.
27. ನಾಗಯ್ಯ ಜೆ.ಎಂ., ಪೂರ್ವೋಕ್ತ, ಪು. 350–351.
28. ಕ.ವಿ.ಶಾ.ಸಂ. 8, ಶಾ.ಸಂ. 67, 70.
29. ಅದೇ, ಶಾ.ಸಂ. 13.
30. ಕಲಬುರ್ಗಿ ಎಂ.ಎಂ. (ಸಂ.), ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು ಭಾಗ–1 (1999), ಪು. 8.
31. ಕ.ವಿ.ಶಾ.ಸಂ. 8, ಶಾ.ಸಂ. 70.
32. ನಾಗಯ್ಯ ಜೆ.ಎಂ., ಪೂರ್ವೋಕ್ತ, ಪು. 95–96. ಕ.ವಿ.ಶಾ.ಸಂ. 8, ಪ್ರಸ್ತಾವನೆ
33. ಕ.ವಿ.ಶಾ.ಸಂ. 8, ಶಾ.ಸಂ. 13.
34. ಸವಿಸ್ತಾರವಾದ ವಿವರಣೆಗಳಿಗೆ ಗಮನಿಸಿ; ಪಾಟೀಲ ಎಸ್.ಪಿ. (ಸಂ.), ಧವಲತ್ರಯ ಗ್ರಂಥಪ್ರವೇಶ (2005), ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆ ಶ್ರವಣಬೆಳಗೊಳ.
35. ಅದೇ.
36. ಅದೇ.
37. ಮಹೀಶವಾಡಿ ಬಿ.ಬಿ., ಮುನಿಧರ್ಮ, ಕರ್ನಾಟಕ ಭಾರತಿ ಸಂ. 7/1 (ಆಗಸ್ಟ್–1974), ಪು. 35, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
38. ಹಂಪ ನಾಗರಾಜಯ್ಯ, ಪೂರ್ವೋಕ್ತ.
39. ಹಂಜೆ ಅಪ್ಪಣ್ಣ ಎನ್., ಕಮತಾಣದ ಪಾರ್ಶ್ವನಾಥ ತೀರ್ಥಂಕರನ ಶಿಲ್ಪ ಮತ್ತು ಪಾದಪೀಠ ಶಾಸನ, ಸಾಧನೆ ಸಂ. 35/2 (ಜುಲೈ–ಸಪ್ಟೆಂಬರ/2010), ಪು. 39–43, ಪ್ರಸಾರಾಂಗ, ಬೆಂಗಳೂರು ವಿ.ವಿ.
40. ಕ.ವಿ.ಶಾ.ಸಂ. 8, ಶಾ.ಸಂ. 13.
41. ಅದೇ, ಶಾ.ಸಂ. 53, 54, 56, 57, 1, 16, 62. ಬೈರೋಡಗಿ ಜಿ.ಎಂ., ಪೂರ್ವೋಕ್ತ, ಪು. 14.
42. ಕ.ವಿ.ಶಾ.ಸಂ. 8, ಶಾ.ಸಂ. 16.

43. ಅದೇ, ಶಾ.ಸಂ. 1.
44. ಅದೇ, ಶಾ.ಸಂ. 70.
45. ಅದೇ, ಶಾ.ಸಂ. 22.
46. ಪಾಡಿಗಾರ ಶ್ರೀನಿವಾಸ, ಭಾರತಿಯ ವಾಸ್ತು-ಶಿಲ್ಪಕ್ಕೆ ಜೈನರ ಕೊಡುಗೆ, ಜಿನತಿಲಕ (ಜೈನ ಸಿದ್ಧಾಂತ ಮತ್ತು ತೀರ್ಥಂಕರ ಮಹಾವೀರರನ್ನು ಕುರಿತ ಲೇಖನಗಳ ಸಂಗ್ರಹ-2004), ಗಾಳಿ ಶಿವಾನಂದ ಮತ್ತು ಶ್ರೀಧರ ಹೆಗಡೆ ಭದ್ರನ್ (ಸಂ.), ಪು. 104-114. ಕಾನ್ಸೆಪ್ಟ್ ಆ್ಯಂಡ್ ಆರ್ಟ್ : ವಿಸಿಟಿಟ್ಯೂಡ್ಸ್ ಆಫ್ ಜಿನಚೈತ್ಯಸ್ ಆ್ಯಂಡ್ ಜಿನಚೈತ್ಯಾಲಯಸ್ ಇನ್ ಕರ್ನಾಟಕ, ಡೆಕ್ಕನ್ ಸ್ಟಡೀಸ್ ಸಂ. ೧/೩ (ಜನೇವರಿ-ಜೂನ್ : 2007), ಪು. 60-100, ಹೈದರಾಬಾದ.
47. ಹಂಪ ನಾಗರಾಜಯ್ಯ, ಪೂರ್ವೋಕ್ತ. ಪು. 69.
48. ಕ.ವಿ.ಶಾ.ಸಂ. 8, ಶಾ.ಸಂ. 2.
49. ಕಲಬುರ್ಗಿ ಎಂ.ಎಂ., ಪ್ರಾಚೀನ ಕರ್ನಾಟಕದಲ್ಲಿ ದೇವಾಲಯಗಳ ನಾಶ, ಮಾರ್ಗ ಸಂ. 3 (1998), ಪು. 39-55.
50. ಹಂಪ ನಾಗರಾಜಯ್ಯ, ಶಾಸನಗಳಲ್ಲಿ ಬಸದಿಗಳು (1998), ಪು. 8-14. ಕವಿವರ ಕಾಮಧೇನು (1999), ಪು. 9-17. ಚಂದ್ರಶೇಖರಯ್ಯ ಎಂ.ಜಿ., ಬಸವಣ್ಣ: ಜೀವನ-ಸಾಧನೆ (2009), ಪು.9-10, 75-77.
51. ಗೀತಾ ಬಿ.ಎಸ್., ಕರ್ನಾಟಕದ ಸಾಂಸ್ಕೃತಿಕ ಸಂಘರ್ಷ : ಒಂದು ಅಧ್ಯಯನ (2008), ಪು. 148-153.
52. ಹಂಪ ನಾಗರಾಜಯ್ಯ, ಕವಿವರ ಕಾಮಧೇನು (1999), ಪು. 5-27. ಮೂಲ ಚೂಲ (ಆಯ್ದ ಲೇಖನಗಳು-2006), ಪು. 62-67. ದಾನಚಿಂತಾಮಣಿ ಅತ್ತಿಮಬ್ಬೆ(2010), ಪು. 25-26. ಕಲಬುರ್ಗಿ ಎಂ.ಎಂ., ಮಾರ್ಗ ಸಂ. 3 (1998), ಪು. 31-38. ಗೋಗಿ ಹನುಮಾಕ್ಷಿ, ಲಕ್ಕುಂಡಿಯ ಶಾಸನಗಳು (2008), ಶಾ.ಸಂ. 4, ಪು. 7-14. ಹಂಜೆ ಅಪ್ಪಣ್ಣ ಎನ್., ಲಕ್ಕುಂಡಿಯ ಬ್ರಹ್ಮಜಿನಾಲಯ : ವಾಸ್ತು-ಶಿಲ್ಪ-ಶಾಸನ, ಲಕ್ಕುಂಡಿ ಉತ್ಸವ ಸ್ಮರಣ ಸಂಚಿಕೆ (2008), ಪು. 4-8. ಗೀತಾ ಬಿ.ಎಸ್., ಪೂರ್ವೋಕ್ತ, ಪು. 153.
53. ಕ.ವಿ.ಶಾ.ಸಂ. 8, ಶಾ.ಸಂ. 1.
54. ಅದೇ, ಶಾ.ಸಂ. 70.
55. ಅದೇ, ಶಾ.ಸಂ. 67.
56. ಅದೇ, ಶಾ.ಸಂ. 22.
57. ಅದೇ, ಶಾ.ಸಂ. 2.
58. ಅದೇ, ಶಾ.ಸಂ. 56)
59. ಬೈರೋಡಗಿ ಜಿ.ಎಂ., ಪೂರ್ವೋಕ್ತ.
60. ಇದೇ ಬಗೆಯಲ್ಲಿ ಕನ್ನಡ ನಾಡಿನಾದ್ಯಂತ ಬಸದಿಗಳನ್ನು ಪರಿವರ್ತಿತ ದೇವಾಲಯಗಳೆಂದು ಊಹಿಸಲಾಗದಷ್ಟು ಎಚ್ಚರಿಕೆ ವಹಿಸಿರುವ ಅನೇಕ ನಿದರ್ಶನಗಳು ದೊರೆಯುತ್ತವೆ. ಹಾಸನ ಜಿಲ್ಲೆಯ ಪುಷ್ಪಗಿರಿಯ ಮೂಲತಃ ಬಸದಿಯಾಗಿದ್ದ ಮಲ್ಲಿಕಾರ್ಜುನ ದೇವಾಲಯದ ನವರಂಗದ ದ್ವಾರಬಂಧದ ಲಲಾಟಪಟ್ಟಿಯಲ್ಲಿರುವ ಜಿನಬಿಂಬವನ್ನು ಶಿವಲಿಂಗವನ್ನಾಗಿಸಿದೆ. ಸವಣೇರಿಯ ಮೂಲತಃ ಬಸದಿಯಾಗಿದ್ದ ವೀರಭದ್ರ ದೇವಾಲಯದ ಪ್ರಸ್ತರದಲ್ಲಿರುವ ಸಿಂಹದ ಬಿಂಬಗಳನ್ನು ನಂದಿಯ ಬಿಂಬಗಳಂತೆ ಮತ್ತು ನವರಂಗದಲ್ಲಿರುವ ಸಿಂಹಪೀಠದ ಮುಮ್ಮುಖದ ಸಿಂಹಗಳನ್ನು ಭೂತಗಣಗಳಂತೆ ತಿದ್ದಲು ಯತ್ನಿಸಿರುವುದು ಗೋಚರಿಸುತ್ತದೆ.
61. ಕ.ವಿ.ಶಾ.ಸಂ. 8, ಶಾ.ಸಂ. 53, 54.
62. ಅದೇ, ಶಾ.ಸಂ. 14.
63. ಹಂಪ ನಾಗರಾಜಯ್ಯ, ಮಾನಸ್ತಂಭ : ಜೈನ್ ಪಿಲರ್ ಆಫ್ ಎಮಿನೆನ್ಸ್ (2000), ಪು. 11-24 ಮತ್ತು 40-69.
64. ಕ.ವಿ.ಶಾ.ಸಂ. 8, ಶಾ.ಸಂ. 1.

# ತುಳು ಕವನಗಳಲ್ಲಿ ಗಂಡು ಹೆಣ್ಣು ಸಂಬಂಧಗಳು

**ಪದ್ಮಾವತಿ. ಯನ್**
ಸಂಶೋಧನಾ ವಿದ್ಯಾರ್ಥಿನಿ
ಕನ್ನಡ ಅಧ್ಯಯನ ವಿಭಾಗ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ-574199

ಮಾನವ ಜಗತ್ತಿನ ಪ್ರಮುಖ ಘಟಕಗಳಾದ ಗಂಡು-ಹೆಣ್ಣು ಪರಿಕಲ್ಪನೆಗಳು ಸಂಸ್ಕೃತಿಯ ಭಾಗಗಳಾಗಿವೆ. ಗಂಡು ಹೆಣ್ಣಿನ ಸಂಬಂಧ ತುಳುಕಾವ್ಯಗಳಲ್ಲಿಯೂ ಬಹುಮುಖ ನೆಲೆಗಳಲ್ಲಿ ಪ್ರಕಟವಾಗಿದೆ. ತುಳು ಕಾವ್ಯ ವಸ್ತುಗಳ ವಿಭಿನ್ನ ಆಯಾಮ ಗಳನ್ನು ಪರಾಮರ್ಶಿಸಿದಾಗ, ಇಲ್ಲಿನ ದೃಷ್ಟಿ ಧೋರಣೆಗಳು, ಕಾವ್ಯ ಚಿಂತನೆಗಳು, ಜೀವನ ದರ್ಶನಗಳು ತುಳುವ ಸಮಾಜದಿಂದ ಪ್ರೇರಣೆ ಹೊಂದಿರುವುದು ಕಂಡುಬರುತ್ತದೆ.

ಕುಟುಂಬ ವ್ಯವಸ್ಥೆಯ ಮುಂದುವರಿಕೆ ಮತ್ತು ಅದರ ಯಶಸ್ಸು ಗಂಡು ಹೆಣ್ಣಿನ ದಾಂಪತ್ಯ ಜೀವನದ ಸಫಲತೆಯನ್ನು ಅವಲಂಬಿಸಿರುತ್ತದೆ. ದಾಂಪತ್ಯ ಬದುಕಿನ ಮೌಲ್ಯಗಳು ಕಾವ್ಯಗಳಲ್ಲಿ, ತುಳುವ ಸಮಾಜದಲ್ಲಿ ಮೂಡಿಬಂದಿರುವ ಬಗೆಗಳನ್ನು ಅನಾವರಣ ಮಾಡುವ ಅಗತ್ಯವಿದೆ. ಆಧುನಿಕ ಕನ್ನಡ ಕಾವ್ಯ ಪ್ರಕಾರವು ಹೊಸ ತುಳು ಕಾವ್ಯ ಪ್ರಕಾರಕ್ಕೆ ಹಲವು ವಿಷಯಗಳಲ್ಲಿ ಮಾದರಿಯಾಗಿದೆ. ಕನ್ನಡದ ರೊಮ್ಯಾಂಟಿಕ್ ಭಾವಗಳು ತುಳು ಭಾಷೆಯಲ್ಲೂ ಸಮೃದ್ಧವಾಗಿ ಪ್ರಕಟವಾಗಿವೆ. ಪ್ರೇಮ, ಪ್ರಣಯ, ಪ್ರೇಮೋತ್ಕಟತೆ ಈ ಭಾವಗಳನ್ನು ನಿರೂಪಿಸುವ ಕವನಗಳು ಜನಪ್ರಿಯತೆಯನ್ನು ಪಡೆದುಕೊಂಡಿವೆ. ಇನ್ನು ಕೆಲವು ಕವನಗಳಲ್ಲಿ ವಿರಸ, ಏಕಾಂಗಿತನ, ಸಂಬಂಧಗಳ ಬಿರುಕು ಹೀಗೆ ಗಂಭೀರ ಭಾವಗಳ ಅಭಿವ್ಯಕ್ತಿಗಳಿವೆ. ಈ ಹಿನ್ನೆಲೆಯಲ್ಲಿ ತುಳು ಪ್ರಾತಿನಿಧಿಕ ಕವನಗಳು ಮುಖ್ಯವಾಗುತ್ತವೆ.

ಪ್ರೀತಿ-ಪ್ರೇಮದ ಅಗಾಧತೆಯನ್ನು ಗ್ರಹಿಸಲು ಮುಖ್ಯವಾಗಿ ಇಲ್ಲಿನ ಪರಿಕಲ್ಪನೆಗಳನ್ನು ಅರ್ಥ ಮಾಡಿಕೊಳ್ಳುವುದು ಅಗತ್ಯ. ಮಾನವ ಸಹಜ ಬದುಕಿನ ಅನಿವಾರ್ಯ ಅಂಗವಾಗಿರುವ ಕುಟುಂಬ ಮತ್ತು ಸಮಾಜಕ್ಕೆ ಸಂಬಂಧಪಟ್ಟಂತೆ ತುಳುವರ ಗ್ರಹಿಕೆಗಳು ವ್ಯಾಪಕ ಹಾಗೂ ಅರ್ಥಗರ್ಭಿತವಾಗಿ ತುಳು ಭಾವಗೀತೆ ಗಳಲ್ಲಿ ಪ್ರಕಟವಾಗಿವೆ. ಕೌಟುಂಬಿಕ ಕವನಗಳ ಮುಖ್ಯ ಭಾವ ಬದುಕಿನ ಅನಿವಾರ್ಯ ವೆನಿಸುವ ಸಂಬಂಧಗಳ ಗಟ್ಟಿತನ. ಈ ಹಿನ್ನಲೆಯಲ್ಲಿ ಕೌಟುಂಬಿಕ ಚೌಕಟ್ಟಿನೊಳಗೆ ಮುಖ್ಯವಾಗುವ ಪ್ರಾತಿನಿಧಿಕ ಕವನಗಳನ್ನು ಗಮನಿಸುವುದು ಅಗತ್ಯ.

1930ರ ದಶಕದ ತುಳು ಭಾವಗೀತೆಗಳಲ್ಲಿ ನಾಡು-ನುಡಿಯ ಪ್ರಜ್ಞೆ, ಸ್ವಾತಂತ್ರ್ಯ ಹೋರಾಟದ ಕಾವು ಮಾತ್ರವಲ್ಲ ಸಮಾಜ ಜಾಗೃತಿಯ ಭಾವಗಳು ಅಭಿವ್ಯಕ್ತಗೊಂಡಿವೆ. ಆನಂತರದ ಕಾಲಘಟ್ಟದ ಕಾವ್ಯ ಸಂಚಯವು ಜನ ಜೀವನದೆಡೆ

ತಿರುಗಿ ಕೌಟುಂಬಿಕ ಚೌಕಟ್ಟಿನ ಒಳಹೊರಗನ್ನು ವಿಮರ್ಶಿಸ ತೊಡಗಿತು. ಗಂಡು ಹೆಣ್ಣು ಎಂಬ ಎರಡು ಘಟಕಗಳ ಸಂಬಂಧಗಳನ್ನು ಕೌಟುಂಬಿಕ ನೆಲೆಯಲ್ಲಿ ತುಳು ಕವನಗಳು ವಿಶ್ಲೇಷಣೆಗೆ ಒಳಪಡಿಸಿದವು. ಸುಬ್ರಹ್ಮಣ್ಯ ಶಾಸ್ತ್ರಿ (ತುಳು ಕನ್ಯೋಪದೇಶ; 1916), ಪಾ.ವೆಂ. ಆಚಾರ್ಯ (ಬಯ್ಯ ಮಲ್ಲಿಗೆ;1981), ಡಾ.ಎಂ.ಸುನೀತಾ ಶೆಟ್ಟಿ (ಪಿಂಗಾರ; 1989, ಸಂಕ್ರಾಂತಿ; 1989, ನಾಗಸಂಪಿಗೆ; 1994), ಅಮೃತ ಸೋಮೇಶ್ವರ (ತಂಬಿಲ; 1984 ರಂಗಿತ; 1984) ಶ್ರೀಮತಿ ಪ್ರಮೋದಾ ಕೆ.ಸುವರ್ಣ (ಪೂಮಾಲೆ;1989, ಪದರಂಗಿತ;1996,ಕತೆ ಆಯೆರ್ ಪೊಣ್ಣುಲ್ಯೆವೆರ್;2003), ಪಾಲ್ತಾಡಿ ರಾಮಕೃಷ್ಣ ಆಚಾರ್ ದುನಿಪು;1992), ಆತ್ರಾಡಿ ಅಮೃತಾ ಶೆಟ್ಟಿ ಮದಿಮಾಲೆ ಪಾಡ್ದನ;1995), ಕೆ.ಲೀಲಾವತಿ (ತಿಬಿಲೆ;1996), ಕೆ.ಟಿ ಗಟ್ಟಿ (ಎನ್ನ ಮೋಕೆದ ಪೊಣ್ಣು;1996), ರಘು ಇಡ್ಕಿದು (ತಿಬಿಲೆ;2003), ಉಷಾ.ಕೆ.ರೈ (ಊರುಕೋಲು;2004), ಸಿದ್ಧಕಟ್ಟೆ ಮಲ್ಲಿಕಾ ಶೆಟ್ಟಿ (ಪದ್ದೆಯಿ;2005), ಕುಶಾಲಾಕ್ಷಿ. ಕೆ. ಕುಲಾಲ್ (ಸುರುತ ಪನಿ;2005) ವಸಂತ ಕುಮಾರ್ ಪೆರ್ಲ (ದುತ್ತೈತ;2007), ಯೋಗೀಶ್ ಕಾಂಚನ್ ಬೈಕಂಪಾಡಿ (ಕಂಚಿಲ್), ಸೀತಾರಾಮ ಆಳ್ವ ಕೆಲಿಂಜ, ಪಿ. ಚೆನ್ನಪ್ಪ ಅಳಿಕೆ, ಯು.ಆರ್. ಬಂಗೇರ ಹೀಗೆ ಅನೇಕ ತುಳು ಕವಿಗಳು ತಮ್ಮ ಭಾವಗೀತೆಗಳಲ್ಲಿ ಗಂಡು ಹೆಣ್ಣಿನ ಸಂಬಂಧಗಳನ್ನು ಭಾವನಾತ್ಮಕವಾಗಿ ಮಾತ್ರವಲ್ಲ ವೈಚಾರಿಕವಾಗಿಯೂ ವಿಶ್ಲೇಷಿಸಿದ್ದಾರೆ.

ಗಂಡು ಮನೆಯ ಹೊರಗಿನ ಕೆಲಸಗಳನ್ನು ತನ್ನ ಆರ್ಥಿಕ ಶಕ್ತಿಯ ಬಲದಿಂದ ನಿರ್ವಹಿಸಿದರೆ, ಹೆಣ್ಣು ತನ್ನ ಕುಟುಂಬ ನಿರ್ವಹಣೆಯನ್ನು ಕೌಶಲ್ಯದಿಂದ ನಿರ್ವಹಿಸುತ್ತಾಳೆ. ಈಕೆ ಮನೆಯೊಳಗೆ ಇದ್ದುಕೊಂಡು ಕೌಟುಂಬಿಕ ಕೆಲಸಗಳ ಮೂಲಕ ತನ್ನ ಮಕ್ಕಳ ಲಾಲನೆ ಪಾಲನೆ ಮಾಡುತ್ತಾಳೆ.ಈ ಭಿನ್ನ ಪರಿಕಲ್ಪನೆಗಳು ಗಂಡಿಗೆ ಆದಾಯ ನಿರ್ವಹಣೆ ಮಾಡುವ ಮತ್ತು ಹೆಣ್ಣು ಕುಟುಂಬದ ಹೊಣೆ ಹೊರುವ ಜವಾಬ್ದಾರಿಗಳನ್ನು ನೀಡಿವೆ. ಶ್ರೀಮತಿ ಉಷಾ.ಪಿ. ರೈ, ಕೆ.ಟಿ.ಗಟ್ಟಿ, ವಸಂತ ಕುಮಾರ್ ಪೆರ್ಲರವರ ಕವನಗಳಲ್ಲಿ ಕೌಟುಂಬಿಕ ಜವಾಬ್ದಾರಿಗಳ ಹಂಚುವಿಕೆ ಮತ್ತು ನಿರ್ವಹಣೆಯ ವಿವರಗಳು ಕಂಡುಬರುತ್ತವೆ. ಸ್ವತಂತ್ರ ಆಲೋಚನೆಗಳಿಗೆ ಗಂಡು ಹೆಣ್ಣು ತೆರೆದುಕೊಂಡ ಬಗೆಗಳನ್ನು ತುಳು ಕವನಗಳಲ್ಲಿ ಕಾಣಬಹುದು. ಗಂಡು ಹೆಣ್ಣಿನ ಸಮಾನತೆ ಮತ್ತು ಸಮನ್ವಯದ ಆಶಯವನ್ನು ತುಳುವಿನ ಅನೇಕ ಕವನಗಳು ಬಿಂಬಿಸಿವೆ.

ಮದುವೆಯು ಗಂಡು ಮತ್ತು ಹೆಣ್ಣಿನ ಸಾಂಸಾರಿಕ ಬದುಕಿಗೆ ಒಪ್ಪಿಗೆ ನೀಡುವ ಸಾಮಾಜಿಕ ಸಂಸ್ಥೆಯಾಗಿದೆ. ಗಂಡು ಮತ್ತು ಹೆಣ್ಣಿನ ನಡುವೆ ಪ್ರೀತಿ, ವಿಶ್ವಾಸ, ಗೌರವಾಧರಗಳು ಇರಬೇಕೆಂಬ ಅಂಶವನ್ನು ಕವನಗಳು ಸಾರುತ್ತವೆ. ಸ್ತ್ರೀಯರಿಗೆ ವೈವಾಹಿಕ ಜೀವನದ ಮೂಲಕ ಭದ್ರತೆಯನ್ನು ನೀಡುವ ಸಲುವಾಗಿ ಸಮಾಜವು ವಿವಾಹವನ್ನು ಗೌರವಿಸುತ್ತದೆ. ಗಂಡಿನ ಸುಖ ಕಷ್ಟಗಳಲ್ಲಿ ಸಹಭಾಗಿಯಾಗಿ, ಅರ್ಧಾಂಗಿಯಾಗಿ ಸಹಕಾರಿಯಾಗುವ ಹೆಣ್ಣಿನ ಸಹಬಾಳ್ವೆಯನ್ನು ಸಮಾಜವು ನಿರೂಪಿಸಿದೆ. ಮದುವೆ ಎಂಬ ಪರಿಕಲ್ಪನೆಯಲ್ಲಿ ಗಂಡು ಮತ್ತು ಹೆಣ್ಣಿನ ಕೌಟುಂಬಿಕ ಸಂಬಂಧವನ್ನು ಸಾಮಾಜಿಕಗೊಳಿಸುವ ಮತ್ತು ಸಾಂಸ್ಕೃತಿಕಗೊಳಿಸುವ ಆಶಯಗಳಿವೆ. ಶ್ರೀಮತಿ ಎಂ.ಸುನೀತಾ ಶೆಟ್ಟಿಯವರ ಕವನಗಳು ಪ್ರತಿಪಾದಿಸುವ ಅಂಶಗಳು ಈ ಹಿನ್ನಲೆಯಲ್ಲಿ ಮುಖ್ಯವಾಗುತ್ತವೆ. ದಾಂಪತ್ಯವು ಸರಾಗವಾಗಿ ಹರಿಯುವ ನೀರಿನ ಒರತೆಯಂತೆ ಸದಾ ವಿಶ್ವಾಸ, ಪ್ರೀತಿಗಳನ್ನು ಪ್ರತಿಪಾದಿಸಬೇಕೆಂಬ ಭಾವ ಇಲ್ಲಿ ದಾಖಲಾಗಿದೆ.

ಎಸ್.ಯು.ಪಣಿಯಾಡಿಯವರ ನೇತೃತ್ವದಲ್ಲಿ ನಡೆದ ತುಳು ಚಳುವಳಿಯ ಸಂದರ್ಭದಲ್ಲಿ ಚಿಪ್ಪಾರು ಕೃಷ್ಣಯ್ಯ ಬಲ್ಲಾಳರು ತುಳು ಕನ್ಯೋಪದೇಶ (1930) ಎನ್ನುವ 19 ಭಾಮಿನಿ ಷಟ್ಪದಿಯ ಕಾವ್ಯಗುಚ್ಛ ರಚಿಸಿದ್ದಾರೆ. ಮದುವೆಯಾಗಿ ಗಂಡನ ಮನೆಗೆ ಹೋಗುವ ಹೆಣ್ಣು ಮಗಳಿಗೆ ತಾಯಿ ಹೇಳುವ ಹಿತೋಪದೇಶವಿದಾಗಿದೆ. ಇಲ್ಲಿನ ಸಾಲುಗಳು:

ಮಗಳೆ ಈತ್ ದಿನ್ನೆ ಇಳ್ಳಳ್
ಮೆಗಿಪರಯನಕುಳೊಟ್ಟಿಗಿತ್ತ್‌ತ್
ಬಗೆಬಗೆತ ಗೊಬ್ಬಾಟೊಗುಳೆಟೇ ಸಮಯ ಪೋಂಡಮ್ಮ॥
ಲೆಗಿಪಡಂಚನೆ ನಾಣಲಮ್ಮ
ಮೆಗಿಪರಯನಂಚತ್ತ್ ಕಂಡನಿ
ಲೆಗಿತ್ ಪಂಡೆರ್ ಕಂಡನ್ಯೇ ದೇಬೆರ್‌ಗೆ ಹಿರಿಯಕ್‌ಳ್॥ (1930: 36)

(ಮಗಳೆ ಇಷ್ಟು ದಿನ ತನ್ನ ಮನೆಯಲ್ಲಿ/ ಅಣ್ಣ ತಮ್ಮಂದಿರೊಟ್ಟಿಗಿದ್ದು/ ಬಗೆಬಗೆಯ ಆಟಗಳನ್ನಾಡುತ್ತ ಸಮಯ ಕಳೆದಿದೆ/ ಮುಂದೆಯೂ ಹೀಗೇ ಇರಲಿ/ ಅಣ್ಣತಮ್ಮಂದಿರಂತಲ್ಲ ಪತಿಯು/ ಸಾರಿ ಹೇಳಿದರು ಪತಿಯೇ ದೇವರೆಂದು ಹಿರಿಯರು). ಪತಿಯೇ ಪರದೈವ ಎಂಬ ಭಾವ ಹಾಗೂ ಪತಿಯನ್ನು ಅನುಸರಿಸಿ ಬದುಕಬೇಕೆನ್ನುವ ಆಶಯ ಇಲ್ಲಿದೆ.

ದಿ. ಪಾ.ವೆಂ.ಆಚಾರ್ಯರ ಬಯ್ಯ ಮಲ್ಲಿಗೆ (ಸಂಜೆ ಮಲ್ಲಿಗೆ) (1981) ಕವನ ಸಂಕಲನವು ರೂಪ, ತಾಂತ್ರಿಕತೆ, ಭಾಷೆ, ಹಾಗೂ ಕಾವ್ಯಾರ್ಥದಲ್ಲಿ ಪ್ರಾತಿನಿಧಿಕವಾಗಿದೆ. ಇವರ ಭಾಷೆಯಲ್ಲಿ ವ್ಯಂಗ್ಯ ಕಟಕಿ ಇದೆ. ಧ್ವನಿಪೂರ್ಣವಾದ ಭಾವಗೀತಾತ್ಮಕತೆ ಇಲ್ಲಿನ ಕವನಗಳ ಮುಖ್ಯ ಲಕ್ಷಣವಾಗಿದೆ. ಮುನ್ನುಡಿಯಲ್ಲಿ ಕವಿ ಹೇಳುವಂತೆ ಇದರಲ್ಲಿ ಬಹಳಷ್ಟು ಅಂಶಗಳು ಮಧ್ಯವಯಸ್ಸು ಕಳೆದ ನಂತರ ಬರೆದವುಗಳು. ಇದರಲ್ಲಿ ಯವ್ವನದ ಹೊಸ್ತಿಲಲ್ಲಿರುವವರನ್ನು ಹುಚ್ಚೆಬ್ಬಿಸೋ ಇಂದ್ರಜಾಲವಿದೆ. ಕೆಲವನ್ನು ಬರೆಯುವಾಗ, ತುಳು ಭಾಷೆಯಲ್ಲಿ ಕೃಷಿ ಆಗದೇ ಇರುವ ಇನ್ನಷ್ಟು ಗಂಭೀರವಾದ ಆಲೋಚನೆಗಳನ್ನು ಹೇಳಲಾಗಬಹುದೇ ಎನ್ನುವ ಚಪಲವಿದೆ. ಇಲ್ಲಿನ ಅರ್ತ ಕವನವು ಇದೇ ಭಾವಾಭಿಲಾಷೆಯನ್ನು ವ್ಯಕ್ತಪಡಿಸುತ್ತದೆ. ಇಲ್ಲಿನ ಗೋಪಿ ಕವನದಲ್ಲಿ ಗೋಪಿಯು ಏಕಾಂತದಲ್ಲಿ ಹೊಳೆಯಲ್ಲಿ ಮೀಯುತ್ತಿರುವಾಗ ಕಳ್ಳ ಕೃಷ್ಣನು ತನ್ನನ್ನೇನಾದರೂ ನೋಡಿಯಾನೇ? ತನ್ನ ವಸ್ತ್ರಗಳನ್ನು ಕಸಿದುಕೊಂಡಾನೇ? ಎಂದು ಸಂಶಯ ಪಡುತ್ತಾ ಸಂಭ್ರಮಿಸುತ್ತಾಳೆ. ತನ್ನ ಏಕಾಂಗಿತನವನ್ನು ನೀಗಿಸುವ ಆಕಾಂಕ್ಷೆಯಿಂದ ಕೃಷ್ಣನನ್ನು ಬಯಸುವ ಹೃದಯದಲ್ಲಿ ಮುಜುಗರವಿಲ್ಲ, ಬದಲಾಗಿ ಆತನನ್ನು ಕಾಣಬೇಕೆಂಬ ಆಕಾಂಕ್ಷೆ ಬಲವಾಗಿದೆ. ಕವನದ ಸಾಲುಗಳು :

ಕಂಟೆಲ್ ಮುಲ್ಕುನ ನೀರ್‌ಡ್
ಕಾರ್ ಊರುದು ಉಂತ್ಯೊಲು,
ಮೆಯ್ಯಿ ಗಸ ಗಸ ಉರ್ದ್ಯೊಲು,
ನೀರ್ ಮೋನೆಗ್ ತೇತೊಲು;
ಗರ್ಕ ತಿರ್ಗ್‌ದ್ ತೂಯೊಲು
ಕಳ್ಳೆ ಗೋಪಾಲೆ ಬತ್ತೆನಾ? (1981 : 8)

(ಕುತ್ತಿಗೆ ಮುಳುಗುವ ನೀರಿನಲ್ಲಿ/ಕಾಲು ಊರಿ ನಿಂತಳು/ಮೈ ಗಸ ಗಸ ತಿಕ್ಕಿದಳು/ಮುಖಕ್ಕೆ ನೀರು ಚಿಮುಕಿಸಿದಳು/ಗರ್ಕ ತಿರುಗಿ ನೋಡಿದಳು/ ಕಳ್ಳ ಗೋಪಾಲ ಬಂದನೋ?). ಮೇಲಿನ ಕವನದಲ್ಲಿ ಮುಖ್ಯವಾಗಿ ಯವ್ವನದ ಮಾಧುರ್ಯ ಮಾತ್ರವಲ್ಲ ಆಸೆ ಆಕಾಂಕ್ಷೆಗಳನ್ನು ಸಾಕಾರ ಗೊಳಿಸುವ ಬಯಕೆಯ ಚಿತ್ರಣವಿದೆ. ವಾಸ್ತವಿಕವಾಗಿ ಹರೆಯದ ಅಮಲಿನಲ್ಲಿ ಸಿಲುಕಿದ ಹೃದಯವೊಂದು ತಳಮಳ, ಭ್ರಮೆಯಲ್ಲಿ ತೇಲಾಡುವ ಭಾವವು ಪ್ರಕಟಗೊಂಡಿದೆ. ಗೋಪಿ ತನ್ನ

ರಂಗಿನಾಟಕ್ಕಾಗಿ ಕೃಷ್ಣನಿಗಾಗಿ ಕಾದು ಕಾದು ಕೊನೆಗೆ ಬೇಸತ್ತು ಹೋಗುವ ಪರಿ, ಗಂಡು ಹೆಣ್ಣಿನ ಮಾಯೆ, ಪರಸ್ಪರ ಆಕರ್ಷಣೆ ಇವುಗಳೆಲ್ಲ ತಿಳಿ ಹಾಸ್ಯದ ಲೇಪನದೊಂದಿಗೆ ನಿರೂಪಿತವಾಗಿದೆ. ಕಲ್ಪನಾ ಸಾಮರ್ಥ್ಯಕ್ಕೆ ಇಲ್ಲಿನ ಗೋಪಿ ಮಾದರಿಯಾಗುವಳು.

ಪಿಂಗಾರ, ಸಂಕ್ರಾಂತಿ, ನಾಗ ಸಂಪಿಗೆ, ಪದ ಪನ್ ಕಣ್ಣಾರೊ (ಭಾವಗೀತೆಗಳ ಸಂಗ್ರಹ) ಇವು ಸುನೀತಾ ಶೆಟ್ಟಿಯವರ ಪ್ರಕಟಿತ ತುಳು ಕವನ ಸಂಕಲನಗಳು. ಸುನೀತಾ ಶೆಟ್ಟಿಯವರು ಸ್ತ್ರೀವಾದಿ ಲೇಖಕಿಯರಲ್ಲಿ ಒಬ್ಬರಾದರೂ ಅವರದು ಮೆಲುದನಿ. ಅವರ ಪ್ರಕಾರ ಪ್ರತಿಭಟನೆಯೆಂದರೆ ಸಮಾಜದ ತಳಮಟ್ಟದಲ್ಲಿ ದೌರ್ಜನ್ಯಕ್ಕೆ ಒಳಗಾದವರನ್ನು ಮೇಲೆತ್ತಿ ಕಣ್ಣೀರು ಒರೆಸುವುದೇ ಆಗಿದೆ, ಹೊರತು ಪುರುಷನ ವಿರುದ್ಧ ಹೋರಾಟವಲ್ಲ. ಸ್ತ್ರೀವಾದವೂ ಸಮಾಜಮುಖಿಯಾಗಿರಬೇಕು ಎಂಬ ನಿಲುವನ್ನು ಅವರು ಹೊಂದಿರುವರು. (ಮೋಹನ್.ಬಿ,2009:9) ಪುರುಷ ಸಮಾಜದ ಒಳನೋಟಗಳ ಬಗೆಗೆ ಮತ್ತು ಸೌಂದರ್ಯ ಭಾವಗಳ ಬಗೆಗೆ ಕವನಗಳನ್ನು ಯಾರೂ ಕಟ್ಟುತ್ತಿಲ್ಲ ಎಂಬ ನೋವಿನೊಂದಿಗೆ ತುಳು ಭಾಷೆಯಲ್ಲಿ ಹಲವಾರು ಕವನಗಳನ್ನು ರಚಿಸಿದ ಪ್ರಮುಖ ಕವಯಿತ್ರಿ ಇವರಾಗಿದ್ದಾರೆ. ಗಂಡು ಹೆಣ್ಣಿನ ಸಾಮರಸ್ಯದ ಭಾವವನ್ನು ಕಣ್ಣಿಗೆ ಕಟ್ಟುವಂತೆ ಬಿಂಬಿಸುವ ಇವರ ಕಾವ್ಯ ಶೈಲಿಯೂ ವಿಭಿನ್ನವಾದದ್ದು.

ಸಂಸಾರದ ಹೊರೆಯನ್ನು ಹೊತ್ತ ಹೆಣ್ಣು ಗಂಡಿನ ಮಧ್ಯೆ ಕೆಲವೊಮ್ಮೆ ತಾತ್ಸಾರ, ವಿನಾಕಾರಣ ಕೋಪ, ದು:ಖ, ದುಮ್ಮಾನಗಳು ಘಟಿಸುವುದು ಸಾಮಾನ್ಯ. ಇವೇ ಕೆಲವೊಮ್ಮೆ ಕುಟುಂಬಗಳು ಒಡೆಯಲು ಕಾರಣವಾಗುತ್ತವೆ. ಸಣ್ಣ ಸಮಸ್ಯೆಗಳನ್ನು ದೊಡ್ಡದಾಗಿಸದೆ ಸರಿದೂಗಿಸಿಕೊಂಡು ಹೋಗುವ ಉತ್ತಮ ಮನಸ್ಸಿದ್ದಲ್ಲಿ ಮಾತ್ರ ಹೆಣ್ಣು ಗಂಡು ಯಾವಾಗಲೂ ತಮ್ಮ ಸಂಸಾರದಲ್ಲಿ ಸುಖವಾಗಿರಲು ಸಾಧ್ಯ ಎಂಬ ಸಮನ್ವಯದ ಹಾದಿಯನ್ನು ತುಳು ಕವನಗಳು ತೆರೆದಿಟ್ಟಿವೆ.

**ಪರಾಮರ್ಶನ ಗ್ರಂಥಗಳು**


1. ಅಮೃತ ಸೋಮೇಶ್ವರ : 1984, ತುಳು ಬದುಕು ಕೆಲವು ಮುಖಗಳು, ಪ್ರಕೃತಿ ಪ್ರಕಾಶನ, ಕೋಟೆಕಾರು.
2. ಅಮೃತ ಸೋಮೇಶ್ವರ : 1978, ಅವಿಲು, ಕನ್ನಡ ಸಂಘ ವಿವೇಕಾನಂದ ಕಾಲೇಜು, ಪುತ್ತೂರು.
3. ಅರುಣ್ ಕುಮಾರ್ ಎಸ್.ಆರ್ : 1997, ಜಾನಪದ ಅನುಶೀಲನ, ಪೂರ್ಣ ಪ್ರಕಾಶನ, ಕೋಟೆಕಾರು, ದ.ಕ.
4. ಬಾಲಕೃಷ್ಣ ಶೆಟ್ಟಿ ಪೊಳಲಿ.ಅ : 1989, ಪಾತೆರ ಕತೆ, ಹೇಮಾಂಶು ಪ್ರಕಾಶನ, ಕಾಟಿಪಳ್ಳ.
5. ಚಿನ್ನಪ್ಪ ಗೌಡ (ಡಾ) : 2003, ಸಂಸ್ಕೃತಿ ಸಿರಿ, ಮದಿಪು ಪ್ರಕಾಶನ, ಮಂಗಳಗಂಗೋತ್ರಿ.
6. ಗಣಪಯ್ಯ ಭಟ್ ಪುಂಡಿಕಾಯಿ : 1997, ತೌಳವ ಸಿಂಧೂರ ಪ್ರಕಾಶನ ಮೂಡಬಿದಿರೆ.
7. ಗಣಪಯ್ಯ ಭಟ್ ಪುಂಡಿಕಾಯಿ : ತೌಳವ (ಲೇಖನ ಸಂಕಲನ) ಸಿಂಧೂರ ಪ್ರಕಾಶನ , ಮೂಡಬಿದ್ರೆ.


ಬಡಗಿಯ ಬೆಡಗಿನ
ಕಿಡಕಿಯ ಕಂಡು
ಮೂಡಲ ಸೂರ್ಯನು
ಮೋಡಕೆ ಸರಿದನು

# ಪ್ರತಿಕ್ರಿಯೆ

ಕನ್ನಡದ ಕೆಲವೇ ಸಾಹಿತ್ಯ ಪತ್ರಿಕೆಗಳ ಸಾಲಿಗೆ ಇತ್ತೀಚೆಗೆ ಸೇರ್ಪಡೆಗೊಂಡ ಈ ಪತ್ರಿಕೆ ನೋಡಲು ಸುಂದರವಾಗಿದ್ದು, ಅಂದವಾಗಿ ಮುದ್ರಿಸಲ್ಪಟ್ಟು, ಒಪ್ಪ ಓರಣದಿಂದ ಕೂಡಿ, ಸಾಹಿತ್ಯಪ್ರಿಯರನ್ನು ತನ್ನೆಡೆಗೆ ಸೆಳೆಯುವಷ್ಟು ಶಕ್ತಿಸಂಪನ್ನವಾಗಿದೆ ಎಂಬುದನ್ನು ಇಷ್ಟು ಬೇಗನೇ ನಿರೂಪಿಸಿದೆ. ಇದರ ಹಿಂದೆ ಇರುವ ಸಂಪಾದಕರ ಶ್ರಮ, ಆಸಕ್ತಿ ಹಾಗೂ ಸಾಹಿತ್ಯನಿಷ್ಠೆಯನ್ನು ಮೆಚ್ಚಲೇಬೇಕು. ಕನ್ನಡಕ್ಕೊಂದು ಶಾಸ್ತ್ರೀಯ ಸಾಹಿತ್ಯಸಂಪದವನ್ನು ದೊರಕಿಸಿಕೊಟ್ಟದ್ದಕ್ಕಾಗಿ ಸಂಪಾದಕಿಯವರಿಗೆ ಯಶ ಕೋರುತ್ತ ಅವರನ್ನು ಅಭಿನಂದಿಸುತ್ತೇನೆ.

i) **'ಶಕ್ತಿಯಿಂದ ಶಿವಪುರ ಸೃಷ್ಟಿಸಬಯಸುವ ಕಂಬಾರರ ನಾಟಕಗಳು'**

ವಿಶ್ವೀಯತೆ ಎಂದು ಕರೆಯಲ್ಪಡುವ ಶಬ್ದಕ್ಕೆ ಪಾಶ್ಚಾತ್ಯ ಪ್ರಭಾವವು ಇದ್ದೇ ತೀರಬೇಕಾದ ಪ್ರಧಾನ ಅಂಶವೆನ್ನುವ ಆಕರ ಮೂಲವನ್ನು ಒದಗಿಸುವ ಮೂಲಕ, ನಮ್ಮ ಸೃಜನಶೀಲ ಸಾಹಿತ್ಯದಲ್ಲಿ ವಿದೇಶೀ ಪ್ರಭಾವವಿಲ್ಲದೆ ವಿಶ್ವೀಯ ಗುಣಗಳನ್ನು ಹೊಂದಿರಲು ಸಾಧ್ಯವಿಲ್ಲವೆಂಬ ಅರ್ಥ ಬರುವುದನ್ನು ಒಪ್ಪಲಾದೀತೇ? ಹಾಗಿದ್ದ ಮೇಲೆ ಅದಕ್ಕೆ ಸೂಚಿಸಲ್ಪಟ್ಟ ನಾಲ್ಕೂ ಮಾರ್ಗಗಳು ಅದೇ ಪ್ರಭಾವವನ್ನು ಒಳಗೊಂಡಂತಹವೇ? ಎಂಬ ಮೂಲ ಅನುಮಾನಗಳನ್ನು ಅವುಗಳನ್ನು ಉದಾಹರಿಸುವ ಮುನ್ನವೇ ಲೇಖಕರು ಪರಿಹರಿಸಬೇಕಿತ್ತು. ಕಂಬಾರರ ಸೃಜನಶೀಲತೆಯ ಮೂಲವನ್ನು ಗುರುತಿಸುವಾಗ ನೇರವಾಗಿ 'ನೆಲ'ದ ಮೂಲದ ಪ್ರಸ್ತಾಪ ವಾಗಿದೆ. ಅಂದರೆ ಮೊದಲೇ ಹೇಳಿದ ವಿಶ್ವೀಯಕ ಮಾನದಂಡಕ್ಕೆ ಒಳಪಡದ 'ದೇಸಿ'ಯೆನ್ನಬಹುದೇ? 'ನಾನೊಬ್ಬ ಜಾನಪದ ಮನುಷ್ಯ' ಎಂದು ತಮ್ಮನ್ನು ಕಂಬಾರರು ಕರೆದುಕೊಂಡಿರುವಲ್ಲಿ ಅವರ ನಾಟಕಗಳ ಪರಿಕಲ್ಪನೆಗಳನ್ನು ಶಾಸ್ತ್ರಧರ್ಮದ ಪರಂಪರೆಗೆ ಸಮೀಕರಿಸುವ ತುರ್ತಾದರೂ ಎಷ್ಟು ಸರಿ? ಅಥವಾ ಅವೆರಡೂ ಒಂದೇ ಎಂಬ ಅಭಿಪ್ರಾಯಕ್ಕೆ ಲೇಖಕರು ನಿಷ್ಠರಾಗಿರುವರೇ? ಕಂಬಾರರ ನಾಟಕಗಳಲ್ಲಿ ಪ್ರತಿಮೆಗಳ ಬಳಕೆಯೆಲ್ಲವೂ ನೈಸರ್ಗಿಕ ಯಾ ಪ್ರಾಕೃತಿಕವೆನ್ನುವ ಉದಾರತೆಯನ್ನು, ಪಾತ್ರಗಳ ಹಾಗೂ ಸಾಧನ ಸಲಕರಣೆಗಳ ವಿಷಯದಲ್ಲಿ ತೋರಿದಂತಿಲ್ಲ. ಅವನ್ನು ಕೊಲೆಯ ಕಲೆಯ ಹಾಗೂ ಕ್ರೌರ್ಯದ ಸಂಕೇತಗಳೆಂದು ಬಣ್ಣಿಸಲಾಗಿದೆ. ಒಟ್ಟಾರೆ ಹಾಗೆ ಹೇಳಲು ಬರುವುದೇ? ಉದಾ : ಮುದುಕಿ, ಕುಡುಗೋಲು ಇತ್ಯಾದಿ. ಮುದುಕಿಯನ್ನು ಅಜ್ಜಿಯೆನ್ನುತ್ತೇವೆ. ಮಾನವೀಯ ಮೌಲ್ಯಗಳ ಪ್ರವೇಶ ಅವಳು ಎಂಬುದು ಲೋಕಮಾನ್ಯ. ಹಾಗೆಯೇ ಕುಡುಗೋಲು ರೈತನ ಸಲಕರಣೆ ಕೂಡ. ಬೆಳೆಯ ಕಟಾವಿನ ಅತ್ಯುಪಯುಕ್ತ ಸಾಧನ. ಹೀಗೆ ವರ್ಗೀಕರಣದಲ್ಲೇ ತಪ್ಪು ಮಾಡಿದಂತಿಲ್ಲವೇ?

ii) **'ಪ್ರಾಚೀನ ಕನ್ನಡ ಸಾಹಿತ್ಯವು ಅನುವಾದವೇ'**

ಡಾ. ಮಾಧವ ಪೆರಾಜೆಯವರು ಹಾಗೂ ಡಾ. ಎಂ. ಉಷಾರವರ ನಡುವಿನ professional jealousyಗೆ ಕಾರಣಗಳೇನಿದ್ದರೂ ಅದು ಸಾಹಿತ್ಯ ಪತ್ರಿಕೆಗಳಲ್ಲಿ ಈ ರೀತಿ ಜಿದ್ದಿಗೆ ಬಿದ್ದು ಬರೆದಂತೆ ಬಯಲಾಗುವ ಅವಶ್ಯಕತೆಯಿತ್ತೇ? ಡಾ. ಪೆರಾಜೆಯವರ ವಾದದಲ್ಲಿ ಎಷ್ಟೇ

ಖಚಿತಾಂಶಗಳಿವೆ ಎಂದಾದರೂ ಅವು ಪೂರ್ಣಶಃ ಅಕಾಡೆಮಿಕ್ ಆದಂತಹವು. ಸಾಹಿತ್ಯ ಪತ್ರಿಕೆಗಳಿಗೆ ಇತಿಮಿತಿಗಳು, ನೀತಿನಿಯಮಗಳಿದ್ದು, ಪರಸ್ಪರ ದೋಷಾರೋಪಕ್ಕೆ, ದೂಷಣೆಗೆ ಅವುಗಳನ್ನು ಬಳಸಿಕೊಳುವ ಯತ್ನ ಮಾಡಬಾರದು. ಸಂವಾದದ ಅರ್ಥವ್ಯಾಪ್ತಿಯಿಂದಾಚಿನ ಜಗಳದಂತಿರಲು ಅವಕಾಶವಿರಬಾರದಿತ್ತು.

iii) 'ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಕೃಷಿನಿಷ್ಠೆ'
ಅತ್ಯಂತ ಶ್ರದ್ಧೆಯಿಂದ ಶ್ರೀಮತಿ ರೇಖಾ ವಿ. ಬನ್ನಾಡಿಯವರು ಈ ಲೇಖನವನ್ನು ಓದುಗರಿಗೆ ಉಣಬಡಿಸಿದ್ದಾರೆ. ಅವರಿಗೆ ಧನ್ಯವಾದಗಳು.

iv) 'ಸಂಪಾದಕೀಯಕ್ಕೆ ಹೊಸ ಆಯಾಮ ನೀಡಿದ ಗುಲ್ವಾಡಿ' – ಒಂದು ವಿಶ್ಲೇಷಣೆ
ಮೌಲ್ಯ ಜೀವನ್‌ರವರ ಸುದೀರ್ಘವಾದ ಈ ಲೇಖನ ಶ್ರೀ ಸಂತೋಷಕುಮಾರ ಗುಲ್ವಾಡಿಯವರ ಸಂಪಾದಕತ್ವದ ನಾನಾ ಮಜಲುಗಳನ್ನು ಪರಿಚಯಿಸಿದೆ. ಅದಕ್ಕಾಗಿ ಅವರನ್ನು ಅಭಿನಂದಿಸಲೇಬೇಕು. ನನ್ನ ನೆನಪಿಗೆ ಬಂದ ಎರಡು ಅಂಶಗಳು :
1. 'ತರಂಗ'ದ ಆರಂಭದ ಸಂಚಿಕೆಗಳಿಂದಲೇ ಶ್ರೀ ಗುಲ್ವಾಡಿಯವರು ಓದುಗರೊಂದಿಗೆ ಒಂದು ನಿರ್ದಿಷ್ಟ ವಿಷಯ ಕುರಿತು ಸಂವಾದ ಬೆಳೆಸಿಕೊಂಡಿದ್ದರು. ಅದು ಈ ಪ್ರಕ್ರಿಯೆಯಲ್ಲಿ ಜ್ಯೋತಿಷ್ಯದ ಅಂಕಣ ಬೇಕೇ? ಬೇಡವೇ? ಎಂಬುದು.
2. ಅವರು ಒಂದು ಸಂಚಿಕೆಯಲ್ಲಿ ಆಗ್ರಹಪೂರ್ವಕವಾಗಿ ಬಯಸಿದ್ದು ರಾಜ್ಯದ ಯಾವುದೇ ನಗರ, ಪಟ್ಟಣ ಅಥವಾ ಗ್ರಾಮದ ನಕ್ಷೆ (map) ಆಯಾ ಪ್ರದೇಶದ ಜನರಿಗೆ ಲಭಿಸುವಂತಿರ ಬೇಕು. ಯಾವುದೇ ಸ್ಥಳದ ಭೂಪಟದೊಂದಿಗೆ ಅದರ ಐತಿಹ್ಯ, ಅಲ್ಲಿ ಹರಿಯುವ ನದಿ, ಉಪನದಿಗಳು, ಅಲ್ಲಿರುವ ಗುಡ್ಡಬೆಟ್ಟಗಳು, ಮಳೆಗಾಲದ ಅವಧಿ, ತಾಪಮಾನ, ಸಮುದ್ರ ಮಟ್ಟದಿಂದ ಆ ಸ್ಥಳ ಇರುವ ಎತ್ತರ, ಸುತ್ತಮುತ್ತಲ ಕಾಡುಗಳು, ಜಲಪಾತಗಳು ಇತ್ಯಾದಿ ವಿವರಗಳು ನಮೂದಿಸಲ್ಪಟ್ಟಿರಬೇಕು ಎಂಬ ವಿಚಾರವನ್ನು ಪ್ರಮುಖವಾಗಿ ಪ್ರಸ್ತಾಪಿಸಿದ್ದುದು.

v) 'ಕನ್ನಡಕ್ಕೆ ಕತ್ತರಿ ಪ್ರಯೋಗ'
ಆಧುನಿಕ ಭಾಷಾವಿಜ್ಞಾನಿಗಳೆಂದು ಬೀಗುವ ವಿದ್ವಾಂಸರು, ಕನ್ನಡದ ಅಕ್ಷರಮಾಲೆಯನ್ನೇ, ಕಾಗುಣಿತ ಕ್ರಮವನ್ನೇ ಧ್ವಂಸ ಮಾಡುವ ಆಕ್ರಮಣಕಾರರಂತೆ ವರ್ತಿಸುವುದು ವಿಹಿತವಲ್ಲ. ಶ್ರೀಮತಿ ಸರಸ್ವತಿ ಬಡೆಕ್ಕಿಲರವರು ಕೇವಲ ವಿದ್ವಾಂಸರಾಗಿಯಲ್ಲದೆ, ಕನ್ನಡಿಗರೆಲ್ಲರ ಪ್ರತಿನಿಧಿ ಯಾಗಿ ಕನ್ನಡಕ್ಕೆ ಕತ್ತರಿ ಪ್ರಯೋಗಗಳ ವಿರುದ್ಧ ದನಿ ಎತ್ತಿರುವುದು ಸ್ತುತ್ಯರ್ಹ. ಡಾ. ಡಿ.ಎನ್. ಶಂಕರ ಭಟ್ಟರು ಹಾಗೂ ಮತ್ಯಾರೇ ಭಾಷಾವಿಜ್ಞಾನಿಗಳು ತಮ್ಮ ನಿಲುವಿನಿಂದ ಹಿಂದೆ ಸರಿಯುವುದು ಉಚಿತ. ಅವರ ವಾದವೇ ಮುಂದೆ ಮಾಡಿದರೆ, ಕನ್ನಡಕ್ಕೆ ಶಾಸ್ತ್ರೀಯ ಭಾಷೆ, ಸಮ್ಮಾನ ದೊರಕಿಯೂ ಪ್ರಯೋಜನ ಕಾಣದು.

**ಎಂ.ಎಸ್. ವೆಂಕಟರಾಮಯ್ಯ**
ಬೆಂಗಳೂರು




## ಅತಿಥಿ ನಮ್ಮಮ್ಮ

**ಬೋಳ ಚಿತ್ತರಂಜನದಾಸ ಶೆಟ್ಟಿ**

**ನಾಗಶಕ್ತಿ ಪ್ರಕಾಶನ, ಮಂಗಳೂರು**

**ಬೆಲೆ ರೂ. 200**

ಕೋಟಿ ಚೆನ್ನಯರ ಅಂತ್ರಗೀತೆ ಎಂಬ ಉಪಶೀರ್ಷಿಕೆ ಇರುವ ಈ ಕೃತಿಯಲ್ಲಿ ತುಳುನಾಡ ಕೇದಗೆ ದೇವಿ – ಸಿರಿದೇವಿಯರ ಕತೆಗಳಿವೆ. ಇದು ಮಾವ–ಅಳಿಯ ಕಟ್ಟಳೆಯ ಸ್ವರೂಪವನ್ನು ಹೇಳುವ ಪಾಡ್ದನವೂ ಹೌದು. ತುಳುನಾಡಿನ ನೆಲ, ಸಂಸ್ಕೃತಿ, ಭಾಷೆಗಳ ಬಗ್ಗೆ ಅಪಾರ ಅಭಿಮಾನ ಇಟ್ಟುಕೊಂಡ ಬೋಳರು ತಮ್ಮ ಭಕ್ತಿಶ್ರದ್ಧೆಗಳನ್ನು ಕನ್ನಡದಲ್ಲಿ ಹೇಳಿಕೊಂಡ ಕೃತಿ ಇದು. ಕನ್ನಡ ಪಾಡ್ದನದ ಹಕ್ಕುಸ್ವಾಮ್ಯ ಇದೀಗ ಬೋಳರದ್ದಾಗಿದೆ.




## ಹತ್ತರೊಡನೊಂದು

**ಕಥಾಸಂಕಲನ**

**ಡಾ. ವಸಂತಕುಮಾರ ಪೆರ್ಲ**

**ಕೌಸ್ತುಭ ಪ್ರಕಾಶನ, ಬೆಂಗಳೂರು**

**ಬೆಲೆ ರೂ. 80**

ಪೆರ್ಲರು ಸುಮಾರು ಮೂವತ್ತು ವರ್ಷಗಳಿಗೂ ಹಿಂದೆ ಬರೆದ ಕಥೆಗಳು ಈಗ 'ಹತ್ತರೊಡನೊಂದು' ಸಂಕಲನದಲ್ಲಿ ಮರುಪ್ರಕಟವಾಗಿವೆ. ಹದಿನಾಲ್ಕು ಕತೆಗಳಿರುವ ಈ ಸಂಕಲನದ ಬಗ್ಗೆ ''ಪೆರ್ಲರ ಲೇಖನಿ ಎಲ್ಲ ಶೋಷಣೆಯ ವಿರುದ್ಧ ಮನುಷ್ಯಾಂತಃಕರಣದಿಂದ ತುಡಿಯುತ್ತದೆ ಮತ್ತು ಮನುಷ್ಯನ ಅಸಹಾಯಕತೆಯನ್ನು ಶಕ್ತಿಪೂರ್ಣವಾಗಿ ಧ್ವನಿಸುತ್ತದೆ'' ಎಂದು ಮೊಗಸಾಲೆಯವರು ಹೇಳಿದ್ದ ಮಾತು ನಿಜ.

## ಕಂಪ್ಯೂಟರ್ ಕನ್ನಡ – ಕೆ.ಪಿ. ರಾವ್

**ಟಿ.ಜಿ. ಶ್ರೀನಿಧಿ**

**ಉದಯಭಾನು ಕಲಾಸಂಘ, ಬೆಂಗಳೂರು**

**ಬೆಲೆ ರೂ. 45**

ಇಂಗ್ಲಿಷ್ ನಾಡಿನಿಂದ ಬಂದ ಸರ್ವಶಕ್ತ ಗಣಕನಿಗೆ ಕನ್ನಡ ಕಲಿಸಿದ ಮೇಷ್ಟರ ಕತೆ ಇದು. ಮುದ್ರಣ ತಂತ್ರಜ್ಞಾನದಲ್ಲಿ ಮೊದಲೇ ಪಳಗಿದ್ದ ಕೆ.ಪಿ. ರಾಯರು ಇಂಗ್ಲಿಷ್ ಕೀಲಿಮಣೆಯಲ್ಲಿರುವ ಅಕ್ಷರಗಳ ಮೂಲಕವೇ ಕನ್ನಡ ಅಕ್ಷರಗಳನ್ನು ಮೂಡಿಸಿದ ಅಕ್ಷರ ಕುತೂಹಲಿ. ಕೇಳುವ ಮಾತನ್ನು ನೋಡುವ ಅಕ್ಷರವಾಗಿಸಿದ ಮನುಷ್ಯನ ಮಹಾಶೋಧದ ಬಗ್ಗೆ ಇನ್ನೂ ಕುತೂಹಲವಿಟ್ಟುಕೊಂಡಿರುವ ಕೆ.ಪಿ. ರಾಯರ ಜ್ಞಾನ, ವಿನಯ, ಶ್ರದ್ಧೆಗಳನ್ನು ಈ ಪುಸ್ತಕವು ಪರಿಚಯಿಸುತ್ತದೆ.




## ಎ ಬ್ರೀಫ್ ಹಿಸ್ಟ್ರಿ ಆಫ್ ಟೈಮ್ – ಒಂದು ಕೈಪಿಡಿ

**ಡಾ. ಮಾಧವ ಪೆರಾಜೆ**

**ಪಲ್ಲವ ಪ್ರಕಾಶನ, ಚನ್ನಪಟ್ಟಣ**

**ಬೆಲೆ ರೂ. 200**

ಸ್ಟೀಫನ್ ಹಾಕಿಂಗ್ ಭೌತಶಾಸ್ತ್ರದ ಸಿದ್ಧಾಂತಿಯಾಗಿ ಜಗತ್ಪ್ರಸಿದ್ಧರು. ಅವರ ಎ ಬ್ರೀಫ್ ಹಿಸ್ಟ್ರಿ ಆಫ್ ಟೈಮ್ ಎಂಬ ಇಂಗ್ಲಿಷ್ ಕೃತಿ ಮಾರಾಟದಲ್ಲೂ ದಾಖಲೆ ನಿರ್ಮಿಸಿತ್ತು. ಅದರ ಸಾರವನ್ನು ಕನ್ನಡದಲ್ಲಿ ಕೈಪಿಡಿಯಾಗಿ ಪೆರಾಜೆಯವರು ತಂದಿದ್ದಾರೆ. ವಿಶ್ವಸೃಷ್ಟಿಯ ಬಗ್ಗೆ, ವಿಕಾಸದ ಬಗ್ಗೆ, ಆಕಾಶಕಾಯಗಳ ಬಗ್ಗೆ, ಕುತೂಹಲಿಗಳಾದವರಿಗೆ ಇದು ಉಪಯುಕ್ತ ಕೈಪಿಡಿಯೇ ಹೌದು. ಅನಂತ ಆಕಾಶದ ಬಗೆಗಿನ ಇಂಥ ಪುಸ್ತಕಗಳು, ಈ ಸೃಷ್ಟಿಯಲ್ಲಿ ಮಾನವನು ಎಷ್ಟು ಸಣ್ಣವನು ಎಂದು ನೆನಪಿಸುತ್ತಲೇ ಅವನ ತರ್ಕ ಸಾಮರ್ಥ್ಯದ ಬಗ್ಗೆ ಕೌತುಕವನ್ನು ಹೆಚ್ಚಿಸುತ್ತವೆ.






## ಮಲಯಾಳ ಕವಿತೆಗಳು

**ಕನ್ನಡಕ್ಕೆ : ಕೆ.ಕೆ. ನಾಯರ್**
**ಕಿಟಕಿ ಪ್ರಕಾಶನ, ಮೈಸೂರು**
**ಬೆಲೆ ರೂ. 800**

ಮಲಯಾಳದ ಹಲವಾರು ಉತ್ತಮ ಕೃತಿಗಳು ಕನ್ನಡದ ಓದುಗರಿಗೆ ದಕ್ಕುವಂತೆ ಮಾಡಿದ ಕೆ.ಕೆ. ನಾಯರ್ ಅನುವಾದಕರಾಗಿ ಪ್ರಸಿದ್ಧರು. ಕುಮಾರನ್ ಆಶಾನ್, ವಳ್ಳತ್ತೋಳ್, ಜಿ. ಶಂಕರ ಕುರುಪ್ ಮೊದಲಾದ ಪ್ರಸಿದ್ಧ ಮಲಯಾಳ ಕವಿಗಳ ಪದ್ಯಗಳು ಕನ್ನಡದ್ದೇ ಪದ್ಯಗಳಾಗಿ ಇಲ್ಲಿ ಮೂಡಿಬಂದಿವೆ. ಚೌಪದಿಯ ಪ್ರಕಾರವು ನಾಯರ್ ಅವರಿಗೆ ಚೆನ್ನಾಗಿ ಸಿದ್ಧಿಸಿದೆ. ಮೂಲ ಮಲಯಾಳ ಕವಿಗಳ ಬಗ್ಗೆ ನೀಡಿರುವ ಟಿಪ್ಪಣಿಯೂ ಉಪಯುಕ್ತ.

ರೇಸಿನ ಕುದುರೆಗೆ
ಬೀಸು ಓಟವೇ ಆಸ್ತಿ
ಕಾಸುಫಲ ನಿರೀಕ್ಷೆ ಅದರದಲ್ಲ
ತಾಸು ತ್ರಾಸಿನ ಮನುಜ ಬಾಳ್ವೆಯು
ಕಾಸಿಗಾಗಿಯೆ ರೇಸು ಓಟವು
ಲೇಸು ಫಲವೇಸು ಕಾದರೂ ದಕ್ಕದಲ್ಲಾ

## ನವನಿಧಿ

**1. ಮನದ ಕಜ್ಜಳ**
ಲೇ: ಟಿ.ಎ.ಎನ್. ಖಂಡಿಗೆ
ಪ್ರ: ಆಕೃತಿ ಆಶಯ ಪಬ್ಲಿಕೇಶನ್ಸ್, ಮಂಗಳೂರು
ಬೆಲೆ – ರೂ. 100

**2. ಹೊಳೆಯೆಂಬ ಹೊನ್ನ ಹರಿವು**
ಲೇ: ಜಯಪ್ರಕಾಶ್ ಶೆಟ್ಟಿ ಹೆಚ್.
ಪ್ರ: ಜ್ಯೋತಿ ಪ್ರಕಾಶನ, ಮೈಸೂರು
ಬೆಲೆ – ರೂ. 120

**3. ಶಬ್ದದ ಲಜ್ಜೆ ನೋಡಾ**
ಲೇ: ಜಯಪ್ರಕಾಶ್ ಶೆಟ್ಟಿ ಹೆಚ್.
ಪ್ರ: ಜ್ಯೋತಿ ಪ್ರಕಾಶನ, ಮೈಸೂರು
ಬೆಲೆ – ರೂ. 150

**4. ನನ್ನ ನೆರಳಿನ ಚಿತ್ರ**
ಲೇ: ರಘು ಇಡ್ಕಿದು
ಪ್ರ: ಅರೆಹೊಳೆ ಪ್ರತಿಷ್ಠಾನ, ಮಂಗಳೂರು
ಬೆಲೆ – ರೂ. 75

**5. ಮರೆವು**
ಲೇ: ಶ್ರೀನಿವಾಸ ಕುಂಡಂತಾಯ
ಪ್ರ: ಕೌಸ್ತುಭ ಪ್ರಕಾಶನ, ಬೆಂಗಳೂರು
ಬೆಲೆ – ರೂ. 85

**6. ಮಹಾಯುದ್ಧಕ್ಕೆ ಮುನ್ನ**
ಸಂ: ಟಿ. ದೇವದಾಸ್
ಪ್ರ: ಜನನಿ ಪ್ರಕಾಶನ, ಸಂಗಮೇಶ್ವರಪೇಟೆ
ಬೆಲೆ – ರೂ. 150

**7. ಪ್ರತಿಸ್ಪಂದ**
ಲೇ: ಗ.ನಾ. ಭಟ್ಟ
ಪ್ರ: ಮುದ್ದುಶ್ರೀ ಗ್ರಂಥಮಾಲೆ, ಬೆಂಗಳೂರು
ಬೆಲೆ – ರೂ. 125

**8. ಮಗು ಮನೆಯಿಂದ ಶಾಲೆಗೆ**
ಲೇ: ಎನ್. ಸುಕುಮಾರ ಗೌಡ
ಪ್ರ: ಶಿಕ್ಷಣ ಅಧ್ಯಯನ ಕೇಂದ್ರ, ಪುತ್ತೂರು
ಬೆಲೆ – ರೂ. 75

**9. ಕನ್ನಡದ ಮೂಲಕ ಇಂಗ್ಲಿಷ್**
ಲೇ: ಡಾ. ಬಿ. ಜನಾರ್ದನ ಭಟ್
ಪ್ರ: ಸೀತಾ ಬುಕ್ ಸೆಂಟರ್, ಉಡುಪಿ
ಬೆಲೆ – ರೂ. 80

**10. ಹಾಸ್ಯ-ಓ-ಹಾಸ್ಯ**
ಲೇ: ಶ್ರೀನಿವಾಸ ಕುಂಡಂತಾಯ
ಪ್ರ: ಶ್ರೀನಿವಾಸ ಪುಸ್ತಕ ಪ್ರಕಾಶನ, ಬೆಂಗಳೂರು
ಬೆಲೆ – ರೂ. 65

**11. ಪ್ರೇಮಿಸುವುದು ಎಂಬ ಹಕ್ಕು**
ಮೂಲ: ಚೆರಿಯನ್ ಚೆರಿಯನ್ ಅನು: ಕೆ.ಕೆ. ನಾಯರ್
ಪ್ರ: ಇಂದಿರಾ ಪ್ರಕಾಶನ, ಬೆಂಗಳೂರು
ಬೆಲೆ – ರೂ. 75

**12. ಯಕ್ಷಸ್ತ್ರೀ**
ಲೇ : ಡಾ. ನಾಗವೇಣಿ ಎನ್.
ಪ್ರ: ಯಕ್ಷಗಾನ ಅಧ್ಯಯನ ಕೇಂದ್ರ, ಮಂಗಳೂರು ವಿ.ವಿ.
ಬೆಲೆ – ರೂ. 180

**13. ಸತ್ಯಮಂಡಲ**
ಲೇ: ಡಾ. ಎನ್. ಕರಿಬಸಪ್ಪ
ಪ್ರ: ಕೋಕಿಲಾ ಪ್ರಕಾಶನ, ಚಿತ್ರದುರ್ಗ
ಬೆಲೆ – ರೂ. 48

**14. ಕವಿಗಳು ಕಂಡ ತುಳುನಾಡು**
ಸಂ.: ಡಾ. ವಸಂತಕುಮಾರ ಪೆರ್ಲ
ಪ್ರ: ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು
ಬೆಲೆ – ರೂ. 100

**15. ಮುದ್ದಣನ ರಾಮಾಶ್ವಮೇಧ**
ಸಂ.: ಗಾಯತ್ರಿ ನಾವಡ
ಪ್ರ: ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
ಬೆಲೆ – ರೂ. 160

**16. ಸಂಪಾದಕರಿಗೆ ಪತ್ರಗಳು**
ಲೇ : ಎಂ.ವಿ. ಭಟ್ (ಶ್ರೀ ಮಿತ್ತೂರು)
ಪ್ರ: ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ
ಬೆಲೆ – ರೂ. 400

**17. ಧಮ್ಮ ಪಥಂ**
ಮೂಲ : ಡಾ. ಜಿ.ಆರ್. ಕುರ್ಮೆ
ಕನ್ನಡಕ್ಕೆ : ಗುರುಮೂರ್ತಿ ಪೆಂಡಕೂರು
ಪ್ರ: ಅಮ್ಮ ಪ್ರಕಾಶನ, ಹಗರಿಬೊಮ್ಮನಹಳ್ಳಿ
ಬೆಲೆ – ರೂ. 75

**18. ನಾನು ಮತ್ತು ಗಣೇಶ**
ಲೇ : ಡಾ. ವಸಂತಕುಮಾರ ಪೆರ್ಲ
ಪ್ರ: ಶ್ರೀನಿವಾಸ ಪುಸ್ತಕ ಪ್ರಕಾಶನ, ಬೆಂಗಳೂರು
ಬೆಲೆ – ರೂ. 75

**19. ಒಡ್ಡೋಲಗ**
ಲೇ : ಡಾ. ವಸಂತಕುಮಾರ ಪೆರ್ಲ
ಪ್ರ: ಶ್ರೀನಿವಾಸ ಪುಸ್ತಕ ಪ್ರಕಾಶನ, ಬೆಂಗಳೂರು
ಬೆಲೆ – ರೂ. 40

**20. ಸ್ವಾಭಿಮಾನ ಗಳಿಕೆ (ಧರ್ಮಪಾಲ್ ವಿಚಾರಗಳ ಬಗ್ಗೆ)**
ಸಂ. : ಡಾ. ಡಿ.ವಿ. ಪರಶಿವಮೂರ್ತಿ
ಪ್ರ: ಪ್ರಸಾರಾಂಗ, ತುಮಕೂರು ವಿಶ್ವವಿದ್ಯಾನಿಲಯ
ಬೆಲೆ – ರೂ. 100

# ಸಾಹಿತ್ಯ ಭಂಡಾರ

ಜಂಗಮ ಮೇಸ್ತ್ರಿ ಗಲ್ಲಿ
ಬಳೇಪೇಟೆ, ಬೆಂಗಳೂರು

**ಕತೆ, ಕಾದಂಬರಿ**

| | | | |
|---|---|---|---|
| ಕವಲು | (ಸಾದಾ 210/-) | ಎಸ್.ಎಲ್. ಭೈರಪ್ಪ | 285 |
| ಆವರಣ | (ಸಾದಾ 190/-) | ,, | 265 |
| ಭೀಮಕಾಯ | | ,, | 120 |
| ಮಂದ್ರ | (ಸಾದಾ 410/-) | ,, | 485 |
| ಸಾರ್ಥ | (ಸಾದಾ 195/-) | ,, | 270 |
| ತಂತು | (ಸಾದಾ 600/-) | ,, | 675 |
| ಅಂಚು | (ಸಾದಾ 235/-) | ,, | 310 |
| ಸಾಕ್ಷಿ | (ಸಾದಾ 215/-) | ,, | 290 |
| ನೆಲೆ | | ,, | 130 |
| ಪರ್ವ | (ಸಾದಾ 425/-) | ,, | 500 |
| ಅನ್ವೇಷಣೆ | | ,, | 140 |
| ದಾಟು | (ಸಾದಾ 275/-) | ,, | 350 |
| ಗ್ರಹಣ | | ,, | 145 |
| ನಿರಾಕರಣ | | ,, | 115 |
| ಗೃಹಭಂಗ | (ಸಾದಾ 245/-) | ,, | 320 |
| ಮತದಾನ | | ,, | 120 |
| ತಬ್ಬಲಿಯು ನೀನಾದೆ ಮಗನೆ | (ಸಾದಾ 205/-) | ,, | 280 |
| ನಾಯಿ-ನೆರಳು | | ,, | 115 |
| ಜಲಪಾತ | | ,, | 120 |
| ವಂಶವೃಕ್ಷ | (ಸಾದಾ 235/-) | ,, | 310 |
| ದೂರ ಸರಿದರು | | ,, | 170 |
| ಧರ್ಮಶ್ರೀ | | ,, | 180 |
| ಪುರುಷೋತ್ತಮ | | ಯಶವಂತ ಚಿತ್ತಾಲ | 225 |
| ಶಿಕಾರಿ | | ,, | 155 |
| ಛೇದ | | ,, | 70 |
| ಕೇಂದ್ರ ವೃತ್ತಾಂತ | | ,, | 135 |
| ಮೂರು ದಾರಿಗಳು | | ,, | 150 |
| ಮಲೆನಾಡ ಮಂದಾರ | | ಎಚ್.ಎನ್. ಸುಬ್ರಹ್ಮಣ್ಯ | 75 |
| ಕರಿಸಿರಿಯಾನ | | ಕೆ.ಎನ್. ಗಣೇಶಯ್ಯ | 165 |

## ಸಾಹಿತ್ಯ ಪ್ರಕಾಶನ, ಕೊಪ್ಪೀಕರ ರಸ್ತೆ, ಹುಬ್ಬಳ್ಳಿ

## ನಿಮ್ಮ ಬಹುಮುಖ ಆಸಕ್ತಿಗಾಗಿ, ವ್ಯಕ್ತಿತ್ವ ವಿಕಸನಕ್ಕಾಗಿ ಈ ಪುಸ್ತಕಗಳನ್ನು ಓದಿ :

**ಪಾಟೀಲ ಪುಟ್ಟಪ್ಪ**
ಕರ್ನಾಟಕದ ಸಂಗೀತ ಕಲಾರತ್ನರು
ಕರ್ನಾಟಕದ ಕವಿ, ಲೇಖಕರು
ಸೋತೆ ಎನಬೇಡಿ ಸೋಲಿನಲ್ಲೇ ಗೆಲುವು ಇದೆ
ಇಲ್ಲಿ ಬೆಳಕಿದೆ
ಬದುಕಲು ಬೇಕು ಬದುಕುವ ಈ ಮಾತು
ಅನುಭವ ಇರುವಲ್ಲಿ ಅಮೃತತ್ವ ಇದೆ
ಕನ್ನಡದ ಕಂಪು
ಅವರ ಬದುಕು ನಮಗೆ ಬೆಳಕು
ಪುಸ್ತಕ ಸಂಸ್ಕೃತಿ
ಚೆಲುವ ಕನ್ನಡನಾಡು
ಸುವರ್ಣ ಕರ್ನಾಟಕ
ಸರ್ ಸಾಹೇಬರು
ನೀವು ನಗಬೇಕು
ನೆನಪಿನ ಬುಟ್ಟಿ
ನಮ್ಮ ದೇಶ ನಮ್ಮ ಜನ
ತಾಯಿಯೇ ಮೊದಲ ಗುರು
(ಇಂದುಮತಿ ಪುಟ್ಟಪ್ಪ)
ಅನುಭವಾಮೃತದ ಅರವಟ್ಟಿಗೆ
(ಇಂದುಮತಿ ಪುಟ್ಟಪ್ಪ)

**ವಿಶ್ವೇಶ್ವರ ಭಟ್**
ನೂರೆಂಟು ಮಾತು II
ಜನಗಳಮನ I
ಬಾನಯಾನ
ನಾನೇಕೆ ಮಂತ್ರಿಯತ್ತ ಬೂಟನ್ನೆಸೆದೆ?
ಸ್ಫೂರ್ತಿ ಸೆಲೆ
ಧನ ದೇವೋಭವ
ಸುದ್ದಿಮನೆ ಕತೆ – 2
ನೂರೆಂಟು ಮಾತು II
ಬಾಲ್ಕನಿಯಿಂದ – 1, 2

**ಡಾ. ಬಿ.ವಿ. ಪಟ್ಟಾಭಿರಾಮ್**
ಮನಸ್ಸಿನ ಭಾಷೆ ಮೈಂಡ್ ಮ್ಯಾಜಿಕ್
ನೀ ನೆಮ್ಮದಿಯಿಂದಿರು, ಓ ಮನವೇ
ಸೊಗಸಾದ ಮಾತುಗಾರರಾಗಬೇಕೆ?
ಆತ್ಮವಿಶ್ವಾಸ
ಪಾಸಿಟಿವ್ ಥಿಂಕಿಂಗ್
ಸೆಲ್ಫ್ ಹಿಪ್ನಾಟಿಸಂ – ರಿಲ್ಯಾಕ್ಸೇಷನ್
ಯಶಸ್ಸಿನ ಮೊದಲ ಸೋಪಾನ ನಾಯಕತ್ವದ ಲಕ್ಷಣ
ಉತ್ತಮ ತಂದೆ + ಉತ್ತಮ ಗುರುಗಳು = ಅತ್ಯುತ್ತಮ ವಿದ್ಯಾರ್ಥಿ

**ಪ್ರತಾಪ್‌ಸಿಂಹ**
ಬೆತ್ತಲೆ ಜಗತ್ತು I-VI
ನರೇಂದ್ರ ಮೋದಿ : ಯಾರೂ ತುಳಿಯದ ಹಾದಿ
ಮೈನಿಂಗ್ ಮಾಫಿಯಾ – ಇವರಾರು ಗೊತ್ತೇನು?
ಮಹಮದಾಲಿ ಜಿನ್ನಾ

**ಯಂಡಮೂರಿ ವೀರೇಂದ್ರನಾಥ್**
ತಪ್ಪು ಮಾಡೋಣ ಬನ್ನಿ
ಯಶಸ್ಸಿನ ರಹಸ್ಯಗಳು : ಪಾಲಕರಿಗೆ ಗೊತ್ತಿಲ್ಲ; ಶಿಕ್ಷಕರು ಹೇಳಲ್ಲ!
ನೂರು ಮಾತು ಕೇಳಿ; ಒಂದು ರ್‍ಯಾಂಕ್ ಗಳಿಸಿ
ವ್ಯಕ್ತಿತ್ವ ವಿಕಾಸ ಮತ್ತು ಸಂವಹನ ಕೌಶಲ್ಯಗಳು
Personality Development & Communication Skills
ಯಶಸ್ಸಿನತ್ತ ಪಯಣ
ನಿಮ್ಮನ್ನು ನೀವು ಗೆಲ್ಲಬಲ್ಲಿರಿ
ಓ ಹೆಣ್ಣೇ ನೀನೆಷ್ಟು ಒಳ್ಳೆಯವಳು!
ನಿಮ್ಮ ಮಕ್ಕಳು ನಮ್ಮನ್ನು ಪ್ರೀತಿಸುವರೇ?

# Form IV

## Statement about ownership and other particulars about CHINTHANA BAYALU (Quarterly)

| | | | |
|---|---|---|---|
| 1. | Place of Publication | : | Bantwal, Dakshina Kannada |
| 2. | Periodicity of its publication | : | Quarterly |
| 3. | Printers Name | : | Reshma G. Bhat |
| | Nationality | : | Indian |
| | Address | : | No. 15-109, Modankapu<br>Bantwal Taluk, D.K. - 574 219 |
| 4. | Publishers Name | : | Reshma G. Bhat |
| | Nationality | : | Indian |
| | Address | : | No. 15-109, Modankapu<br>Bantwal Taluk, D.K. - 574 219 |
| 5. | Editors Name | : | Reshma G. Bhat |
| | Nationality | : | Indian |
| | Address | : | No. 15-109, Modankapu<br>Bantwal Taluk, D.K. - 574 219 |
| 6. | Names and address of individuals who own the newspaper and partners or sharesholders holding more than one percent of the total capital | } | Reshma G. Bhat<br>No. 15-109, Modankapu,<br>Bantwala Taluk<br>D.K. - 574 219 |

I, Reshma G. Bhat, hereby declare that the particulars given above are true to the best of my knowledge and belief.

Date: 30 June 2013

**Reshma G. Bhat**
(Publisher)

★ ಚಿಂತನ ಬಯಲು ತ್ರೈಮಾಸಿಕ ಪತ್ರಿಕೆಯನ್ನು ವೃತ್ತಿಪರವಾಗಿ ನಡೆಸಿಕೊಂಡು ಹೋಗಬೇಕೆಂಬುದು ನಮ್ಮ ಅಪೇಕ್ಷೆ.

★ ಈ ಪತ್ರಿಕೆ ISSN ಮಾನ್ಯತೆ ಪಡೆದಿರುತ್ತದೆ. ISSN 2278–2192

★ ಗಂಭೀರ ಚಿಂತನೆಯನ್ನೊಳಗೊಂಡ ಲೇಖನಗಳು, ವಿಮರ್ಶಾ ಲೇಖನಗಳು ಹಾಗೂ ಸಂಶೋಧನಾತ್ಮಕ ಲೇಖನಗಳನ್ನು ಪ್ರಕಟಣೆಗಾಗಿ ಆಹ್ವಾನಿಸುತ್ತಿದ್ದೇವೆ.

★ ಇಲ್ಲಿ ಪ್ರಕಟವಾಗುವ ಲೇಖನಗಳ ಗುಣಮಟ್ಟವನ್ನು ಉಳಿಸಿ ಬೆಳೆಸುವುದಕ್ಕಾಗಿ, ಲೇಖನಗಳನ್ನು ಆಯಾ ಕ್ಷೇತ್ರಗಳಲ್ಲಿ ಪರಿಣತರಾದವರಿಂದ ಸಮೀಕ್ಷೆ ಮಾಡಿಸಿ, ಅಂದರೆ, ಅನಾಮಿಕ ಸಂಪಾದಕರಿಂದ ಅಭಿಪ್ರಾಯ ಪಡೆದು ಪ್ರಕಟಿಸಲಾಗುವುದು. ತಜ್ಞರ ಸೂಚನೆಗಳನ್ನು ಅನುಸರಿಸಿ, ಅವಶ್ಯವೆನಿಸಿದರೆ, ಸೂಕ್ತ ಪರಿಷ್ಕರಣೆಗಳನ್ನು ಮಾಡುವಂತೆ ಲೇಖಕರನ್ನು ಕೋರಲಾಗುವುದು.

★ ಎಲ್ಲಾ ಪ್ರಕಟಿತ ಲೇಖನಗಳಿಗೆ ಸಂಭಾವನೆ ನೀಡಲಾಗುವುದು.

★ ಲೇಖನಗಳಿಗೆ ಬಹಳ ಕಟ್ಟುನಿಟ್ಟಾದ ಪದಗಳ ಮಿತಿ ಇಲ್ಲ.

★ ಯಾವುದೇ ಆಧಾರಗಳಿಲ್ಲದೆ, ಕೇವಲ ಹೇಳಿಕೆ, ಅಭಿಪ್ರಾಯ ರೂಪದ ಬರಹಗಳನ್ನು ದಯವಿಟ್ಟು ಕಳುಹಿಸುವುದು ಬೇಡ. ಅಗತ್ಯವಿರುವ ಕಡೆಗಳಲ್ಲಿ ಟಿಪ್ಪಣಿ, ಪರಾಮರ್ಶನ ಗ್ರಂಥಗಳು ಇತ್ಯಾದಿ ಮಾಹಿತಿಗಳನ್ನು ಲೇಖನಗಳು ಹೊಂದಿರಲಿ.

★ ಲೇಖನಗಳು ಬೇರೆ ಕಡೆ ಪ್ರಕಟವಾಗಿರಬಾರದು. ಜಾಲಲೇಖ (ಬ್ಲಾಗ್)ಗಳಲ್ಲಿ ಪ್ರಕಟವಾಗಿದ್ದರೆ ವಿವರಗಳನ್ನು ನೀಡಬೇಕು. ಅನುವಾದಿತ ಲೇಖನಗಳಾದರೆ ಮೂಲದ ಬಗ್ಗೆ ಪೂರ್ಣ ವಿವರ ಹಾಗೂ ಮೂಲಲೇಖಕರ ಅನುಮತಿ ಇತ್ಯಾದಿ ತಾಂತ್ರಿಕ ಆವಶ್ಯಕತೆಗಳನ್ನು ಪೂರೈಸಿರಬೇಕು. ಲೇಖನಗಳನ್ನು ಕೈಬರಹ ಅಥವಾ ಬೆರಳಚ್ಚು ಮಾಡಿ ಕಳುಹಿಸುವುದಾದರೆ ಒಂದೇ ಮಗ್ಗುಲಲ್ಲಿ ಇರಲಿ. ಮಿಂಚಂಚೆಯ ಮೂಲಕ ಕಳುಹಿಸಿದರೆ ಉತ್ತಮ. ಟಿಪ್ಪಣಿಗಳು ಲೇಖನದ ಕೊನೆಗೇ ಇರಬೇಕು.

★ ಲೇಖಕರು ತಮ್ಮ ಲೇಖನಗಳ ಪ್ರತಿಗಳನ್ನು ಇಟ್ಟುಕೊಳ್ಳಬೇಕಾಗಿ ಕೋರಿಕೆ.

★ ಲೇಖಕರು ತಮ್ಮ ಪೂರ್ಣ ಅಂಚೆ ವಿಳಾಸ, ಮಿಂಚಂಚೆ ವಿಳಾಸ ಹಾಗೂ ದೂರವಾಣಿ ಸಂಖ್ಯೆಗಳನ್ನು ಕಡ್ಡಾಯವಾಗಿ ನಮೂದಿಸಿರಬೇಕು.

★ ಪುಸ್ತಕ ವಿಮರ್ಶೆ, ಸಮೀಕ್ಷೆಗಾಗಿ ಕೆಲವು ಪುಟಗಳನ್ನು ಮೀಸಲಿಡಲಾಗುವುದು. ಲೇಖಕರು, ಪ್ರಕಾಶಕರು ತಮ್ಮ ಪ್ರಕಟಿತ ಪುಸ್ತಕಗಳ ಎರಡು ಪ್ರತಿಗಳನ್ನು ವಿಮರ್ಶೆ ಸಮೀಕ್ಷೆಗಾಗಿ ಕಳುಹಿಸಿಕೊಡಬಹುದು.

★ ಓದುಗರ ಪ್ರತಿಕ್ರಿಯೆಗಳನ್ನು ಸ್ವಾಗತಿಸುತ್ತೇವೆ.

★ ಚಂದಾದಾರರಿಗೆ ವಂಚನೆಯಾಗುವಂತೆ ಪತ್ರಿಕೆಯನ್ನು ಅರ್ಧದಲ್ಲಿ ನಿಲ್ಲಿಸುವುದಿಲ್ಲ.

★ ಸಂಪರ್ಕ ವಿಳಾಸ : ಸಂಪಾದಕರು, ಚಿಂತನ ಬಯಲು, ನಂ. 15–109
ಮೊಡಂಕಾಪು ಅಂಚೆ, ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ – 574 219.
ಮಿಂಚಂಚೆ : chinthanabayalu@gmail.com
ದೂರವಾಣಿ : 9449772651

ವಾರ್ಷಿಕ ಚಂದಾ :

**ರೂಪಾಯಿ ಇನ್ನೂರು**

(ಅಂಚೆ ವೆಚ್ಚ ಸೇರಿ)

ಮೂರು ವರ್ಷಗಳಿಗೆ :

**ರೂಪಾಯಿ ಆರು ನೂರು**

ಐದು ವರ್ಷಗಳಿಗೆ :

**ರೂಪಾಯಿ ಒಂದು ಸಾವಿರ**

ಆಜೀವ (ಪೋಷಕ) ಚಂದಾ :

**ರೂಪಾಯಿ ಐದು ಸಾವಿರ**

ಮಹಾಪೋಷಕ ಚಂದಾ :

**ರೂಪಾಯಿ ಹತ್ತು ಸಾವಿರ**

ಬಿಡಿ ಪ್ರತಿ :

**ರೂಪಾಯಿ ಐವತ್ತು**

ದಯವಿಟ್ಟು ಡಿ.ಡಿ./ಎಂ.ಓ.ಗಳನ್ನು 'ಚಿಂತನ ಬಯಲು' ಹೆಸರಿನಲ್ಲಿ ಪತ್ರಿಕೆಯ ವಿಳಾಸಕ್ಕೆ ಕಳುಹಿಸಿ. ಚೆಕ್/ಡಿ.ಡಿ. ಮಂಗಳೂರಿನಲ್ಲಿ ಸಂದಾಯವಾಗುವಂತಿರಲಿ. ದಯವಿಟ್ಟು ಹೊರ ಊರಿನ ಚೆಕ್ ಕಳುಹಿಸಬೇಡಿ. ಎಲ್ಲಕ್ಕಿಂತ ಸುಲಭವಾಗಿ ಈ ಕೆಳಗಿನ ಖಾತೆಗೆ ನೇರವಾಗಿ ಸಂದಾಯ ಮಾಡಿ ಪೂರ್ಣ ವಿಳಾಸ ಹಾಗೂ ದೂರವಾಣಿ ಇತ್ಯಾದಿ ವಿವರಗಳೊಂದಿಗೆ ಸಂದಾಯದ ವಿವರಗಳನ್ನು ಬರೆಯಬಹುದು ಅಥವಾ ಮಿಂಚಂಚೆ ಮೂಲಕ ತಿಳಿಸಬಹುದು. ಬ್ಯಾಂಕ್ ಚಾರ್ಜನ್ನು ಚಂದಾದಾರರೇ ದಯವಿಟ್ಟು ಭರಿಸಬೇಕು.

ಕರ್ನಾಟಕ ಬ್ಯಾಂಕಿನ ಬಂಟ್ವಾಳ ಮೂಡ ಶಾಖೆಯಲ್ಲಿ

**ಚಿಂತನ ಬಯಲು** ಹೆಸರಿನಲ್ಲಿರುವ

**ಕರೆಂಟ್ ಅಕೌಂಟ್ ಸಂಖ್ಯೆ :**

**0712000100041401 IFSC: KARB 0000071**



# ಕೆಬಿಎಲ್ ಅಪ್ನಾ ಘರ್

## ನಿಮ್ಮ ಮನೆಯ ಕನಸನ್ನು ನನಸಾಗಿಸಲು ಇನ್ನೇಕೆ ತಡ ...?

•ಗೃಹ ನಿರ್ಮಾಣ •ನಿವೇಶನ ಖರೀದಿ +ಗೃಹ ನಿರ್ಮಾಣ •ಪೂರ್ವನಿರ್ಮಿತವಾದ ಗೃಹ ಅಥವಾ ಫ್ಲಾಟ್ ಖರೀದಿಗೆ •ವಾಸವಿರುವ ಗೃಹ / ಫ್ಲಾಟ್ - ನವೀಕರಣ / ದುರಸ್ತಿ /ವಿಸ್ತರಣಾ ಕಾರ್ಯ / ಪುನರ್ ನಿರ್ಮಾಣಕ್ಕೆ

---




# ಕೆಬಿಎಲ್ ಕಾರು ಲೋನ್

## ಕಾರು ಖರೀದಿ ಇದೀಗ ಸುಲಭ

ಹೊಸ ಕಾರುಗಳಿಗೆ ಶೇ. 85 ರವರೆಗೆ ಸಾಲ ಸೌಲಭ್ಯ

ಸೆಕೆಂಡ್ ಹ್ಯಾಂಡ್ ಕಾರುಗಳಿಗೂ ಸಾಲದ ಸೌಲಭ್ಯವಿದೆ

ಷರತ್ತುಗಳು ಅನ್ವಯಿಸುತ್ತದೆ.

ಹೆಚ್ಚಿನ ಮಾಹಿತಿಗಾಗಿ ಟೋಲ್ ಫ್ರೀ ಸಂಖ್ಯೆ 1800 425 1444ಗೆ ಕರೆ ಮಾಡಿ ಅಥವಾ ನಿಮ್ಮ ಸಮೀಪದ ಶಾಖೆಯನ್ನು ಸಂಪರ್ಕಿಸಿ

**ಕರ್ಣಾಟಕ ಬ್ಯಾಂಕ್ ಲಿ.**

ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002    ಇಮೇಲ್: info@ktkbank.com ವೆಬ್‌ಸೈಟ್: www.karnatakabank.com

RNI Reg No. : KARKAN /2012/49251

**CHINTHANA BAYALU** ISSN 2278-2192
Kannada Quarterly, volume 1, Issue 4, April - June 2013.
Edited, Published, Printed & Owned by
**Reshma G. Bhat**
Door No. 15-109, Modankapu Post,
Bantwal Taluk, Dakshina Kannada 574 219.
Printed at
**Aakrithi Prints**
Light House Hill Road, Mangalore - 575 001
Pages : 88

ವಾರ್ಷಿಕ ಚಂದಾ : ರೂಪಾಯಿ ಇನ್ನೂರು
(ಅಂಚೆ ವೆಚ್ಚ ಸೇರಿ)
ಮೂರು ವರ್ಷಗಳಿಗೆ : ರೂಪಾಯಿ ಆರುನೂರು
ಐದು ವರ್ಷಗಳಿಗೆ : ರೂಪಾಯಿ ಒಂದು ಸಾವಿರ
ಆಜೀವ (ಪೋಷಕ) ಚಂದಾ : ರೂಪಾಯಿ ಐದು ಸಾವಿರ
ಮಹಾಪೋಷಕ ಚಂದಾ : ರೂಪಾಯಿ ಹತ್ತು ಸಾವಿರ
ಬಿಡಿ ಪ್ರತಿ : ರೂಪಾಯಿ ಐವತ್ತು

ದಯವಿಟ್ಟು ಡಿ.ಡಿ./ಎಂ.ಓ.ಗಳನ್ನು 'ಚಿಂತನ ಬಯಲು' ಹೆಸರಿನಲ್ಲಿ ಪತ್ರಿಕೆಯ ವಿಳಾಸಕ್ಕೆ ಕಳುಹಿಸಿ. ಚೆಕ್/ಡಿ.ಡಿ. ಮಂಗಳೂರಿನಲ್ಲಿ ಸಂದಾಯವಾಗುವಂತಿರಲಿ. ದಯವಿಟ್ಟು ಹೊರ ಊರಿನ ಚೆಕ್ ಕಳುಹಿಸಬೇಡಿ. ಎಲ್ಲಕ್ಕಿಂತ ಸುಲಭವಾಗಿ ಈ ಕೆಳಗಿನ ಖಾತೆಗೆ ನೇರವಾಗಿ ಸಂದಾಯ ಮಾಡಿ ಪೂರ್ಣವಿಳಾಸ ಹಾಗೂ ದೂರವಾಣಿ ಇತ್ಯಾದಿ ವಿವರಗಳೊಂದಿಗೆ ಸಂದಾಯದ ವಿವರಗಳನ್ನು ಬರೆಯಬಹುದು ಅಥವಾ ಮಿಂಚಂಚೆ ಮೂಲಕ ತಿಳಿಸಬಹುದು. ಬ್ಯಾಂಕ್ ಚಾರ್ಜನ್ನು ಚಂದಾದಾರರೇ ದಯವಿಟ್ಟು ಭರಿಸಬೇಕು.

**ಕರ್ನಾಟಕ ಬ್ಯಾಂಕ್**
ಬಂಟ್ವಾಳ ಮೂಡ ಶಾಖೆಯಲ್ಲಿ
**ಚಿಂತನ ಬಯಲು** ಹೆಸರಿನಲ್ಲಿರುವ

**ಕರೆಂಟ್ ಅಕೌಂಟ್ ಸಂಖ್ಯೆ : 0712000100041401**

**IFSC: KARB 0000071**

**ಸುಲಭ ಬ್ಯಾಂಕಿಂಗ್ ಸೇವೆಗಾಗಿ ನಿಮ್ಮ ಹತ್ತಿರದ ಶಾಖೆಯನ್ನು ಸಂಪರ್ಕಿಸಿ ಅಥವಾ 1800 425 1444ಗೆ ಕರೆ ಮಾಡಿರಿ**

ಕರ್ನಾಟಕ ಬ್ಯಾಂಕ್ ಲಿ.
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.
ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002
ಇಮೇಲ್: info@ktkbank.com ವೆಬ್‌ಸೈಟ್: www.karnatakabank.com